ವಿಶ್ವವಾಣಿ
ವಿಶ್ವಾಸವೇ ವಿಶ್ವ

ಆರ್‌ಸಿಬಿ ಫೈನಲ್‌ಗೆ

ಐಪಿಎಲ್ ಟಿ20 ಟೂರ್ನಿಯ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಆರ್‌ಸಿಬಿ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿ ಐಪಿಎಲ್ ಇತಿಹಾಸದಲ್ಲಿ ನಾಲ್ಕನೇ ಬಾರಿಗೆ ಫೈನಲ್‌ಗೆ ಲಗ್ಗೆ ಇಟ್ಟಿದೆ. ಚಂಡೀಗಢದ ಮುಲ್ಲನಪುರದಲ್ಲಿ ನಡೆದ ಪಂದ್ಯದಲ್ಲಿ ಪಂಜಾಬ್ ತಂಡವನ್ನು ಕೇವಲ 101 ರನ್‌ಗಳಿಗೆ ಆಲೌಟ್ ಮಾಡಿದ ಆರ್‌ಸಿಬಿ, 10 ಓವರ್‌ಗಳಲ್ಲಿ ಎರಡು ವಿಕೆಟ್ ನಷ್ಟಕ್ಕೆ 106 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಹೇಜಲ್‌ವುಡ್ ಮತ್ತು ಸುಯೇಶ್ ಶರ್ಮಾ ತಲಾ 3 ವಿಕೆಟ್ ಪಡೆದರೆ, ಫಿಲ್ ಸಾಲ್ಟ್ 56 ರನ್ ಗಳಿಸಿ ಸುಲಭ ಗೆಲುವಿಗೆ ಕಾರಣರಾದರು.

ಸೊಂಪಾದ ಪುಟಗಳು

ಸ್ಟೇಸಿ ಮಾರ್ಕಮ್ ಹೇಳಿದ ಮರಣಶಯ್ಯೆಯ ಕಥೆಗಳು

ಶಿಶಿರಕಾಲ
ಶಿಶಿರ್ ಹೆಗಡೆ 6

ಸಣ್ಣ ಹೊಳೆ ದಾಟಲು ಒಂದೇ ಮರದ ಸಂಕ!

ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ನೀವು ಸಂಕಷ್ಟದ ಸ್ಥಿತಿಯಲ್ಲಿದ್ದಾಗ, 'ನನಗೆ ಕಷ್ಟಗಳು ಬಂದಿರುವುದು ನನ್ನನ್ನು ಸೋಲಿಸಲು ಅಲ್ಲ, ನನ್ನ ಸಾಮರ್ಥ್ಯ ವೇನು ಎಂಬುದನ್ನು ಪರೀಕ್ಷಿಸಲು, ನನ್ನ ತಾಕತ್ತನ್ನು ನನಗೆ ತಿಳಿಸಿಕೊಡಲು' ಎಂದು ಭಾವಿಸಿದರೆ, ನೀವು ಆ ಸನ್ನಿವೇಶವನ್ನು ನಿಭಾಯಿಸುವ ರೀತಿಯೇ ಬದಲಾಗುತ್ತದೆ.

ವಕ್ರತುಂಡೋಕ್ತಿ

ತಾಯಿಯಾದವಳು ನಿಮಗೆ ಜೀವ ಕೊಡುತ್ತಾಳೆ. ಅತ್ತೆಯಾದವಳು ತನ್ನ 'ಜೀವ'ವನ್ನು ನಿಮಗೆ ಕೊಡುತ್ತಾಳೆ.

ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಜಿಲ್ಲೆಗಳಲ್ಲಿ ತಕ್ಷಣ ಜಾರಿಗೆ ಆದೇಶ

ಕೋಮು ಹಿಂಸೆ ನಿಗ್ರಹ ಪಡೆ ಜಾರಿ

ಬೆಂಗಳೂರು: ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ನಡೆಯುತ್ತಿರುವ ಸರಣಿ ಕೊಲೆ ಪ್ರಕರಣ ಗಳನ್ನು ತಡೆಯುವ ನಿಟ್ಟಿನಲ್ಲಿ ಕೋಮುಹಿಂಸೆ ನಿಗ್ರಹ ಪಡೆಯನ್ನು ತಕ್ಷಣದಿಂದ ಜಾರಿಗೆ ತರಲಾಗು ವುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರನ್ನು ಭೇಟಿ ಯಾದ ನಂತರ ಸುದ್ದಿಗಾರರೊಂದಿಗೆ ಮಾತ ನಾಡಿದ ಗೃಹ ಸಚಿವರು, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಮತ್ತು ಕೋಮು ಚಟು ವಟಿಕೆಗಳು ನಡೆಯುವ ಇತರ ಸ್ಥಳಗಳನ್ನು ಒಳಗೊಂಡ ಕರಾವಳಿ ಪ್ರದೇಶವನ್ನು ಸೂಕ್ಷ್ಮ ಎಂದು ಪರಿಗಣಿಸಲಾಗುತ್ತದೆ ಮತ್ತು ಅಂತಹ ಚಟುವಟಿಕೆಗಳಲ್ಲಿ ಭಾಗಿಯಾಗಿರುವವರ ವಿರುದ್ಧ ನಿರ್ದಯವಾಗಿ ಕ್ರಮ ಕೈಗೊಳ್ಳಲಾ ಗುವುದು ಎಂದು ಹೇಳಿದರು.

ಜಿಲ್ಲೆಯ ಬಂಟ್ವಾಳ ತಾಲೂಕಿ ನಲ್ಲಿ ನಡೆದ ಮುಸ್ಲಿಂ ವ್ಯಕ್ತಿಯ ಹತ್ಯೆಗೆ ಸಂಬಂಧಿಸಿದಂತೆ ನಾಲ್ವರನ್ನು ಬಂಧಿಸಲಾ ಗಿದ್ದು, ಅವರಿಂದ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಮುಲಾಜಿಲ್ಲದೇ ಮುಂದಿನ ಕ್ರಮ ಕೈಗೊಳ್ಳಲಾ ಗುವುದು ಎಂದು ಸಚಿವರು ತಿಳಿಸಿದ್ದಾರೆ. → 4

ಸರಕಾರ ಸುಮ್ಮನೆ ಇರುವುದಿಲ್ಲ

ಪ್ರಚೋದನೆ ಮಾಡಲು ಹೋದರೆ ನಿಲ್ಲಿಸಲು ಹೇಗೆ ಸಾಧ್ಯ. ಧಾರ್ಮಿಕ ಮುಖಂಡರೊಂದಿಗೆ ಶಾಂತಿ ಸಭೆಗಳನ್ನು ಮಾಡಲು ಸೂಚನೆ ನೀಡಿದ್ದೇನೆ. ದ್ವೇಷ ಭಾವನೆ ಬಂದರೆ ಸಮಾಜ ಎಲ್ಲಿ ಉಳಿಯು ತ್ತದೆ. ಜನರು ಅಲ್ಲಿ ಜೀವನ ಮಾಡಲು ಆಗುತ್ತದೆಯೇ ? ಇದನ್ನು ನೋಡಿಕೊಂಡು ಸರಕಾರ ಸುಮ್ಮನೆ ಇರುವುದಿಲ್ಲ.

– ಪರಮೇಶ್ವರ್, ಗೃಹಸಚಿವ

ಮೂವರ ಬಂಧನ

ಅಬ್ದುಲ್ ರಹೀಂ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಟ್ವಾಳ ತಾಲೂಕಿನ ಕಳ್ಳಿಗೆ ಗ್ರಾಮದ ದೀಪಕ್ (21), ಪೃಥ್ವಿರಾಜ್ (21) ಮತ್ತು ಚಿಂತನ್(19)ಬಂಧಿಸಲಾಗಿದೆ.

ಕಠಿಣ ಕ್ರಮ: ಸಿಎಂ ಎಚ್ಚರಿಕೆ

ದ.ಕನ್ನಡ ಹಾಗೂ ಇತರ ಭಾಗಗಳಲ್ಲಿ ನಡೆಯುವ ಕೋಮು ಗಲಭೆಗಳನ್ನು ನಿಯಂ ತ್ರಿಸಲು ಯಾರು, ಎಷ್ಟೇ ದೊಡ್ಡವರಾ ಗಿದ್ದರೂ ಮುಲಾಜಿ ಲ್ಲದೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದ್ದಾರೆ. ಬಿ.ಕೆ.ಹರಿಪ್ರಸಾದ್ ಮನೆಗೆ ಭೇಟಿ ನೀಡಿದ ವೇಳೆ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ಹರಿ ಪ್ರಸಾದ್ ಪಕ್ಷದ ಹಿರಿಯ ನಾಯಕರು. ಅವರ ಆಹ್ವಾನದ ಮೇರೆಗೆ ಅವರ ಮನೆಗೆ ಉಪಾಹಾರಕ್ಕೆ ಬಂದಿದ್ದೆ. ಜಿಲ್ಲೆಯಲ್ಲಿ ಸೌಹಾರ್ದತೆ ಬರಬೇಕು. ಹರಿ ಪ್ರಸಾದ್‌ಗೆ ನೀವು ಒಮ್ಮೆ ಅಲ್ಲಿಗೆ ಹೋಗಿ ಬನ್ನಿ ಎಂದಿದ್ದೇನೆ ಎಂದರು.

ಸಾಮೂಹಿಕ ರಾಜೀನಾಮೆ

ಜಿಲ್ಲೆಯಲ್ಲಿ ನಡೆಯುತ್ತಿರುವ ಸರಣಿ ಕೊಲೆಗಳನ್ನು ಖಂಡಿಸಿ, ಸರಕಾರದ ವಿರುದ್ಧ ಪ್ರತಿಭಟನೆಯ ಸಂಕೇತವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ ಪಕ್ಷದ ಮುಸ್ಲಿಂ ನಾಯಕರು ಗುರುವಾರ ಸಾಮೂಹಿಕ ರಾಜೀನಾಮೆ ನೀಡಿದ್ದಾರೆ.

ಪಕ್ಷದ ಕಾರ್ಯಕರ್ತರು ಎಲ್ಲಾ ಮುಸ್ಲಿಂ ನಾಯಕರ ರಾಜೀನಾಮೆಗೆ ಒತ್ತಾಯಿಸಿದ್ದರಿಂದ ಸಭೆ ಗೊಂದಲದಲ್ಲಿ ಕೊನೆಗೊಂಡಿತು. ಅಲ್ಪಸಂಖ್ಯಾತ ವಿಭಾ ಗದ ಅಧ್ಯಕ್ಷ ಶಾಹುಲ್ ಹಮೀದ್, ಎಂ. ಎಸ್. ಮೊಹಮ್ಮದ್, ಅಬ್ದುಲ್ ರವೂಫ್ ಮತ್ತು ಇತರರು ಸೇರಿದಂತೆ ಪಕ್ಷದ ನಾಯಕರು ತಮ್ಮ ರಾಜೀನಾಮೆಯನ್ನು ಘೋಷಿಸಿದರು. ಒಂದು ವಾರದೊಳಗೆ ರಾಜೀನಾಮೆ ಪತ್ರಗಳನ್ನು ಕೆಪಿಸಿಸಿಗೆ ಸಲ್ಲಿಸಲಾಗುವುದು ಎಂದು ಹಮೀದ್ ಹೇಳಿದರು.

ಟ್ರಂಪ್‌ಗೆ ಡಬಲ್ ಶಾಕ್

ವಾಷಿಂಗ್ಟನ್: ಸುಂಕ ಹೇರಿಕೆ ವಿಚಾರದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕೈಗೊಂಡ ಕ್ರಮಗಳಿಗೆ ಫೆಡರಲ್ ಕೋರ್ಟ್ ತಡೆ ನೀಡಿದ ಬೆನ್ನಿಗೇ ಸ್ಪೇಸ್ ಎಕ್ಸ್ ಮಾಲೀಕ, ಬಿಲಿಯನೇರ್ ಎಲಾನ್ ಮಸ್ಕ್ ಡೊನಾಲ್ಡ್ ಟ್ರಂಪ್ ಆಡಳಿತದಿಂದ ನಿರ್ಗಮಿಸುತ್ತಿ ರುವು ದಾಗಿ ಘೋಷಿಸಿದ್ದಾರೆ. ವಿಶೇಷ ಸರ್ಕಾರಿ ಉದ್ಯೋಗಿಯಾಗಿ ನನ್ನ ನಿಗದಿತ ಅವಧಿ ಕೊನೆಗೊಂಡಿದೆ. ಅನಗತ್ಯ ವೆಚ್ಚಗಳನ್ನು ಕಡಿತ ಮಾಡಲು ಅವಕಾಶ ನೀಡಿದ್ದಕ್ಕಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಧನ್ಯವಾದಗಳು ಎಂದು ಎಕ್ಸ್ ಪೋಸ್ಟ್‌ನಲ್ಲಿ ಎಲಾನ್ ತಿಳಿಸಿದ್ದಾರೆ.

11 ಕಡೆ ರೆಡ್ ಅಲರ್ಟ್

ಬೆಂಗಳೂರು: ರಾಜಧಾನಿ ಸೇರಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ಭಾರಿ ಮಳೆಯಾಗು ತ್ತಿದ್ದು, ಮುಂದಿನ ಮೂರು ದಿನಗಳ ಉತ್ತರಕನ್ನಡ, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ ಹಾಗು ಚಿಕ್ಕಮಂಗ ಳೂರು ಸೇರಿದಂತೆ 11 ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದೆ. ಬಾಗಲಕೋಟೆ, ಯಾದಗಿರಿ, ಹಾವೇರಿ, ಗದಗ ಮತ್ತು ಹಾಸನ ಜಿಲ್ಲೆಯಲ್ಲಿ ಇಲಾಖೆ ಯಲ್ಲೋ ಅಲರ್ಟ್ ಘೋಷಿ ಸಿದೆ. ಬೆಳಗಾವಿ, ಕಲಬುರಗಿ, ವಿಜಯ ಪುರ ಮತ್ತು ಬೀದರ್ ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಆಯುಕ್ತ, ಎಸ್‌ಪಿ ವರ್ಗ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮು ಸೂಕ್ಷ್ಮ ವಾತಾವರಣ ನಿರ್ಮಾ ಣವಾಗಿರುವ ಬೆನ್ನಲ್ಲೆ ಮಂಗಳೂರು ನಗರ ಪೊಲೀಸ್ ಕಮಿಷನರ್ ಅನು ಪಮ್ ಅಗರ್‌ವಾಲ್ ಹಾಗೂ ದಕ್ಷಿಣ ಕನ್ನಡ ಎಸ್‌ಪಿ ಯತೀಶ್ ಅವರನ್ನು ವರ್ಗಾವಣೆ ಮಾಡಲಾಗಿದೆ.ನೂತನ ಕಮಿಷನರ್ ಆಗಿ ಸುಧೀರ್ ಕುಮಾರ್ ರೆಡ್ಡಿ ಮತ್ತು ಎಸ್‌ಪಿಯಾಗಿ ಉಡುಪಿ ಪೊಲೀಸ್ ವರಿಷ್ಠಾಧಿಕಾರಿ ಡಾ.ಕೆ.ಅರುಣ್ ಅವರನ್ನು ವರ್ಗಾವಣೆ ಮಾಡಲಾಗಿದೆ. ಹರಿರಾಮ್ ಶಂಕರ್ ಅವರನ್ನು ಉಡುಪಿ ನೂತನ ಎಸ್‌ಪಿಯಾಗಿ ವರ್ಗಾವಣೆ ಮಾಡಲಾಗಿದೆ.

ಟಿಡಿಆರ್ ಆದೇಶಕ್ಕೆ ತಡೆ

ಬೆಂಗಳೂರು: ಬೆಂಗಳೂರು ಅರಮನೆ ಮೈದಾನದ ಭೂವಿವಾದದಲ್ಲಿ ರಾಜ್ಯ ಸರಕಾರಕ್ಕೆ ತಾತ್ಕಾಲಿಕ ರಿಲೀಫ್ ದೊರೆ ತಿದ್ದು, 3400 ಕೋಟಿ ರೂ. ಟಿಡಿಆರ್ ಪಾವತಿಗೆ ಸುಪ್ರೀಂ ಕೋರ್ಟ್ ತಾತ್ಕಾಲಿಕ ತಡೆಯಾಜ್ಞೆ ನೀಡಿದೆ. 3,400 ಕೋಟಿ ರೂ. ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರ ವನ್ನು ರಾಜಮನೆತನಕ್ಕೆ ಹಸ್ತಾಂತರ ಮಾಡ ಬೇಕೆಂದು ಈ ಹಿಂದೆ ದ್ವಿಸದಸ್ಯ ನೀಡಿದ್ದ ನ್ಯಾ.ಸೂರ್ಯಕಾಂತ್ ನೇತೃತ್ವದ ತ್ರಿಸದಸ್ಯ ಪೀಠ ತಡೆ ನೀಡಿದೆ. ಮರು ಪರಿಶೀಲನಾ ಅರ್ಜಿಯ ಮುಂದಿನ ವಿಚಾರಣೆಯನ್ನು ಜುಲೈ 21ಕ್ಕೆ ನಿಗದಿಪಡಿಸಿದೆ.

ಹಳೇ ಹುಬ್ಬಳ್ಳಿ ಗಲಭೆ: 43 ಪ್ರಕರಣಗಳ ವಾಪಸ್ ಕುರಿತ ಸಂಪುಟ ನಿರ್ಧಾರ ರದ್ದು ಮಾಡಿದ ಹೈಕೋರ್ಟ್

ಕ್ರಿಮಿನಲ್ ಕೇಸ್ ವಾಪಸ್ ಸಂಪುಟದ ಆದೇಶ ರದ್ದು

ಬೆಂಗಳೂರು: ಹಳೇ ಹುಬ್ಬಳ್ಳಿಯಲ್ಲಿ 2022ರಲ್ಲಿ ನಡೆದಿದ್ದ ಗಲಭೆ ಪ್ರಕರಣದಲ್ಲಿ ಆರೋಪಿಗಳ ಮೇಲೆ ದಾಖಲಾಗಿದ್ದ ಪ್ರಕರಣವನ್ನು ವಾಪಸ್ ಪಡೆದಿದ್ದ ರಾಜ್ಯ ಸಚಿವ ಸಂಪುಟದ ತೀರ್ಮಾನ ವನ್ನು ಹೈಕೋರ್ಟ್ ರದ್ದು ಪಡಿಸಿದ್ದು, ಸರಕಾರಕ್ಕೆ ಭಾರೀ ಹಿನ್ನಡೆಯಾಗಿದೆ.

ಮಾಜಿ ಸಚಿವರು, ಮಾಜಿ ಶಾಸಕರು ಮತ್ತು ಪ್ರಭಾವಿ ಸಂಸ್ಥೆಗಳಿಗೆ ಸೇರಿದ ವ್ಯಕ್ತಿಗಳನ್ನು ಆರೋಪಿಗಳನ್ನಾಗಿ ಮಾಡಿ 43 ಕ್ರಿಮಿನಲ್ ಪ್ರಕರಣ ಹಿಂಪಡೆಯಲು ಅಕ್ಟೋಬರ್ 2024 ರಲ್ಲಿ ಹೊರಡಿಸಲಾದ ಸರಕಾರಿ ಆದೇಶದ ಕಾನೂನುಬದ್ಧತೆ ಪ್ರಶ್ನಿಸಿ ವಕೀಲ ಗಿರೀಶ್ ಭಾರದ್ವಾಜ್ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದರು. ವಾದ -ಪ್ರತಿವಾದ ಆಲಿಸಿದ್ದ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಮತ್ತು ನ್ಯಾಯಮೂರ್ತಿ ಅರವಿಂದ್ ಅವರನ್ನೊಳಗೊಂಡ ವಿಭಾಗೀಯ ಪೀಠವು ಸಚಿವ ಸಂಪುಟದ ತೀರ್ಮಾನ ರದ್ದು ಪಡಿಸಿ ಆದೇಶ ಪ್ರಕಟಿಸಿದರು.

ಸಾಮಾಜಿಕ ಮಾಧ್ಯಮದಲ್ಲಿ ವಿವಾದಾತ್ಮಕ ಪೋಸ್ಟ್‌ನ ವಿಷಯಕ್ಕೆ ಸಂಬಂಧಿಸಿದಂತೆ ಗುಂಪೊಂದು ಪೊಲೀಸ್ ಸಿಬ್ಬಂದಿಯ ಮೇಲೆ ಹಲ್ಲೆ ನಡೆಸಿದ್ದ 2022 ರ ಹುಬ್ಬಳ್ಳಿ ಗಲಭೆ ಪ್ರಕರಣ ಸೇರಿದಂತೆ 43 ಪ್ರಕರಣಗಳಲ್ಲಿ ಕೆಲವು ಆರೋಪಿಗಳ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯಿದೆ, ಸಾರ್ವಜನಿಕ ಆಸ್ತಿ ನಾಶ ತಡೆ ಕಾಯಿದೆ ಮತ್ತು ಧಾರ್ಮಿಕ ಸಂಸ್ಥೆ (ದುರುಪಯೋಗ ತಡೆ) ಕಾಯಿದೆಯಡಿಯಲ್ಲಿ ಗಂಭೀರ ಆರೋಪ ಗಳನ್ನು ಹೊರಿಸಲಾಗಿದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿತ್ತು. ಅಕ್ಟೋಬರ್ 15, 2024 ರ ಸರಕಾರಿ ಆದೇಶವು ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ 321 ರ ಉಲ್ಲಂಘನೆಯಾಗಿದೆ ಎಂದು ಅರ್ಜಿದಾರರು ವಾದಿಸಿದ್ದರು. ಈ ನಿಬಂಧನೆಯು ನಿರ್ದಿಷ್ಟವಾಗಿ ಪ್ರಾಸಿಕ್ಯೂಟರ್‌ಗೆ ಮಾತ್ರ ಕಾನೂನು ಕ್ರಮದಿಂದ ಹಿಂದೆ ಸರಿಯಲು ಯಾವುದೇ ಕ್ರಮ ಪ್ರಾರಂಭಿಸುವ ಅಧಿಕಾರ ನೀಡುತ್ತದೆ. ಆದ್ದರಿಂದ, ಈ ಕ್ರಿಮಿ ನಲ್ ಪ್ರಕರಣಗಳನ್ನು ಹಿಂಪಡೆಯಲು ಪ್ರಾಸಿ ಕ್ಯೂಟರ್‌ಗೆ ನಿರ್ದೇಶನ ನೀಡುವ ಅಧಿಕಾರ ರಾಜ್ಯ ಸಚಿವ ಸಂಪುಟಕ್ಕೆ ಇಲ್ಲ ಎಂದು ಅರ್ಜಿ ದಾರರ ಪರವಾಗಿ ವಾದಿಸಲಾಗಿತ್ತು.

ಏನಿದು ಹುಬ್ಬಳ್ಳಿ ಗಲಭೆ ಪ್ರಕರಣ?: 2022 ರ ಏಪ್ರಿಲ್ 16ರಂದು ಯುವಕನೊಬ್ಬ ವಿವಾದಾ ತ್ಮಕ ಪೋಸ್ಟ್ ಒಂದನ್ನು ಹಾಕಿದ್ದ. ಈ ವಿಚಾರಕ್ಕೆ ಸಂಬಂಧಿಸಿ ಗಲಭೆ ನಡೆದು ಉದ್ರಿಕ್ತರು ಹಳೆ ಹುಬ್ಬಳ್ಳಿ ಠಾಣೆ ಎದುರು ಪೊಲೀಸರು ಹಾಗೂ ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಿದ್ದರು. → 4

ಹೈಕೋರ್ಟ್ ನೀಡಿರುವ ತೀರ್ಪು ರಾಜ್ಯ ಕಾಂಗ್ರೆಸ್ ಸರಕಾರದ ಅಧಿಕಾರ ದುರುಪಯೋಗಕ್ಕೆ ತಕ್ಕ ಶಾಸ್ತಿ ಮಾಡಿದಂತಿದೆ. ಈ ನಿರ್ಧಾರ ಕಾನೂನು ಸುವ್ಯವಸ್ಥೆಯ ಮಹತ್ವ ಎತ್ತಿ ಹಿಡಿದಿದೆ. ಗಲಭೆ ಪ್ರಕರಣದಲ್ಲಿ ಕಾನೂನು ಇಲಾಖೆ ಮತ್ತು ಪೊಲೀಸರು ವಿರೋಧ ವ್ಯಕ್ತಪಡಿಸಿದರೂ ರಾಜ್ಯ ಸರಕಾರ ಪ್ರಕರಣ ಹಿಂಪಡೆಯುವ ತೀರ್ಮಾನ ತೆಗೆದುಕೊಂಡಿತ್ತು.

-ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಪೊಲೀಸ್ ಠಾಣೆ ಮೇಲೆ ದಾಳಿ ಮಾಡುವ ಪ್ರಕರಣ ವಾಪಸ್ ಪಡೆಯುವುದು ಸರಿಯಲ್ಲ ಎಂದು ಈ ಹಿಂದೆ ಹೇಳಿದ್ದೆ. ಆದರೂ ರಾಜಕೀಯ ಒತ್ತಡಕ್ಕೆ, ಓಲೈಕೆ ರಾಜಕಾರಣಕ್ಕೆ ಮಣಿದು ಕೇಸ್ ವಾಪಸ್ ಪಡೆದಿದ್ದರು. ನ್ಯಾಯಾಲಯ ಸರಿಯಾಗಿ ಛೀಮಾರಿ ಹಾಕಿದೆ. ರಾಜ್ಯದ ಸಚಿವ ಸಂಪುಟ, ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡಬೇಕೇ ಹೊರತು. ಓಲೈಕೆ ರಾಜಕಾರಣ ಮಾಡಬಾರ ಬಾರದು. ಇನ್ನಾದರೂ ಡಿಜೆ ಹಳ್ಳಿ, ಕೆಜಿ ಹಳ್ಳಿ ಗಲಭೆ ಮಾಡಿದವರ ಮೇಲೆ ಕ್ರಮ ಆಗಬೇಕು.

-**ಬಸವರಾಜ ಬೊಮ್ಮಾಯಿ**, ಸಂಸದ



ಸಮಾಚಾರ ಸಣ್ಣದಲ್ಲ

ಅರ್ಹ ವಿದ್ಯಾರ್ಥಿಗಳಿಗೆ ಕೌನ್ಸಿಲಿಂಗ್ ಇಂದು

ದಾವಣಗೆರೆ: ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಸರಕಾರಿ ಮುಸ್ಲಿಂ ವಸತಿ ಶಾಲೆಗಳು ಹಾಗೂ ಡಾ.ಎ.ಪಿ.ಜೆಅಬ್ದುಲ್ ಕಲಾಂ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ಪರೀಕ್ಷೆ ಬರೆದು ಆಯ್ಕೆಯಾದ ಅರ್ಹ ವಿದ್ಯಾರ್ಥಿಗಳಿಗೆ ಮೇ 30ರಂದು ಜಿಲ್ಲಾಡಳಿತ ಭವನ, ತುಂಗಭದ್ರ ಸಭಾಂಗಣದಲ್ಲಿ ಕೌನ್ಸಿಲಿಂಗ್ ನಡೆಸಲಾಗುವುದು. ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಬೆಳಗ್ಗೆ 10ರಿಂದ 1.30ರ ವರೆಗೆ ಮತ್ತು ಇತರೆ ವಿದ್ಯಾರ್ಥಿಗಳಿಗೆ ಮಧ್ಯಾಹ್ನ 2.30 ರಿಂದ 5 ಗಂಟೆವರೆಗೆ ದಾಖಲಾತಿ ಪಡೆಯಲು ಕೌನ್ಸಲಿಂಗ್‌ಗೆ ಹಾಜರಾಗಬೇಕು. ಮಾಹಿತಿಗಾಗಿ ದೂ: 08192-250022 ಸಂಪರ್ಕಿಸಿ.

ಡಿಪಿಎಸ್‌ಸಿ ತರಬೇತಿಗೆ ಅರ್ಜಿ ಆಹ್ವಾನ

ಹೊಸದುರ್ಗ: ನಗರದಲ್ಲಿರುವ ಪ್ರತಿಷ್ಠಿತ ಸರಕಾರಿ ಶಿಕ್ಷಕರ ತರಬೇತಿ ಸಂಸ್ಥೆಯು 2025-2026ನೇ ಸಾಲಿನ ಡಿಪ್ಲೊಮಾ ಇನ್ ಪ್ರಿಸ್ಕೂಲ್ ಎಜುಕೇಷನ್‌ತರಬೇತಿಗೆ ಅರ್ಜಿ ಆಹ್ವಾನಿಸಿದೆ. ಇದು 2 ವರ್ಷದ ತರಬೇತಿ ಕೋರ್ಸ್ ಆಗಿದ್ದು, ದ್ವಿತೀಯ ಪಿಯುಸಿ ಪಾಸಾದವರು ಪ್ರವೇಶ ಪಡೆಯಬಹುದು. ಪ್ರತಿವರ್ಷ ಈ ಕಾಲೇಜಿನಲ್ಲಿ 50 ವಿದ್ಯಾರ್ಥಿಗಳು ತರಬೇತಿ ಪಡೆಯಲು ಅವಕಾಶವಿದೆ. ಈ ಕೋರ್ಸ್ ರಾಜ್ಯದಲ್ಲಿಯೇ ಕೇವಲ 2 ಸರಕಾರಿ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಲಭ್ಯವಿದೆ. ಈ ತರಬೇತಿ ಪಡೆದವರು ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಬೋಧ ನಾ ವೃತ್ತಿ ನಡೆಸಲು ಸಾಕಷ್ಟು ಅವಕಾಶಗಳಿವೆ. ಆಸಕ್ತರು ಕೂಡಲೇ ತಮ್ಮ ಅಂಕಪಟ್ಟಿ, ಜಾತಿ ಹಾಗೂ ಆದಾಯ ಪ್ರಮಾಣಪತ್ರ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ ಸೇರಿ ಅಗತ್ಯ ಮಾಹಿತಿ ಒಳಗೊಂಡ ಅರ್ಜಿಯೊಂದಿಗೆ ಜೂನ್ 5ರ ಒಳಗಾಗಿ ಪ್ರವೇಶ ಪಡೆಯುವಂತೆ ಪ್ರಾಂಶುಪಾಲರು ಕೋರಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ.9980674494, 9686841954, 9480245650, 9448880914 ಸಂಖ್ಯೆಗಳಿಗೆ ಸಂಪರ್ಕಿಸಲು ತಿಳಿಸಿದೆ.

ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಿತ್ರದುರ್ಗ: ಚಳ್ಳಕೆರೆ ತಾಲೂಕು ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಡಾ.ಬಿ.ಆರ್.ಅಂಬೇಡ್ಕರ್ ಸರಕಾರಿ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಜೂನ್ 30 ಅರ್ಜಿ ಸಲ್ಲಿಸಲು ಕೊನೆಯ ದಿನ. ಅರ್ಜಿ ಸಲ್ಲಿಸಲು ವಿದ್ಯಾರ್ಥಿಯ ಆಧಾರ್ ಕಾರ್ಡ್, ತಂದೆ-ತಾಯಿಯ ಆಧಾರ್ ಕಾರ್ಡ್, ವಿದ್ಯಾರ್ಥಿಯ ಎಸ್‌ಎಟಿಎಸ್ ನಂಬರ್, ಮೊಬೈಲ್ ನಂಬರ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವುದು. ಕೌನ್ಸಿಲಿಂಗ್ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯುವುದು. ಅರ್ಜಿ ಸಲ್ಲಿಸಿದ ಒಂದು ಪ್ರತಿ ನಿಲಯದ ಮೇಲ್ವಿಚಾರಕರಿಗೆ ಸಲ್ಲಿಸಬೇಕು ಎಂದು ಚಳ್ಳಕೆರೆ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು (ಗ್ರೇಡ್-1) ತಿಳಿಸಿದ್ದಾರೆ.

ಕೋವಿಡ್ ಕುರಿತು ಆತಂಕ ಅಗತ್ಯವಿಲ್ಲ

ದಾವಣಗೆರೆ: ಕಳೆದ 1 ತಿಂಗಳಿನಿಂದ ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿದ್ದು, ಜಿಲ್ಲೆಯ ಸಾರ್ವಜನಿಕರು ಯಾವುದೇ ಆತಂಕ ಪಡುವ ಅಗತ್ಯವಿಲ್ಲ. ಇದು ಸೌಮ್ಯ ಸ್ವಭಾವದ ಸೋಂಕು ಎಂದು ತಜ್ಞರು ಅಭಿಪ್ರಾಯ ಪಟ್ಟಿರುತ್ತಾರೆ. ಆದುದರಿಂದ ಮುಂಜಾಗ್ರತಾ ಕ್ರಮವಾಗಿ ಜಿಲ್ಲಾ ಆಸ್ಪತ್ರೆ ಮತ್ತು ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಬೆಡ್ ಹಾಗೂ ಆಕ್ಸಿಜನ್ ವ್ಯವಸ್ಥೆ, ಅತ್ಯವಶ್ಯಕ ಔಷಧಿಗಳು, ಐ.ಸಿ.ಯು ಮುಂತಾದ ಎಲ್ಲ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಆಸ್ಪತ್ರೆಗಳಲ್ಲಿ ಒಳರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿರುವ ತೀವ್ರ ತರಹದ ಶ್ವಾಸಕೋಶದ ಸೋಂಕು ಇರುವ ರೋಗಿಗಳು, 60 ವರ್ಷ ಮೇಲ್ಪಟ್ಟ ಮತ್ತು ಇತರೆ ಧೀರ್ಘಕಾಲಿನ ಕಾಯಿಲೆಗಳು ಇರುವ ವ್ಯಕ್ತಿಗಳು 1 ವರ್ಷದ ಒಳಗಿನ ಮಕ್ಕಳು ಹಾಗೂ ಲಕ್ಷಣಗಳು ಇರುವ ಗರ್ಭಿಣಿಯರಿಗೆ ಕೋವಿಡ್ ಪರೀಕ್ಷೆ ಮಾಡಿಸಬೇಕು. ಶೀತ, ಜ್ವರ, ಕೆಮ್ಮು ಈ ತರಹದ ಲಕ್ಷಣಗಳು ಇದ್ದಲ್ಲಿ ಜನದಟ್ಟಣೆ ಇರುವ ಪ್ರದೇಶಗಳಲ್ಲಿ ಮುಂಜಾಗ್ರತಾ ಕ್ರಮವಾಗಿ ಮಾಸ್ಕ್ ಧರಿಸಲು ಮತ್ತು ಸಮೀಪದ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ಅಗತ್ಯ ತಪಾಸಣೆ ಮತ್ತು ಔಷಧೋಪಚಾರ ಪಡೆಯುವಂತೆ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ ತಿಳಿಸಿದ್ದಾರೆ.

IN THE COURT OF THE PRL, CIVIL JUDGE AND J.M.F.C. AT PAVAGADA
O.S. No. 231/2017
PLAINTIFF: Junjappa
-Vs-
DEFENDANTS: S.Seetharam Rao and others
To.
D2. Shakonthalamm w/o S.Beemasen Rao, Aged about 55 years, D4. S.Nageswara Rao S/o Subba Rao Aged about 50 years, Defendant No.2 to 4 are R/o aduge battaru, Beside lower primary School, hale town, Chalakere Town and Taluk, Chitradurga dist. Karnataka state.
PAPER PUBLICATION
WHEREAS, the plaintiff has filed the above suit for specific performance of the contract with respect to suit property. You D2 and D4 stated above are herein called upon to appear before this Hon'ble court at 11-00 A.M on 15-07-2025 either in person or through your counsel or agents. If you fails to appear this court, the matter will be heard and decided as exparte with respect to subject matter of the suit in your absence and such orders or decree will be binding upon you.
Given under the hand and seal of the court this day of 27th may 2025.
Advocate for plaint: **N.Nagendra Reddy**
Advocate, Pavagada
By order Sheristedar
27/5/2025 Senior Civil Judge Court, Pavagada PCJ & JMFC Court, Pavagada

ಎಂ.ಕೆ.ಬೈಲು, ಅಮೃತ ಗ್ರಾಮಗಳಲ್ಲಿ ವಿದ್ಯುತ್ ಉಪಕೇಂದ್ರ ಶೀಘ್ರ ಲೋಕಾರ್ಪಣೆ: ಸಚಿವ ಮಧು

ನಿರಂತರ ವಿದ್ಯುತ್ ನಮ್ಮ ಸಂಕಲ್ಪ

ಶಿವಮೊಗ್ಗ: ಜಿಲ್ಲೆಯಲ್ಲಿನ ರೈತರ ಕೃಷಿ ಚಟುವಟಿಕೆ ಹಾಗೂ ಜನರ ಅನುಕೂಲಕ್ಕೆ ತಕ್ಕಂತೆ ಯಾವುದೇ ಅಡತಡೆಯಿಲ್ಲದೆ ನಿರಂತರ ವಿದ್ಯುತ್‌ಒದಗಿಸುವ ಸಂಕಲ್ಪ ನಮ್ಮದಾಗಿದ್ದು, ಅದಕ್ಕಾಗಿ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದಾಗಿ ರಾಜ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಮಧು ಬಂಗಾರಪ್ಪ ಅವರು ಹೇಳಿದರು.

ಕರ್ನಾಟಕ ವಿದ್ಯುತ್‌ಪ್ರಸರಣ ನಿಗಮವು ತೀರ್ಥಹಳ್ಳಿ ತಾಲೂಕಿನ ಮಂಡಗದ್ದೆಯಲ್ಲಿ 110/11ಕೆ.ವಿ. ವಿದ್ಯುತ್ ಉಪಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಈ ವಿದ್ಯುತ್‌ಉಪಕೇಂದ್ರದ ಆರಂಭದಿಂದಾಗಿ ವಿದ್ಯುತ್‌ವ್ಯತ್ಯಯದಲ್ಲಿ ಗಣನೀಯ ಸುಧಾರಣೆ ಕಂಡುಬರಲಿದೆ ಅಲ್ಲದೇ ಮಲೆನಾಡಿನ ಜನರ ವಿದ್ಯುತ್‌ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ. ಈಗಾಗಲೇ ಮಂಜೂರಾಗಿರುವ ಎಂ.ಕೆ.ಬೈಲು ಮತ್ತು ಅಮೃತ ಗ್ರಾಮಗಳಲ್ಲಿ 110ಕೆ.ವಿ. ವಿದ್ಯುತ್ ಉಪಕೇಂದ್ರಗಳ ನಿರ್ಮಾಣ ಕಾರ್ಯ ಶೀಘ್ರದಲ್ಲಿ ಲೋಕಾರ್ಪಣೆಗೊಳ್ಳಲಿವೆ ಎಂದರು.

ಮಾಜಿ ಮುಖ್ಯಮಂತ್ರಿ ದಿ.ಎಸ್.ಬಂಗಾರಪ್ಪ ಅವರ ಅಧಿಕಾರಾವಧಿಯಲ್ಲಿ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತವಾಗಿ ವಿದ್ಯುತ್‌ನೀಡಿದ್ದರಿಂದಾಗಿ ರಾಜ್ಯದಾದ್ಯಂತ ಇಂದು ಅನೇಕ ರೈತರು ಸಂತೋಷದ ದಿನಗಳನ್ನು ಕಳೆಯುವಂತಾಗಿದೆ. ಉಚಿತ ವಿದ್ಯುತ್‌ಯೋಜನೆ ಇಂದಿಗೂ ಮುಂದುವರೆದಿರುವುದು ದಿ.ಎಸ್.ಬಂಗಾರಪ್ಪ ಅವರ ದೂರದೃಷ್ಟಿಯ ದ್ಯೋತಕವಾಗಿದೆ ಎಂದ ಅವರು, ದೇಶದ ಅರ್ಥ ವ್ಯವಸ್ಥೆಯ ಮೇಲೆ ಇದು ಪೂರಕ ಪರಿಣಾಮ ಬೀರಿದೆ ಎಂದರು.

ಪ್ರಸ್ತುತ ಆಡಳಿತಾರೂಢ ಸರಕಾರವು ಪ್ರತಿ ವರ್ಷ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್‌ಒದಗಿಸಲು ವಾರ್ಷಿಕವಾಗಿ ರು.20,000ಕೋಟಿ ರೂಪಾಯಿಗಳನ್ನು ವ್ಯಯ ಮಾಡುತ್ತಿದೆ ಎಂದ ಅವರು, ಅತಿ ಹೆಚ್ಚು ವಿದ್ಯುತ್‌ಉತ್ಪಾದಿಸಿ ರಾಜ್ಯಕ್ಕೆ ವಿತರಿಸುವ ಜಿಲ್ಲೆ ನಮ್ಮದಾಗಿದ್ದು, ಇಲ್ಲಿನ ಜನರ ಅಗತ್ಯಗಳಿಗೆ ವಿದ್ಯುತ್‌ಒದಗಿಸುವುದು, ಅವರ ಹಿತಕಾಯುವುದು ಸರಕಾರದ ಕಾರ್ಯವಾಗಿದೆ ಎಂದರು.

ತೀರ್ಥಹಳ್ಳಿ ತಾಲೂಕಿನ ಮಂಡಗದ್ದೆಯ ವಿದ್ಯುತ್‌ಉಪಕೇಂದ್ರದ ಸಮಾರಂಭವನ್ನು ಸಚಿವ ಎಸ್.ಮಧು ಬಂಗಾರಪ್ಪ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಹಾಗೂ ಮಾಜಿ ಸಚಿವ ಆರಗ ಜ್ಞಾನೇಂದ್ರ ಅವರು ಮಾತನಾಡಿ, ನಿರಂತರ ವಿದ್ಯುತ್ ಕಣ್ಣುಮುಚ್ಚಾಲೆಯಿಂದ ಈ ಭಾಗದ ಜನರ ವಿದ್ಯುತ್‌ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಸವಾಲು ಎನಿಸಿತ್ತು. ವಾಸ್ತವ ಸಂಗತಿಯನ್ನು ಸರಕಾರಕ್ಕೆ ಮನವರಿಕೆ ಮಾಡಿಕೊಟ್ಟ ಪರಿಣಾಮವಾಗಿ ಅತ್ಯಲ್ಪ ಅವಧಿಯಲ್ಲಿ ಸದರಿ ವಿದ್ಯುತ್ ಉಪಕೇಂದ್ರವು ಸಿದ್ಧಗೊಂಡು ಲೋಕಾರ್ಪಣೆ ಮಾಡಿರುವುದು ಹರ್ಷದ ಸಂಗತಿಯಾಗಿದೆ ಎಂದರು.

ಎಲ್ಲರಿಗೂ ವಿದ್ಯುತ್‌ಪೂರೈಕೆಯಾಗಬೇಕು. ವಿದ್ಯುತ್ ಬಳಸುವ ಗ್ರಾಹಕರು ಮಿತವಾಗಿ ಬಳಸಬೇಕು. ನಿರಂತರವಾಗಿ ತಾಲೂಕಿನಲ್ಲಿ ವಿದ್ಯುತ್‌ಒದಗಿಸುವ ಸಂಬಂಧ ದುರಸ್ತಿಗೊಳ್ಳಬೇಕಾದ ಟಿ.ಸಿ.ಗಳನ್ನು ದುರಸ್ತಿ ಮಾಡಿಸಲಾಗಿದೆ. ಈ ಉಪಕೇಂದ್ರದ ಆರಂಭದಿಂದಾಗಿ ತೂದೂರು, ಮಂಡಗದ್ದೆ ಮತ್ತು ಬೆಜ್ಜವಳ್ಳಿಯ ಬಹುತೇಕ ಗ್ರಾಮಗಳಿಗೆ ನಿರಂತರ ವಿದ್ಯುತ್‌ದೊರೆಯಲಿದೆ ಎಂದರು.

8 ಕೋಟಿ ರು. ವಿದ್ಯುತ್ ಸಂಗ್ರಹಾಗಾರ ನಿರ್ಮಾಣ

ತಾಲೂಕಿನ ಮೂರು ಭಾಗಗಳಲ್ಲಿ 110/11 ಕೆ.ವಿ. ವಿದ್ಯುತ್‌ಸಂಗ್ರಹಾಗಾರಗಳನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ಘಟಕವು ಸುಮಾರು 8ಕೋಟಿ ರು.ಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲಾಗಿದೆ. ವಿವಿಧ ಕಾರಣಗಳಿಂದ ಇನ್ನೂ ಕಾರ್ಯಾರಂಭಗೊಳ್ಳದಿರುವ ಎಂ.ಕೆ.ಬೈಲು ಮತ್ತು ಅಮೃತ ಗ್ರಾಮಗಳ ವಿದ್ಯುತ್‌ಉಪಕೇಂದ್ರಗಳನ್ನು ಅಗತ್ಯವಿರುವ ಎಲ್ಲಾ ಪ್ರಯತ್ನ ಮಾಡಿ, ಜನರಿಗೆ ವಿದ್ಯುತ್‌ಒದಗಿಸಲು ಪ್ರಾಮಾಣಿಕವಾಗಿ ಯತ್ನಿಸಲಾಗುವುದು ಎಂದು ಮಾಜಿ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಕಾರ್ಯಕ್ರಮದಲ್ಲಿ ಮೆಸ್ಕಾಂ ಅಧೀಕ್ಷಕ ಇಂಜಿನಿಯರ್ ಸುರೇಶ್, ಗ್ರಾಮ ಪಂಚಾಯಿತಿಯ ಸುನಿತಾನಾಯಕ್ ಸೇರಿದಂತೆ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರು, ಮುಖಂಡರು ಉಪಸ್ಥಿತರಿದ್ದರು.

ರೈತರಿಗಾಗಿ ವಿಕಸಿತ ಕೃಷಿ ಸಂಕಲ್ಪ ಅಭಿಯಾನ: ಸಂಸದ ಬಿವೈಆರ್

ಶಿವಮೊಗ್ಗ: ರೈತರು ವರ್ಷವಿಡೀ ಶ್ರಮಪಟ್ಟು ಎಲ್ಲರಿಗೂ ಅನ್ನ ನೀಡುತ್ತಾರೆ. ಇಂತಹ ಪುಣ್ಯದ ಕೆಲಸ ಮಾಡುತ್ತಿರುವ ರೈತರಿಗಾಗಿ ಏರ್ಪಡಿಸಿರುವ ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಶ್ಲಾಘನೀಯ ಎಂದು ಸಂಸದ ಬಿ.ವೈ.ರಾಘವೇಂದ್ರ ಹೇಳಿದರು.

ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರ, ಶಿವಮೊಗ್ಗ ಇವರ ವತಿಯಿಂದ ಕೃಷಿ ಇಲಾಖೆ ಮತ್ತು ಕೃಷಿ ಸಂಬಂಧಿತ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ವಿಕಸಿತ ಕೃಷಿ ಸಂಕಲ್ಪ ಅಭಿಯಾನದ ಅಂಗವಾಗಿ ಹೊಳಲೂರು ಗ್ರಾಮದಲ್ಲಿ ಏರ್ಪಡಿಸಿರುವ ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳ ಕಾರ್ಯಾಗಾರಕ್ಕೆ ಅವರು ಚಾಲನೆ ನೀಡಿ ಮಾತನಾಡಿದರು.

ನಮ್ಮ ದೇಶದಲ್ಲಿ ಶೇ.5 ರಷ್ಟು ಸರಕಾರಿ ನೌಕರರು, ಶೇ.20 ರಷ್ಟು ಖಾಸಗಿ ನೌಕರರಿದ್ದರೆ ಉಳಿದ ಶೇ.75 ಅನ್ನದಾತ ರೈತಾಪಿ ವರ್ಗವಿದೆ. ಇಂತಹ ರೈತರಿಗಾಗಿ ಪ್ರಧಾನ ಮಂತ್ರಿ ಮಂಗಾರು ಹಂಗಾಮಿಗೆ ಆಧುನಿಕ ಕೃಷಿ ಚಟುವಟಿಕೆಗಳ ಕುರಿತು ರೈತರಿಗೆ ಮಾಹಿತಿ ನಿಡಲು ವಿಜ್ಞಾನಿಗಳನ್ನು ದೇಶದಾದ್ಯಂತ ರೈತರ ಕಡೆ ಕಳುಹಿಸಬೇಕೆಂಬ ಉದ್ದೇಶವನ್ನು ಹೊಂದಿರುವುದು ಕೃಷಿ ವಲಯದಲ್ಲಿ ಬೃಹತ್ ಮಟ್ಟದ ಹೆಜ್ಜೆಯಾಗಿದೆ ಎಂದರು.

ಕಾಯಕ್ರಮದಲ್ಲಿ ಹೊಳಲೂರು ಗ್ರಾ.ಪಂ ಅಧ್ಯಕ್ಷೆ ರಮ್ಯ ಮಧು, ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಕಿರಣ್ ಕುಮಾರ್, ಕೆವಿಕೆ ಮುಖ್ಯಸ್ಥ ಡಾ.ಸುನಿಲ್ ಸಿ, ಕೃಷಿ ವಿವಿ ವಿಸ್ತರಣಾ ನಿರ್ದೇಶಕ, ಡಾ.ಜಿ.ಕೆ ಗಿರಿಜೇಶ್, ತೋಟಗಾರಿಕೆ ಉಪನಿರ್ದೇಶಕಿ ಸವಿತಾ ಜಿ, ಮೀನುಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಡಾ.ಗಿರೀಶ್ ಓ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕ ಡಾ.ಬಾಬುರತ್ನ ಎ, ಡಾ.ಎಸ್.ಪ್ರದೀಪ್, ಡಾ.ಬಿ.ಸಿ ಹನುಮಂತಸವಾಮಿ, ದೇವರಾಜ್, ಉಲ್ಲಾಸ್ ಮೆಸ್ತ, ರೈತರ ಉತ್ಪಾದಕ ಸಂಸ್ಥೆಗಳ ಸದಸ್ಯರು, ಸ್ವಸಹಾಯ ಸಂಘದ ಸದಸ್ಯರುಗಳು, ಪಾಲ್ಗೊಂಡಿದ್ದರು.

ಹೊಳಲೂರು ಗ್ರಾಮದಲ್ಲಿ ಏರ್ಪಡಿಸಿರುವ ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳ ಕಾರ್ಯಾಗಾರಕ್ಕೆ ಸಂಸದ ಬಿ.ವೈ.ರಾಘವೇಂದ್ರ ಚಾಲನೆ ನೀಡಿದರು.

ಬಿತ್ತನೆ ಬೀಜ ಖರೀದಿಸಿ ರಶೀದಿ ಪಡೆಯಿರಿ

ದಾವಣಗೆರೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಮಾತನಾಡಿದರು.

ದಾವಣಗೆರೆ: ರೈತರಿಗೆ ಸರಕಾರದಿಂದ ಸಿಗುವ ರಿಯಾಯಿತಿ ದರದ ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಇತರೆ ಯೋಜನೆಗಳ ಲಾಭವನ್ನು ಸಕಾಲದಲ್ಲಿ ರೈತರಿಗೆ ತಲುಪಿಸುವಂತೆ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ವಿತರಣೆ ಹಾಗೂ ಇಲಾಖೆಯ ಯೋಜನೆಗಳ ಅನುಷ್ಠಾನ ಕುರಿತು ಆಯೋಜಿಸಲಾಗಿದ್ದ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈಗ ಮುಂಗಾರು ಹಂಗಾಮು ಆರಂಭವಾಗುತ್ತಿದ್ದು, ಬೀತ್ತನೆ ಬೀಜ, ರಸಗೊಬ್ಬರ ಪೂರೈಕೆಯಲ್ಲಿ ಯಾವುದೇ ಸಮಸ್ಯೆ ಆಗದಂತೆ ಎಚ್ಚರಿಕೆ ವಹಿಸಬೇಕು. ರೈತರು ಅಧಿಕೃತ ಮಾರಾಟಗಾರರಿಂದ ಬೀಜ ಖರೀದಿಸಬೇಕು. ರಿಯಾಯಿತಿ ದರದ ಬಿತ್ತನೆ ಬೀಜ ಪಡೆದುಕೊಂಡು ಬಿತ್ತನೆ ಮಾಡಬೇಕು. ಬೀಜ ರೈತರು ಖರೀದಿಸಿದ ನಂತರ ರಶೀದಿ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಕಳಪೆ ಗುಣಮಟ್ಟದ ಪರಿಕರ ಮಾರಾಟ ಮಾಡಿದರೆ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆಯನ್ನೂ ನೀಡಲಾಗಿದೆ. ರೈತರು ಸಹ ಈ ನಿಟ್ಟಿನಲ್ಲಿ ಯಾವುದೇ ಕೃಷಿ ಪರಿಕರ ಮುಖ್ಯವಾಗಿ ಬಿತ್ತನೆ ಬೀಜ ಅನಧಿಕೃತ ಅಥವಾ ಪರವಾನಗಿ ಇಲ್ಲದ ಮಾರಾಟಗಾರರಿಂದ ಪಡೆಯಬಾರದು ಎಂದು ತಿಳಿಸಿದರು.

ರೈತರು ಒಂದೇ ಸಂಸ್ಥೆ ಅಥವಾ ಒಂದೇ ರಸಗೊಬ್ಬರಕ್ಕೆ ಆದ್ಯತೆ ನೀಡದೆ, ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಗಂಧಕ ಹಾಗೂ ಪೊಟ್ಯಾಷ್ ಒದಗಿಸುವ ಇತರೆ ಸಂಯುಕ್ತ ರಸಗೊಬ್ಬರ ಬಳಸಬೇಕು.

ಮಾರಾಟಗಾರರು ರಸಗೊಬ್ಬರ ಮಾರಾಟ ಮಾಡುವಾಗ ಪೊಟ್ಯಾಷ್ ಯುಕ್ತ ಸಂಯುಕ್ತ ರಸಗೊಬ್ಬರಗಳ ಉಪಯುಕ್ತತೆ ಬಗ್ಗೆ ರೈತರಿಗೆ ತಿಳಿಸಬೇಕು ಎಂದರು.

ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ಉಪಕೃಷಿ ನಿರ್ದೇಶಕ ಅಶೋಕ, ಲೀಡ್ ಫರ್ಟಿಲೈಸರ್ಸ್ ಸಂಸ್ಥೆಯ ಅಧಿಕಾರಿ ಉಮೇಶ್, ರಸಗೊಬ್ಬರ ಪೂರೈಸುವ ಸಂಸ್ಥೆಯ ಮಾಲೀಕರು, ಬೀತ್ತನೆ ಬೀಜ ಸರಬರಾಜು ಮಾಡುವ ಮಾಲೀಕರು ಹಾಜರಿದ್ದರು.

ಹೊರ ಜಿಲ್ಲೆಗೆ ಬೀಜ, ರಸಗೊಬ್ಬರ ಮಾರಾಟವಾಗದಂತೆ ಕ್ರಮವಹಿಸಿ

ತಾಲೂಕಿನ ಯಾವುದೇ ಭಾಗದಲ್ಲಿ ಅಂತಹ ಕಾನೂನು ಬಾಹಿರ ಕೃಷಿ ಪರಿಕರಗಳ ಸಂಗ್ರಹ, ಬಿತ್ತನೆ ಬೀಜ ಮಾರಾಟ ಕಂಡು ಬಂದಲ್ಲಿ ಮಾಹಿತಿ ನೀಡಬೇಕು. ನಕಲಿ ಸಂಸ್ಥೆಗಳು, ಅನಧಿಕೃತ ವ್ಯಕ್ತಿಗಳ ಮೇಲೆ ನಿಗಾ ವಹಿಸಬೇಕು. ಹೊರ ಜಿಲ್ಲೆಗೆ ಬಿತ್ತನೆ ಬೀಜ, ರಸಗೊಬ್ಬರ ಮಾರಾಟವಾಗದಂತೆ ನೋಡಿಕೊಳ್ಳಬೇಕು ಎಂದು ಗಂಗಾಧರಸ್ವಾಮಿ ತಿಳಿಸಿದರು.

ಜಿಲ್ಲೆಯಾದ್ಯಂತ ಸಂಭ್ರಮದ ಶಾಲಾ ಪ್ರಾರಂಭೋತ್ಸವ | ಶಾಲಾಂಗಳದಲ್ಲಿ ಮಕ್ಕಳ ಕಲರವ

ಮಕ್ಕಳಿಗೆ ಗುಲಾಬಿ, ಬಲೂನ್ ನೀಡಿ ಸ್ವಾಗತ

ಚಿತ್ರದುರ್ಗ: ಜಿಲ್ಲೆಯಾದ್ಯಂತ ಏಕಕಾಲಕ್ಕೆ ಗುರುವಾರ ಶಾಲೆಗಳು ಆರಂಭವಾಗಿದ್ದು, ಮೊದಲ ದಿನವೇ ಮಕ್ಕಳು ಉತ್ಸಾಹದಿಂದ ಶಾಲೆಗಳತ್ತ ಹೆಜ್ಜೆ ಹಾಕಿದರು. ಹೊಸ ಹುರುಪಿನೊಂದಿಗೆ ತರಗತಿಗೆ ಹಾಜರಾದರು. ಶಾಲಾ ಪ್ರಾರಂಭೋತ್ಸವದ ಅಂಗವಾಗಿ ಶಾಲೆಗಳಲ್ಲಿ ತಳಿರು ತೋರಣ ಕಟ್ಟುವ ಮೂಲಕ ಶಿಕ್ಷಕರು ಮಕ್ಕಳನ್ನು ಸಂಭ್ರಮದಿಂದ ಬರ ಮಾಡಿಕೊಂಡರು. ಎತ್ತಿನಗಾಡಿಯಲ್ಲಿ ಮೆರವಣಿಗೆ, ಗುಲಾಬಿ ಹೂ, ಸಮವಸ್ತ್ರ ವಿತರಣೆ, ಪುಠ್ಯಪುಸ್ತಕ ವಿತರಣೆ ಸೇರಿದಂತೆ ಹೀಗೆ ವಿವಿಧ ಬಗೆಯಲ್ಲಿ ಮಕ್ಕಳನ್ನು ಸ್ವಾಗತಿಸಲಾಯಿತು.

ಚಿತ್ರದುರ್ಗ ತಾಲೂಕಿನ ಮೇದೇಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2025-26ನೇ ಸಾಲಿನ "ಶಾಲಾ ಪ್ರಾರಂಭೋತ್ಸವ" ಕಾರ್ಯಕ್ರಮ ಉದ್ಘಾಟಿಸಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಆರ್.ಮಂಜುನಾಥ ಮಾತಮಾಡಿ, ಶಿಕ್ಷಣವೇ ಶಕ್ತಿ, ಶಿಕ್ಷಣ ಕಲಿತ ವ್ಯಕ್ತಿ ತನ್ನ ಜೀವನವನ್ನು ಉತ್ತಮವಾಗಿ ನಿರ್ವಹಿಸಿ, ಸಮಾಜಕ್ಕೆ ಉತ್ತಮ ಕೊಡುಗೆಗಳನ್ನು ನೀಡುವರು. ಶಾಲೆಗಳು ಶಿಕ್ಷಣ ನೀಡುವ ಕೇಂದ್ರಗಳಾಗಿದ್ದು, ಅರ್ಹ ವಯಸ್ಸಿನ ಮಕ್ಕಳನ್ನು ಶಾಲೆಗೆ ಸೇರಿಸಿ, ನಿಯಮಿತವಾಗಿ ಶಾಲೆಗೆ ಕಳುಹಿಸಬೇಕು ಎಂದು ಅವರು ಹೇಳಿದರು.

ಮೇದೆಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷೆ ಕಾವ್ಯ ವಿಜಯಕುಮಾರ್ ಮಾತನಾಡಿ, ಶಿಕ್ಷಣ ಕಲಿತ ವ್ಯಕ್ತಿ ಮುಂದಿನ ಜೀವನದಲ್ಲಿ ಯಶಸ್ಸನ್ನು ಗಳಿಸಲು ಸಾಧ್ಯವಾಗುವುದು. ಗ್ರಾಮದ ಎಲ್ಲಾ ಅರ್ಹ ಮಕ್ಕಳು ಶಾಲೆಗೆ ದಾಖಲಾಗಿ ಉತ್ತಮ ವ್ಯಕ್ತಿಗಳಾಗಬೇಕು ಎಂದು ಶುಭ ಹಾರೈಸಿದರು. ಶಾಲಾ ಮಕ್ಕಳಿಗೆ ಅಗತ್ಯವಾದ ಸೌಲಭ್ಯಗಳನ್ನು ಗ್ರಾಮ ಪಂಚಾಯಿತಿ ವತಿಯಿಂದ ನೀಡುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಕಚೇರಿಯ ಶಿಕ್ಷಣಾಧಿಕಾರಿ ಸಿದ್ದಪ್ಪ, ಚಿತ್ರದುರ್ಗ ತಾಲೂಕು ಕ್ಷೇತ್ರ ಶಿಕ್ಷಣಾಧಿ ಕಾರಿ ಎಸ್.ನಾಗಭೂಷಣ್, ಕ್ಷೇತ್ರ ಸಮನ್ವಯಾ ಧಿಕಾರಿ ಇ.ಸಂಪತ್ ಕುಮಾರ್, ಎಸ್.ಡಿ.ಎಂ.ಸಿ. ಅಧ್ಯಕ್ಷೆ ಶ್ವೇತಾ ಹಾಗೂ ಸದಸ್ಯರಾದ ದುಗ್ಗಣ್ಣ, ಶಿವಮೂರ್ತಪ್ಪ, ನಿಂಗಣ್ಣ, ಧನ್ಯಕುಮಾರ್, ಪ್ರಿಯ ದರ್ಶಿನಿ, ಬಸವರಾಜು, ಲಕ್ಷ್ಮಿದೇವಿ ಶ್ರೀನಿವಾಸ್, ಸುಶೀಲಮ್ಮ, ಶಶಿಕಲಾ, ಸುಲೋಚನ, ಎಂ.ಸಿ. ಶಂಕರ್, ಸಿಆರ್‌ಪಿಗಳಾದ ಎಂ.ಎಲ್.ತಿಮ್ಮರಾಜು, ಅಜಯ್ ಕೋಟೆ, ಜಿ.ಎನ್.ಅಜ್ಜಪ್ಪ ಇದ್ದರು.

ಜಿಲ್ಲೆಯಾದ್ಯಂತ ಸಂಭ್ರಮದ ಶಾಲಾ ಪ್ರಾರಂಭೋತ್ಸವ ಹಿನ್ನಲೆ ಶಿಕ್ಷಕರು ಮಕ್ಕಳನ್ನು ಶಾಲೆಗೆ ಸಂಭ್ರಮದಿಂದ ಬರ ಮಾಡಿಕೊಂಡರು.

ಎತ್ತಿನಗಾಡಿಯಲ್ಲಿ ಮಕ್ಕಳ ಮೆರವಣಿಗೆ

ಶಾಲಾ ಪ್ರಾರಂಭೋತ್ಸವದ ಅಂಗವಾಗಿ ಸಿಂಗಾರಗೊಂಡ ಎತ್ತಿನಗಾಡಿಯಲ್ಲಿ ಶಾಲಾ ಮಕ್ಕಳ ಮೆರವಣಿಗೆ ನಡೆಸಿ, ಶಾಲೆಯ ಆವರಣಕ್ಕೆ ಪ್ರವೇಶಿಸುತ್ತಿದ್ದಂತೆ ಶಿಕ್ಷಕರು ಪುಷ್ಪಾರ್ಚನೆ ಮಾಡಿ, ಹೂವು, ಬಲೂನ್ ನೀಡಿ,ಶೈಕ್ಷಣಿಕ ವರ್ಷಕ್ಕೆ ಸ್ವಾಗತಿಸಿದರು. 1ನೇ ತರಗತಿಗೆ 12 ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವುದರ ಮೂಲಕ ದಾಖಲಾತಿ ಪ್ರಕ್ರಿಯೆಗೆ ಚಾಲನೆ ನೀಡಿ ದಾಖಲಾದ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ, ಸಮವಸ್ತ್ರ ನೀಡಲಾಯಿತು.

ಕಂದಾಯ ಇಲಾಖೆ ಕಾರ್ಯವೈಖರಿಗೆ ಶಾಸಕ ಗರಂ

ಸಾಗರ: ತಾಲೂಕಿನ ಉಪವಿಭಾಗಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಗುರುವಾರ ಕೆಡಿಪಿ ಸಭೆಗೆ ಆಗಮಿಸಿದ್ದ ಶಾಸಕ ಬೇಳೂರು ಗೋಪಾಲಕೃಷ್ಣ, ಅಲ್ಲಿ ಬೇಸರದಿಂದ ಕುಳಿತ ವೃದ್ದೆಯೊಬ್ಬರ ಬಳಿಗೆ ತೆರಳಿ ಸಮಸ್ಯೆ ಆಲಿಸಿ ತಕ್ಷಣ ಪರಿಹರಿಸುವ ಕಾರ್ಯ ಮಾಡುವ ಜತೆಗೆ ಆಕೆಗೆ ಮನೆಗೆ ತೆರಳುವುದಕ್ಕೆ ಹಣವನ್ನೂ ನೀಡಿ ಮಾನವೀಯತೆ ಮೆರೆದ ಘಟನೆ ನಡೆದಿದೆ.

ಮನೆಯ ದಾಖಲೆ ಸಂಬಂಧ ಕಂದಾಯ ಇಲಾಖೆಗೆ ಅಲೆದಾಡುತ್ತಿರುವ ಆಕೆಗೆ ಇಲಾಖೆಯ ಸಿಬ್ಬಂದಿ ನಿಮ್ಮ ದಾಖಲೆ ಹುಡುಕುವುದಕ್ಕೆ ಆಗುವುದಿಲ್ಲ ಎಂದು ಉಡಾಫೆ ಮಾತುಗಳನ್ನಾಡಿ ಕಳಿಸಿದ್ದರು. ಇದಕ್ಕೆ ವೃದ್ದೆ ಮುಂದಿನ ದಾರಿ ಕಾಣದೆ ಸುಮ್ಮನೆ ಬೇಸರದಿಂದ ಕುಳಿತಿರುವುದನ್ನು ಸಭೆಯಿಂದಲೇ ಗಮನಿಸಿದ ಶಾಸಕ ಬೇಳೂರು ಸ್ವತ: ತಾವೇ ಎದ್ದು ನಿಂತು ಆಕೆಗೆ ಗೌರವ ನೀಡಿರುವುದಲ್ಲದೆ ಇತ್ತ ಕಂದಾಯ ಇಲಾಖೆಯ ಕಾರ್ಯವೈಖರಿಗೆ ತರಾಟೆ ತೆಗೆದುಕೊಂಡರು.

ಆಡಳಿತ ಸೌಧದಲ್ಲಿ ನೀವು ಮಾಡುವ ಲೋಪದಿಂದ ಜನರು ಸಂಕಷ್ಟ ಎದುರಿಸುವಂತೆ ಆಗುತ್ತದೆ. ಇದನ್ನು ಸಹಿಸುವುದಿಲ್ಲ ಎಂದ ಅವರು ಇಂತಹ ವಿಷಯದಲ್ಲಿ ನಿರ್ಧಾಕ್ಷಿಣ್ಯವಾಗಿ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ತಕ್ಷಣ ದಾಖಲೆ ಸಹಿತ ಸಿಬ್ಬಂದಿ ಸ್ಥಳಕ್ಕೆ ಬಂದು ಕೆಲಸ ಮಾಡಿಕೊಡುವುದಾಗಿ ಕೇಳಿಕೊಂಡರು.

ತಾಲೂಕಿನ ಉಪವಿಭಾಗಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಶಾಸಕ ಬೇಳೂರು ಗೋಪಾಲಕೃಷ್ಣ ಮಾತನಾಡಿದರು.

ಕಾರ್ಮಿಕರಿಗೆ ಸಂಚಾರಿ ಆರೋಗ್ಯ ಘಟಕಕ್ಕೆ ಶಾಸಕರಿಂದ ಚಾಲನೆ

ಸಾಗರ: ಇಲ್ಲಿನ ಉಪವಿಭಾಗಾಧಿಕಾರಿಗಳ ಕಚೇರಿ ಆವರಣದಲ್ಲಿ ಗುರುವಾರ ಶಾಸಕ ಗೋಪಾಲಕೃಷ್ಣರವರು, ಕಟ್ಟಡ ಮತ್ತಿತರ ಕಾರ್ಮಿಕರ ಆರೋಗ್ಯ ತಪಾಸಣೆಗೆ ಸಿದ್ದವಾಗಿರುವ ಸಂಚಾರಿ ಆರೋಗ್ಯ ಘಟಕಕ್ಕೆ ಚಾಲನೆ ನೀಡಿದರು. ಇದು ಸಾಗರ ಮತ್ತು ಶಿಕಾರಿಪುರ ತಾಲೂಕಿನಲ್ಲಿ ಈಗ ಸಂಚರಿಸಲಿದ್ದು, ಘಟಕದಲ್ಲಿ ಒರ್ವ ವೈದ್ಯರು ಸೇರಿದಂತೆ ಜನ ಸಿಬ್ಬಂದಿ ಹಾಗೂ ಎಲ್ಲ ರೀತಿಯ ತಪಾಸಣ ವ್ಯವಸ್ಥೆ ಒಳಗೊಂಡಿದೆ. ಇದರ ಪ್ರಯೋಜನ ಕಾರ್ಮಿಕರು ಪಡೆದುಕೊಳ್ಳುವುದಕ್ಕೆ ಶಾಸಕರು ಮನವಿ ಮಾಡಿದ್ದಾರೆ.

ಬಿತ್ತನೆ ಬೀಜಗಳ ವಿತರಣೆ

ಸಾಗರ: ಅವಧಿಗೂ ಪೂರ್ವ ಮುಂಗಾರು ಮಳೆಯಿಂದ ಅಪಾರ ಪ್ರಮಾಣದಲ್ಲಿ ಜೋಳ ಮತ್ತು ಕಾರು ಭತ್ತ ಹಾನಿಯಾಗಿದೆ, ಇದನ್ನು ತಕ್ಷಣ ಸಮೀಕ್ಷೆ ಮಾಡಿ, ವರದಿ ನೀಡುವುದಲ್ಲದೆ ಸೂಕ್ತ ಪರಿಹಾರ ಕಲ್ಪಿಸುವಂತೆ ಅರಣ್ಯ ಕೈಗಾರಿಕ ನಿಗಮದ ಅಧ್ಯಕ್ಷ ಶಾಸಕ ಬೇಳೂರು ಗೋಪಾಲಕೃಷ್ಣ ಕೃಷಿ ಇಲಾಖೆಗೆ ತಿಳಿಸಿದರು. ಈ ಹಂಗಾಮಿನ ಬಿತ್ತನೆ ಬೀಜ ವಿತರಿಸಿ ಮಾತನಾಡಿ, ಮೊದಲು ರೈತರ ಸಂಕಷ್ಟ ಗಮನಿಸಿ, ಹಾನಿಯ ಸಮೀಕ್ಷೆ ಮಾಡಿ ಎಂದರು. ಕೃಷಿ ಸಹಾಯಕ ನಿರ್ದೇಶಕ ಚಂದ್ರಕುಮಾರ್, ತಾಂತ್ರಿಕ ಅಧಿಕಾರಿ ಸಂಜೀವ್, ಕೃಷಿ ಅಧಿಕಾರ ರಿಜ್ವನ್, ವಿನಾಯಕರಾವ್ ಮತ್ತಿತರರು ಇದ್ದರು.

ಸಿಂದೂರ ಯಶಸ್ವಿ: ಸೈನಿಕರ ಪರ ತಿರಂಗಾ ಯಾತ್ರೆ

ಹರಿಹರ: ಭಾರತೀಯ ಸೈನಿಕರ ಅಪರೇಷನ್ ಸಿಂದೂರ ಯಶಸ್ವಿ ಕಾರ್ಯಾಚರಣೆ ಹಿನ್ನಲೆಯಲ್ಲಿ ಹರಿಹರದಲ್ಲಿ ಯಶಸ್ವಿ ತಿರಂಗಾ ಯಾತ್ರೆ ಆಯೋಜಿಸಲಾಗಿತ್ತು.

ನಗರದ ಶ್ರೀ ಹರಿಹರೇಶ್ವರ ದೇವಸ್ಥಾನದಿಂದ ಆರಂಭಗೊಂಡ ತಿರಂಗಾ ಯಾತ್ರೆಯೂ, ದೇವಸ್ಥಾನ ರಸ್ತೆಯ ಮೂಲಕ ಹಾದು, ಕಿತ್ತೂರುರಾಣಿ ವೃತ್ತದ ಮೂಲಕ ಮುಖ್ಯ ರಸ್ತೆಯಲ್ಲಿ ತೆರಳಿ ಮಹಾತ್ಮಾ ಗಾಂಧಿ ವೃತ್ತಕ್ಕೆ ಆಗಮಿಸಿ ಕೆಲವೊತ್ತು ಭಾರತೀಯ ಸೈನಿಕರ ಕಾರ್ಯಕ್ಕೆ ಜೈಘೋಷ ಕೂಗಲಾಯಿತು. ನಂತರ ಹಳೆ ಪಿ.ಬಿ ರಸ್ತೆಯ ಮೂಲಕ ಚಲಿಸಿ, ಪೇಟೆ ಆಂಜನೇಯ ರಸ್ತೆಯ ಮೂಲಕ ಶಿವಮೊಗ್ಗ ರಸ್ತೆಯ ಮುಖಾಂತರ ಹಾಲಮ್ಮ ಎಚ್.ಕೆ. ವೀರಪ್ಪ ಕಲ್ಯಾಣ ಮಂಟಪದಲ್ಲಿನ ವೇದಿಕೆ ಕಾರ್ಯಕ್ರಮದೊಂದಿಗೆ ಸಂಪನ್ನಗೊಂಡಿತು.

ವೇದಿಕೆ ಕಾರ್ಯಕ್ರಮದಲ್ಲಿ ಕರ್ನಾಟಕ ದಕ್ಷಿಣ ಪ್ರಾಂತ ಸಹ ಸಂಪರ್ಕ ಪ್ರಮುಖ್‌ಯದು ಕೃಷ್ಣ ಮಾತನಾಡಿ, ಭಾರತೀಯ ಸೈನಿಕರು ಪಾಕಿಸ್ತಾನದಲ್ಲಿರುವ ಭಯೋತ್ಪಾದಕರ ನೆಲೆಗಳ ಮೇಲೆ ನೇರವಾಗಿ ದಾಳಿ ನಡೆಸುವ ಮೂಲಕ ಭಯೋತ್ಪಾದನೆಗೆ ಕಡಿವಾಣ ಹಾಕಿದ್ದಾರೆ. ದಾಳಿವೇಳೆ ಪಾಕಿಸ್ತಾನದ ಯಾವುದೇ ನಾಗರಿಕರಿಗೆ ತೊಂದರೆಯಾಗದಂತೆ ಕ್ರಮಬದ್ಧವಾದ ದಾಳಿ ನಡೆಸಿದ್ದು ವಿಶೇಷತೆ ಎಂದು ಹೇಳಿದರು.

ಸುಸಂಪನ್ನವಾಗಿ ನಡೆದ ಯಾತ್ರೆಯುದ್ದಕ್ಕೂ ಶಾಸಕ ಬಿ.ಪಿ.ಹರೀಶ್, , ಕೃಷ್ಣಮೂರ್ತಿ ಶೆಟ್ರು,ಎಚ್.ಪಿ.ಬಾಬಣ್ಣ, ನಾಗಮಣಿ .ಕೆ ಹನುಮಂತಪ್ಪ, , ರಾಜು ರೋಪಡೆ, ರಾಘವೇಂದ್ರ, ಉಪಾಧ್ಯಾಯ,ಅಂಬುಜಾ ರಾಜೋಳಿ, ಸಾಕ್ಷಿ ಸಿಂಧೆ ಸೇರಿದಂತೆ ವಿವಿಧ ಕಾಲೇಜುಗಳ ಎನ್.ಎಸ್.ಎಸ್. ಸ್ವಯಂಸೇವಕ ರು,ವಿದ್ಯಾರ್ಥಿಗಳು ಕೈಯಲ್ಲಿ ಭಾರತದ ಧ್ವಜವನ್ನು ಹಿಡಿದು ಮೆರವಣಿಗೆಯುದ್ದಕ್ಕೂ ಭಾಗವಹಿಸಿದರು. ಸುಮಾರು 1 ಕಿ.ಮೀ ದೂರದವರೆಗೆ ನಡೆದ ತಿರಂಗಾ ಧ್ವಜ ಯಾತ್ರೆಯಲ್ಲಿ ಜತೆಗೆ ಮಹಿಳೆಯರು ಪಾಲ್ಗೊಂಡು ದೇಶಭಕ್ತಿಗೆ ಸಾಕ್ಷಿಯಾಗುವ ಮೂಲಕ ಗಮನ ಸೆಳೆದರು. ನಗರದ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಹರಿಹರದಲ್ಲಿ ಯಶಸ್ವಿಯಾದ ತಿರಂಗಾ ಯಾತ್ರೆ.

ಶ್ರೀಗಳಿಂದ ದುಬೈನಲ್ಲಿ 'ಸುಜ್ಞಾನ ಸಂಗಮ'

ಹೊಸದುರ್ಗ: 32 ಭಕ್ತರೊಂದಿಗೆ ದುಬೈ ಪ್ರವಾಸ ಕೈಗೊಂಡ ಹೊಸದುರ್ಗದ ಶ್ರೀ ಜಗದ್ಗುರು ಕುಂಚಿಟಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಶಾಂತವೀರ ಸ್ವಾಮೀಜಿ ಅವರು ದುಬೈನಲ್ಲಿ ಸುಜ್ಞಾನ ಸಂಗಮ ಹಾಗೂ ಬುದ್ಧ, ಬಸವ, ಅಂಬೇಡ್ಕರ್ ಜಯಂತಿ ಆಚರಿಸಿದರು. ಪ್ರತಿ ತಿಂಗಳು 10ನೇ ತಾರೀಕಿನಂದು ಹೊಸದುರ್ಗದಲ್ಲಿ ಕಳೆದ 23 ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಸುಜ್ಞಾನ ಸುಗಮ ಕಾರ್ಯಕ್ರಮವನ್ನು ಈ ಬಾರಿ ದುಬೈ ದೇಶದಲ್ಲಿ ಆಯೋಜಿಸಿದ್ದು ವಿಶೇಷ. ಈ ಆಚರಣೆಯಿಂದ ಸ್ವಾಮೀಜಿ ಜತೆಗೆ ಪ್ರವಾಸದಲ್ಲಿರುವ ಭಕ್ತರು ಹರ್ಷ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಕುಂಚಿಟಿಗ ಸಮಾಜದ ಅಧ್ಯಕ್ಷ ಕಲ್ಕೆರೆ ಶೇಖರಪ್ಪ, ಉಪಾಧ್ಯಕ್ಷ ಕೋಡಿಹಳ್ಳಿ ಧರಣಪ್ಪ, ಕಾರ್ಯದರ್ಶಿ ತಣಿಗೇಕಲ್ಲು ಲೋಕಣ್ಣ, ನಿರ್ದೇಶಕ ದೇವರಾಜು, ಜಿ.ಪಂ ಮಾಜಿ ಸದಸ್ಯ ಬಿ.ಎಸ್.ದ್ಯಾಮಣ್ಣ, ನಿವೃತ್ತ ಶಿಕ್ಷಕರಾದ ತಣಿಗೆಕಲ್ಲು ತಿಪ್ಪೇಸ್ವಾಮಿ, ರೇವಣಸಿದ್ದಪ್ಪ, ನಾಗರಾಜಪ್ಪ, ಹನುಮಂತಪ್ಪ, ರಾಮಪ್ಪ, ಬಸವಲಿಂಗಪ್ಪ, ಸೇರಿದಂತೆ 32 ಭಕ್ತರು ಶ್ರೀಗಳ ಜತೆ ಪ್ರಯಾಣ ಬೆಳೆಸಿದ್ದಾರೆ.


ಸ್ವಾವಲಂಬಿ ಗ್ರಾಮ
ಸದೃಢ ಕರ್ನಾಟಕ
ಕಲ್ಯಾಣ ಪಥ
₹1,000
ಕೋಟಿ
ಕಲ್ಯಾಣ ಕರ್ನಾಟಕದ 1,150 ಕಿ.ಮೀ ಗ್ರಾಮೀಣ ರಸ್ತೆಗಳ ಅಭಿವೃದ್ಧಿ
ಪ್ರಗತಿ ಪಥ
₹5,200
ಕೋಟಿ
ರಾಜ್ಯಾದ್ಯಂತ 7,110 ಕಿ.ಮೀ ಗ್ರಾಮೀಣ ರಸ್ತೆಗಳ ಸುಧಾರಣೆ
3,888
ರಾಜ್ಯಾದ್ಯಂತ ಕೂಸಿನಮನೆಗಳ ನಿರ್ಮಾಣ
₹1,273.34
ಕೋಟಿ ತೆರಿಗೆ ಸಂಗ್ರಹ
ಗ್ರಾಮ ಪಂಚಾಯತಿಗಳಿಂದ 2024-25ನೇ ಸಾಲಿನಲ್ಲಿ ಸಾರ್ವತ್ರಿಕ ದಾಖಲೆ
3,469
ತ್ಯಾಜ್ಯ ನಿರ್ವಹಣೆಯ ವಾಹನ ಚಾಲಕಿಯರು
₹22,624
ಕೋಟಿ
ಜಲ ಜೀವನ್ ಮಿಷನ್ ಯೋಜನೆಗಾಗಿ ರಾಜ್ಯ ಸರ್ಕಾರದಿಂದ ಅನುದಾನ
TAX
ಬಾಪೂಜಿ ಸೇವಾಕೇಂದ್ರ
₹370
ನರೇಗಾ ಕೂಲಿ ಕಾರ್ಮಿಕರಿಗೆ ವೇತನ ಹೆಚ್ಚಳ
20 ಲಕ್ಷ ಗ್ರಾಮೀಣ ಆಸ್ತಿಗಳ ಸೃಜನೆ
81
ಸರ್ಕಾರಿ ಸೇವೆಗಳು ಬಾಪೂಜಿ ಸೇವಾ ಕೇಂದ್ರದಲ್ಲಿ ಲಭ್ಯ
5,762
ಗ್ರಾಮೀಣ ಗ್ರಂಥಾಲಯಗಳನ್ನು 'ಅರಿವು' ಕೇಂದ್ರಗಳನ್ನಾಗಿ ಮೇಲ್ದರ್ಜೆಗೆ, ಡಿಜಿಟಲ್ ಸ್ಪರ್ಶ
1.49 ಕೋಟಿ
ಪಂಚತಂತ್ರ 2.0 ತಂತ್ರಾಂಶದಲ್ಲಿ ಗ್ರಾಮೀಣ ಆಸ್ತಿಗಳ ನೋಂದಣಿ
26,484
ಗ್ರಾಮಗಳಿಗೆ ಬೂದು ನೀರು ನಿರ್ವಹಣೆ ಅನುಷ್ಠಾನಕ್ಕೆ ಆಡಳಿತಾತ್ಮಕ ಅನುಮೋದನೆ
34,056
ನೀರಿನ ಮಾದರಿಗಳ ಪರೀಕ್ಷೆ 'ಜೀವಜಲ' ಮೊಬೈಲ್ ಅಪ್ಲಿಕೇಶನ್ ಮತ್ತು ಪೋರ್ಟಲ್ ಅಭಿವೃದ್ಧಿ.
ಸಹಾಯವಾಣಿ ವಾಟ್ಸಪ್ ನಂಬರ್
82775 06000
Mahatma Gandhi NREGA
ಕರ್ನಾಟಕ ಭಾರತದಲ್ಲೇ ನಂಬರ್ 1
ಪಂಚಾಯತ್ ಸಬಲೀಕರಣ, ಆರ್ಥಿಕ ಸ್ವಾಯತ್ತತೆ, ಸುಧಾರಣೆ
"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ರಕ್ಷಿಸುವುದು ಮತ್ತು ಗೌರವಿಸುವುದು" - ಇದು ನಮ್ಮ ದೇಶದ ಪ್ರತಿಯೊಬ್ಬ ನಾಗರೀಕನ ಮೂಲಭೂತ ಕರ್ತವ್ಯ. ಸಂವಿಧಾನದಲ್ಲಿ ಇದನ್ನು ಪ್ರತಿಪಾದಿಸಲಾಗಿದೆ.
ಪ್ರಕಟಣೆ: ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಮಹಿಳೆ ಸಾವು ಪ್ರಕರಣ: ಐವರಿಗೆ 20 ವರ್ಷ ಜೈಲು ಶಿಕ್ಷೆ

ಮೈಸೂರು: ಸಾಮೂಹಿಕ ಅತ್ಯಾಚಾರ ನಡೆಸಿ ಮಹಿಳೆ ಸಾವಿಗೆ ಕಾರಣರಾದ 5 ಮಂದಿಗೆ ಮೈಸೂರಿನ ಏಳನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ 20 ವರ್ಷ ಕಠಿಣ ಶಿಕ್ಷೆ ವಿಧಿಸಿ ಆದೇಶ ಪ್ರಕಟಿಸಿದೆ. ಶಾಂತಿ ನಗರದ ರಫೀಕ್ ಅಹಮ್ಮದ್(26), ಮಂಡಿ ಮೊಹಲ್ಲಾದ ಮಂಜ(25), ಲಷ್ಕರ್ ಮೊಹಲ್ಲಾದ ಮನು(23), ಕೃಷ್ಣ(40), ರೇವಣ್ಣ(27) ಶಿಕ್ಷೆಗೆ ಗುರಿಯಾದವರು. 2021 ರ ಫೆಬ್ರವರಿ 15 ರಂದು ರಫೀಕ್ ಅಹಮ್ಮದ್ ಅಪರಿಚಿತ ಮಹಿಳೆ ಮೇಲೆ ಅತ್ಯಾಚಾರ ನಡೆಸಿದ್ದರು.

ಕರ್ನಾಟಕ ಸರ್ಕಾರ
ಉಪ ನಿರ್ದೇಶಕರ ಕಛೇರಿ
ಸಮಾಜ ಕಲ್ಯಾಣ ಇಲಾಖೆ, ಉತ್ತರಕನ್ನಡ ಜಿಲ್ಲೆ, ಜಿಲ್ಲಾಧಿಕಾರಿಗಳ ಕಛೇರಿ,
ಕಾರವಾರ-581 301
Phone:08382-226514 / 9480843047 Email:ddswo.karwar@gmail.com
ಸಂ: ಉನಿಸಕಇಕಾ:ಶಿಕ್ಷಣ:ಆಹಾರ:ಟೆಂಡರ್:ಸಿಆರ್-05:2024-25 ದಿನಾಂಕ: 23.05.2025

ಇ-ಪ್ರೊಕ್ಯೂರ್‌ಮೆಂಟ್ ಮರು ಟೆಂಡರ್ ಪ್ರಕಟಣೆ
(Inviting Tender through E-Procurement)

2025-26 ಮತ್ತು 2026-27 ನೇ ಸಾಲಿಗಾಗಿ ಉತ್ತರಕನ್ನಡ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಬಾಲಕರ, ಬಾಲಕಿಯರ ವಿದ್ಯಾರ್ಥಿ ನಿಲಯ ಮತ್ತು ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಗಳಿಗೆ ಆಹಾರ ಹಾಗೂ ಇತರೆ ಸಾಮಾಗ್ರಿಗಳನ್ನು ಸರಬರಾಜು ಮಾಡಲು ರೂ.12,13,30,602.76 ಕ್ಕೆ ದ್ವಿ-ಲಕೋಟೆ ಪದ್ಧತಿ ಪ್ರಕಾರ ಅರ್ಹ ನೋಂದಾಯಿತ ಏಜೆನ್ಸಿ/ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ಅಡಿಯಲ್ಲಿ ನಿಬಂಧನೆಗಳಿಗೆ ಒಳಪಟ್ಟು, ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ದಿನಾಂಕ: 21.06.2025 ಸಂಜೆ 5.30 ಗಂಟೆಗೆ ಒಳಗೆ ಟೆಂಡರ್ ಸಲ್ಲಿಸಲು ಅವಕಾಶ ಇರುತ್ತದೆ. ಹೆಚ್ಚಿನ ಮಾಹಿತಿ ಹಾಗೂ ಟೆಂಡರ್ ಷರತ್ತು/ನಮೂನೆಗಳನ್ನು ಇ-ಪ್ರೊಕ್ಯೂರಮೆಂಟ್ ವಿಳಾಸ http://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

(ವೈ.ಕೆ. ಉಮೇಶ)
ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ
ಸಂಖ್ಯೆ: ವಿ.ತಾ.ವಿ./ಬೆ/ಸ್ಥಾ.ಅ./2025-26/ಐ.ಎಫ್.ಟಿ. ನಂ.32/961 ದಿನಾಂಕ: 28-05-2025

ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ) (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ. ರ ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು: **ವಿತಾವಿ, "ಜ್ಞಾನ ಸಂಗಮ", ಬೆಳಗಾವಿಯ ಆವರಣದಲ್ಲಿರುವ ಹಾಸ್ಟೇಲ್‌ಗಳು, ಆಡಳಿತ ಕಟ್ಟಡ, ಅತಿಥಿ ಗೃಹ, ಪಿ.ಜಿ. ಬ್ಲಾಕ್, ಸೌಥ್ ಎಂಡ್ ಬ್ಲಾಕ್ ಮತ್ತು ಗ್ರಂಥಾಲಯ ಹಾಗೂ ಇನ್ನಿತರ ಕಟ್ಟಡಗಳಿಗೆ 500 ಎಲ್.ಪಿ.ಎಚ್. ಎಸ್.ಎಸ್. ಸ್ಕಿಡ್ ಪ್ರಕಾರದ ಸ್ವಯಂ ಚಾಲಿತ ನೀರು ಶುದ್ಧೀಕರಣ ಘಟಕ (ಆರ್‌ಓ + ಯುಎಫ್) 16 ನಂ. ಘಟಕಗಳನ್ನು ಪೂರೈಸಿ ಸ್ಥಾಪಿಸಿ ಮತ್ತು ಕಾರ್ಯಾರಂಭ ಮಾಡುವ ಕಾಮಗಾರಿ ಮೊತ್ತ ರೂ. 84,64,364/- (ತೆರಿಗೆ ರಹಿತ).** ಇತರೆ ಮಾಹಿತಿಗಳನ್ನು ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: **29-05-2025** ರಿಂದ ಪಡೆದುಕೊಳ್ಳಬಹುದು.

ಸಹಿ/- ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
ವಾಸಾಸಂಇ/ಬೆಳಗಾವಿ/351/ಅಡ್ವರ್ಟೋರ್/2025-26

ಪುರಸಭೆ ಕಾರ್ಯಾಲಯ, ಹುಣಸಮಾರನಹಳ್ಳಿ
ಬೆಂಗಳೂರು ನಗರ ಜಿಲ್ಲೆ-562157, ದೂರವಾಣಿ:-080-23901864
Email:- itstaff.ulb.hmhalli@gmail.com, Web:- www.hunasamaranahallitown.mrc.gov.in
ಕ್ರ.ಸಂ;ಹು.ಪು/ತಾಶಾ/ಸಿ.ಆರ್/03/2025-26 ದಿನಾಂಕ: 29.05.2025

ಟೆಂಡರ್ ಪ್ರಕಟಣೆ

ಹುಣಸಮಾರನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿ 2025-26ನೇ ಸಾಲಿನ ಪುರಸಭಾ ನಿಧಿ ಮತ್ತು 2025-26 ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿಯಡಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಅರ್ಹ ಏಜನ್ಸಿದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಮೊಹರಾದ ಟೆಂಡರನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗಳ ವಿವರ

Sl.No.	Indent Number	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ವರ್ಗ
1	DMA/2025-26/OW/WORK_INDENT41164	6.65	Others
2	DMA/2025-26/OW/WORK_INDENT41165	2.40	Others
3	DMA/2025-26/OW/WORK_INDENT41166	5.76	Others
4	DMA/2025-26/OW/WORK_INDENT41163	11.53	Others
5	DMA/2025-26/WT/WORK_INDENT39069/CALL-2	13.90	Cat I
6	DMA/2025-26/IND4801	2.50	Others

1. ಆಕ್ಷೇಪಣೆ/ಮಾಹಿತಿಯನ್ನು ಸಲ್ಲಿಸಲು ದಿನಾಂಕ: **05.06.2025 ಸಂಜೆ 5.00 ಗಂಟೆ ವರೆಗೆ**. 2. ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **09.06.2025 ಸಂಜೆ 5.00 ಗಂಟೆ ವರೆಗೆ.** 3. ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **10.06.2025 ಸಂಜೆ 5.15 ಗಂಟೆ** ನಂತರ. 4. ಟೆಂಡರ್‌ನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **11.06.2025 ರಂದು ಬೆಳಿಗ್ಗೆ 10.00 ಗಂಟೆ** ನಂತರ. ಹೆಚ್ಚಿನ ಮಾಹಿತಿಯನ್ನು KPPP Portal ನಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: 080-23901864, ಇ-ಮೇಲ್: itstaff.ulb.hmhalli@gmail.com

ಸಹಿ/- ಮುಖ್ಯಾಧಿಕಾರಿಗಳು, ಪುರಸಭೆ ಹುಣಸಮಾರನಹಳ್ಳಿ
ಸಹಿ/- ಆಡಳಿತಾಧಿಕಾರಿಗಳು, ಪುರಸಭೆ ಹುಣಸಮಾರನಹಳ್ಳಿ
ವಾಸಾಸಂಇ/ವಾ.ಪ್ರ/922/ಎಸ್‌ಎಸ್‌ಸಿ/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ
ಅಲ್ಪಾವಧಿ_ಟೆಂಡರ್ ನೋಟಿಫಿಕೇಶನ್: 07/2025-26 ದಿನಾಂಕ:27.05.2025
(ದ್ವಿ ಟೆಂಡರ್ ದಾಖಲೆ & ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ **KPWD Class-III & above** ದರ್ಜೆಯ ಗುತ್ತಿಗೆದಾರರಿಂದ ಕೆ.ಪಿ.ಪಿ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.

ಶಿರಸಿ-ಸಿದ್ದಾಪುರ ತಾಲ್ಲೂಕು ವ್ಯಾಪ್ತಿಯಲ್ಲಿ ವಿವಿಧ ಗ್ರಾಮಗಳಲ್ಲಿ ಸೇತುವೆ ನಿರ್ಮಾಣ ಕಾಮಗಾರಿಗಳ (05 ಸಂಖ್ಯೆ) ಟೆಂಡರಿಗಿಟ್ಟ ಮೊತ್ತ ರೂ. 221.91 ಲಕ್ಷಗಳಿಂದ ರೂ. 136.89 ಲಕ್ಷಗಳು & ಇ.ಎಂ.ಡಿ ಮೊತ್ತ ರೂ. **2.82** ಲಕ್ಷಗಳಿಂದ ರೂ. **2.00** ಲಕ್ಷಗಳು. **(1)** ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ : **28.05.2025** ರಿಂದ **04.06.2025 ಸಂಜೆ 5.30** ರವರೆಗೆ. **(2)** ಪ್ರೀಬಿಡ್ ಸಭೆಯ ದಿನಾಂಕ : **31.05.2025** ಬೆಳಿಗ್ಗೆ **11.00** ಗಂಟೆಗೆ (ಸ್ಥಳ:ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ) (3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : **06.06.2025 ಬೆಳಿಗ್ಗೆ 11.00 ಗಂಟೆಗೆ.** (4) ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು.

ಹೆಚ್ಚಿನ ಮಾಹಿತಿಗಾಗಿ (**www.kppp.karnataka.gov.in**) ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ.
ವಾ.ಸಾ.ಸಂ.ಇ./ಶಿ/ನಂ 160-05 ಝೇಂಕಾರ್/2025-26

ಬಿ.ಕೆ.ಹರಿಪ್ರಸಾದ್ ಜತೆಗೆ ಸಿಎಂ ಉಪಾಹಾರ ಭೇಟಿ | ಮಂಗಳೂರಿನಲ್ಲಿ ಸೌಹಾರ್ದ ನೆಲೆಸುವ ಕುರಿತು ಚರ್ಚೆ

ಕಾಂಗ್ರೆಸ್‌ನಲ್ಲಿ ಗರಿಗೆದರಿದ ರಾಜಕೀಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಂಪುಟ ಪುನಾರಚನೆ ಕೂಗಿನ ಮಧ್ಯೆಯೇ ಸಿಎಂ ಸಿದ್ದರಾಮಯ್ಯ, ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ದಿಢೀರ್ ಭೇಟಿ ನೀಡಿರುವುದು ಕುತೂಹಲ ಮೂಡಿಸಿದೆ. ಇದರ ಮಧ್ಯೆಯೇ ರಾಜ್ಯ ರಾಜಕಾರಣದಲ್ಲಿ ಮಹತ್ವದ ಬೆಳವಣಿಗೆ ಕಾಣಲಿದೆ ಎಂದು ವಿರೋಧ ಪಕ್ಷವು ಹೇಳಿರುವುದು ಕೂಡ ಸಾಕಷ್ಟು ಅಚ್ಚರಿ ಮೂಡಿಸಿದೆ.

ಸಿಎಂ ಸಿದ್ದರಾಮಯ್ಯ ಅವರು ಸಚಿವ ಜಮೀರ್ ಅಹಮದ್ ಖಾನ್ ಜತೆಗೂಡಿ ಗುರುವಾರ ಬೆಳಗ್ಗೆ ಸದಾಶಿವನಗರದಲ್ಲಿನ ಬಿ.ಕೆ. ಹರಿಪ್ರಸಾದ್ ನಿವಾಸಕ್ಕೆ ಭೇಟಿ ನೀಡಿದರು. ಬುಧವಾರ ಕಾಂಗ್ರೆಸ್‌ನ ದೆಹಲಿ ನಾಯಕರಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸುರ್ಜೇವಾಲ ಆಗಮಿಸಿ ಸಿಎಂ ಹಾಗೂ ಡಿಸಿಎಂ ಜತೆ ಸಮಾಲೋಚನೆ ನಡೆಸಿದ್ದರು. ಅದರ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ಬಿ.ಕೆ. ಹರಿಪ್ರಸಾದ್ ಭೇಟಿ ಮಹತ್ವ ಪಡೆದುಕೊಂಡಿದೆ.

ರಾಜ್ಯದ ಹಿರಿಯ ನಾಯಕರ ವಿಶ್ವಾಸ ಗಳಿಸಲು ಸಿಎಂ ಸಿದ್ದರಾಮಯ್ಯ ಮುಂದಾಗಿದ್ದಾರೆ ಎನ್ನಲಾಗಿದೆ. ಹೀಗಾಗಿ ತಿಂಡಿ ಮಾಡುವ ನೆಪದಲ್ಲಿ ಹರಿಪ್ರಸಾದ್ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಯತ್ನಿಸಿದ್ದಾರೆ ಎನ್ನಲಾಗುತ್ತಿದೆ. ಇಬ್ಬರು ನಾಯಕರು ಸುಮಾರು ಒಂದು ಗಂಟೆ ಕಾಲ ಚರ್ಚೆ ನಡೆಸಿದ್ದಾರೆ. ಹರಿಪ್ರಸಾದ್ ಅವರನ್ನ ಸಭಾಪತಿ ಸ್ಥಾನದಲ್ಲಿ ಕೂರಿಸಲು ಮನವೊಲಿಕೆ ನಡೆಯುತ್ತಿದೆ. ಸಭಾಪತಿ ಸ್ಥಾನಕ್ಕೆ ಒಪ್ಪದಿದ್ದಲ್ಲಿ ಅಂತಿಮವಾಗಿ ಸಚಿವ ಸ್ಥಾನ ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ. ಸಾಮಾನ್ಯವಾಗಿ ಮುಖ್ಯಮಂತ್ರಿಯಾದವರು ಶಾಸಕರ, ಸಚಿವರ ಮನೆಗೆ ಹೋಗುವುದು ವಿರಳ. ಅವರೆಲ್ಲ ಸಿಎಂ ರನ್ನು ಕಾಣಲು ಸಮಯಾವಕಾಶ (ಅಪಾಯಿಂಟ್ಮೆಂಟ್) ತೆಗೆದುಕೊಂಡು ಬರುತ್ತಾರೆ. ಹಾಗಾಗಿ, ಸಿಎಂ ಸಿದ್ದರಾಮಯ್ಯ ಅವರ ಹರಿಪ್ರಸಾದ್ ಮನೆಗೆ ಭೇಟಿ ನೀಡಿದ ಹಿಂದೆ ಗಹನವಾದ ಕಾರಣವಿದೆ ಎನ್ನಲಾಗಿದೆ. ಭೇಟಿ ಬಳಿಕ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಹರಿಪ್ರಸಾದ್ ಬ್ರೇಕ್ ಫಾಸ್ಟ್‌ಗೆ ಕರೆದಿದ್ದರು. ಬರುತ್ತೇನೆ ಎಂದಿದ್ದೆ, ಅದಕ್ಕೆ ಬಂದಿದ್ದೇನೆ. ಮಂಗಳೂರಿನ ಘಟನೆಯ ಬಗ್ಗೆ ಚರ್ಚೆ ಮಾಡಿದ್ದೇವೆ. ರಾಜಕೀಯ ಚರ್ಚೆ ಅಂತಲ್ಲ, ಜನರಲ್ ಆಗಿ ಚರ್ಚೆ ಮಾಡಿದ್ದೇವೆ. ಮಂಗಳೂರು ವಿಚಾರ ಚರ್ಚೆಯಾಗಿದೆ. ಅಲ್ಲಿಗೆ ಸೌಹಾರ್ದತೆ ಬರಬೇಕು. ಹಿಂದೂ, ಮುಸ್ಲಿಂ ನಡುವೆ ಯಾವುದೇ ದ್ವೇಷ ಇರಬಾರದು. ಸೌಹಾರ್ದತೆ ಬರಬೇಕು ಅಂತ ಚರ್ಚಿಸಿದ್ದೇವೆ. ಹರಿಪ್ರಸಾದ್ ಗೆ ಮಂಗಳೂರಿಗೆ ಹೋಗಿ ಬನ್ನಿ ಎಂದಿದ್ದೇನೆ. ಅಲ್ಲಿನ ಪರಿಸ್ಥಿತಿ ಬಗ್ಗೆ ಅವಲೋಕಿಸಿ ಬನ್ನಿ ಎಂದಿದ್ದೇನೆ ಎಂದು ಉತ್ತರಿಸಿದರು. ಇದೇ ವೇಳೆ ಬಿ.ಕೆ.ಹರಿಪ್ರಸಾದ್ ಮಾತನಾಡಿ, ರಾಜಕೀಯದ ಬಗ್ಗೆ ಯಾವುದೂ ಚರ್ಚೆಯಿಲ್ಲ. ಮಂಗಳೂರು ಘಟನೆ ಬಗ್ಗೆ ಮಾತ್ರ ಚರ್ಚೆಯಾಗಿದೆ ಎಂದರು.

> ಕೋಮು ಗಲಭೆಗಳನ್ನು ಉಂಟುಮಾಡುವವರು ಎಷ್ಟೇ ಪ್ರಭಾವಿಗಳಾಗಿದ್ದರೂ ಕೂಡ ಕಾನೂನಿನ ರೀತಿ ಕಠಿಣ ಕ್ರಮ ಕೈಗೊಳ್ಳಲಾಗು ವುದು. ಯಾರೂ ಕಾನೂನಿಗಿಂತ ದೊಡ್ಡವರಲ್ಲ.
> -ಸಿದ್ದರಾಮಯ್ಯ, ಸಿಎಂ

> ರಾಜ್ಯ ರಾಜಕಾರಣವು ಮುಂದಿನ ದಿನಗಳಲ್ಲಿ ಮಹತ್ತರ ತಿರುವು ಪಡೆದುಕೊಳ್ಳಲಿದೆ. ಇದರೊಂದಿಗೆ ಹಲವು ಬೆಳವಣಿಗೆಗಳು ನಡೆಯುತ್ತಿವೆ. ಸ್ವತಃ ಸಿದ್ದರಾಮಯ್ಯನವರು ಬಿ.ಕೆ.ಹರಿಪ್ರಸಾದ್ ಅವರ ಮನೆಗೆ ಹೋಗಿದ್ದಾರೆ. ಮುಂದಿನ ದಿನಗಳ ಘಟನೆಗಳನ್ನು ಕಾದು ನೋಡಿ.
> -ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಸಿಎಂ ಸಿದ್ದರಾಮಯ್ಯ ಅವರು ಸಚಿವ ಜಮೀರ್ ಅಹಮದ್ ಖಾನ್ ಜತೆಗೂಡಿ ಗುರುವಾರ ಬೆಳಗ್ಗೆ ಸದಾಶಿವನಗರದಲ್ಲಿನ ಬಿ.ಕೆ. ಹರಿಪ್ರಸಾದ್ ನಿವಾಸಕ್ಕೆ ಭೇಟಿ ಮಾತುಕತೆ ನಡೆಸಿದರು.

ದಿಢೀರ್ ಭೇಟಿ ಸುತ್ತ ಕುತೂಹಲ

ಸಿಎಂ ಅವರ ಏಕಾಏಕಿ ಭೇಟಿಯ ಹಿಂದಿರುವ ಉದ್ದೇಶದ ಬಗ್ಗೆ ಸ್ಪಷ್ಟತೆ ಇಲ್ಲ. ಹೈಕಮಾಂಡ್ ಮಟ್ಟದಲ್ಲಿ ಪ್ರಭಾವಿಯಾಗಿರುವ ಹರಿಪ್ರಸಾದ್, ಪದೇ ಪದೆ ಸಿದ್ದರಾಮಯ್ಯ ವಿರುದ್ಧ ಅಸಮಾಧಾನ ಹೊರ ಹಾಕುತ್ತಿದ್ದರು. ಅಲ್ಲದೆ, ನನಗೆ ಸಿಎಂ ಮಾಡುವುದು ನನಗೆ ಗೊತ್ತಿದೆ. ಅವರನ್ನು ಕೆಳಕ್ಕೆ ಇಳಿಸುವುದು ಗೊತ್ತಿದೆ ಎಂದಿದ್ದರಲ್ಲದೆ, ಇದೀಗ ತಮ್ಮನ್ನು ವಿರೋಧಿಸಿದ್ದಾರೆ ಎಂದರೆ ಶತ್ರುಗಳಂತೆ ನೋಡಲಾಗುತ್ತಿದೆ ಎಂದು ಬಿ.ಕೆ.ಹರಿಪ್ರಸಾದ್ ಪರೋಕ್ಷವಾಗಿ ಸಿಎಂ ವಿರುದ್ಧ ಈ ಹಿಂದೆ ಅಸಮಾಧಾನ ವ್ಯಕ್ತಪಡಿಸಿದ್ದರು. ಒಂದು ಕಾಲಕ್ಕೆ ಕಾಂಗ್ರೆಸ್ ಹಾಗೂ ಹೈಕಮಾಂಡ್ ಮಟ್ಟದಲ್ಲಿ ಪ್ರಭಾವಿಯಾಗಿದ್ದ ಬಿ.ಕೆ.ಹರಿಪ್ರಸಾದ್ ರಾಜ್ಯ ರಾಜಕಾರಣದಲ್ಲಿ ಸಕ್ರಿಯರಾಗಿದ್ದರೂ, ಸಚಿವ ಸ್ಥಾನದ ಆಕಾಂಕ್ಷಿಯಂತೂ ಹೌದು.

ಕ್ರಿಮಿನಲ್ ಕೇಸ್ ವಾಪಸ್ ಆದೇಶ ರದ್ದು: ಹೈಕೋರ್ಟ್

← ಮೊದಲಪುಟದಿಂದ

ಈ ಸಂಬಂಧ 11 ಎಫ್‌ಐಆರ್ ದಾಖಲಾಗಿ 155 ಮಂದಿ ಮೇಲೆ ಪ್ರಕರಣ ದಾಖಲಾಗಿತ್ತು. ಈ ಘಟನೆಯಲ್ಲಿ 10ಕ್ಕೂ ಹೆಚ್ಚು ಪೊಲೀಸ್ ವಾಹನಗಳಿಗೆ ಹಾನಿಯಾಗಿದ್ದರೆ ಇಬ್ಬರು ಪೊಲೀಸ್ ಸಿಬ್ಬಂದಿ ಗಂಭೀರ ಗಾಯಗೊಂಡಿದ್ದರು. ಸೆಪ್ಟೆಂಬರ್ 2024 ಎಲ್ಲಾ ಜಿಲ್ಲೆಗಳ ಎಸ್‌ಪಿ, ಕಮೀಷನರ್‌ಗಳಿಗೆ ಪತ್ರ ಬರೆದಿದ್ದ ಡಿಜಿ-ಐಜಿ ನಿಮ್ಮ ಜಿಲ್ಲೆಗಳಲ್ಲಿ ಪ್ರಕರಣ ವಾಪಸ್ ಪಡೆಯುವ ಬಗ್ಗೆ ಮಾಹಿತಿ ನೀಡುವಂತೆ ಕೋರಿದ್ದರು. ಇದರ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಕ್ಯಾಬಿನೆಟ್ ಸಭೆಯಲ್ಲಿ ಹುಬ್ಬಳ್ಳಿ ಗಲಭೆ ಯಲ್ಲಿ ದಾಖಲಾಗಿದ್ದವರ ಮೇಲಿನ ಪ್ರಕರಣ ವಾಪಸ್ ಪಡೆಯುವ ನಿರ್ಧಾರ ಕೈಗೊಳ್ಳಲಾಗಿತ್ತು. ಇದರಿಂದ ವಿಪಕ್ಷ ಬಿಜೆಪಿ ಭಾರೀ ವಿರೋಧ ವ್ಯಕ್ತಪಡಿಸಿತ್ತು. ಆದರೂ ಸರಕಾರ ಪ್ರಕರಣ ವಾಪಸ್ ಪಡೆದುಕೊಂಡು ಆದೇಶ ಹೊರಡಿಸಿತ್ತು.

ಮಗು ಮಾರಾಟ ಮಾಡಿ ಸಿಕ್ಕಿಬಿದ್ದ ದಂಪತಿ

ಚಿಕ್ಕಮಗಳೂರು: ಎರಡು ದಿನದ ಮಗುವನ್ನು ಮಾರಾಟ ಮಾಡಿದ ದಂಪತಿ ಪೊಲೀಸರ ಅತಿಥಿಯಾದ ಘಟನೆ ಚಿಕ್ಕಮಗಳೂರು ಜಿಲ್ಲೆ ಎನ್.ಆರ್.ಪುರ ತಾಲೂಕಿನ ಹರಾವರಿ ಗ್ರಾಮದಲ್ಲಿ ನಡೆದಿದೆ. ಬುಧವಾರ ಪೊಲೀಸರು ಬಂಧಿಸಿದ್ದಾರೆ. ರತ್ನ-ಸದಾನಂದ ದಂಪತಿ ಮಗು ಮಾರಿ ಪೊಲೀಸರಿಂದ ಬಂಧನಕ್ಕೆ ಒಳಗಾಗಿದ್ದಾರೆ. ಇವರಿಗೆ ಸಹಕಾರ ನೀಡಿದ್ದ ನಿವೃತ್ತ ನರ್ಸ್ ಕುಸುಮ ಕೂಡಾ ಬಂಧನಕ್ಕೆ ಒಳಗಾಗಿದ್ದಾರೆ. ರತ್ನ-ಸದಾನಂದ ದಂಪತಿ ಎರಡು ದಿನದ ಹೆಣ್ಣು ಮಗುವನ್ನು ಮಾರಾಟ ಮಾಡಿದ್ದರು. ಕೊಪ್ಪ ತಾಲೂಕು ಆಸ್ಪತ್ರೆಯಲ್ಲಿ ನರ್ಸ್ ಆಗಿದ್ದ ಕುಸುಮ ಸಹೋದರ ಕಾರ್ಕಳದ ರಾಘವೇಂದ್ರ ಎಂಬುವರಿಗೆ ಮಾರಾಟ ಮಾಡಲಾಗಿತ್ತು.

ದಕ್ಷಿಣ ಕನ್ನಡ ಹಾಲು ಒಕ್ಕೂಟದ ನಿರ್ದೇಶಕ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು ಅಭಿಮತ

ಚಂದ್ರಶೇಖರ ಸ್ವಾಮೀಜಿಯವರ ಶ್ರೀರಕ್ಷೆಯೇ, ಸಾಧನೆಗೆ ಪ್ರೇರಣೆ

ಮಂಗಳೂರು: ಬೆಳಪು ಎಂಬ ಗ್ರಾಮೀಣ ಭಾಗದಿಂದ ಬೆಳೆದ ತನಗೆ ವಿಶ್ವಮಟ್ಟದಲ್ಲಿ ವಾಸ್ತು ತಜ್ಞರಾಗಿ ಮನ್ನಣೆ ಪಡೆದಿರುವ ಪರಮಪೂಜ್ಯ ಶ್ರೀ ಚಂದ್ರಶೇಖರ ಸ್ವಾಮೀಜಿಯವರ ಶ್ರೀರಕ್ಷೆಯೇ ನನ್ನ ಬದುಕಿನ ಸಾಧನೆಗೆ ಮೂಲ ಪ್ರೇರಣೆಯಾಗಿದೆ ಎಂದು ಕರ್ನಾಟಕ ರಾಜ್ಯ ಹಾಲು ಮಹಾಮಂಡಲ ನಿಯಮಿತ ಬೆಂಗಳೂರು (ಕೆಎಂಎಫ್) ಹಾಗೂ ದಕ್ಷಿಣ ಕನ್ನಡ ಹಾಲು ಒಕ್ಕೂಟದ ನಿರ್ದೇಶಕ ಐಕಳಬಾವ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು ಹೇಳಿದರು.

ಅವರು ಮೂಲ್ಕಿಯ ಶ್ರೀ ಚಂದ್ರಶೇಖರ ಸ್ವಾಮೀಜಿ ಸೇವಾಶ್ರಮದಲ್ಲಿ ಕೆಎಂಎಫ್ ಹಾಗೂ ದಕ್ಷಿಣ ಕನ್ನಡ ಹಾಲು ಒಕ್ಕೂಟದ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಹಿನ್ನೆಲೆ ಯಲ್ಲಿ ಶ್ರೀ ಚಂದ್ರಶೇಖರ ಸ್ವಾಮೀಜಿಯವ ರಿಂದ ವಿಶೇಷವಾಗಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಪ್ರತಿಯೊಂದು ಹಂತದಲ್ಲಿಯೂ ಮಾರ್ಗದರ್ಶನ ನೀಡಿದವರು. ಅಚಲ ನಂಬಿಕೆಯೊಂದಿಗೆ ಸಮಾಜದ ಸ್ಪಂದನೆಯ ಜತೆಗೆ ನಾಯಕತ್ವದ ಔದಾರ್ಯತೆಯ ಹಿನ್ನೆಲೆಯನ್ನು ತಿಳಿಹೇಳಿರು ವುದರಿಂದ ಇಷ್ಟು ಎತ್ತರಕ್ಕೆ ಬೆಳೆದಿದ್ದೇನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಐಕಳಬಾವ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು ಅವರನ್ನು ಆಶ್ರಮದ ವತಿಯಿಂದ ತಿರುಪತಿಯ ವಿಶೇಷ ಶೇಷವಸ್ತ್ರ, ಸನ್ಮಾನ ಫಲಕ ಹಾಗೂ ಸ್ಮರಣಿಕೆ ಯೊಂದಿಗೆ ಗಣ್ಯರ ಸಮ್ಮುಖದಲ್ಲಿ ಶ್ರೀ ಚಂದ್ರ ಶೇಖರ ಸ್ವಾಮೀಜಿಯವರು ಸನ್ಮಾನಿಸಿದರು. ಆಶ್ರಮದ ನಿರ್ದೇಶಕರಾದ ರಜನಿ ಸಿ. ಭಟ್, ರಾಹುಲ್ ಸಿ. ಭಟ್,ಪೊಲೀಸ್ ಅಧಿಕಾರಿಗಳಾದ ಪ್ರೇಮ್ ಕುಮಾರ್, ಶಿವರಾಜ್ ಕೆ, ಮೋಹನ್ ಕುಮಾರ್ ಉಪಸ್ಥಿತರಿದ್ದರು.


ಐಕಳಬಾವ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು ಅವರನ್ನು ಆಶ್ರಮದ ವತಿಯಿಂದ ತಿರುಪತಿಯ ವಿಶೇಷ ಶೇಷವಸ್ತ್ರ, ಸನ್ಮಾನ ಫಲಕ ಹಾಗೂ ಸ್ಮರಣಿಕೆಯೊಂದಿಗೆ ಗಣ್ಯರ ಸಮ್ಮುಖದಲ್ಲಿ ಶ್ರೀ ಚಂದ್ರಶೇಖರ ಸ್ವಾಮೀಜಿಯವರು ಸನ್ಮಾನಿಸಿದರು.

ಸಮಯ, ಸಹನೆಯ ಪಾಠ

ಪ್ರತಿಯೊಂದು ಸಾಧಕನ ಪರಿಶ್ರಮದ ಸಾಧನೆಯ ಹಿಂದೆ ಸಮಯ ಮತ್ತು ಸಹನೆಯ ಪಾಠ ಇರುತ್ತದೆ. ಬೆಳಪುವಿನ ಗ್ರಾಮೀಣ ಭಾಗದ ಪ್ರತಿಭೆಯಾಗಿ ಶಿಕ್ಷಣ ಜೀವನದಲ್ಲಿಯೇ ಉತ್ತಮ ನಾಯಕತ್ವಗುಣ ವಿಶೇಷತೆಯನ್ನು ಮೈಗೂಡಿಸಿಕೊಂಡಿರುವ ಐಕಳಬಾವ ಡಾ. ದೇವಿಪ್ರಸಾದ್ ಶೆಟ್ಟಿ ಅವರು ಸಹಕಾರ ಮತ್ತು ತುಳುನಾಡ ಜನಪದ ಕ್ಷೇತ್ರದಲ್ಲಿ ಉತ್ತಮ ಸಂಘಟನಾತ್ಮಕ ರೀತಿಯಲ್ಲಿ ಬೆಳೆಯುತ್ತಿದ್ದಾರೆ. ಪ್ರಯತ್ನಿಸುವಾಗ ಮತ್ತು ಅದಕ್ಕೆ ಅವಕಾಶ ನೀಡಿದಾಗ ನಾವು ಏನನ್ನೂ ಕಳೆದುಕೊಳ್ಳುವುದಿಲ್ಲ ಅದು ನಮಗೆ ಒಳಿತನ್ನೇ ಮಾಡುತ್ತದೆ. ಇದು ಜೀವನದ ಯಶಸ್ಸಿನ ಸೂತ್ರ ಎಂದು ಶ್ರೀ ಚಂದ್ರಶೇಖರ ಸ್ವಾಮೀಜಿ ಹೇಳಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆರೋಗ್ಯಾಧಿಕಾರಿಗಳು (ಸಾರ್ವಜನಿಕ ಆರೋಗ್ಯ), ಅನೆಕ್ಸ್-3,
ನೆಲಮಹಡಿ, ಬೃಬೆಂಮಪಾ ಕೇಂದ್ರ ಕಚೇರಿ, ಬೆಂಗಳೂರು-560 002.
ಸಂ: BBMP/2025-26/PREQUAL_TENDER_NUMBER-19 ದಿನಾಂಕ: 29.05.2025

ಟೆಂಡರ್ ಪ್ರಕಟಣೆ

ಬೃಬೆಂಮ ಪಾಲಿಕೆಯ ನಮ್ಮ ಕ್ಲಿನಿಕ್‌ಗಳು, ಯುಪಿಹೆಚ್‌ಸಿಗಳು, ಮೆಟರ್‌ನಿಟಿ ಹೋಂಗಳು, ರೆಫರಲ್ ಆಸ್ಪತ್ರೆಗಳಿಗೆ ಔಷಧಗಳು, ರೀಏಜೆಂಟ್ಸ್‌ಗಳು ಹಾಗೂ ಕನ್ಸ್ಯೂಮಬಲ್ಸ್ ಗಳನ್ನು ಪೂರೈಸಲು ಪೂರ್ವಅರ್ಹತೆ ಟೆಂಡರ್.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಮತ್ತು ನಿಯಮಗಳು 2000 ರ ನಿಬಂಧನೆಗಳ ಪ್ರಕಾರ, ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (https://kppp.karnataka.gov.in) ಮೂಲಕ ಬೃಬೆಂಮ ಪಾಲಿಕೆಯ ನಮ್ಮ ಕ್ಲಿನಿಕ್‌ಗಳು, ಯುಪಿಹೆಚ್‌ಸಿಗಳು, ಮೆಟರ್‌ನಿಟಿ ಹೋಂಗಳು, ರೆಫರಲ್ ಆಸ್ಪತ್ರೆಗಳಿಗೆ ಔಷಧಗಳು, ರೀಏಜೆಂಟ್ಸ್‌ಗಳು ಹಾಗೂ ಕನ್ಸ್ಯೂಮಬಲ್ಸ್ ಗಳನ್ನು ಪೂರೈಸಲು ಮುಖ್ಯ ಆರೋಗ್ಯಾಧಿಕಾರಿಗಳು (ಸಾರ್ವಜನಿಕ ಆರೋಗ್ಯ), ಬೃಬೆಂಮಪಾ, ಇವರು ಪೂರ್ವ ಅರ್ಹತಾ ಟೆಂಡರ್ ಅನ್ನು ಆಹ್ವಾನಿಸಿದ್ದಾರೆ. ಈ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ನಿರೀಕ್ಷಿತ ಪೂರೈಕೆದಾರರು ಮೇಲೆ ತಿಳಿಸಿದ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು.

ಬಿಡ್ ಪ್ರಕ್ರಿಯೆಯು ಈ ಕೆಳಕಂಡಂತಿರುತ್ತದೆ: (1) ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ: **09.06.2025, 12.30 ಗಂಟೆಗೆ** ವಿಶೇಷ ಆಯುಕ್ತರು (ಆರೋಗ್ಯ), 3ನೇ ಮಹಡಿ, ಅನೆಕ್ಸ್-3 ಕಟ್ಟಡ, ಬೃಬೆಂಮಪಾ, ಬೆಂಗಳೂರು ಇಲ್ಲಿ ನಡೆಸಲಾಗುವುದು. (2) ಕೆಪಿಪಿ ಪೋರ್ಟಲ್‌ನಲ್ಲಿ ಪ್ರಶ್ನಾವಳಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **07.06.2025ರ ಸಂಜೆ 5.00 ಗಂಟೆಯವರೆಗೆ.** (3) ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಸಮಯ: **30.06.2025ರ ಸಂಜೆ 5:00 ಗಂಟೆಯವರೆಗೆ.** (4) ಸ್ಯಾಂಪಲ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **30.06.2025 ಸಂಜೆ 5:00 ಗಂಟೆಯವರೆಗೆ.** (5) ಕೆಪಿಪಿ ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **01.07.2025 ಸಂಜೆ 5:10 ಗಂಟೆಗೆ.** (6) ಸಂಪರ್ಕಿಸಬೇಕಾದ ವಿಳಾಸ: ಮುಖ್ಯ ಆರೋಗ್ಯಾಧಿಕಾರಿಯವರ (ಸಾರ್ವಜನಿಕ ಆರೋಗ್ಯ) ಕಚೇರಿ, ನೆಲಮಹಡಿ, ಅನೆಕ್ಸ್-3 ಕಟ್ಟಡ, ಬೃಬೆಂಮಪಾ, ಬೆಂಗಳೂರು-560 002. ದೂರವಾಣಿ: 9845208571. ಇ-ಮೇಲ್: choph515@gmail.com

ಈ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ನಿರೀಕ್ಷಿತ ಬಿಡ್ಡುದಾರರು ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ (https://kppp.karnataka.gov.in) ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ), ಬೃಬೆಂಮಪಾ

ಹೃದಯಾಘಾತ: ಇಬ್ಬರು ಸಾವು

ಬಾಗಲಕೋಟೆ/ಹಾಸನ: ಇತ್ತೀಚೆಗೆ ಸೈನಿಕನಾಗಿ ಕರ್ತವ್ಯಕ್ಕೆ ಹಾಜರಾಗಿ ತರಬೇತಿ ಪಡೆಯುತ್ತಿದ್ದ ಜಿಲ್ಲೆಯ ಯೋಧರೊಬ್ಬರು ಛತ್ತೀಸ್‌ಗಢದಲ್ಲಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಚಿಂಚಲಕಟ್ಟಿ ತಾಂಡಾ ಗ್ರಾಮದ ಉಪೇಂದ್ರ ಸೋಮನಾಥ ರಾಥೋಡ್ (24) ಮೂರು ತಿಂಗಳ ಹಿಂದೆ ಅಸ್ಸಾಂ ರೈಫಲ್ಸ್ ಸೇರಿದ್ದರು. ಛತ್ತೀಸ್‌ಗಢದಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದಾಗ ತರಬೇತಿಯಲ್ಲಿದ್ದಾಗ ಸೋಮನಾಥ ರಾಥೋಡ್ ಅವರಿಗೆ ಹೃದಯಾಘಾತವಾಗಿದೆ. ಮೃತ ಯೋಧನ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿದೆ. ಪಾರ್ಥಿವ ಶರೀರ ಶುಕ್ರವಾರ ಮಧ್ಯಾಹ್ನ ತಾಲೂಕಿಗೆ ಬರಲಿದ್ದು, ಸಕಲ ಸರಕಾರಿ ಗೌರವಗಳೊಂದಿಗೆ ಅಂತ್ಯ ಸಂಸ್ಕಾರ ನಡೆಯಲಿದೆ.

ಅದೇ ರೀತಿ ಹೃದಯಾಘಾತದಿಂದ ಅಂತಿಮ ವರ್ಷದ ಪದವಿ ವಿದ್ಯಾರ್ಥಿನಿ ಕೊನೆಯುಸಿರೆಳೆದಿರುವ ಘಟನೆ ಹಾಸನ ಜಿಲ್ಲೆಯಲ್ಲಿ ನಡೆದಿದೆ. ಹಾಸನ ತಾಲೂಕಿನ ಕೆಲವತ್ತಿ ಗ್ರಾಮದ ಕವನ ಕೆ.ವಿ. (21) ಹೃದಯಾಘಾತಕ್ಕೊಳಗಾದ ಯುವತಿ. ಕೆಲವತ್ತಿ ಗ್ರಾಮದ ಪಾಪಣ್ಣ ಹಾಗೂ ಗಾಯತ್ರಿ ದಂಪತಿ ಪುತ್ರಿ ಕವನಾ ಹಾಸನ ನಗರದ ಎಂ.ಜಿ ರಸ್ತೆಯಲ್ಲಿರುವ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಿಮ ವರ್ಷದ ಬಿ.ಕಾಂ ವ್ಯಾಸಂಗ ಮಾಡುತ್ತಿದ್ದಳು.

ಬೆಳಗಾವಿ: ಕರೋನಾಗೆ ವೃದ್ಧ ಬಲಿ

ಬೆಳಗಾವಿ: ಕೊರೊನಾ ಮಹಾಮಾರಿಗೆ ಬೆಳಗಾವಿಯಲ್ಲಿ ಮೊದಲ ಬಲಿಯಾಗಿದ್ದು, ಬೆಳಗಾವಿ ಬಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ 70 ವರ್ಷದ ವೃದ್ಧ ಬಲಿಯಾಗಿದ್ದಾರೆ. ಬುಧವಾರದಂದು ಕೋವಿಡ್ ಪಾಸಿಟಿವ್ ಎಂದು ತಪಾಸಣೆಯಲ್ಲಿ ಕಂಡು ಬಂದಿತ್ತು. ತಡರಾತ್ರಿ ಚಿಕಿತ್ಸೆ ಫಲಿಸದೆ ವೃದ್ಧ ಮೃತಪಟ್ಟಿದ್ದಾನೆ.

ಬೆಳಗಾವಿ ತಾಲೂಕಿನ ಬೆನಕನಹಳ್ಳಿ ಗ್ರಾಮದ ನಿವಾಸಿ ಎಂದು ಗುರುತಿಸಲಾಗಿತ್ತು. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ವೃದ್ಧನಿಗೆ ಚಿಕಿತ್ಸೆಗೆ ಅಂತಾ ಬಿಮ್ಸ್ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದಾರೆ. ಕೊವಿಡ್ ತಪಾಸಣೆ ಮಾಡಿದಾಗ ಪಾಸಿಟಿವ್ ಎಂದು ಗೊತ್ತಾದ ತಕ್ಷಣವೇ ಕೋವಿಡ್ ವಾರ್ಡ್‌ಗೆ ಶಿಫ್ಟ್ ಮಾಡಲಾಗಿತ್ತು. ಚಿಕಿತ್ಸೆ ಫಲಿಸದ ಕಾರಣ 70 ವರ್ಷದ ವೃದ್ಧ ಮೃತಪಟ್ಟಿದ್ದಾನೆ. ಕೋವಿಡ್ ನಿಯಮಾವಳಿ ಪ್ರಕಾರವೇ ರಾತ್ರಿಯೇ ಕುಟುಂಬಸ್ಥರು ಅಂತ್ಯಕ್ರಿಯೆ ನೆರವೇರಿಸಿದ್ದಾರೆ.

ಕಮಲ್ ಹಾಸನ್ ಕ್ಷಮೆ ಕೇಳಿದರೆ ಒಳ್ಳೆಯದು

ಮದ್ದೂರು: ನಟ ಕಮಲ್ ಹಾಸನ್ ಹೇಳಿಕೆಯಿಂದ ನಮ್ಮ ಭಾಷೆಗೆ ಯಾವುದೇ ಧಕ್ಕೆ ಆಗುವುದಿಲ್ಲ ಎಂದು ಮಾಜಿ ಸಂಸದೆ ಸುಮಲತಾ ಅಂಬರೀಷ್ ತಿಳಿಸಿದರು.

ಮಂಡ್ಯದಲ್ಲಿ ಈಚೆಗೆ ಮೃತಪಟ್ಟ ತಾಲೂಕಿನ ಗೊರವನಹಳ್ಳಿಯ ಮೃತ ಬಾಲಕಿಯ ಮನೆಗೆ ಗುರುವಾರ ಭೇಟಿ ಬಾಲಕಿಯ ಪೋಷಕರಿಗೆ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಕನ್ನಡಕ್ಕೆ ತನ್ನದೆಯಾದ ಪ್ರಾಚೀನ ಇತಿಹಾಸವಿದ್ದು, ಹಿರಿಮೆ, ಶ್ರೀಮಂತಿಕೆಯನ್ನು ಹೊಂದಿದೆ. ಅವರು ಈ ರೀತಿ ಹೇಳಿಕೆ ಕೊಡುವ ಮುಂಚೆ ಯೋಚನೆ ಮಾಡಬೇಕಿತ್ತು.

ಅವರು ಈ ರೀತಿ ಹೇಳಿರುವುದು ತಪ್ಪು, ಇಷ್ಟಕ್ಕೂ ನಾನು ಭಾಷಾ ತಜ್ಞಳಲ್ಲ. ಆದ್ದರಿಂದ ಹೆಚ್ಚಿಗೆ ಈ ಬಗ್ಗೆ ಮಾತನಾಡಲಾರೆ' ಎಂದರು. ಕಮಲ್ ಹಾಸನ್ ಅವರ ಚಿತ್ರಗಳನ್ನು ಕರ್ನಾಟಕದಲ್ಲಿ ನಿಷೇಧ ಮಾಡುವಂತೆ ಕನ್ನಡಪರ ಸಂಘಟನೆಗಳಿಂದ ಒತ್ತಾಯ ಕೇಳಿ ಬರುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಯಾವುದೇ ಒಂದು ಸಿನಿಮಾ ಕೇವಲ ಒಬ್ಬರಿಂದಲ್ಲೇ ಆಗುವುದಿಲ್ಲ. ನೂರಾರು ಜನರ ಶ್ರಮ ಇರುತ್ತದೆ. ಈ ಬಗ್ಗೆ ಹೆಚ್ಚು ಮಾತನಾಡಿ ಗೊಂದಲ) ಮಾಡಲ್ಲ. ಕಮಲ್ ಹಾಸನ್ ಕನ್ನಡಿಗರಲ್ಲಿ ಕ್ಷಮೆ ಕೇಳಿದರೆ ಒಳ್ಳೆಯದು ಎಂದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಟೆಂಡರ್‌ಗಾಗಿ ಆಹ್ವಾನ – 2ನೇ ಕರೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗೆ ನೋಂದಾಯಿತ ಏಜೆನ್ಸಿಗಳಿಂದ ದ್ವಿ ಹಂತದ ಟೆಂಡರ್ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
ಮುಖ್ಯ ಅಭಿಯಂತರರವರ ಕಛೇರಿ (ತ್ಯಾಜ್ಯ ನೀರು ನಿರ್ವಹಣೆ-ಪೂರ್ವ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009

ಕ್ರಮ ಸಂ.	ಕೆಲಸದ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ (ರೂ.ಗಳಲ್ಲಿ)
	ಐಎಫ್‌ಟಿ ಸಂಖ್ಯೆ: ಬೆಜಮಂ/ಮುಅ(ತ್ಯಾನೀನಿ-ಪೂ)/ಉಮುಅ(ತ್ಯಾನೀನಿ-ಪೂ&ಪ)/ತಾಂಸ-1/303/2025-26	ದಿನಾಂಕ: 29.05.2025
1	ಕಾನಿಅ(ತ್ಯಾನೀನಿ-ಎಸ್‌ಟಿಪಿ-ಸಿವಿ) ವಿಭಾಗದ ಅಡಿಯಲ್ಲಿ ಬರುವ 15 ಎಂಎಲ್‌ಡಿ ಎಸ್‌ಟಿಪಿ, ಎಲ್ಲೆಮಲ್ಲಪ್ಪ ಚೆಟ್ಟಿಯಲ್ಲಿ 2.5 ಎಂಎಲ್‌ಡಿ ಅಲ್ಟ್ರಾ ಫಿಲ್ಟ್ರೇಷನ್ ನಂತರ ಕ್ಲೋರಿನೇಷನ್‌ಗಾಗಿ ಮರು ಉಪಯೋಗಿಸುವ ಸೌಕರ್ಯವನ್ನು ಒದಗಿಸುವುದು ಹಾಗೂ ಕಾರ್ಯಾರಂಭಗೊಳಿಸುವುದು ಮತ್ತು ತಡೆಗಟ್ಟುವ ನಿರ್ವಹಣೆಗಾಗಿ ಗಣಕೀಕೃತ ಪಾಲನೆ ನಿರ್ವಹಣಾ ವ್ಯವಸ್ಥೆ ಸಾಫ್ಟ್‌ವೇರ್ ಒದಗಿಸಿ ಕಾರ್ಯಾರಂಭಗೊಳಿಸುವ ಕಾಮಗಾರಿ.	ರೂ.406.28 ಲಕ್ಷಗಳು / ರೂ.6.09 ಲಕ್ಷಗಳು
	ಐಎಫ್‌ಟಿ ಸಂಖ್ಯೆ: ಬೆಜಮಂ/ಮುಅ(ತ್ಯಾನೀನಿ-ಪೂ)/ಉಮುಅ(ತ್ಯಾನೀನಿ-ಪೂ&ಪ)/ತಾಂಸ-1/305/2025-26	ದಿನಾಂಕ: 29.05.2025
2	ಕಾನಿಅ(ತ್ಯಾನೀನಿ-ಎಸ್‌ಟಿಪಿ) ಕೆ&ಟಿ ವಿಭಾಗದ ಅಡಿಯಲ್ಲಿ ಬರುವ 35 ಎಂಎಲ್‌ಡಿ ಅಗರ ಎಸ್‌ಟಿಪಿಯಲ್ಲಿ ಜಲ್ ಹೀ ಅಮೃತ್ ಯೋಜನೆ ಅಡಿಯಲ್ಲಿ ಕೈಗೊಳ್ಳಲು ಅಲ್ಟ್ರಾ ಫಿಲ್ಟ್ರೇಷನ್ ವ್ಯವಸ್ಥೆಯನ್ನು ಒದಗಿಸಿ ಕಾರ್ಯಾರಂಭಗೊಳಿಸುವ ಕಾಮಗಾರಿ.	ರೂ.406.28 ಲಕ್ಷಗಳು / ರೂ.6.09 ಲಕ್ಷಗಳು

ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 13.06.2025 ರ ಮಧ್ಯಾಹ್ನ 04.00 ಗಂಟೆಯವರೆಗೆ. ಬಿಡ್‌ಗಳನ್ನು 16.06.2025ರ ಸಂಜೆ 05.00 ಗಂಟೆಗೆ ತೆರೆಯಲಾಗುವುದು.

ಸಹಿ/- ಮುಖ್ಯ ಅಭಿಯಂತರರು (ತ್ಯಾನೀನಿ-ಪೂರ್ವ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ವಾ.ಸಾ.ಸಂ.ಇ/ವಾಪ್ರ/913/ಆಕಾರ್/2025-26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಮೈಸೂರು
ಅಲ್ಪಾವಧಿ ಐಟಂವಾರು ಟೆಂಡರು ಅಧಿಸೂಚನೆ ಸಂಖ್ಯೆ:03/2025-26 ದಿನಾಂಕ: 28.05.2025

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಮೈಸೂರು ಇವರಿಂದ ಒಟ್ಟು ಮೈಸೂರು ನಗರದ ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜಿನ ಮಧ್ಯಮಾಂಗಣ ಕಟ್ಟಡದ ದುರಸ್ಥಿ ಕಾಮಗಾರಿ. (ಇಂಡೆಂಟ್ ನಂ.21927) ಗೆ ಲೆಕ್ಕ ಶೀರ್ಷಿಕೆ 8443 ಠೇವಣಿವಂತಿಕೆ ಅಡಿಯಲ್ಲಿ KW-3ರ ನಿಬಂಧನೆ ಮತ್ತು ಷರತ್ತುಗಳನ್ವಯ ಕರ್ನಾಟಕ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಲ್ಪಾವಧಿ ಐಟಂವಾರು ಟೆಂಡರ್‌ನ್ನು (http://KPPP.karnataka.gov.in) ಆಹ್ವಾನಿಸಲಾಗಿದ್ದು, ಟೆಂಡರ್ ಕ್ವೋರಿಸ್ ಗೆ ದಿ: 02.06.2025 ಆಗಿರುತ್ತದೆ. ಟೆಂಡರ್‌ನ್ನು ದಿ: 05.06.2025 ರಂದು ಸಂಜೆ 4.00 ಘಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಯ ಟೆಂಡರ್‌ಗೆ ಇಟ್ಟ ಮೊತ್ತ ರೂ.52.30 ಲಕ್ಷಗಳು ಹಾಗೂ ಇ.ಎಂ.ಡಿ.ಯ ಮೊತ್ತ ರೂ.1.05 ಲಕ್ಷಗಳಾಗಿರುತ್ತದೆ. ಲೋಕೋಪಯೋಗಿ 3ನೇ ದರ್ಜೆ ಮತ್ತು ಮೇಲ್ಪಟ್ಟ ಲೋಕೋಪಯೋಗಿ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಸದರಿ ಕಾಮಗಾರಿಯು ಸಾಮಾನ್ಯ ವರ್ಗಕ್ಕೆ ಮೀಸಲಿರಿಸಲಾಗಿದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಇಂಜನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ನಜರ್‌ಬಾದ್, ಮೈಸೂರು.
DIPR/DDMYS/265/KSMCA/221/2025-26

ಕೋಮು ಹಿಂಸೆ ನಿಗ್ರಹ ಪಡೆ ಜಾರಿ

← ಮೊದಲಪುಟದಿಂದ

ಬಂಟ್ವಾಳದಲ್ಲಿ ನಡೆದ ಘಟನೆಯನ್ನು ಸರಕಾರ ಗಂಭೀರವಾಗಿ ಪರಿಗಣಿಸಿದೆ, ಯಾರೇ ಆಗಿರಲಿ ಯಾವುದೇ ಮುಲಾಜಿಲ್ಲದೇ ನಾವು ನಿರ್ದಯ ವಾಗಿ ಕ್ರಮ ಕೈಗೊಳ್ಳುತ್ತೇವೆ. ಇಂತಹ ಘಟನೆಗಳು ಪ್ರತಿ ಬಾರಿಯೂ ನಡೆಯುತ್ತಿದ್ದರೆ, ನಾವು ಕಣ್ಣು ಮುಚ್ಚಿ ಸುಮ್ಮನಿರಲು ಸಾಧ್ಯ ವಿಲ್ಲ. ಕೋಮು ಚಟುವಟಿಕೆಗಳು ಹಾಗೂ ಕೊಲೆಗಳನ್ನು ನಿಗ್ರಹಿಸುವವರೆಗೆ ತಾವು ವಿಶ್ರಾಂತಿ ಪಡೆಯುವುದಿಲ್ಲ ಎಂದು ಪರಮೇಶ್ವರ್ ತಿಳಿಸಿದರು. ಕರಾವಳಿಯಲ್ಲಿ ವಾತಾವರಣ ಹಾಳಾಗಿದೆ. ಒಂದು ಕಡೆ ಕೊಲೆ ಮಾಡಿದರೆ, ಇನ್ನೊಂದು ಕಡೆ ಪ್ರತೀಕಾರ ತೀರಿಸಿಕೊಳ್ಳುತ್ತಾರೆ. ಇವು ಪುನರಾವರ್ತನೆಯಾಗುತ್ತವೆ. ಅಂತಹ ದ್ವೇಷದ ಭಾವನೆ ಇದ್ದರೆ, ಸಮಾಜ ಹೇಗೆ ಉಳಿಯು ತ್ತದೆ. ಯಾರಾದರೂ ಜೀವನ ನಡೆಸಲು ಸಾಧ್ಯವೇ? ಸರಕಾರ ಮೂಕ ಪ್ರೇಕ್ಷಕನಾಗಿ ಮೌನವಾಗಿ ಕುಳಿತುಕೊಳ್ಳುವುದಿಲ್ಲ, ನಾವು ಅದನ್ನು ತಡೆಯುತ್ತೇವೆ ಎಂದು ಹೇಳಿದರು.

ಕೋಮುದ್ವೇಷ ತಡೆಗೆ ನಕ್ಸಲ್ ಕಾರ್ಯಪಡೆ ಸಿಬ್ಬಂದಿ

ನಕ್ಸಲ್ ನಿಗ್ರಹ ಪಡೆಯನ್ನು ವಿಸರ್ಜಿಸಲು ಸರಕಾರ ನಿರ್ಧರಿಸಿದೆ. ಈ ಪಡೆಯ ಅರ್ಧದಷ್ಟು ಭಾಗವನ್ನು ಕೋಮು ವಿರೋಧಿ ಪಡೆಯಾಗಿ ಪರಿವರ್ತಿಸಲಾಗಿದೆ. ಅಗತ್ಯವಿರುವ ಎಲ್ಲಾ ಅಧಿಕಾರ ಮತ್ತು ಸೌಲಭ್ಯಗಳನ್ನು ಅವರಿಗೆ ಒದಗಿಸಲಾಗುವುದು ಎಂದು ಗೃಹ ಸಚಿವರು ತಿಳಿಸಿದರು. ಶಿವಮೊಗ್ಗ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಿನ ಗಮನ ಹರಿಸಿ ಈ ಪಡೆ ಕಾರ್ಯಾರಂಭ ಮಾಡಲಿದೆ. ಈ ಪಡೆ ಹೇಗೆ ರಚಿಸುವುದು, ಯಾರು ನೇತೃತ್ವ ವಹಿಸುತ್ತಾರೆ. ಅವರಿಗೆ ಯಾವ ಅಧಿಕಾರ ನೀಡಬೇಕು ಇತ್ಯಾದಿ ವಿಷಯಗಳ ಮೇಲೆ ನಿರ್ಧಾರ ತೆಗೆದುಕೊಳ್ಳಲು ಸಮಯ ಹಿಡಿಯಿತು. ನಾವು ಅಂತಿಮವಾಗಿ ಆದೇಶ ಹೊರಡಿಸಿದ್ದೇವೆ ಎಂದು ಪರಮೇಶ್ವರ್ ತಿಳಿಸಿದರು.

ಸಮಾಚಾರ ಸಣ್ಣದಲ್ಲ

ಕಮಲ್ ಸಣ್ಣತನದ ಹೇಳಿಕೆ:ಚೇತನ್

ಹಾವೇರಿ: ತಮಿಳು ಕನ್ನಡದ ತಾಯಿ ಎಂದು ನಟ ಕಮಲ್ ಹಾಸನ್ ಸಣ್ಣತನದ ಹೇಳಿಕೆ ನೀಡಿದ್ದಾರೆ ಎಂದು ನಟ ಚೇತನ್ ಕುಮಾರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಮಲ್ ಹಾಸನ್ ಕ್ಷಮೆ ಕೇಳದೆ ಮೊಂಡು ತನ ಪ್ರದರ್ಶಿಸುತ್ತಾರೆ. ಇಷ್ಟಾದರೂ ಕ್ಷಮೆ ಕೇಳುವ ವಿನಯವೂ ಅವರಿಗಿಲ್ಲ ಎಂದರು. ತಮಿಳು-ಕನ್ನಡ ಎರಡೂ ಒಂದೇ ಮೂಲದ ಭಾಷೆಗಳು. ದ್ರಾವಿಡ ವರ್ಗದಿಂದ ಬಂದ ಭಾಷೆಗಳು. ಎರಡೂ ಸಹೋದರ ಭಾಷೆಗಳೇ. ಕಮಲ್ ಹಾಸನ್ ಸುಳ್ಳಲ್ಲೇ ಮೆರೆಯೋಕೆ ನೋಡುತ್ತಿದ್ದಾರೆ. ಅವರು ವೈಚಾರಿಕ ನೆಲೆಗಟ್ಟಿನಲ್ಲಿ ಮಾತನಾಡಬೇಕು. ಅವರ ಹೇಳಿಕೆ ದ್ರಾವಿಡ ಪರಿಕಲ್ಪನೆಯೂ ಅಲ್ಲ. ತಮಿಳಿನ ಇತಿಹಾಸ ಹಳೆಯದಿರಬಹುದು. ಆದರೆ ಕನ್ನಡ ತಮಿಳಿನಿಂದ ಬಂದಿದ್ದು ಅನ್ನೋದು ಸರಿಯಲ್ಲ. ಈ ವಿಚಾರದಿಂದ ಕನ್ನಡಿಗರಿಗೆ ಭಾವನಾತ್ಮಕವಾಗಿ ನೋವುಂಟಾಗಿದೆ ಎಂದು ತಿಳಿಸಿದರು.

ಲೋಕೇಶ್ವರಸ್ವಾಮಿ ಮಠ ನೆಲಸಮ

ಬೆಳಗಾವಿ: ಬಾಲಕಿ ಮೇಲೆ ಅತ್ಯಾಚಾರ ಎಸಗಿರುವ ಆರೋಪದ ಮೇಲೆ ಜೈಲು ಸೇರಿರುವ ಲೋಕೇಶ್ವರ ಸ್ವಾಮಿಯ ರಾಯಬಾಗ ತಾಲೂಕಿನ ಮೇಖಳಿ ಗ್ರಾಮದಲ್ಲಿರುವ ರಾಮ ಮಂದಿರ ಮಠವನ್ನು ನೆಲಸಮ ಮಾಡಲಾಗಿದೆ.

ಗುರುವಾರ ಬೆಳಗ್ಗೆ ಮೇಖಳಿ ಗ್ರಾಮದ ಸರ್ವೇ ನಂ. 225 ರಲ್ಲಿ ಸರಕಾರಿ ಗೈರಾಣ ಜಮೀನಿನಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡಲಾಗಿದ್ದ ರಾಮ ಮಂದಿರ ಮಠವನ್ನು ಮೂರು ಜೆಸಿಬಿ ಸಹಾಯದಿಂದ ರಾಯಬಾಗ ತಹಸೀಲ್ದಾರ್ ನೇತೃತ್ವದಲ್ಲಿ ನೆಲಸಮಗೊಳಿಸಲಾಗಿದೆ. ಕಳೆದ ಎಂಟು ವರ್ಷಗಳ ಹಿಂದೆ ಮೇಖಳಿ ಗ್ರಾಮದಲ್ಲಿ ಸುಮಾರು 8 ಎಕರೆ ಸರಕಾರಿ ಜಮೀನು ಅತಿಕ್ರಮಣ ಮಾಡಿಕೊಂಡು ಕಾಮುಖ ಲೋಕೇಶ್ವರ ಸ್ವಾಮಿ ರಾಮ ಮಂದಿರ ಹೆಸರಿನಲ್ಲಿ ಮಠ ನಿರ್ಮಿಸಿದ್ದ. ಸದ್ಯ ಅತ್ಯಾಚಾರ ಆರೋಪದ ಮೇಲೆ ಜೈಲು ಸೇರಿರುವ ಸ್ವಾಮಿಯ ಮಠವನ್ನು ತಾಲೂಕಾಡಳಿತ ನೆಲಸಮಗೊಳಿಸಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಆಪರೇಷನ್ ಸಿಂದೂರ ವಿಚಾರದಲ್ಲಿ ಅನೇಕ ಪ್ರಶ್ನೆಗೆ ನಮಗೆ ಉತ್ತರ ಸಿಕ್ಕಿಲ್ಲ – ಕೈ ಮುಖಂಡ

ಸುದ್ದಿ



ವಿಶ್ವವಾಣಿ ಕ್ಲಬ್ ಹೌಸ್

30.05.2025

ಸಂಜೆ: 06.55 ರಿಂದ 08.05 ರವರೆಗೆ

ಶುಕ್ರವಾರದ ಅತಿಥಿ

ಶ್ರೀ ಪಿ.ಕೆ.ನಂದೀಶ

ವಿಷಯ

ಕುವೆಂಪು ರಾಮಾಯಣ ದರ್ಶನಂ - 46

vishwavani.news

ಟ್ವೀಟೂ-ಖಾರಾ

ಆರ್.ಅಶೋಕ್, ಪ್ರತಿಪಕ್ಷ ನಾಯಕ

ಸಿಎಂ ಹಾಗು ಡಿಸಿಎಂ ಅವರ ನಡುವೆ ನಡೆಯುತ್ತಿರುವ ಮುಸುಕಿನ ಗುದ್ದಾಟ ಅಧಿಕಾರ ಹಸ್ತಾಂತರದ ಘಳಿಗೆ ಹತ್ತಿರ ಬರುತ್ತಿದ್ದಂತೆ ವಿಸ್ಫೋಟವಾಗುವ ಎಲ್ಲ ಲಕ್ಷಣಗಳೂ ಸ್ಪಷ್ಟವಾಗಿ ಕಾಣುತ್ತಿದ್ದು, ಜಲಸಂಪನ್ಮೂಲ ಇಲಾಖೆ ಅಧಿಕಾರಿಗಳ ವರ್ಗಾವಣೆ ವಿಚಾರದಲ್ಲಿ ಮುಖ್ಯಮಂತ್ರಿಗಳ ಆದೇಶದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಸರಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಬರೆದಿರುವ ಪತ್ರ INCKarnataka ಸರಕಾರದ ಆಂತರಿಕ ಸಂಘರ್ಷಕ್ಕೆ ಪುಷ್ಟಿ ನೀಡಿದೆ.

ರಮೇಶ್

ನಿಮ್ಮ ಪಕ್ಷದ ಅಧ್ಯಕ್ಷ ನಿಮ್ಮ ಸಂಬಂಧ ಚೆನ್ನಾಗಿ ಇದ್ದಿದ್ಯಾ, ನಿಮ್ಮ ಮನೆಯಾ ತಗ್ಗು ದೊಡ್ಡದು ಇದನ್ನು ಮುಚ್ಚಿಕೊಳ್ಳಿ , ಬೇರೆ ಮನೆಯ ತಗ್ಗು ವಿಷಯ ತಮಗೆ ಏಕೆ.

ಕೃಷ್ಣಾ, ಭೀಮಾ ನದಿ ಪಾತ್ರದ ರಾಜ್ಯದ ಗ್ರಾಮಗಳಲ್ಲಿ ಪ್ರವಾಹ ಭೀತಿ | ನದಿಗೆ ಇಳಿಯದಂತೆ ಗ್ರಾಮಸ್ಥರಿಗೆ ಸೂಚನೆ

ಮಹಾರಾಷ್ಟ್ರದಲ್ಲಿ ಮಳೆ: ಪ್ರವಾಹದ ಭೀತಿ

ಬೆಂಗಳೂರು: ಕಳೆದ ಒಂದು ವಾರದಿಂದ ರಾಜ್ಯದಲ್ಲಿ ಹಬ್ಬರಿಸಿದ ಮಳೆರಾಯ ಗುರುವಾರ ಕೊಂಚ ತಣ್ಣಗಾಗಿದ್ದು, ಮಳೆ ನಿಂತರು ಅವಾಂತಗಳು ಮುಂದುವರಿದಿವೆ. ಮಹಾರಾಷ್ಟ್ರದಲ್ಲಿ ಸುರಿಯುತ್ತಿರುವ ಮಳೆಯಿಂದ ಕೃಷ್ಣಾ, ಭೀಮಾ ನದಿಗಳ ಡ್ಯಾಮ್‌ಗಳಲ್ಲಿ ಒಳ ಹರಿವು ಹೆಚ್ಚಾಗಿದೆ. ಕೋಯ್ನಾ, ಆಲಮಟ್ಟಿ, ನಾರಾಯಣಪುರ, ಸೊನ್ನ ಡ್ಯಾಮ್‌ನಿಂದ ಅಪಾರ ಪ್ರಮಾಣದ ನೀರು ನದಿಗೆ ಬಿಡಲಾಗಿದ್ದು, ನದಿ ಪಾತ್ರದ ಗ್ರಾಮಗಳ ಜನರು ಅಲರ್ಟ್ ಆಗಿ ಇರಲು ರಾಯಚೂರು ಬಾಗಲಕೋಟೆ, ಯಾದಗಿರಿ ಜಿಲ್ಲಾಡಳಿತ ಸೂಚಿಸಿದೆ.

ಕೋಯ್ನಾದಿಂದ ಭಾರೀ ಪ್ರಮಾಣದ ನೀರು: ಮಹಾರಾಷ್ಟ್ರದಲ್ಲಿ ಆಗುತ್ತಿರುವ ಮಳೆಯಿಂದ ಕೋಯ್ನಾ ಡ್ಯಾಮ್‌ನಿಂದ ಭಾರೀ ಪ್ರಮಾಣದ ನೀರು ಕೃಷ್ಣಾ ನದಿಗೆ ಬಿಡಲಾಗಿದ್ದು, ಬಾಗಲಕೋಟೆ ಜಿಲ್ಲೆಯ ನದಿ ಪಾತ್ರದ ಗ್ರಾಮಗಳಲ್ಲಿ ಪ್ರವಾಹದ ಭೀತಿ ಎದುರಾಗಿದೆ. ಜನ ಎಚ್ಚರಿಕೆಯಿಂದ ಇರುವಂತೆ ಗ್ರಾಮಗಳಲ್ಲಿ ಜಿಲ್ಲಾಡಳಿತ ಡಂಗೂರ ಸಾರಿಸಿದೆ. ಜಮಖಂಡಿ ತಾಲೂಕಿನ ಚಿಕ್ಕಪಡಸಲಗಿ ಗ್ರಾಮದ ಬಳಿಯ ಶ್ರಮಬಿಂದು ಸಾಗರಕ್ಕೆ 50 ಸಾವಿರಕ್ಕೆ ಅಧಿಕ ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ನದಿ ತೀರದ ಜನರಲ್ಲಿ ಆತಂಕ ಶುರುವಾಗಿದೆ. ಆಲಮಟ್ಟಿ ಜಲಾಶಯಕ್ಕೆ 56 ಸಾವಿರ ಕ್ಯುಸೆಕ್ ಒಳ ಹರಿವಿದೆ. ಆಲಮಟ್ಟಿ ಹಾಗೂ ನಾರಾಯಣಪುರ ಡ್ಯಾಮ್‌ಗಳಿಂದ ಹೆಚ್ಚಿನ ಪ್ರಮಾಣದಲ್ಲಿ ನದಿಗೆ ನೀರು ಬಿಡುವ ಸಾಧ್ಯತೆ ಇದೆ.

ಸೊನ್ನ ಬ್ಯಾರೇಜ್‌ನಿಂದ ನೀರು: ಮಹಾರಾಷ್ಟ್ರದ ಮಳೆಯಿಂದ ಭೀಮಾ ನದಿಯ ಸೊನ್ನ ಬ್ಯಾರೇಜ್ ಭರ್ತಿಯಾಗುತ್ತಿದ್ದು, ನದಿಗೆ ಅಪಾರ ಪ್ರಮಾಣದ ನೀರು ಬಿಡಲಾಗುತ್ತಿದೆ. ಹೀಗಾಗಿ ರಾಯಚೂರು ತಾಲೂಕಿನ ಕೃಷ್ಣಾ ನದಿ ಪಾತ್ರದ ಗ್ರಾಮಗಳಲ್ಲಿ ಪ್ರವಾಹದ ಭೀತಿ ಎದುರಾಗಿದ್ದು, ರಾಯಚೂರು ತಹಸೀಲ್ದಾರ್ ಸುರೇಶ್ ವರ್ಮಾ ವಿಪತ್ತು ನಿರ್ವಹಣೆಗೆ ಸಜ್ಜಾಗಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ರಾಯಚೂರು ತಾಲೂಕಿನ ಬೂರ್ದಿಪಾಡ, ಗುರ್ಜಾಪೂರ, ಕೊರ್ತಕುಂದಾ, ಕುರ್ವಕುಲಾ, ಅಗ್ರಹಾರ, ಕುರ್ವಕುರ್ದಾ, ಅತ್ಕೂರು, ದೇವಸೂಗೂರು, ಗಂಜಳ್ಳಿ, ಕಾಡೂರು, ಕರೆಕಲ್, ಡಿ.ರಾಂಪೂರು, ಅರಷಣಗಿ, ಮಾಮಡಿದೊಡ್ಡಿ, ಮಂಗಿಗಡ್ಡ, ರಾಲದೊಡ್ಡಿ ಹಾಗೂ ಕೊರ್ವಿಹಾಳ ಗ್ರಾಮಗಳಲ್ಲಿ ಪ್ರವಾಹದ ಭೀತಿ ಇದೆ. ನದಿ ಪಾತ್ರಕ್ಕೆ ಮೊಸಳೆಗಳು ಬರುವುದರಿಂದ ಜಾನುವಾರುಗಳನ್ನು ನದಿಗೆ ಬಿಡದಂತೆ ಗ್ರಾಮಸ್ಥರಿಗೆ ತಹಸೀಲ್ದಾರ್ ಎಚ್ಚರಿಕೆ ಕೊಟ್ಟಿದ್ದಾರೆ.

ಕೆಆರ್‌ಎಸ್‌ನಲ್ಲಿ 9 ಅಡಿ ನೀರು ಏರಿಕೆ: ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ಅಬ್ಬರ ಮುಂದುವರೆದಿದ್ದು, ಮೂರೇ ದಿನಕ್ಕೆ ಕೆಆರ್‌ಎಸ್ ಡ್ಯಾಂನಲ್ಲಿ 9 ಅಡಿ ನೀರು ಏರಿಕೆ ಕಂಡಿದೆ. ಹಳೆ ಮೈಸೂರು ಭಾಗದ ಜೀವನಾಡಿಯಾಗಿರುವ ಕೆಆರ್‌ಎಸ್ ಡ್ಯಾಂಗೆ ಮತ್ತೇ ಜೀವಕಳೆ ಬಂದಿದೆ. ಡ್ಯಾಂಗೆ 22 ಸಾವಿರ ಕ್ಯೂಸೆಕ್‌ಗೂ ಅಧಿಕ ನೀರು ಹರಿದು ಬರುತ್ತಿದೆ. 3 ದಿನದ ಹಿಂದೆ 89 ಅಡಿಗೆ ಡ್ಯಾಮ್ ನೀರಿನ ಮಟ್ಟ ಇಳಿದಿತ್ತು. ಕೊಡಗು ಹಾಗೂ ಕಾವೇರಿ ಜಲಾನಯನ ಪ್ರದೇಶದಲ್ಲಿ ನಿರಂತರ ಮಳೆ ಹಿನ್ನೆಲೆ 98 ಅಡಿಗೆ ನೀರು ಏರಿಕೆ ಕಂಡಿದೆ. ಸದ್ಯ ಕೆಆರ್‌ಎಸ್‌ನಲ್ಲಿ 22,788 ಕ್ಯುಸೆಕ್ ನೀರಿನ ಒಳಹರಿವಿದೆ.

ಮರ ಧರೆಗೆ: ಕಾರು ಬಚಾವ್

ಚಿಕ್ಕಮಗಳೂರು ಜಿಲ್ಲೆಯ ಚಾರ್ಮಾಡಿ ಘಾಟಿಯಲ್ಲಿ ಗಾಳಿ ಮಳೆಯ ಅಬ್ಬರ ಮುಂದುವರಿದಿದೆ. ಚಾರ್ಮಾಡಿ ಘಾಟಿಯಲ್ಲಿರುವ ಅಣ್ಣಪ್ಪ ಸ್ವಾಮಿ ದೇಗುಲದ ಬಳಿ ಕಾರೊಂದು ಪಾಸ್ ಆಗುತ್ತಿದ್ದಂತೆ ಮರದ ರೆಂಬೆ ಮುರಿದು ಬಿದ್ದಿದೆ. ಅದೃಷ್ಟವಶಾತ್ ಕಾರಿನಲ್ಲಿದ್ದ ಪ್ರವಾಸಿಗರು ಕೂದಲೆಳೆ ಅಂತರದಲ್ಲಿ ಅಪಾಯದಿಂದ ಬಚಾವ್ ಆಗಿದ್ದಾರೆ. ಪ್ರವಾಸಿಗರು ಧರ್ಮಸ್ಥಳದಿಂದ ಬರುತ್ತಿದ್ದರು. ಈ ವೇಳೆ, ಚಾರ್ಮಾಡಿ ಘಾಟಿಯ ಅಣ್ಣಪ್ಪ ಸ್ವಾಮಿ ದೇಗುಲದ ಬಳಿ ಕಾರು ಬರುತ್ತಿದ್ದಂತೆ ಮರ ಮುರಿದು ಬಿದ್ದಿದೆ. ಅಕಸ್ಮಾತ್ ಮರ ಕಾರಿನ ಮೇಲೆ ಬಿದ್ದಿದ್ದರೆ ದೊಡ್ಡ ಮಟ್ಟದ ಅನಾಹುತವಾಗುತ್ತಿತ್ತು. ಕೊಟ್ಟಿಗೆಹಾರದ ಸ್ಥಳೀಯ ಯುವಕರು ಹಾಗೂ ಬಣಕಲ್ ಠಾಣೆ ಪೊಲೀಸರು ರಸ್ತೆಗೆ ಬಿದ್ದಿದ್ದ ಮರವನ್ನು ತೆರವುಗೊಳಿಸಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

ಸಚಿವ ಸತೀಶ್ ಶಿರಾಡಿ ಘಾಟ್ ವೀಕ್ಷಣೆ

ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನಲ್ಲಿ ಮುಂಗಾರು ಪೂರ್ವ ಹಾಗೂ ಮುಂಗಾರು ಮಳೆ ಭಾರೀ ಅವಾಂತರ ಸೃಷ್ಟಿ ಮಾಡಿದೆ. ಶಿರಾಡಿ ಘಾಟ್‌ನ ಹಲವೆಡೆ ರಸ್ತೆ ಮೇಲೆ ಗುಡ್ಡು ಕುಸಿತ ಆಗಿದೆ. ಈ ಪ್ರದೇಶಗಳಿಗೆ ಗುರುವಾರ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಭೇಟಿ ಪರಿಶೀಲನೆ ನಡೆಸಿದರು. ಸಕಲೇಶಪುರ ತಾಲೂಕಿನ ಆನೆಮಹಲ್, ದೋಣಿಗಲ್, ದೊಡ್ಡತಪ್ಪಲು ಪ್ರದೇಶದಲ್ಲಿ ಪರಿಶೀಲನೆ ನಡೆಸಿದರು. ಶಿರಾಡಿ ಘಾಟ್‌ನಲ್ಲಿ ಯಾವುದೇ ಮಳೆ ಅವಾಂತಗಳು ಘಟಿಸದಂತೆ ಮುನ್ನೆಚ್ಚರಿಕೆ ವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಶಾಸಕ ಶಿವಲಿಂಗೇಗೌಡ, ಸಿಮೆಂಟ್ ಮಂಜು, ಎಚ್.ಕೆ ಸುರೇಶ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಸಚಿವರಿಗೆ ಸಾಥ್ ನೀಡಿದರು.

ಯಾದಗಿರಿಯ 35 ಗ್ರಾಮಗಳಲ್ಲಿ ಪ್ರವಾಹದ ಭೀತಿ

ಗುರಸಣಗಿ-ಯಾದಗಿರಿ ಬ್ರಿಡ್ಜ್ ಕಂ ಬ್ಯಾರೇಜ್ ಹಾಗೂ ಸನ್ನತಿ ಬ್ಯಾರೇಜ್ ಮೂಲಕ ಭೀಮಾ ನದಿಗೆ ನೀರು ಹರಿಸಲಾಗುತ್ತಿದೆ. ಯಾದಗಿರಿ, ಶಹಾಪುರ, ವಡಗೇರಾ ತಾಲೂಕಿನ 35 ಗ್ರಾಮಗಳು ಭೀಮಾ ನದಿ ಪ್ರವಾಹದ ಆತಂಕದಲ್ಲಿವೆ. ಈ ಗ್ರಾಮಗಳಲ್ಲಿ ಕಂದಾಯ ಹಾಗೂ ಪೊಲೀಸ್ ಅಧಿಕಾರಿಗಳು ಗಸ್ತು ಹಾಕುತ್ತಿದ್ದು, ನದಿಗೆ ಇಳಿಯದಂತೆ ಜನರಿಗೆ ಗ್ರಾಮಸ್ಥರಿಗೆ ಎಚ್ಚರಿಕೆ ಕೊಟ್ಟಿದ್ದಾರೆ.

ಅಧಿಕಾರಿಗಳಿಂದ ಪರಿಹಾರ ಕಾರ್ಯ ಬಿರುಸು

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಕಳೆದ ಎರಡು ವಾರಗಳಿಂದ ಎಡೆಬಿಡದೆ ಸುರಿಯುತ್ತಿದ್ದ ಧಾರಾಕಾರ ಮಳೆ ಇಂದು ಕೊಂಚ ಬಿಡುವು ನೀಡಿದೆ. ಮಳೆಯ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ಅಧಿಕಾರಿಗಳಿಂದ ಪರಿಹಾರ ಕಾರ್ಯ ಬಿರುಸುಗೊಂಡಿದೆ.

ಭಾಗಮಂಡಲ ಹೋಬಳಿ ವ್ಯಾಪ್ತಿಯ ಪ್ರವಾಹ ಪೀಡಿತ ಪ್ರದೇಶಗಳಿಗೆ ಉಪ ವಿಭಾಗಾಧಿಕಾರಿ ವಿನಾಯಕ ನರ್ವಾಡೆ ಭೇಟಿ ನೀಡಿ, ಬೆಂಗೂರು ಗ್ರಾಮದ ದೋಣಿಕಾಡು ಪ್ರದೇಶವನ್ನು ಹಾಗೂ ಭಾಗಮಂಡಲದ ತ್ರಿವೇಣಿ ಸಂಗಮವನ್ನು ವೀಕ್ಷಿಸಿದರು. ನಂತರ ಪದಕಲ್ಲು ಗ್ರಾಮದಲ್ಲಿ ಮಳೆಯಿಂದ ಹಾನಿಗೊಳಗಾಗಿರುವ ಭಾಸ್ಕರ್ ಎಂಬುವರ ಮನೆಗೆ ಭೇಟಿ ನೀಡಿ ಅಲ್ಲಿನ ಸ್ಥಿತಿಗತಿಯನ್ನು ಅವಲೋಕಿಸಿದರು.

ಆಹಾರ ಕಿಟ್ ವಿತರಣೆ: ಕಳೆದ ಕೆಲ ದಿನಗಳ ಭಾರೀ ಮಳೆಯಿಂದಾಗಿ ಶನಿವಾರಸಂತೆ ಹೋ ಬಳಿ ದೊಡ್ಡಹಣಕೊಡು ಗ್ರಾಮದ ನಿವಾಸಿ ಸುಬ್ಬಯ್ಯ ಎಂಬವರ ಮನೆ ಶೇ.50ರಷ್ಟು ಹಾನಿ ಒಳಗಾಗಿತ್ತು. ಕುಶಾಲನಗರ ತಾಲೂಕು ನೆಲ್ಲಿಹುದಿಕೇರಿ ಗ್ರಾಮದ ನಿವಾಸಿ ಲೀಲಾವತಿ, ಶಾಂತಳ್ಳಿ ಹೋಬಳಿ ತಲ್ತಾರೆಶೆಟ್ಟಳ್ಳಿ ಗ್ರಾಮದ ನಿವಾಸಿ ಸುಶೀಲ, ಶನಿವಾರಸಂತೆ ಹೋಬಳಿ ದೊಡ್ಡಹನಕೋಡು ಗ್ರಾಮದ ನಿವಾಸಿ ಈರಮ್ಮ, ಪಾರ್ವತಿ ಎಂಬವರ ಮನೆ ಮಳೆಯಿಂದ ಹಾನಿಗೊಳಗಾಗಿದ್ದು, ತಹಸೀಲ್ದಾರ್‌ಗಳು ಸ್ಥಳಕ್ಕೆ ಭೇಟಿ ನೀಡಿ ಸಂತ್ರಸ್ತರಿಗೆ ಆಹಾರದ ಕಿಟ್ ವಿತರಣೆ ಮಾಡಿದರು.

ತಹಸೀಲ್ದಾರ್‌ಗಳು ಸಂತ್ರಸ್ತರಿಗೆ ಆಹಾರದ ಕಿಟ್ ವಿತರಣೆ ಮಾಡಿದರು.

ಹೇಮಾವತಿ ಯೋಜನೆ ನಿಲ್ಲಿಸಲು ಪತ್ರ

ತುಮಕೂರು: ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಫೀಡರ್ ಯೋಜನೆಯಿಂದ ತುಮಕೂರು ಭಾಗದ ರೈತರಿಗೆ ಅನ್ಯಾಯವಾಗಲಿದ್ದು ಈ ಕಾಮಗಾರಿ ತಕ್ಷಣ ನಿಲ್ಲಿಸುವಂತೆ ಮುಖ್ಯಮಂತ್ರಿಗೆ ಕೇಂದ್ರ ರೇಲ್ವೆ ಮತ್ತು ಜಲ ಶಕ್ತಿ ರಾಜ್ಯ ಖಾತೆಯ ವಿ. ಸೋಮಣ್ಣ ಪತ್ರ ಬರೆದಿದ್ದಾರೆ.



ವೈಜ್ಞಾನಿಕವಾಗಿ ಅಧ್ಯಯನಗೊಂಡ ಮೂಲ ಯೋಜನೆ ಹಾಗೂ ಅನುಮೋದಿತ ಡಿ.ಪಿ.ಆರ್. ವರದಿಯಂತೆ ತುಮಕೂರು ಶಾಖಾ ಕಾಲುವೆ ಕಿ.ಮಿ.70.36ರಲ್ಲಿ ನೀರಿನ ಹರಿವು ಒಟ್ಟು ಸುಮಾರು 1289 ಕ್ಯೂಸೆಕ್. ಈ ಪೈಕಿ ತುರುವೇಕೆರೆ, ಗುಬ್ಬಿ, ತುಮಕೂರು ಹಾಗೂ ಗ್ರಾಮಾಂತರ ಪ್ರದೇಶಗಳ 96ಕಿ.ಮಿ. ಉದ್ದದ ಈ ಭಾಗಕ್ಕೆ 901 ಕ್ಯೂಸೆಕ್ ನೀರಿನ ಹರಿವು ಹಂಚಿಕೆಯಾಗಿದೆ. ಅಲ್ಲದೇ ಕುಣಿಗಲ್‌ಗೆ 388 ಕ್ಯೂಸೆಕ್ ನೀರು ಹಂಚಿಕೆಯಾಗಿದೆ. ಈ ಯೋಜನೆಯ ನೀರನ್ನು ಈಗಾಗಲೇ ಹಂಚಿಕೆ ಮಾಡಲಾಗಿದ್ದು, ಪ್ರಸ್ತಾವಿತ ಯೋಜ ನೆಯ ಮೂಲಕ ಇತರ ಪ್ರದೇಶಕ್ಕೆ ನೀರು ಸರಬರಾಜು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ್ದಾರೆ.

ಗೋಧಿ ಬೆಲೆ ನಿಯಂತ್ರಣಕ್ಕೆ ಕೇಂದ್ರ ನಿಗಾ

ಹುಬ್ಬಳ್ಳಿ: ದೇಶದೆಲ್ಲೆಡೆ ಗೋಧಿ ಬೆಲೆ ನಿಯಂತ್ರಣ ಮತ್ತು ಸುಲಭ ಲಭ್ಯತೆಗಾಗಿ ಕೇಂದ್ರ ಸರಕಾರ ನಿಗಾ ಇರಿಸಿದ್ದು, ಕೇಂದ್ರಾಡಳಿತ ಪ್ರದೇಶ ಹಾಗೂ ಎಲ್ಲಾ ರಾಜ್ಯಗಳಿಗೆ ಗೋಧಿ ದಾಸ್ತಾನು ಮಿತಿ ವಿಧಿಸಲಾಗಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ.

2026ರ ಮಾರ್ಚ್ 31ರವರೆಗೆ ಅನ್ವಯಿಸುವಂತೆ ವ್ಯಾಪಾರಿಗಳು ಮತ್ತು ಸಗಟು ಮಾರಾಟಗಾರರಿಗೆ 3000 ಮೆಟ್ರಿಕ್ ಟನ್, ಚಿಲ್ಲರೆ ವ್ಯಾಪಾರಿಗಳು ಮತ್ತು ಪ್ರತಿ ಚಿಲ್ಲರೆ ಮಾರಾಟ ಮಳಿಗೆಗೆ 10 ಮೆಟ್ರಿಕ್ ಟನ್, ದೊಡ್ಡ ರಿಟೇಲರ್, ಪ್ರತಿ ಚಿಲ್ಲರೆ ಔಟ್ಲೆಟ್ ಗೆ 10 ಮೆಟ್ರಿಕ್ ಟನ್ ವರೆಗೆ ಗರಿಷ್ಠ ಪ್ರಮಾಣದ ದಾಸ್ತಾನು ಮಿತಿ ನಿಗದಿಪಡಿಸಿದೆ. ಮೇ 27ರಂದು ನಿರ್ದಿಷ್ಟ ಆಹಾರ ಧಾನ್ಯ ಮೇಲಿನ ಪರವಾನಗಿ ಅವಶ್ಯಕತೆ, ದಾಸ್ತಾನು ಮಿತಿ ಮತ್ತು ಸಾಗಣೆ ನಿರ್ಬಂಧ ತೆರವು (ತಿದ್ದುಪಡಿ) ಆದೇಶ ಹೊರಡಿಸಿದ್ದು, ಇದು 2026ರ ಮಾರ್ಚ್ 31ರವರೆಗೆ ಅನ್ವಯಿಸುತ್ತದೆ ಎಂದು ತಿಳಿಸಿದ್ದಾರೆ.

ಸರಕಾರಿ ಶಾಲೆಗಳಲ್ಲೂ ಅತ್ಯುತ್ತಮ ಶಿಕ್ಷಣ ನಮ್ಮ ಗುರಿ: ಮುಖ್ಯಮಂತ್ರಿ ಸಿದ್ದರಾಮಯ್ಯ

ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಈ ಬಾರಿ 725 ಕೋಟಿ ಹಣ

ಬೆಂಗಳೂರು: ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಈ ಬಾರಿ 725 ಕೋಟಿ ಹಣ ಕೊಟ್ಟಿದ್ದೇವೆ. ಕಳೆದ ವರ್ಷವೂ ಕೊಟ್ಟಿದ್ದೇವೆ. ಗುಣಮಟ್ಟದಲ್ಲಿ ಸರಕಾರಿ ಶಾಲೆಗಳು ಹಿಂದುಳಿದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶಾಲಾ ಶೈಕ್ಷಣಿಕ ವರ್ಷದ ಪುನರಾರಂಭದ ಪ್ರಯುಕ್ತ ಆಡುಗೋಡಿಯ ಕರ್ನಾಟಕ ಸರಕಾರಿ ಕನ್ನಡ ಶಾಲೆಯಲ್ಲಿ ಶಿಕ್ಷಣ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಶಾಲಾ ಕೊಠಡಿಗಳ ಪರಿಶೀಲನೆ ನಡೆಸಿ ನಂತರ ಕಾರ್ಯಕ್ರಮದಲ್ಲಿ ಮಾತನಾಡಿದರು.

ಗ್ರೇಸ್ ಮಾರ್ಕ್ಸ್ ಇಲ್ಲದೆ ಮಕ್ಕಳು ಉತ್ತಮ ಫಲಿತಾಂಶ ಪಡೆಯುವ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಪ್ರಯತ್ನಿಸುತ್ತಿದೆ. ಎರಡನೇ ಮತ್ತು ಮೂರನೇ ಸಪ್ಲಿಮೆಂಟರಿ ಪರೀಕ್ಷೆಗಳಿಗೆ ಶುಲ್ಕ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರಲ್ಲದೆ, ಸಚಿವ ರಾಮಲಿಂಗಾರೆಡ್ಡಿಯವರ ಕ್ಷೇತ್ರದಲ್ಲಿ ಸರಕಾರಿ ಶಾಲೆಗಳು ಉತ್ತಮ ಗುಣಮಟ್ಟ ಕಾಯ್ದುಕೊಂಡಿವೆ. ಇದೇ ಗುಣಮಟ್ಟ ಇಡೀ ರಾಜ್ಯಾದ್ಯಂತ ಆಗಬೇಕು ಎಂದರು. 1992-93 ರಲ್ಲಿ ನಾನು ಹಣಕಾಸು ಮಂತ್ರಿಯಾಗಿದ್ದಾಗ ಒಂದು ಲಕ್ಷ ಶಿಕ್ಷಕರನ್ನು ನೇಮಕ ಮಾಡಲು ಹಣಕಾಸು ಅನುಮೋದನೆ ನೀಡಿದ್ದೆ. ಮಕ್ಕಳಿಗೆ ಉತ್ತಮ ಪೌಷ್ಠಿಕಾಂಶ ಸಿಕ್ಕರೆ ಮಾತ್ರ ಉತ್ತಮ ವಿದ್ಯಾರ್ಥಿಗಳಾಗಿ ಓದಲು ಸಾಧ್ಯ. ಈ ಕಾರಣಕ್ಕೇ ನಾವು ಮಕ್ಕಳಿಗೆ ಮೊಟ್ಟೆ, ಬಾಳೆಹಣ್ಣು, ಚಿಕ್ಕಿ, ಹಾಲು ಕೊಡುತ್ತಿದ್ದೇವೆ. ಇದರ ಜೊತೆಗೆ ಪಠ್ಯ, ಸಮವಸ್ತ್ರ, ಶೂ, ಸಾಕ್ , ಪುಸ್ತಕಗಳನ್ನೂ ಸರಕಾರದಿಂದಲೇ ಕೊಡುತ್ತಿದ್ದೇವೆ ಎಂದರು.

ಶಾಲಾ ಶೈಕ್ಷಣಿಕ ವರ್ಷದ ಪುನರಾರಂಭದ ಪ್ರಯುಕ್ತ ಆಡುಗೋಡಿಯ ಕರ್ನಾಟಕ ಸರಕಾರಿ ಕನ್ನಡ ಶಾಲೆಯಲ್ಲಿ ಶಿಕ್ಷಣ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿಸಿಎಂ ಡಿ.ಕೆಶಿವಕುಮಾರ್, ಸಚಿವರಾದ ಮಧು ಬಂಗಾರಪ್ಪ, ರಾಮಲಿಂಗಾರೆಡ್ಡಿ ಶಾಲಾ ಪ್ರಾರಂಬೋತ್ಸವ ಪೋಸ್ಟರ್ ಬಿಡುಗಡೆಗೊಳಿಸಿದರು.

ಮಕ್ಕಳು ಎಷ್ಟು ಭಾಷೆ ಕಲಿತರೂ ಒಳ್ಳೆಯದೆ. ಹೆಚ್ಚೆಚ್ಚು ಭಾಷೆ ಕಲಿತು ಕನ್ನಡದಲ್ಲಿ ಮುಂದಿರಿ. ಕನ್ನಡದಲ್ಲಿ ಕಲಿತರೆ ಮಕ್ಕಳು ಪ್ರತಿಭಾವಂತರಾ ಗುವುದಿಲ್ಲ ಎನ್ನುವುದು ತಪ್ಪು. ವೈಜ್ಞಾನಿಕ ಶಿಕ್ಷಣ ಪಡೆದು, ವೈಜ್ಞಾನಿಕ ಗುಣಮಟ್ಟ ಬೆಳೆಸಿಕೊಂಡರೆ ಮಕ್ಕಳು ಉತ್ತಮ ಪ್ರತಿಭಾವಂತರಾದಂತೆ. ಹಾಗಾಗಿ ಸರಕಾರಿ ಶಾಲೆಗಳ ಹಾಜರಾತಿ ಹೆಚ್ಚಾಗಬೇಕು.

– ಸಿದ್ದರಾಮಯ್ಯ, ಮುಖ್ಯಮಂತ್ರಿ

ಪ್ರತಿಭೆ ಯಾರ ಸ್ವತ್ತೂ ಅಲ್ಲ

ಪ್ರತಿಭೆ ಯಾರ ಸ್ವತ್ತೂ ಅಲ್ಲ. ಅವಕಾಶ ಸಿಕ್ಕರೆ ಎಲ್ಲರ ಪ್ರತಿಭೆಯೂ ಹೊರಗೆ ಬರುತ್ತದೆ. ಸರ್ವರಿಗೂ ಶಿಕ್ಷಣ ಕೊಡುವುದು ಸರಕಾರದ ಜವಾಬ್ದಾರಿ. ಶಿಕ್ಷಣ ಕೇವಲ ಜ್ಞಾನ ಕೊಡುವುದಿಲ್ಲ, ವ್ಯಕ್ತಿತ್ವ ರೂಪಿಸುತ್ತದೆ. ಪ್ರತಿಯೊಬ್ಬರೂ ಶಿಕ್ಷಣ ಪಡೆದುಕೊಳ್ಳಲೇಬೇಕು. ಇದರಿಂದ ಸ್ವಾಭಿಮಾನ ಬೆಳೆದು ಸಮಾಜದ ಆಸ್ತಿಯಾಗುತ್ತೇವೆ. ಡಾ.ಬಾಬಾ ಸಾಹೇಬರು ದೇಶ ಕಂಡ ಮಹಾನ್ ವಿದ್ವಾಂಸರಲ್ಲಿ ಒಬ್ಬರು. ಪ್ರತಿಭೆ ಯಾರ ಸ್ವತ್ತೂ ಅಲ್ಲ. ಅವಕಾಶ ಸಿಕ್ಕರೆ ಎಲ್ಲರ ಒಳಗಿರುವ ಪ್ರತಿಭೆಯೂ ಹೊರಗೆ ಬರುತ್ತದೆ. ಅಂಬೇಡ್ಕರ್ ಅವರು ಕೊಟ್ಟಂತಹ ಸಂವಿಧಾನ ಎಲ್ಲರೂ ಪಾಲಿಸಬೇಕು. ಜಾತಿ, ವರ್ಗ ಮುಕ್ತ ಸಮ ಸಮಾಜ ನಿರ್ಮಾಣ ಆಗಬೇಕು ಎನ್ನುವುದು ಅಂಬೇಡ್ಕರ್ ಅವರ ಆಶಯವಾಗಿತ್ತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುಳ್ಳು ಸುದ್ದಿ: ಪ್ರಕರಣ ದಾಖಲು

ಮಂಗಳೂರು: ಕೊಳತ್ತಮಜಲುವಿನ ಅಬ್ದುಲ್ ರಹಿಮಾನ್ ಹತ್ಯೆಗೆ ಸಂಬಂಧಿಸಿದ ಸಾಮಾಜಿಕ ಮಾಧ್ಯಮಗಳಲ್ಲಿ ನಿರ್ದಿಷ್ಟ ಸಮುದಾಯದ ವಿರುದ್ಧ ದ್ವೇಷಕಾರುವ ಸುದ್ದಿ ಹಾಗೂ ಸುಳ್ಳು ಸುದ್ದಿ ಹಂಚಿಕೊಂಡ ಬಗ್ಗೆ ಗ್ರಾಮಾಂತರ ಠಾಣೆಯಲ್ಲಿ ಎರಡು ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿವೆ.

ಅಬ್ದುಲ್ ರಹಿಮಾನ್ ಹತ್ಯೆ ಪ್ರಕರಣವನ್ನು ಉಲ್ಲೇಖಿಸಿ ನಿರ್ದಿಷ್ಟ ಸಮುದಾಯದವರನ್ನು ಪ್ರಚೋದಿಸಲು ವಾಮಂಜೂರು ಫ್ರೆಂಡ್ಸ್'ಎಂಬ ವಾಟ್ಸ್ ಆ್ಯಪ್ ಗ್ರೂಪಿನಲ್ಲಿ ಅನೈತಿಕ ಸಂಬಂಧ'ದ ಬಗ್ಗೆಉದ್ದೇಶ ಪೂರ್ವಕವಾಗಿ ಸುಳ್ಳು ಸುದ್ದಿ ಹಬ್ಬಿಸಿದ ಆರೋಪದ ಮೇಲೆ ರಿತೇಶ್ ಅಲಿಯಾಸ್ ರಿತು ಎಂಬಾತನ ವಿರುದ್ಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಟೀಮ್ ಜೋಕರ್ಸ್' ಎಂಬ ಇನ್ಸ್ಟಾಗ್ರಾಂ ಖಾತೆಯಲ್ಲಿ ನಮ್ಮ ಸಹೋದರರನ್ನು ಕೊಂದ ಚಕ್ಕ ಶಿಖಂಡಿಗಳ ರಕ್ತ ಈ ಭೂಮಿಗೆ ಹರಿಸದೆ ನಾವು ಸುಮ್ಮನೆ ಕೂರುವುದಿಲ್ಲ ಇದಕ್ಕೆ ಉತ್ತರಕೊಟ್ಟೇ ಕೊಡುವೆವು ನಿಮ್ಮಂತಹ ಶಿಖಂಡಿಗಳು ನಾವು ಅಲ್ಲ. ನಮ್ಮ ಸಹೋದರನ ಕೊಂದ ನಾಮರ್ದ ಚಕ್ಕ ಶಿಖಂಡಿಗಳ ರಕ್ತ ಭೂಮಿಗೆ ಹರಿಸುವುದು ಶತಸಿದ್ಧ'ಎಂಬ ಸಂದೇಶ ಹಾಕಿಕೊಂಡ ಬಗ್ಗೆ ಎಫ್‌ಐಆರ್ ದಾಖಲಾಗಿದೆ.

ಲೋಕಾ ಬಲೆಗೆ ಬಿದ್ದ ಅಧಿಕಾರಿ

ಯಾದಗಿರಿ: ಸಾವಿರ ರುಪಾಯಿ ಹಣ ಬೇಡಿಕೆ ಇಟ್ಟು 5 ಸಾವಿರ ಫೋನ್ ಪೇ ಮೂಲಕ ಲಂಚದ ಹಣದ ಪಡೆದಿದ್ದ ಯಾದಗಿರಿ ತೋಟಗಾರಿಕೆ ಸಹಾಯಕ ನಿರ್ದೇಶಕ ಶಿವದತ್ತ ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿ ಹಾಕಿಕೊಂಡಿರುವ ಘಟನೆ ಗುರುವಾರ ನಡೆದಿದೆ.

ಬದ್ದೆಪಲ್ಲಿ ಗ್ರಾಮದ ರೈತ ಶಂಕರಪ್ಪ ಈರುಳ್ಳಿ ಶೆಡ್ ನಿರ್ಮಾಣ ಮಾಡಿಕೊಂಡಿದ್ದ, ಸರಕಾರ 80 ಸಾವಿರ ರು .ಸಬ್ಸಿಡಿ ಹಣ ಪಾವತಿ ಮಾಡಿತ್ತು. ಸಬ್ಸಿಡಿ ಹಣದಲ್ಲಿ ಸುಮಾರು 20 ಸಾವಿರ ರು ಬೇಡಿಕೆ ಇಟ್ಟಿದ್ದನು. ಗುರುವಾರ ರೈತ ಶಂಕರೆಪ್ಪನಿಗೆ ಅಧಿಕಾರಿ ಲಂಚದ ಹಣ ಪಡೆಯಲು ಫೋನ್ ಪೇ ನಂಬರ್ ನೀಡಿದನು. ರೈತ 5 ಸಾವಿರ ರುಪಾಯಿ ಹಣ ಫೋನ್ ಮೂಲಕ ಜಮಾ ಮಾಡಿದ್ದಾನೆ. ರೈತ ಶಂಕರೆಪ್ಪ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿರುವ ಹಿನ್ನೆಲೆ, ಯಾದಗಿರಿ ಅಂಬೇಡ್ಕರ್ ನಗರದಲ್ಲಿರುವ ತೋಟಗಾರಿಕೆ ಸಹಾಯಕ ನಿರ್ದೇಶಕ ಕಚೇರಿ ಮೇಲೆ ದಾಳಿ ಮಾಡಿ ಪರಿಶೀಲನೆ ಮಾಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಸ್ಲಿಮರ ಸರಣಿ ಕೊಲೆ | ರಾಜ್ಯ ಸರಕಾರದ ವಿರುದ್ಧ ಕಿಡಿ

ಕಾಂಗ್ರೆಸ್ ಸ್ಥಾನಗಳಿಗೆ ಮುಸ್ಲಿಮ್ ಮುಖಂಡರ ರಾಜೀನಾಮೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುತ್ತಿರುವ ಸರಣಿ ಕೊಲೆಗಳು ಮತ್ತು ಅದನ್ನು ತಡೆಯುವಲ್ಲಿ ರಾಜ್ಯ ಗೃಹ ಇಲಾಖೆಯ ವೈಫಲ್ಯ ಮತ್ತು ಜಿಲ್ಲೆಯ ಮುಸ್ಲಿಮರ ಕಡೆಗಣನೆಗೆ ಬೇಸತ್ತು ಬೋಳಾರದಲ್ಲಿರುವ ಶಾದಿ ಮಹಲ್ ಸಭಾಂಗ ಣದಲ್ಲಿ ಗುರುವಾರ ನಡೆದ ತುರ್ತು ಸಭೆಯಲ್ಲಿ ಮುಸ್ಲಿಮ್ ಮುಖಂಡರು ಹಾಗೂ ಕಾರ್ಯಕರ್ತರು ಸಾಮೂಹಿಕ ರಾಜೀನಾಮೆ ಪ್ರಕಟಿಸಿದರು.

ಕಾಂಗ್ರೆಸ್ ಪಕ್ಷದ ಬೂತ್ ಮಟ್ಟದಿಂದ ಹಿಡಿದು ರಾಜ್ಯ ಘಟಕದವರೆಗಿನ ವಿವಿಧ ಹುದ್ದೆಗಳಲ್ಲಿರುವ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಮಹಮ್ಮದ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕಾಂಗ್ರೆಸ್ ಮುಸ್ಲಿಂ ದ.ಕ ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಶಾಹುಲ್ ಹಮೀದ್ ಮಾತನಾಡಿ, ಸಮುದಾಯಕ್ಕೆ ಆಗಿರುವ ಅನ್ಯಾಯ, ಜಿಲ್ಲೆಯಲ್ಲಿ ನಡೆಯುತ್ತಿರುವ ಬೆಳವಣಿಗೆಯ ಬಗ್ಗೆ ಮಾತನಾಡುತ್ತಿದ್ದಂತೆ ಕಾರ್ಯಕರ್ತರು ವೇದಿಕೆಗೆ ನುಗ್ಗಿ ಬೇಕೆ ಬೇಕು ನಮಗೆ ನ್ಯಾಯಬೇಕು ಎಂದು ಆಗ್ರಹಿಸಿದರು. ಎಂ.ಎಸ್ ಮುಹಮ್ಮದ್, ಮಾಜಿ ಕಾರ್ಪೊರೇಟರ್ ಅಬ್ದುಲ್ ರವೂಫ್, ಸುಹೈಲ್ ಕಂದಕ್ ಜನಸಮೂಹವನ್ನು ಸಮಾಧಾನ ಪಡಿಸಲು ಯತ್ನಿದರು. ಆದರೆ ಕಾರ್ಯಕರ್ತರು ಪಟ್ಟು ಬಿಡಲಿಲ್ಲ, ಕೊನೆಗೆ ನಾಯಕರು ನಮ್ಮ ನಿರ್ಧಾರಕ್ಕೆ ಬದ್ಧ ಎಂದು ಹೇಳಿದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂಎಸ್ ಮಹಮ್ಮದ್, ಅಲ್ಪಸಂಖ್ಯಾತ ಅಧ್ಯಕ್ಷ ಸ್ಥಾನಕ್ಕೆ ಶಾಹುಲ್ ಹಮೀದ್ ಸಾಮೂಹಿಕ ರಾಜೀನಾಮೆ ನೀಡಿರುವುದಾಗಿ ಪ್ರಕಟಿಸಿದರು.

ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಸಭೆಯಲ್ಲಿ ಮುಖಂಡರ ಜತೆ ಕಾರ್ಯಕರ್ತರು ವಾಗ್ವಾದ ನಡೆಸಿದರು.

ಅಬ್ದುಲ್ ರಹೀಂ ಕೊಲೆ: ಮೂವರ ಬಂಧನ

ಬಂಟ್ವಾಳ ಗ್ರಾಮಾಂತರ ಠಾಣಾ ವ್ಯಾಪ್ತಿಯ ಕುರಿಯಾಳ ಗ್ರಾಮದ ಈರಾಕೋಡಿ ಎಂಬಲ್ಲಿ ಅಬ್ದುಲ್ ರಹ್ಮಾನ್ ಅವರನ್ನು ಕೊಲೆಗೈದ ಆರೋಪದಲ್ಲಿ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಗಳನ್ನು ಬಂಟ್ವಾಳ ತಾಲೂಕಿನ ಕುರಿಯಾಳ ಗ್ರಾಮದ ದೀಪಕ್(21), ಅಮ್ಮುಂಜೆ ಗ್ರಾಮದವರಾದ ಪೃಥ್ವಿರಾಜ್(21) ಮತ್ತು ಚಿಂತನ್(19) ಎಂದು ಗುರುತಿಸಲಾಗಿದೆ. ಬಂಟ್ವಾಳ ಕಳ್ಳಿಗೆ ಗ್ರಾಮದ ಕನಪಾಡಿ ಎಂಬಲ್ಲಿ ಮೂವರು ಆರೋಪಿಗಳನ್ನು ಬಂಧಿಸಲಾಗಿದ್ದು, ಆರೋಪಿಗಳ ವಿಚಾರಣೆ ನಡೆಸಲಾಗುತ್ತಿದೆ. ಉಳಿದ ಆರೋಪಿಗಳ ಪತ್ತೆ ಕಾರ್ಯವು ಪ್ರಗತಿಯಲ್ಲಿದೆ ಎಂದು ಬಂಟ್ವಾಳ ಗ್ರಾಮಾಂತರ ಠಾಣಾ ಪೊಲೀಸರು ತಿಳಿಸಿದ್ದಾರೆ. ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ 1911, 1912, 1913, 1181. 118 2, 109, 103(3), 190 ಸೆಕ್ಷನ್ ಗಳ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಮುಂದೂಡುವ ತಂತ್ರ; ಸಭೆಯಲ್ಲಿ ಆಕ್ರೋಶ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೀಕರ ಹತ್ಯೆಗಳ ಬೆನ್ನಿಗೆ ಕಾಂಗ್ರೆಸ್ ರಾಜೀನಾಮೆ ಪ್ರಕಟಿಸಲು ದ.ಕ ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತ ಮುಖಂಡರು ಗುರುವಾರ ನಗರದ ಬೋಳಾರದಲ್ಲಿರುವ ಶಾದಿಮಹಲ್‌ನ ಸಭಾಂಗಣದಲ್ಲಿ ಸಭೆ ಕರೆದಿದ್ದರು. ಕೊಳತ್ತಮಜಲ್‌ನಲ್ಲಿ ದುಷ್ಕರ್ಮಿಗಳಿಂದ ಹತ್ಯೆಯಾದ ಅಬ್ದುಲ್ ರಹ್ಮಾನ್ ಅವರ ಅಂತ್ಯಸಂಸ್ಕಾರದ ವಿಧಿ ವಿಧಾನಗಳು ನಡೆಯುತ್ತಿದ್ದಂತೆ ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತ ಮುಖಂಡರು ರಾಜೀನಾಮೆ ನೀಡುವುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಿದ್ದರು. ಅದರಂತೆ ಗುರುವಾರ ಸಭೆ ಸೇರಿದಾಗ ಮುಖಂಡರು ಮಾತು ಬದಲಿಸಿ ಒಂದು ವಾರ ರಾಜೀನಾಮೆಯನ್ನು ಮುಂದೆ ಹಾಕಿ ಕಾದು ನೋಡುವ ತಂತ್ರದ ಮೊರೆ ಹೋಗಿರುವುದು, ಸಭೆಯಲ್ಲಿ ನೆರೆದಿದ್ದ ಕಾರ್ಯಕರ್ತರ ಆಕ್ರೋಶಕ್ಕೆ ಕಾರಣವಾಯಿತು. ನಾವು ರಾಜೀನಾಮೆ ನೀಡುವ ತೀರ್ಮಾನದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಕಾರ್ಯಕರ್ತರು ಪಟ್ಟು ಹಿಡಿದಿದ್ದರಿಂದ ಸಭಾಂಗಣದಲ್ಲಿ ಏನು ನಡೆಯುತ್ತಿದೆ ಎಂದು ಯಾರಿಗೂ ಕೇಳಿಸದಷ್ಟು ಗದ್ದಲವುಂಟಾಯಿತು. ಕಾರ್ಯಕರ್ತರನ್ನು ಸಮಾಧಾನ ಪಡಿಸಲು ಮುಖಂಡರು ಹರಸಾಹಸ ಪಟ್ಟರು. ಕಾರ್ಯಕರ್ತರ ಆಕ್ರೋಶಕ್ಕೆ ಮಣಿದು ಮುಸ್ಲಿಂ ಮುಖಂಡರು ಒಬ್ಬಬ್ಬರಾಗಿಯೇ ರಾಜೀನಾಮೆ ಘೋಷಣೆ ಮಾಡಿದರು.

ವಿಶ್ವವಾಣಿ

ಸಂಪಾದಕೀಯ

ಕರೋನಾ: ಆತಂಕ ಬೇಡ, ಎಚ್ಚರವಿರಲಿ

ದೇಶದ ವಿವಿಧೆಡೆ ಕರೋನಾ ಪ್ರಕರಣಗಳು ಮತ್ತೆ ವರದಿಯಾಗುತ್ತಿವೆ. ಕಳೆದ ಹದಿನೈದು ದಿನಗಳಲ್ಲಿ ಪ್ರಕರಣಗಳ ಸಂಖ್ಯೆ ಸಾವಿರ ದಾಟಿದೆ. ಕೇರಳ, ಮಹಾರಾಷ್ಟ್ರ ಮತ್ತು ದೆಹಲಿಯಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚಾಗಿವೆ. ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಶತಕ ದಾಟಿದೆ. ಕೆಲವೆಡೆ ಸಾವಿನ ವರದಿಗಳೂ ಆಗಿವೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಜಾಗೃತವಾಗಿದ್ದು, ಕೋವಿಡ್ ಪರೀಕ್ಷಾ ಕಿಟ್‌ಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವಂತೆ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದೆ. ಹೃದಯ ಸಂಬಂಧಿ ಮತ್ತು ಉಸಿರಾಟ ಸಂಬಂಧಿ ಸಮಸ್ಯೆಗಳು ಇರುವ ರೋಗಿಗಳನ್ನು ತಪಾಸಣೆಗೆ ಒಳಪಡಿಸುವಂತೆ ಆಸ್ಪತ್ರೆಗಳಿಗೆ ಸೂಚನೆ ನೀಡಿದೆ. ಮುನ್ನೆಚ್ಚರಿಕೆ ಕ್ರಮಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಆಸ್ಪತ್ರೆಗಳಿಗೆ ಮತ್ತು ಶಾಲೆಗಳಿಗೆ ಕಳುಹಿಸಿದೆ. ಹೀಗೆ ಕರೋನಾ ಸೋಂಕು ಹರಡುವುದರ ಮೇಲೆ ನಿಗಾ ಇರಿಸಲು, ಹರಡುವುದನ್ನು ತಡೆಯುವ ಸುರಕ್ಷತಾ ಕ್ರಮಗಳನ್ನು ಸಕರಾರ ತೆಗೆದುಕೊಂಡಿದೆ. ಹೀಗಾಗಿ ಈ ಬಗ್ಗೆ ಆತಂಕಪಡುವ ಅಗತ್ಯವಿಲ್ಲ, ಹಾಗಂತ ನಿರ್ಲಕ್ಷ್ಯ ಮಾಡುವುದೂ ಸರಿಯಲ್ಲ. ಕರೋನಾ ಬಗ್ಗೆ ಹೆದರುವುದಕ್ಕಿಂತ ಹೆಚ್ಚಾಗಿ ಈ ರೋಗ ಯಾವ ರೀತಿ ಹರಡುತ್ತದೆ. ಈ ರೋಗ ಬಂದರೆ ಯಾವ ರೀತಿಯ ಮುಂಜಾಗ್ರತೆ ಕ್ರಮ ಅನುಸರಿಸಬೇಕು ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ಕರೋನಾ ಒಂದು ವೈರಸ್. ಇದು ಗಾಳಿಯಲ್ಲಿ ಹರಡುವ ಸೋಂಕು ಅಲ್ಲ. ಬದಲಾಗಿ ಮನುಷ್ಯರಿಂದ ಮನುಷ್ಯರಿಗೆ ಹರಡುತ್ತದೆ. ನಿಮ್ಮ ಸುತ್ತಲಿನ ಯಾವುದೇ ಒಬ್ಬ ವ್ಯಕ್ತಿಗೆ ಕರೋನಾ ಪಾಸಿಟಿವ್ ಬಂದರೂ ಹೆದರಬೇಕಾಗಿಲ್ಲ. ಅವರಿಂದ ಸಾಮಾಜಿಕ ಅಂತರ ಕಾಯ್ದುಕೊಂಡರೆ ಸಾಕು. ಅಲ್ಲದೆ, ಸರಕಾರ ಮಾಸ್ಕ್ ಕಡ್ಡಾಯಗೊಳಿಸುವವರೆಗೂ ನೋಡೋಣ ಎಂಬುದನ್ನು ಬಿಟ್ಟು ಈಗಿನಿಂದಲೇ ಮಾಸ್ಕ್ ಧರಿಸುವುದನ್ನು ರೂಢಿಸಿಕೊಳ್ಳಬೇಕು. ಶ್ವಾಸಕೋಸದ ತೊಂದರೆ, ಹೃದಯಕ್ಕೆ ಸಂಭದಿಸಿದ ಖಾಯಿಲೆಗಳು, ಕಿಡ್ನಿ ರೋಗ, ಮಧುಮೇಹ, ನ್ಯೂಮೋನಿಯ, ಮುಂತಾದ ರೋಗ ಇರುವವರು, 60 ವರ್ಷಕ್ಕಿಂತ ಹೆಚ್ಚಿನ ವಯಸ್ಸಾದವರು, ಸಣ್ಣ ಮಕ್ಕಳು ಅವರ ಆರೋಗ್ಯದ ಕಡೆ ಹೆಚ್ಚಿನ ಗಮನವಿಡಬೇಕು. ಸರಕಾರ, ಸಂಘ–ಸಂಸ್ಥೆಗಳು ಕೂಡ ಹಿರಿಯ ನಾಗರಿಕರು, ಕರೋನಾಗೆ ಸುಲಭವಾಗಿ ತುತ್ತಾಗುವವರನ್ನು ಗಮನದಲ್ಲಿ ಇರಿಸಿಕೊಂಡು ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

ಸೊಂಪಾದಕೀಯ

ಬಾಲಿವುಡ್‌ನಲ್ಲಿ ಹೊಂಬಾಳೆ

ಕನ್ನಡದ ಕೆಜಿಎಫ್, ಸಲಾರ್, ಕಾಂತಾರ ಚಿತ್ರಗಳನ್ನು ನಿರ್ಮಾಣ ಮಾಡಿದ ಹೊಂಬಾಳೆ ಫಿಲ್ಮ್ಸ್ ಈಗ ಬಾಲಿವುಡ್‌ಗೆ ಕಾಲಿಟ್ಟಿದೆ. ಸೌತ್ ಇಂಡಿಯನ್ ಸಿನಿಮಾಗಳನ್ನು ಪ್ಯಾನ್ ಇಂಡಿಯಾ ಸಿನಿಮಾ ಅಂತ ಮಾಡಿ ಹಿಂದಿಯಲ್ಲಿ ಈಗಾಗಲೇ ಹೆಸರು ಮಾಡಿದ್ದರೂ ಈಗ ಪ್ರಥಮ ಬಾರಿಗೆ ನೇರವಾಗಿ ಹಿಂದಿ ಚಿತ್ರಕ್ಕೆ ಕೈ ಹಾಕಿದೆ ಹೊಂಬಾಳೆ. ಕೈ ಅಷ್ಟೇ ಅಲ್ಲ, ನೇರವಾಗಿ ಬಾಲಿವುಡ್‌ನ ಸೂಪರ್ ಸ್ಟಾರ್ ಹೃತಿಕ್ ರೋಷನ್ ಅವರಿಗೇ ಗಾಳ ಹಾಕಿದೆ ಹೊಂಬಾಳೆ. ಹಾಗಾಗಿ ಈಗ ಬಾಲಿವುಡ್‌ನಲ್ಲಿ ಹೃತಿಕ್ ನಾಯಕತ್ವದ ಹೊಂಬಾಳೆ ನಿರ್ಮಾಣದ ಸಿನಿಮಾ ತಯಾರಾಗಲಿದೆ. ಈ ಹೊಂಬಾಳೆ ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸಲಿರುವ ಬಾಲೆ ಯಾರು ಅನ್ನೋದ್ರ ಜೊತೆಗೆ ಈ ಚಿತ್ರಕ್ಕೆ ಸಂಬಂಧಿಸಿದ ಉಳಿದ ವಿವರಗಳು ಬಹಿರಂಗ ಆಗಿಲ್ಲದಿದ್ದರೂ ಈಗಾಗಲೇ ಇದರ ಬಗ್ಗೆ ಚರ್ಚೆಗಳು ಆರಂಭ ಆಗಿವೆ. ಹೊಂಬಾಳೆ ನಿರ್ಮಾಣದ ಕೆಜಿಎಫ್, ಸಲಾರ್ ಚಿತ್ರಗಳನ್ನು ನೋಡಿದವರಿಗೆ ಆ ಚಿತ್ರಗಳ ಕತ್ತಲ ಜಗತ್ತು ಚಿರಪರಿಚಿತ. ಹಾಗಾಗಿ ಈ ಸಿನಿಮಾ ಕೂಡಾ ಕತ್ತಲಲ್ಲೇ ಇರುತ್ತಾ ಅನ್ನೋದು ಹಲವರ ಪ್ರಶ್ನೆ. ಆದರೆ ಬಹುಶಃ ಹಾಗಾಗುವ ಸಾಧ್ಯತೆ ಇಲ್ಲ. ಯಾಕಂದ್ರೆ ಹೇಳಿ ಕೇಳಿ ಈ ಚಿತ್ರದ ನಾಯಕ ಹೃತಿಕ್ ರೋಷನ್. ಅವರ ಹೆಸರಲ್ಲೇ ರೋಷನ್ ಅಂದ್ರೆ ಬೆಳಕು ಇದೆ. ಹಾಗಾಗಿ ಇದು ಕತ್ತಲುಮಯ ಸಿನಿಮಾ ಆಗಲಿಕ್ಕಿಲ್ಲ. ಆದರೆ ಹೃತಿಕ್ ರೋಷನ್ ಅವರ ಚರಿಷ್ಮಾವನ್ನು ಕತ್ತಲಲ್ಲಿ ತೋರಿಸೋ ಕೆಲಸ ಮಾಡಬಹುದು. ಅಥವಾ ಕತ್ತಲ ಜಗತ್ತಿನ ಸಿನಿಮಾ ಇದ್ದರೂ ಇರಬಹುದು. ಆದರೆ ಹೊಂಬಾಳೆ ಬಿಡುಗಡೆ ಮಾಡಿರುವ ಮೊದಲ ಫೋಟೋಗಳಲ್ಲಿ ಹೃತಿಕ್ ರೋಷನ್ ಕಪ್ಪು ಬಣ್ಣದ ಬಟ್ಟೆಯನ್ನೇ ಧರಿಸಿದ್ದಾರೆ. ಹಾಗಾಗಿ ಈ ಸಿನಿಮಾದ ನಿರ್ದೇಶಕ ಪ್ರಶಾಂತ್ ನೀಲ್ ಅವರೇ ಇರಬಹುದಾ ಎಂಬ ಅನುಮಾನ ಮೂಡಿರೋದಂತೂ ಸತ್ಯ. ಒಟ್ಟಿನಲ್ಲಿ ಹೊಂಬಾಳೆ ಸಂಸ್ಥೆ ಕೇವಲ ಕನ್ನಡಕ್ಕೆ ಸೀಮಿತ ಆಗದೆ ದೇಶದಾದ್ಯಂತ ಸಿನಿಮಾ ಅನ್ನೋ ರಸದೌತಣವನ್ನು ಬಾಳೆ ಎಲೆ ಮೇಲೆ ಬಡಿಸಿ ರುಚಿ ತೋರಿಸಲು ಸಿದ್ಧವಾಗಿದೆ.

ಸಂಪಾದಕರ ಸದ್ಯಶೋಧನೆ

ಇದು ಹೂವುಗಳ ಅಲಂಕಾರವಷ್ಟೇ ಅಲ್ಲ

ಜಪಾನಿನ ಒಂದು ಕಲೆ ಭಾರತದಲ್ಲೂ ಜನಪ್ರಿಯವಾಗಿದ್ದರೆ ಅದು ಇಕೆಬಾನ. ಜಪಾನಿನ 'ಪುಷ್ಪಾಲಂಕಾರ ಕಲೆ' (ಇಕೆಬಾನ) ಜಪಾನ್ ಮತ್ತು ಭಾರತ ಮಾತ್ರ ಅಲ್ಲ, ಅದು ವ್ಯಾಪಿಸದ ಜಗತ್ತಿನ ದೇಶ ಇರಲಿಕ್ಕಿಲ್ಲ. ಜಾಗತಿಕರಣಕ್ಕೆ ಜಪಾನ್ ನೀಡಿದ ಬಹು ದೊಡ್ಡ ಕಾಣಿಕೆ ಅಂದ್ರೆ ಇಕೆಬಾನ. 'ಜೀವಂತ ಹೂವುಗಳನ್ನು ಇಡುವುದು' ಅಥವಾ 'ಹೂವುಗಳಿಗೆ ಜೀವ ನೀಡುವುದು' ಅಂದ್ರೆ ಇಕೆಬಾನ ಎಂದು ಸ್ಥೂಲವಾಗಿ ಹೇಳಬಹುದು. ಇದು ಜಪಾನಿನ ಸಾಂಪ್ರದಾಯಿಕ ಪುಷ್ಪಾಲಂಕಾರ ಕಲೆಯಾಗಿದೆ. ಇದು ಕೇವಲ ಹೂವುಗಳನ್ನು ಪಾತ್ರೆಯಲ್ಲಿ ಜೋಡಿಸುವುದಕ್ಕಿಂತ ಹೆಚ್ಚಿನ ಮಹತ್ವವನ್ನು ಹೊಂದಿದೆ. ಇದು ಪ್ರಕೃತಿ, ಅಧ್ಯಾತ್ಮ ಮತ್ತು ಸೌಂದರ್ಯ ತತ್ವಗಳನ್ನು ಒಳಗೊಂಡಿರುವ ಆಳವಾದ ಕಲಾ ಪ್ರಕಾರವಾಗಿದೆ. ಇಕೆಬಾನ ಕಲೆಯು ಸುಮಾರು ಆರನೇ ಶತಮಾನದಲ್ಲಿ ಬೌದ್ಧಧರ್ಮದ ಆಗಮನದೊಂದಿಗೆ ಜಪಾನಿಗೆ ಪರಿಚಯವಾಯಿತು. ಬೌದ್ಧ ಸಂಪ್ರದಾಯದಲ್ಲಿ, ಬುದ್ಧನಿಗೆ ಮತ್ತು ದೇವರಿಗೆ ಹೂವುಗಳನ್ನು ಅರ್ಪಿಸುವುದು ಒಂದು ಪ್ರಮುಖ ಭಾಗವಾಗಿತ್ತು. ಆರಂಭದಲ್ಲಿ, ಈ ಹೂವಿನ ಜೋಡಣೆಗಳು ಸರಳವಾಗಿದ್ದವು. ಆದರೆ ಕಾಲಾನಂತರದಲ್ಲಿ, ಅವು ಹೆಚ್ಚು ಸಂಕೀರ್ಣ ಮತ್ತು ವಿಧ್ಯುಕ್ತ ರೂಪವನ್ನು ಪಡೆದುಕೊಂಡವು. ಕಾಮಕುರ ಅವಧಿಯಲ್ಲಿ (1185–1333), ಸಮುರಾಯ್‌ಗಳ ಪ್ರಭಾವದಿಂದಾಗಿ ಇಕೆಬಾನ ಮತ್ತಷ್ಟು ವಿಕಸನಗೊಂಡಿತು. ಹದಿನೈದನೇ ಶತಮಾನದಲ್ಲಿ, ಕಲೆಯು ಹೆಚ್ಚು ಮುನ್ನೆಲೆಗೆ ಬಂದಿತು ಮತ್ತು ಮುರೋಮಾಚಿ ಅವಧಿಯಲ್ಲಿ (1336–1573), ಇಕೆಬಾನ ಕಲಿಸುವ ಶಾಲೆಗಳು ಹುಟ್ಟಿಕೊಂಡವು. ಇಕೆಬಾನ ಕಲಿಸುವ ಪ್ರಮುಖ ಶಾಲೆಗಳಲ್ಲಿ ಒಂದಾದ ಇಕೆನೋಬೋ (Ikenobo) ಶಾಲೆ, ಹದಿನೈದನೇ ಶತಮಾನದಲ್ಲಿ ಕ್ಯೋಟೋದ ದೇವಾಲಯವೊಂದರಲ್ಲಿ ಆರಂಭವಾಯಿತು. ಇದು ಇಂದಿಗೂ ಇಕೆಬಾನದ ಅತ್ಯಂತ ಹಳೆಯ ಮತ್ತು ಪ್ರತಿಷ್ಠಿತ ಶಾಲೆಯಾಗಿದೆ. ಇಡೋ ಅವಧಿಯಲ್ಲಿ (1603–1868), ಇಕೆಬಾನ ಜನಸಾಮಾನ್ಯರ ನಡುವೆಯೂ ಜನಪ್ರಿಯವಾಯಿತು. ಅನೇಕ ಹೊಸ ಶೈಲಿಗಳು ಮತ್ತು ಶಾಲೆಗಳು ಅಭಿವೃದ್ಧಿ ಹೊಂದಿದವು ಮತ್ತು ಇದು ಹೆಣ್ಣುಮಕ್ಕಳ ಶಿಕ್ಷಣದ ಪ್ರಮುಖ ಭಾಗವಾಯಿತು. ಇಕೆಬಾನ ಕಲೆಯು ಕೆಲವು ಮೂಲಭೂತ ತತ್ವಗಳನ್ನು ಆಧರಿಸಿದೆ. ಇಕೆಬಾನದಲ್ಲಿ, ಹೂವುಗಳ ನಡುವಿನ ಖಾಲಿ ಜಾಗವು ಹೂವುಗಳಷ್ಟೇ ಮುಖ್ಯವಾಗಿದೆ. ಇದು ಜಾಗ ಮತ್ತು ವಸ್ತುಗಳ ನಡುವಿನ ಸಮತೋಲನವನ್ನು ಸೂಚಿಸುತ್ತದೆ ಮತ್ತು ವೀಕ್ಷಕರಿಗೆ ಧ್ಯಾನ ಮಾಡಲು ಅವಕಾಶ ನೀಡುತ್ತದೆ. ಇಕೆಬಾನದಲ್ಲಿ ಸಮ್ಮಿತಿಗೆ ಬದಲಾಗಿ ಅಸಮರೂಪತೆಗೆ ಒತ್ತು ನೀಡಲಾಗುತ್ತದೆ. ಇದು ಪ್ರಕೃತಿಯಲ್ಲಿನ ನೈಸರ್ಗಿಕ ಅಸಮತೋಲನವನ್ನು ಪ್ರತಿಬಿಂಬಿಸುತ್ತದೆ ಮತ್ತು ಹೆಚ್ಚು ನೈಜವಾದ ಮತ್ತು ಕ್ರಿಯಾತ್ಮಕ ಸಂಯೋಜನೆಯನ್ನು ಸೃಷ್ಟಿಸುತ್ತದೆ. ಇಕೆಬಾನವು ಪ್ರಕೃತಿಯ ತಾತ್ಕಾಲಿಕತೆಯನ್ನು ಗೌರವಿಸುತ್ತದೆ. ಹೂವುಗಳು, ಎಲೆಗಳು ತಮ್ಮ ಜೀವಿತಾವಧಿಯಲ್ಲಿ ಬದಲಾಗುತ್ತವೆ ಮತ್ತು ಅಂತಿಮವಾಗಿ ಒಣಗುತ್ತವೆ. ಈ ಕಲೆಯು ಈ ಪ್ರಕ್ರಿಯೆಯನ್ನು ಅಳವಡಿಸಿಕೊಂಡು, ಪ್ರತಿ ಹಂತದಲ್ಲಿಯೂ ಸೌಂದರ್ಯವನ್ನು ಕಾಣುವಂತೆ ಪ್ರೋತ್ಸಾಹಿಸುತ್ತದೆ. ಇಕೆಬಾನದಲ್ಲಿ ಹಲವು ವಿಭಿನ್ನ ಶೈಲಿಗಳಿದ್ದು, ಪ್ರತಿಯೊಂದೂ ತನ್ನದೇ ಆದ ವಿಶಿಷ್ಟ ನಿಯಮ ಮತ್ತು ಸೌಂದರ್ಯಶಾಸ್ತ್ರವನ್ನು ಹೊಂದಿದೆ. ಕೆಲವು ಪ್ರಮುಖ ಶೈಲಿಗಳೆಂದರೆ ರಿಕ್ಕಾ, ಶೋಕಾ, ನಾಗೇರಿ, ಮೊರಿಬಾನ, ಜಿವುಕಾ. ಇಕೆಬಾನದಲ್ಲಿ ಬಳಸುವ ಸಸ್ಯ ವಸ್ತುಗಳು ಕೇವಲ ಹೂವುಗಳಿಗೆ ಸೀಮಿತವಾಗಿಲ್ಲ. ಶಾಖೆಗಳು, ಎಲೆಗಳು, ಹುಲ್ಲುಗಳು, ಹಣ್ಣುಗಳು ಮತ್ತು ಒಣಗಿದ ವಸ್ತುಗಳನ್ನು ಸಹ ಬಳಸಲಾಗುತ್ತದೆ. ಪ್ರತಿ ವಸ್ತುವನ್ನು ಅದರ ಆಕಾರ, ಬಣ್ಣ, ವಿನ್ಯಾಸ ಮತ್ತು ಸಾಂಕೇತಿಕ ಅರ್ಥಕ್ಕಾಗಿ ಎಚ್ಚರಿಕೆಯಿಂದ ಆಯ್ಕೆ ಮಾಡಲಾಗುತ್ತದೆ. ಋತುಮಾನಕ್ಕೆ ಅನುಗುಣವಾಗಿ ಹೂವುಗಳನ್ನು ಆಯ್ಕೆ ಮಾಡುವುದು ಸಹ ಒಂದು ಪ್ರಮುಖ ಅಂಗ. ಇದು ಪ್ರಕೃತಿಯ ಬದಲಾಗುತ್ತಿರುವ ಗತಿಯನ್ನು ಸೂಚಿಸುತ್ತದೆ. ಇಕೆಬಾನ ಕಲಿಯುವುದು ಮತ್ತು ಅಭ್ಯಾಸ ಮಾಡುವುದರಿಂದ ಸೃಜನಶೀಲತೆ ಮತ್ತು ಸೌಂದರ್ಯದ ಪ್ರಜ್ಞೆಯನ್ನು ಹೆಚ್ಚಿಸುತ್ತದೆ ಎಂಬ ಭಾವನೆಯಿದೆ. ಅಷ್ಟೇ ಅಲ್ಲ, ಅದು ಪ್ರಕೃತಿಯೊಂದಿಗೆ ಸಂಪರ್ಕವನ್ನು ಬಲಪಡಿಸುತ್ತದೆ ಮತ್ತು ಅದರ ಸೌಂದರ್ಯವನ್ನು ಆಳವಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಜತೆಗೆ ಶಿಸ್ತು, ತಾಳ್ಮೆ ಮತ್ತು ಏಕಾಗ್ರತೆಯನ್ನು ಕಲಿಸುತ್ತದೆ. ಇದು ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಬದುಕುವ, ಸೌಂದರ್ಯವನ್ನು ಆಚರಿಸುವ ಮತ್ತು ಈ ಕ್ಷಣದಲ್ಲಿ ನೆಮ್ಮದಿ ಕಾಣುವ ಜಪಾನೀ ತತ್ವಶಾಸ್ತ್ರವನ್ನು ಪ್ರತಿಬಿಂಬಿಸುತ್ತದೆ.

ಸ್ಟೇಸಿ ಮಾರ್ಕಮ್ ಹೇಳಿದ ಮರಣಶಯ್ಯೆಯ ಕಥೆಗಳು

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಅಮೆರಿಕಾದ ಬಹುತೇಕ ಆಸ್ಪತ್ರೆಗಳಲ್ಲಿ ಈ ಸೌಲಭ್ಯ ಇರುತ್ತದೆ. Hospice Care–ಅಂತ್ಯಕಾಲದ ಆರೈಕೆ. ಅದು ಬದುಕಿನ ಕಟ್ಟಕಡೆಯ ಕೊನೆಯ ಹಂತದಲ್ಲಿರುವವರನ್ನು ನೋಡಿಕೊಳ್ಳುವ ವ್ಯವಸ್ಥೆ. ಇದು ಆಸ್ಪತ್ರೆಯದೇ ಭಾಗವಾದರೂ ಇಲ್ಲಿ ರೋಗಿಗಳಿಗೆ ಯಾವುದೇ ವಿಶೇಷ ಶುಶ್ರೂಷೆ, ಗುಣಮುಖವಾಗಲೆಂದು ಆರೈಕೆ ಇರುವುದಿಲ್ಲ. ಇಲ್ಲಿರುವವರು ಇಲ್ಲಿಂದ ಹಿಂದಕ್ಕೆ ಹೋಗಲಾಗದ ಸ್ಥಿತಿಯಲ್ಲಿರುವವರು. ಮಾರಣಾಂತಿಕ ರೋಗದ ಕೊನೆಯ ಹಂತವನ್ನು ತಲುಪಿದವರು. ಇದು ವೃದ್ಧಾಶ್ರಮವಲ್ಲ–ಹೆಚ್ಚು ಕಡಿಮೆ ಕಾಶಿಯ ಮುಕ್ತಿಧಾಮದ ರೀತಿ. ದಿನಗಣನೆಯ ವರಷ್ಟೇ ಇಲ್ಲಿ ಸೇರಬಹುದು.

ಕೊನೆಯ ಕೆಲವೇ ದಿನಗಳನ್ನು ಗೌರವಯುತವಾಗಿ ಮತ್ತು ಸಹ್ಯವಾಗುವ ರೀತಿ ನೋಡಿಕೊಳ್ಳುವುದಷ್ಟೇ ಈ ವ್ಯವಸ್ಥೆಯ ಉದ್ದೇಶ. ಇಲ್ಲಿ ಬಂದವರ ಹೃದಯ ನಿಂತು ಹೋಯ್ತು, ಇನ್ನೇನೋ ಆಯ್ತು ಎಂದರೆ ಅಲ್ಲಿಗೆ ಮುಗಿಯಿತು. ತೀವ್ರ ಕ್ಯಾನ್ಸರ್ ಮೊದಲಾದವುಗಳಿಂದ ಬಳಲುತ್ತಿದ್ದರೆ, ಹೆಚ್ಚಿನ ಪ್ರಮಾಣದ ನೋವು ಅನುಭವಕ್ಕೆ ಬಾರದಂತೆ ನಿವಾರಕ (Pain Killer) ಮೊದಲಾದವುಗಳನ್ನು ಕೊಡುತ್ತಾರೆ. ಆ ಮೂಲಕ ಇನ್ನುಳಿದ ಸಮಯದಲ್ಲಿ ನೋವಿನ ಅನುಭವವಾಗದಂತೆ ನೋಡಿಕೊಳ್ಳುವುದೇ ಇಲ್ಲಿನ ಉದ್ದೇಶ. ಈ ರೀತಿ ಆದಷ್ಟು ಆರಾಮದ ನಿರ್ಗಮನಕ್ಕೆ ವ್ಯವಸ್ಥೆ.

ಒಬ್ಬ ವ್ಯಕ್ತಿ ಹಾಸ್ಪೈಸ್‌ಗೆ ತಾನಾಗಿಯೇ ಹೋಗಿ ಸೇರುವಂತಿಲ್ಲ. ಅದಕ್ಕೊಂದಿಷ್ಟು ನೀತಿ ನಿಯಮ ಇದೆ. ರೋಗ ಮಾರಣಾಂತಿಕವಾಗಿರಬೇಕು. ಗುಣವಾಗಿಸುವ ಸಾಧ್ಯತೆ ಮೀರಿರಬೇಕು. ರೋಗಿಯ ಬಳಿ ಹೆಚ್ಚೆಂದರೆ 6 ತಿಂಗಳಿಗಿಂತ ಕಡಿಮೆ ಸಮಯವಿರಬೇಕು. ವೈದ್ಯರು ಪ್ರಮಾಣೀಕರಿಸಿರಬೇಕು. ಕುಟುಂಬ ಒಪ್ಪಬೇಕು. ಈ ವ್ಯವಸ್ಥೆ ಭಾರತದಲ್ಲಿಯೂ ಹಲವೆಡೆ ಬಹಳ ಕಾಲದಿಂದ ಇದೆ, ಅಷ್ಟು ವ್ಯಾಪಕವಲ್ಲ.

ಕೆಲ ವರ್ಷಗಳ ಹಿಂದೆ ನನ್ನ ಪರಿಚಯದವರೊಬ್ಬರು ತಮ್ಮ ಬದುಕಿನ ಕೊನೆಯ ಹಂತದಲ್ಲಿದ್ದರು. ಹಾಸ್ಪೈಸ್ ಸೇರಿದ್ದರು. ಹೀಗೊಂದು ವ್ಯವಸ್ಥೆಯೂ ಇದೆ ಎಂದು ನನಗೆ ತಿಳಿದದ್ದೇ ಆಗ. ಉದ್ದದ ಆಸ್ಪತ್ರೆಯ ವಾರ್ಡ್. ಕೋಣೆಗಳು. ಅರೆ ತೆರೆದ ಬಾಗಿಲು. ಪ್ರತೀ ಕೋಣೆಯ ಬೆಡ್ಡಿನ ಮೇಲೂ ಹಾಸಿಗೆ ಹೊದೆದ ರೋಗಿಗಳು, ಬೀಪ್ ಬೀಪ್ ಶಬ್ದ, ಸಾವಿಗಾಗಿ ಕಾಯುತ್ತಿರುವ ರೋಗಿಗಳು. ಕೆಲವರಿಗೆ ಒಂದೆರಡು ತಿಂಗಳು, ಇನ್ನು ಕೆಲವರಿಗೆ ವಾರ, ದಿನ, ಒಪ್ಪತ್ತು. ಅವರಿಗೆ ಗೊತ್ತು–ಬದುಕು ಇನ್ನೇನು ಮುಗಿಯಲಿದೆ ಎಂದು. ಕುಟುಂಬದವರಿಗೂ ಗೊತ್ತು–ಅವರು ಮಾನಸಿಕವಾಗಿ ತಯಾರಾಗಿ ಆಗಿದೆ. ಹಾರ್ಟ್ ಅಟ್ಯಾಕ್ ಇತ್ಯಾದಿ ಕಾರಣಕ್ಕೆ ಹಠಾತ್ ಸಾಯುವುದು ಒಂದು ರೀತಿ–ಇನ್ನೊಂದು ಈ ಕಾಯುವ ಸಾವು.

ಸ್ಟೇಸಿ ಮಾರ್ಕಂ ನನಗೆ ಪರಿಚಯವಾಗಿದ್ದು ಶಿಕಾಗೋ ಸ್ಥಳೀಯ ಲಿಟ್ ಫೆಸ್ಟ್ (ಸಾಹಿತ್ಯೋತ್ಸವ) ನಲ್ಲಿ. ಸ್ಟೇಸಿ ಓದು ಬರವಣಿಗೆಯ ಹವ್ಯಾಸ ಬೆಳೆಸಿಕೊಂಡವಳು. ವೃತ್ತಿಯಲ್ಲಿ ಅವಳು ನರ್ಸ್. ಹಾಸ್ಪೈಸ್ ನರ್ಸ್. ಕೊನೆಯ ಹಂತದಲ್ಲಿರುವವರನ್ನು ನೋಡಿಕೊಳ್ಳುವ ನರ್ಸ್. ಆಕೆಯ ಇಪ್ಪತ್ತೈದು ವರ್ಷದ ಸರ್ವೀಸ್‌ನಲ್ಲಿ ಏನಿಲ್ಲವೆಂದರೂ ಮೂರರಿಂದ ನಾಲ್ಕು ಸಾವಿರ ರೋಗಿಗಳನ್ನು ಕೊನೆಯ ಹಂತದಲ್ಲಿ ನೋಡಿಕೊಂಡವಳು. ಅದರರ್ಥ ಅಷ್ಟೇ ಸಂಖ್ಯೆಯ ಸಾವು ಕಂಡವಳು. ಅಷ್ಟೊಂದು ಸಾವನ್ನು ಅಷ್ಟು ಹತ್ತಿರದಿಂದ ನೋಡುವುದು, ಅರಗಿಸಿ ಬದುಕು ಸಾಗಿಸುವುದು ಸುಲಭವಲ್ಲ. ಎಂಥವರಿಗೂ ವೈರಾಗ್ಯ ಬಂದುಬಿಡಬಹುದು. ಆಕೆ ಹಾಗಲ್ಲ, ನಾಳೆಯೇ ಇಲ್ಲದಂತೆ ಬದುಕುತ್ತಿರುವವಳು. ಅಷ್ಟು ಜೀವನವನ್ನು ಪ್ರೀತಿಸುವವಳು. ಬಾಯಿ ತೆಗೆದರೆ 'ಇನ್ ಭಗವದ್ಗೀತೆ..' ಎಂದೇ ಶುರು ಮಾಡುವ ಅವಳು ಹಿಂದೂ ಗ್ರಂಥಗಳ ಬಗ್ಗೆಯೂ ಸಾಕಷ್ಟು ಓದಿಕೊಂಡವಳು. ಅವಳು ಫೋನ್ ಮಾಡಿದಳೆಂದರೆ ಕನಿಷ್ಠ ಹತ್ತು ಕಥೆಯನ್ನಾದರೂ ಹೇಳಿಯೇ ಫೋನ್ ಇಡುವುದು. ಅವಳ ಎಲ್ಲ ಕಥೆಗಳೂ ಅವಳ ಹಾಸ್ಪೈಸ್ ಅನುಭವದವು. ಅವು ಸಾವಿನ ದವಡೆಯಲ್ಲಿರುವವರದಾದರೂ ಅವು ಹೇಳುವುದು ನಾವು ಆಯುಷ್ಯವಿರುವವರು ಹೇಗೆ ಬದುಕಬೇಕೆಂದು. ಅವುಗಳಲ್ಲಿ ಕೆಲವು ಕಥೆಗಳು 'ಬದುಕೆಂದರೆ ಏನೆಂದು' ಪ್ರಶ್ನಿಸಿದರೆ ಇನ್ನು ಕೆಲವು ನಮ್ಮ ಬದುಕಿನ ಆದ್ಯತೆಗಳನ್ನು ಪ್ರಶ್ನಿಸುತ್ತವೆ. ಯೋಚಿಸಿದಷ್ಟು ಪ್ರಶ್ನೆಗಳು ಹುಟ್ಟುತ್ತವೆ.

ಹಾಸ್ಪೈಸ್ ಬಗ್ಗೆ ಹೇಳಲು ಇನ್ನಷ್ಟಿದ್ದರೂ ಪೀಠಿಕೆಗೆ ಇಷ್ಟು ಸಾಕು. ಈಗ ಸ್ಟೇಸಿ ಹೇಳುವ ಧಾಟಿಯಲ್ಲಿಯೇ ಅವಳು ಹೇಳಿದ ಮರಣ ಶಯ್ಯೆಯ ಕೆಲವು ಕಥೆಗಳನ್ನು, ಘಟನೆಗಳನ್ನು ನಿಮ್ಮ ಮುಂದಿಡುತ್ತೇನೆ. ಇವುಗಳಲ್ಲಿ ಕೆಲವು ಆಕೆ ಕಣ್ಣಾರೆ ಕಂಡದ್ದು, ಇನ್ನು ಕೆಲವು ಆಕೆಯ ಕರ್ತವ್ಯ ವಲಯದಲ್ಲಿ ನಡೆದವು, ಕೇಳಿ ತಿಳಿದವು. ಈ ಕಥೆ, ಘಟನೆಗಳ ವಿಶ್ಲೇಷಣೆ, ನೀತಿ ಅವೆಲ್ಲದರ ತಂಟೆಗೆ ನಾನು ಹೋಗುವುದಿಲ್ಲ. ಒಂದೊಂದು ಪ್ಯಾರಾ–ಒಂದೊಂದು ಘಟನೆ.

ಅವರೊಬ್ಬ ಇಂಡಿಯನ್ ಅಮೆರಿಕನ್ ಪೇಶಂಟ್. ಭಾರತೀಯ ಮೂಲದವರು. ಹೆಸರು ಮಿಸ್ಟರ್ ದಾಸ್. ಅವರದು ಭಾರತದಲ್ಲಿ ಕೃಷಿ ಕುಟುಂಬವಂತೆ. ಸಣಕಲು ದೇಹ. ಚಾರ್ಲಿ ಚಾಪ್ಲಿನ್ ಮೀಸೆ. ಅವರು ಹಾಸ್ಪೈಸ್ ಸೇರುವಾಗ ಬಾಕಿ ಇದ್ದದ್ದು ಎರಡು ತಿಂಗಳ ಸಮಯ. ದಾಸ್ ಅವರದ್ದು ನಿತ್ಯ ಒಂದು ಕೋರಿಕೆಯಿರುತ್ತಿತ್ತು. ಪ್ರತಿ ದಿನ ಬೆಳಗ್ಗೆ ಅವರನ್ನು ಆಸ್ಪತ್ರೆಯ ಚಿಕ್ಕ ಗಾರ್ಡನ್‌ಗೆ ಕರೆದು ಕೊಂಡು ಹೋಗಬೇಕಿತ್ತು. ಅವರು ಅಲ್ಲಿ ಮಣ್ಣನ್ನು ಮುಟ್ಟುತ್ತಿದ್ದರು, ಕಳೆಯನ್ನು ಕೀಳುತ್ತಿದ್ದರು. ಕೈಲಾಗದಿದ್ದರೂ



ಕುಳಿತ ವೀಲ್ ಚೇರ್‌ನಿಂದಲೇ ಬಾಗಿ ಏನೋ ಒಂದು ಚಿಕ್ಕ ಗಾರ್ಡನ್ ಕೆಲಸ ಮಾಡುತ್ತಿದ್ದರು. ಅವರಿಗೆ ಒಮ್ಮೆ ಕೈ ಮಣ್ಣು ಮಾಡಿಕೊಂಡರೆ ಅದೇನೋ ಸಮಾಧಾನ. ಶಿಕಾಗೋ ಚಳಿ ಹೆಚ್ಚಿದ್ದರೆ ಅವರನ್ನು ಹೊರಗೆ ಕರೆದೊಯ್ಯಲು ಅನುಮತಿಯಿರುತ್ತಿರಲಿಲ್ಲ, ಆ ದಿನ ಅವರ ಚಟಪಡಿಕೆ ಹೇಳತೀರದು. ಸಾಯುತ್ತಿದ್ದೇನೆ ಎಂಬುದು ಅವರನ್ನು ಬಾಧಿಸಿದ್ದಕ್ಕಿಂತ ಒಂದು ದಿನ ಮಣ್ಣು ಮುಟ್ಟಲಾಗಲಿಲ್ಲವಲ್ಲ ಎಂಬ ಚಟಪಡಿಕೆಯೇ ಹೆಚ್ಚಿರುತ್ತಿತ್ತು. ದಿನ ಕಳೆದಂತೆ ಅವರ ಆರೋಗ್ಯ ಇನ್ನಷ್ಟು ಹದಗೆಟ್ಟಿತು. ಅವರಿಗಿದ್ದದ್ದು ಕ್ಯಾನ್ಸರ್. ಆದರೆ ಅವರನ್ನು ಗಾರ್ಡನ್‌ಗೆ ಕರೆದುಕೊಂಡು ಹೋಗುವುದು ಮಾತ್ರ ತಪ್ಪಿಸುವಂತಿರಲಿಲ್ಲ. ಈಗ ದಾಸ್ ಬಳಿ ಹೆಚ್ಚೆಂದರೆ ಎರಡರಿಂದ ಮೂರು ವಾರದ ಆಯಸ್ಸು ಬಾಕಿ ಇತ್ತು. ಮಿಸ್ಟರ್ ದಾಸ್ ಅದೊಂದು ದಿನ ಬೆಳಗ್ಗೆ ಎದ್ದಾಕ್ಷಣ ತಾನು ಗಾರ್ಡನ್‌ನಲ್ಲಿ 'ಮಾರಿಗೋಲ್ಡ್' ಗಿಡವನ್ನು ನೆಡಬೇಕೆಂದು ಆಸೆ ಮುಂದಿಟ್ಟರು. ಅವರು ಹಾಸ್ಪೈಸ್‌ಗೆ ಬಂದ ಒಂದು ತಿಂಗಳಲ್ಲೇ ಗಾರ್ಡನ್‌ನಲ್ಲಿ ತುಂಬಾ ಸುಮಾರು ಇಪ್ಪತ್ತು ಗಿಡ ನೆಟ್ಟಿದ್ದರು. ಕೊನೆಯ ಆಸೆ ಇಂದು ಮಾರಿಗೋಲ್ಡ್ ವ್ಯವಸ್ಥೆಯನ್ನೂ ಮಾಡಲಾಯಿತು. ದಾಸ್ ಗಾಲಿ ಚಕ್ರದಲ್ಲಿಯೇ ಕೂತು ಉಳಿದವರ ಸಹಾಯದಿಂದ ಬೀಜ ಬಿತ್ತಿದರು. ತನ್ನ ಕುಡಿಯುವ ನೀರಿನ ಬಾಟಲಿಯಿಂದಲೇ ಸ್ವಲ್ಪ ನೀರನ್ನು ಮಣ್ಣ ಮೇಲೆ ಸಿಂಪಡಿಸಿದರು. ನಂತರ ನಾವಿಬ್ಬರೂ ಒಳಗಡೆ ಬಂದೆವು. ನನಗೆ ದಾಸ್ ಅವರಲ್ಲಿ ಸಲುಗೆಯಿತ್ತು. ಅವರೂ ತಮಾಷೆ ಮಾಡಿಕೊಂಡಿರುವವರೇ ಆಗಿದ್ದರು. ಆ ದಿನ ಅವರಲ್ಲಿ ಮಿಸ್ಟರ್ ದಾಸ್, ನೀವು ಇನ್ನು ಹೆಚ್ಚೆಂದರೆ ಎರಡು ಅಥವಾ ಮೂರು ವಾರ ಬದುಕಬಹುದು. ಅದು ನಿಮಗೂ ಗೊತ್ತು, ಎಲ್ಲರಿಗೂ ಗೊತ್ತು. ಆದರೂ ಮಾರಿಗೋಲ್ಡ್ ಬೀಜ ನೆಟ್ಟದ್ದೇಕೆ? ಅದು ಹುಟ್ಟಿ ಹೂವಾಗಲು ಕನಿಷ್ಠ ಎರಡು ತಿಂಗಳಾದರೂ ಬೇಕು. ಸುಮ್ಮನೆ ಬೇರಿನ್ನೇನೋ ಸಸಿ ನೆದಬಹುದಿತ್ತಲ್ಲ!. ದಾಸ್ ಬಹಳ ಸಮಾಧಾನಿ, ಪಿಸು ಮಾತಿನಲ್ಲಿ We always plant in faith. Never just for today. ನಾವು ಯಾವತ್ತೂ ನಂಬಿಕೆಯಿಟ್ಟು ಸಸಿ ನೆಡುತ್ತೇವೆ. ಇವತ್ತಿಗಾಗಿ ಯಾರೂ ಸಸಿ ನೆಡುವುದಿಲ್ಲ. ಇದಾದ ಎರಡು ವಾರದಲ್ಲಿ ದಾಸ್ ತೀರಿಕೊಂಡರು. ಕೊನೆಗೊಂದು ದಿನ ಅವರು ನೆಟ್ಟ ಮಾರಿಗೋಲ್ಡ್ ಬೆಳೆದು ಹೂ ಬಿಟ್ಟಿತು. ನಂತರ ನಾವೆಲ್ಲ ಸೇರಿ Planted for tomorrow. & Mr Das ಎಂದು ಒಂದು ಒಂದು ಚಿಕ್ಕ ಫಲಕ ಹಾಕಿದೆವು.

ಮಿಸ್ಟರ್ ಎಲಿಸನ್‌ಗೆ 84 ವರ್ಷ. ಎಲಿಸನ್ ವಿಶ್ರಾಂತಿ ಪಡೆಯುವಾಗಲೆಲ್ಲ ಕೈಯಲ್ಲಿ ಏನೋ ಒಂದನ್ನು ತಿರುಗಿಸುತ್ತಿದ್ದ. ಆತನ ಹಾವಭಾವ ವಿಚಿತ್ರವಿತ್ತು. ಮೊದಲು ನಮಗಿದು ತಿಳಿಯಲಿಲ್ಲ, ಅವನ ಮಗ ಬಂದು ಹೇಳಿದ ಮೇಲೆಯೇ ಆತ ಕೈಯಲ್ಲೇ ಅಗೋಚರ ವಾಚ್ ರಿಪೇರಿ ಮಾಡುತ್ತಿದ್ದಾನೆಂದು ತಿಳಿದದ್ದು. ಆತ ನಿವೃತ್ತ ವಾಚ್ ಮೇಕರ್. ಕೈಗಡಿಯಾರ ತಯಾರಿಸುತ್ತಿದ್ದವ. ಅವನ ಮಗ ನಿತ್ಯ ಬೆಳಗ್ಗೆ ಎಲಿಸನ್ ಅವರನ್ನು ನೋಡಲು ಬರುತ್ತಿದ್ದ. ಅದೊಂದು ದಿನ ಎಲಿಸನ್ ಮಗ ಅರ್ಧಗಂಟೆ ತಡವಾಗಿ ಬಂದ. ಒಳ ಬಂದ ಮಗನನ್ನು ಕಂಡು ಎಲಿಸನ್ ಕೋಪಿತನಾಗಿದ್ದ. 'ಸಮಯ ಎನ್ನುವುದು ಎಷ್ಟು ಮುಖ್ಯ ಗೊತ್ತಾ ನಿನಗೆ? ಎಲ್ಲಿ ನಿನ್ನ ವಾಚ್ ಕೊಡು' ಎಂದು ತೆಗೆದುಕೊಂಡ. ಕೈಗಡಿಯಾರದ ಸಮಯವನ್ನು ಐದು ನಿಮಿಷ ಮುಂದೆ ಮಾಡಿದ. ಮತ್ತು ಮಗನಿಗೆ ವಾಚ್ ಮರಳಿಸುತ್ತ 'ನೀನು ಇನ್ನುಮೇಲೆ ಎಲ್ಲಿಗೂ ತಡವಾಗಿ ಹೋಗುವುದಿಲ್ಲ' ಎಂದ. ಎಲಿಸನ್ ಅದೇ ದಿನ ಸಂಜೆ ಕೊನೆಯುಸಿರೆಳೆದ. ಅವನು ತೀರಿಕೊಂಡ ಐದು ನಿಮಿಷದ ನಂತರ ಅವನ ವಾಚ್ ಕೂಡ ನಿಂತಿತ್ತು. ಅದನ್ನು ಕಂಡ ನಂತರ ಟೈಮ್ ಆಫ್ ಡೆತ್–ಮರಣದ ಸಮಯ ಬರೆಯುವಾಗ ನಮಗೂ ದಿಗಿಲಾಯಿತು. ಜೂನಿಯರ್ ನರ್ಸ್‌ಗಳು ಎರಡು ದಿನ ಎಲಿಸನ್ ಕೊನೆಯುಸಿರೆಳೆದ ರೂಮಿಗೆ ಹೋಗಲಿಲ್ಲ, ಏಕೆಂದರೆ ಅವನು ತೀರಿಕೊಂಡ ಕೆಲವು ಗಂಟೆಗಳಲ್ಲಿ ಆ ರೂಮಿನಲ್ಲಿಟ್ಟಿದ್ದ ಗಡಿಯಾರವೂ ನಿಂತಿತ್ತು.

ಅವಳ ಹೆಸರು ಮೋರ್ಜರಿ. ವಯಸ್ಸು 79. ಒಂದು ಕಾಲದ, ಶಿಕಾಗೋದ ಜನಪ್ರಿಯ ಜಾಸ್ (ಒಂದು ಪಾಶ್ಚಾತ್ಯ ಸಂಗೀತ ಪ್ರಕಾರ) ಹಾಡುಗಾರ್ತಿ. ನಾನು ಆ ದಿನ ಮೋರ್ಜರಿಗೆ ಸ್ನಾನ ಮಾಡಿಸುತ್ತಿದ್ದೆ. ಮೋರ್ಜರಿ ನನ್ನನ್ನೇ ದಿಟ್ಟಿಸುತ್ತ 'ನಿನಗೆ ಗೊತ್ತಾ, ನನ್ನನ್ನು ಜನರು 'women in red' ಎಂದೇ ಕರೆಯುತ್ತಿದ್ದರು. ನಾನು ಜಾಸ್ ಹಾಡಲು ವೇದಿಕೆಗೇರುವಾಗ ಬಟ್ಟೆ, ಲಿಪ್‌ಸ್ಟಿಕ್ ಎಲ್ಲವೂ ಕೆಂಪು ಇರುತ್ತಿತ್ತು. ಅವಳ ಸಣಕಲು ಕೃಶ ದೇಹವನ್ನು ಸ್ಪಾಂಜ್‌ನಲ್ಲಿ ಸ್ವಚ್ಛ ಮಾಡುತ್ತ ನಾನು 'ಹೌದಾ' ಎಂದು ಸುಮ್ಮನಾದೆ. ಆ ದಿನ ಅವಳು ಇನ್ನೇನೂ ಮಾತನಾಡಲಿಲ್ಲ, ಔಷಧಿ ಕೊಟ್ಟರೆ ಸ್ವೀಕರಿಸಲಿಲ್ಲ. ವಿಷಯ ಏನೆಂದು ಕೇಳಲಾಗಿ 'ನನಗೊಂದು ಕೆಂಪು ಲಿಪ್‌ಸ್ಟಿಕ್ ಬೇಕು. ಕೊಟ್ಟರೆ ನೀವು ಹೇಳಿದ್ದು ಕೇಳುತ್ತೇನೆ' ಎಂದಳು. ಅಯ್ಯೋ ದೇವರೇ ಎಂದು ನಾವೆಲ್ಲ ನಕ್ಕೆವು. ಮತ್ತು ಅವಳಿಗೊಂದು ಕೆಂಪು ಲಿಪ್‌ಸ್ಟಿಕ್ ತಂದುಕೊಟ್ಟೆವು. ಅದನ್ನು ಕಂಡದ್ದೇ ಎಲ್ಲಿಲ್ಲದ ಉತ್ಸಾಹದಲ್ಲಿ ಕನ್ನಡಿ ತರಿಸಿ ಲಿಪ್‌ಸ್ಟಿಕ್ ಹಚ್ಚಿಕೊಂಡಳು. ನನ್ನತ್ತ ನೋಡುತ್ತ 'Now I'm ready for the curtain call.' 'ಪರದೆ ಸರಿಸಬಹುದು, ನಾನು ತಯಾರಾಗಿದ್ದೇನೆ' ಎಂದಳು. ಅದೇ ದಿನ ಮಧ್ಯ ರಾತ್ರಿ ಆಕೆ ಅಸ್ತಂಗತವಾದಳು. ಲಿಪ್‌ಸ್ಟಿಕ್ ಇನ್ನೂ ಹಾಗೆಯೇ ಇತ್ತು. Women in red!

ಡೇವಿಡ್‌ನ ಸ್ಥಿತಿ ಕೈಮೀರಿತ್ತು. ಅವನಿಗಿದ್ದದ್ದು ಇನ್ನು ಕೇವಲ ಎರಡು ಮೂರು ದಿನ. ಅದು ಡೇವಿಡ್‌ಗೂ ತಿಳಿದಿತ್ತು. ಡೇವಿಡ್ ನನ್ನನ್ನು ಕರೆದ ಮತ್ತು ಅವನ ತಮ್ಮ ಕ್ರಿಸ್‌ಗೆ ಫೋನ್ ಮಾಡಿಕೊಡಲು ಹೇಳಿದ. ಡೇವಿಡ್ ತಮ್ಮನ ಹತ್ತಿರ ಹದಿನೇಳು ವರ್ಷದಿಂದ ಮಾತಾಡಿರಲಿಲ್ಲವಂತೆ. ಅದೇನೋ ಜಗಳವಾಗಿತ್ತು. ಫೋನ್ ಲೌಡ್ ಸ್ಪೀಕರ್‌ನಲ್ಲಿತ್ತು. ಅತ್ತಕಡೆಯಿಂದ ತಮ್ಮ ಫೋನ್ ಎತ್ತಿದವನೇ ಐ ಆಮ್ ಸಾರಿ ಎಂದು ಗದ್ಗದಿತನಾದ. ಡೇವಿಡ್ ಬಾಯಿಂದ ಮಾತೇ ಹೊರಡಲಿಲ್ಲ. ಇಬ್ಬರೂ ಬಿಕ್ಕಳಿಸಿ ಅತ್ತರು. 'ತಮ್ಮ ನಾಳೆಯೇ ನಿನ್ನನ್ನು ಬಂದು ನೋಡುತ್ತೇನೆ' ಎಂದ. ಡೇವಿಡ್ ಅದೇ ದಿನ ರಾತ್ರಿ ಕೊನೆಯುಸಿರೆಳೆದ. ಫೋನ್ ಅವನ ಕೈಯಲ್ಲೇ ಇತ್ತು.

ಮಿಸ್ ರೊಮೆರೊ ಹಾಸ್ಪೈಸ್ ಬೆಡ್ಡಿನ ಪಕ್ಕದಲ್ಲಿ ಒಂದು ಖಾಲಿ ಕುರ್ಚಿ ಇಟ್ಟುಕೊಂಡಿದ್ದಳು. ಯಾರೇ ಬಂದರೂ ಆ ಕುರ್ಚಿಯ ಮೇಲೆ ಕೂರುವಂತಿಲ್ಲ, ಅದು ಅವಳ ಗಂಡನ ಕುರ್ಚಿ. ಆದರೆ ಅವನು ಸತ್ತು ಹದಿನೈದು ವರ್ಷವಾಗಿತ್ತು. ಅವಳೇನು ಅರಳು–ಮರಳು ಹಿಡಿದವಳಲ್ಲ, ಅವಳೇ ಒಂದು ದಿನ, 'ಸ್ಟೇಸಿ, ನನ್ನ ಗಂಡ ಸತ್ತು ಹೋದದ್ದು ನನಗೆ ಗೊತ್ತು. ನಾನು ಯಾವುದೇ ಭ್ರಮೆಯಲ್ಲಿಲ್ಲ. ಹುಚ್ಚು ಹಿಡಿದಿಲ್ಲ. ನಾವಿಬ್ಬರೂ ಪರಸ್ಪರ ಅತ್ಯಂತ ಪ್ರೀತಿಯಿಂದ ಬದುಕಿದೆವು. ಆತನ ಸಾಂಗತ್ಯ–ಅದೊಂದು ನೆನಪಾಗಿ ಇಂದಿಗೂ ಹಾಗೆಯೇ ಇದೆ. ಆತನ ಜತೆಯಲ್ಲಿದ್ದ ದಿನಗಳನ್ನು ನೆನೆಸಿಕೊಂಡಾಗಲೆಲ್ಲ ನಾವೆಷ್ಟು ಖುಷಿಯಿಂದ ಬದುಕಿದೆವು ಎಂದು ಕುರುಬುತ್ತೇನೆ. ಏನು ಗೊತ್ತಾ, ನಾವು ಆಗ ಆ ಬದುಕನ್ನು ಬದುಕುತ್ತಿದ್ದಾಗ ಅದರ ಮಹತ್ವವೇ ತಿಳಿಯಲಿಲ್ಲ. ಆ ಸಮಯ ಅಷ್ಟು ಸುಂದರವಾಗಿತ್ತು ಎಂದು ಅನಿಸಿರಲೇ ಇಲ್ಲ. ಈಗ ಕುರ್ಚಿಯಲ್ಲಿ ಅವನಿಲ್ಲ, ಆದರೆ ಅವನ ನೆನಪಿದೆ. ಈಗ ನಾನು ಅದೆಲ್ಲವನ್ನೂ ನೆನಪುಮಾಡಿಕೊಳ್ಳುತ್ತೇವೆ. ಕುಟುಂಬ ಎಂದರೆ ಎಲ್ಲರೂ ಜತೆಯಲ್ಲಿಯೇ ಇರಬೇಕೆಂದಿಲ್ಲ. ದೈಹಿಕವಾಗಿ ದೂರವಿದ್ದರೂ, ದೂರವಾಗಿ ಹೋದರೂ ಕುಟುಂಬದ ಅನುಭವವಾಗುತ್ತಿರಬೇಕು!'. ಆ ದಿನ ಅವಳಿಗೆ ಏನನಿಸಿತೋ ಏನೋ, ಕುರ್ಚಿಯನ್ನು ನೋಡಿ 'ಸರಿ ಹಾಗಾದರೆ, ಇವತ್ತು ಹೊರಡೋಣ' ಎಂದಳು. ಅವಳು ಮತ್ತೆ ಮಾತಾಡಲೇ ಇಲ್ಲ.

ಹಾಸ್ಪೈಸ್‌ನಲ್ಲಿರುವ ರೋಗಿಗಳನ್ನು ನೋಡಲು ಬರುವವರಿಗೆ ಏನು ಮಾತಾಡಬೇಕು ಎಂಬ ಪರಿಜ್ಞಾನವಿರುವುದಿಲ್ಲ. ಖುದ್ದು ಕುಟುಂಬದವರಿಗೂ ರೋಗಿಯ ಜತೆ ಏನು ಮಾತನಾಡಬೇಕು ಎಂದು ತಿಳಿಯುವುದಿಲ್ಲ. ಮಾತನಾಡಿದರೂ ಹೆಚ್ಚಿನ ರೋಗಿಗಳಿಗೆ ಉತ್ತರಿಸುವ ಸ್ಥಿತಿಯಲ್ಲಿರುವುದಿಲ್ಲ. ಮಾತನ್ನು ಕೇಳಿಸಿಕೊಂಡು ಕೈ–ಬಾಯ್ ಸನ್ನೆಯಲ್ಲೇ ಉತ್ತರಿಸುತ್ತಾರೆ. ಬಹುತೇಕರಿಗೆ ಮಾತು ಬೇಡವಾಗಿರುತ್ತದೆ. ಹಾಸ್ಪೈಸ್‌ಗೆ ದಾಖಲಾದ ಮಾರ್ಕ್ ಜೆನ್‌ಗೆ ಹಾಸ್ಪೈಸ್ ವ್ಯವಸ್ಥೆಯ ಬಗ್ಗೆ ಸ್ಪಷ್ಟವಾಗಿ ಎಲ್ಲವೂ ತಿಳಿದಿತ್ತು. ಏಕೆಂದರೆ ಆತ ಖುದ್ದು ವೈದ್ಯನಾಗಿದ್ದವ. ಆತ ಹಾಸ್ಪೈಸ್ ಸೇರಿದ ಮೊದಲನೇ ದಿನವೇ ಒಂದು ವಿಚಿತ್ರ ವಿನಂತಿ ಮಾಡಿಕೊಂಡ. 'ನನ್ನನು ಯಾರೇ ನೋಡಲು ಬರಬಹುದು, ಆದರೆ ಅವರು ನನ್ನ ಬಳಿ ಮಾತನಾಡುವಂತಿಲ್ಲ. ನನ್ನೆದುರು ಬಂದು ಅಳುವಂತಿಲ್ಲ. ನನ್ನ ಕೈ ಹಿಡಿದು ಎಷ್ಟು ಹೊತ್ತು ಬೇಕಾದರೂ ಇರಬಹುದು.' ಇದು ಅವನ ಷರತ್ತು. ನಾವು ಮೊದಮೊದಲು ಅವನು ತಮಾಷೆ ಮಾಡುತ್ತಿದ್ದಾನೆ ಎಂದುಕೊಂಡೆವು. ಆದರೆ ಬಂದ ಒಂದಿಬ್ಬರು ಸಂಬಂಧಿಕರು ಅವನ ಬಳಿ ಮಾತನಾಡಿದ್ದಕ್ಕೆ ಆತ ನಖಶಿಕಾಂತ ಕೋಪಗೊಂಡು ನಮ್ಮೆಲ್ಲರ ಮೇಲೆ ಕೂಗಾಡಿದ್ದ. ಸುಮಾರು ಎರಡೂವರೆ ತಿಂಗಳು ನೋಡಲು ಬಂದ ಯಾರ ಬಳಿಯೂ ಆತ ಮಾತನಾಡಲೂ ಇಲ್ಲ, ಅವರಿಗೆ ಮಾತಾಡಲು ಅನುಮತಿಯನ್ನೂ ಕೊಡಲಿಲ್ಲ. ಬಂದವರೆಲ್ಲರೂ ಅವನ ಕೈ ಹಿಡಿದು ಮೌನವಾಗಿದ್ದೇ ಹೋಗುತ್ತಿದ್ದರು. ಆದರೆ ನಾವು ದಾದಿಯರು ಅವನು ಜತೆ ಮಾತನಾಡುತ್ತಿದ್ದದ್ದು ಎಷ್ಟು ಬೇಕೋ ಅಷ್ಟೇ. ಆ ದಿನ ಅವನು ಕುಟುಂಬದವರನ್ನೆಲ್ಲ ಆಸ್ಪತ್ರೆಗೆ ಕರೆಸಿಕೊಂಡ. ಎಲ್ಲರೂ ಅವನ ಬೆಡ್ ಸುತ್ತಲೂ ಕೂತರು. ಯಾರದೂ ಮಾತಿಲ್ಲ. ಅವನು ಸುಮಾರು ಮೂರು ತಿಂಗಳ ನಂತರ ಕುಟುಂಬದವರೆದುರು ಮೊದಲ ಬಾರಿ ಬಾಯಿ ತೆಗೆದ, ಮಾತನಾಡಿದ. ಅವನು ಆ ಕೊನೆಯ ದಿನ ಹೇಳಿದ್ದು ಇಷ್ಟು ನಾವು ಆಡುವ ಯಾವ ಮಾತಿಗೂ ಯಾವುದೇ ಅರ್ಥವಿಲ್ಲ, ಮಾತುಗಳೆಂದರೆ ಯೋಚನೆಗಳು. ಯಾವುದೇ ಯೋಚನೆಗೂ ಅರ್ಥವಿರುವುದಿಲ್ಲ, ಬದುಕೆಂದರೆ ಕುಟುಂಬದ, ಇಷ್ಟೇತರರ ಸಾಮೀಪ್ಯ. ನೀವು ಹೇಳಬೇಕಾದದ್ದು ಮಾತಿನಲ್ಲಿಯೇ ಹೇಳಬೇಕೆಂದಿಲ್ಲ. ನೀವು ಇಲ್ಲಿದ್ದೀರಿ ಎಂಬುದರ ಮುಂದೆ ನಿಮ್ಮ ಯಾವುದೇ ಮಾತು ಅರ್ಥಹೀನ. ಮೌನಕ್ಕಿರುವ ಅರ್ಥ ಮಾತಿಗಿಲ್ಲ. ಈ ಲೇಖನವನ್ನು ಪದಮಿತಿಯಿಂದಾಗಿ ಇಷ್ಟಕ್ಕೇ ನಿಲ್ಲಿಸುತ್ತಿದ್ದೇನೆ. ಇನ್ನೊಮ್ಮೆ ಯಾವತ್ತಾದರೂ ಸ್ಟೇಸಿ ಹೇಳಿದ ಇನ್ನೊಂದಿಷ್ಟು ಕಥೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ.

ವಿಕಸಿತ ಭಾರತಕ್ಕಾಗಿ ಪ್ರತಿ ಹೆಜ್ಜೆಯೂ ಐತಿಹಾಸಿಕ, ಸಂಭ್ರಮ ಸ್ವಾಭಾವಿಕ!

'ಆಪರೇಷನ್ ಸಿಂದೂರ'ದ ಬಳಿಕ ಭಾರತದ ಸೇನಾಪಡೆಯ ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಶಕ್ತಿ ಪ್ರದರ್ಶನ ಜಗತ್ತನ್ನೇ ಬೆರಗುಗೊಳಿಸಿದೆ. ಪಾಕಿಸ್ತಾನದ ಅಣ್ವಸ್ತ್ರ ಬೆದರಿಕೆಯ ತಂತ್ರ ಮೊದಲ ಬಾರಿಗೆ ಮಣ್ಣುಮುಕ್ಕಿದೆ. ಇದೀಗ 4ನೇ ಅತಿ ದೊಡ್ಡ ಆರ್ಥಿಕತೆಯಾಗುವುದರೊಂದಿಗೆ, ಆರ್ಥಿಕವಾಗಿಯೂ ಭಾರತ–ಪಾಕಿಸ್ತಾನ ನಡುವೆ ಹೋಲಿಕೆಯೇ ಸಲ್ಲದು ಎಂಬುದು ಸಾಬೀತಾಗಿದೆ.

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಎರಡನೇ ಮಹಾಯುದ್ಧದಲ್ಲಿ ಸರ್ವನಾಶವಾಗಿದ್ದ ಪುಟಾಣಿ ಜಪಾನ್ ಫೀನಿಕ್ಸ್‌ನಂತೆ ಬೂದಿಯಿಂದ ಮೇಲೆದ್ದು ಕೇವಲ ಹತ್ತಿಪ್ಪತ್ತು ವರ್ಷದಲ್ಲೇ ಜಗತ್ತಿನ ಶ್ರೀಮಂತ ರಾಷ್ಟ್ರವಾಗಿ ತಲೆ ಎತ್ತಿ ನಿಂತಿತ್ತು. ಆದರೆ ಸಾವಿರಾರು ವರ್ಷಗಳ ಮಂದಗತಿಯ ಬಳಿಕ ಭಾರತ ಆರ್ಥಿಕವಾಗಿಯೂ ವಿಕಸಿತ ಅಥವಾ ಅಭಿವೃದ್ಧಿ ಹೊಂದಿದ ದೇಶವಾಗಲು ಹೆಜ್ಜೆಗಳನ್ನಿಡುತ್ತಿರುವುದು ಐತಿಹಾಸಿಕ ಮುನ್ನಡೆಯಾಗಿದೆ. ಈ ಹಾದಿಯಲ್ಲಿ ಅದು ಬ್ರಿಟನ್, ಜಪಾನ್‌ನಂತಹ ಸಣ್ಣಪುಟ್ಟ ದೇಶಗಳನ್ನು ಜಿಡಿಪಿ ಲೆಕ್ಕದಲ್ಲಿ ಹಿಂದಿಕ್ಕಿರುವುದು ಹಾಗೂ ಇನ್ನೊಂದು ವರ್ಷದಲ್ಲಿ ಜರ್ಮನಿಯನ್ನೂ ದಾಟಿ ಮೂರನೇ ಅತಿ ದೊಡ್ಡ ಆರ್ಥಿಕ ಶಕ್ತಿಯಾಗುವುದು ಸ್ವಾಭಾವಿಕ. ಇದರಿಂದ ಜಪಾನಿನ ಕೀರ್ತಿಗೆ ಅವಮಾನವಾಗುವಂಥದ್ದು ಏನೂ ಇಲ್ಲ. ಭಾರತ ಎಂದೋ ಈ ಮೈಲಿಗಲ್ಲನ್ನು ದಾಟಬೇಕಿತ್ತು. ದುರದೃಷ್ಟವಶಾತ್ ಸಾಧ್ಯವಾಗಿರಲಿಲ್ಲ. ಆದ್ದರಿಂದ ಈಗಿನ ಬೆಳವಣಿಗೆಯು ನಿರ್ಣಾಯಕ ಘಟ್ಟದ ಮಿಂಚಿನೋಟದಂತೆ ಕಾಣಿಸುತ್ತಿದೆ. ಆದರೆ ಭಾರತದ ಗತವೈಭವದ ನೈಜ ಇತಿಹಾಸ ಬಲ್ಲವರು ಮಾತ್ರ ಇದನ್ನು ಗುರುತಿಸಬಲ್ಲರು. ಏಕೆಂದರೆ ಹನ್ನೊಂದನೇ ಶತಮಾನಕ್ಕೆ ಮೊದಲು ಭಾರತ ಸುವರ್ಣ ಯುಗದಲ್ಲಿತ್ತು!

'Fragile Five''! ಬ್ರೆಜಿಲ್, ಭಾರತ, ಇಂಡೊನೇಷ್ಯಾ, ದಕ್ಷಿಣ ಆಫ್ರಿಕಾ, ಟರ್ಕಿ–ಈ ಐದು ರಾಷ್ಟ್ರಗಳಿಗೆ ಕೇವಲ 11 ವರ್ಷಗಳ ಹಿಂದೆ ಹಚ್ಚಿದ್ದ ಕಳಂಕದ ಹಣೆ ಪಟ್ಟಿಯಿದು. ಅದರಲ್ಲೂ ಅಂತಾರಾಷ್ಟ್ರೀಯ ಹೂಡಿಕೆದಾರರ ವಲಯದಲ್ಲಿ ಭಾರತದ ಮಾನ ಹರಾಜಿಗಿಡಲು ಇಂತದ್ದೊಂದು ಫರ್ಸ್ಟ್ ಕ್ಲಾಸ್ ಪಿತೂರಿ ನಡೆದಿತ್ತು.

2013–14ರಲ್ಲಿ ಅಮೆರಿಕದ ಹಣಕಾಸು ಸಂಸ್ಥೆಗಳು ಕಾರ್ಪೊರೇಟ್ ವಲಯದ ಕಂಪನಿಗಳಿಗೆ, 'ಭಾರತ ಸೇರಿದಂತೆ ಐದು ದೇಶಗಳಲ್ಲಿ ಯಾವ ಕಾರಣಕ್ಕೂ ಹೂಡಿಕೆ ಮಾಡಬೇಡಿ, ಅಲ್ಲಿ ನೀವು ಹಾಕುವ ಅಸಲು ವಾಪಸ್ ಬರೋ ಗ್ಯಾರಂಟಿ ಇಲ್ಲ, ಇನ್ನು ಉಳಿದ ರಿಸ್ಕ್ ಎಲ್ಲ ನಿಮ್ಮದೇ' ಎಂದು ಪೀಪಿ ಊದುತ್ತಿದ್ದವು! 'ಫ್ರಾಜೈಲ್ ಫೈವ್' ಎನ್ನುವ ಕಳಂಕಕಾರಿ ಘೋಷಣೆಯನ್ನು ಅಮೆರಿಕದ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ ಮೋರ್ಗಾನ್ ಸ್ಟ್ಯಾನ್ಲಿ ಮಾನ ಮರ್ಯಾದೆ ಇಲ್ಲದಂತೆ ಪ್ರಕಟಿಸಿತ್ತು.

ಆದರೆ ಈಗ ಖುದ್ದಾಗಿ ಅಮೆರಿಕದ ಅಧ್ಯಕ್ಷ ಸ್ಥಾನದಲ್ಲಿರುವ ಡೊನಾಲ್ಡ್ ಟ್ರಂಪ್ ಅವರೇ, ಬೇಡ ಬೇಡವೆಂದರೂ, 25 ಪರ್ಸೆಂಟ್ ಹೆಚ್ಚುವರಿ ಟ್ಯಾಕ್ಸ್ ಹಾಕುತ್ತೇನೆ ಎಂದು ಜಗ್ಗಿದರೂ, ಡೋಂಟ್ ಕೇರ್ ಎನ್ನದೆ ಭಾರತದಲ್ಲಿ ತನ್ನ ಐಫೋನ್‌ಗಳ ಉತ್ಪಾದನೆಯನ್ನು ಮುಂದುವರಿಸುವುದಾಗಿ ಆಪಲ್‌ನಂತಹ ದಿಗ್ಗಜ ಕಂಪನಿ ಘಂಟಾಘೋಷವಾಗಿ ಸಾರುತ್ತಿದೆ! ಬೆಂಗಳೂರಿನ ದೇವನಹಳ್ಳಿಯ ಫಾಕ್ಸ್‌ಕಾನ್ ಘಟಕದಲ್ಲಿ ತಯಾರಾಗುವ ಐಫೋನ್‌ಗಳು ಅಮೆರಿಕದ ಮಾರುಕಟ್ಟೆಗೆ ಇದೇ ಜೂನ್‌ನಿಂದ ರಫ್ತಾಗಲು ರೆಡಿಯಾಗಿವೆ! ಭಾರತ ಕಳೆದೊಂದು ದಶಕದಲ್ಲಿ ಎಷ್ಟೊಂದು ಪರಿವರ್ತನಶೀಲವಾಗಿದೆ ಎಂಬುದಕ್ಕೆ ಇದಕ್ಕಿಂತ ತಾಜಾ ಉದಾಹರಣೆ ಬೇಕೆ?

ಭಾರತ ನಾಲ್ಕು ಟ್ರಿಲಿಯನ್ ಡಾಲರ್ ಆರ್ಥಿಕತೆಯ ಹೊಸ್ತಿಲಿನಲ್ಲಿರುವಾಗಲೇ, ಜಾಗತಿಕ ಮಟ್ಟದಲ್ಲಿ ಪ್ರಭಾವಿ ರಾಷ್ಟ್ರವಾಗಿ ಮೈಕೊಡವಿ ನಿಂತಿದೆ. ಜಗತ್ತಿನ ಯಾವ ದೇಶವೂ ಈಗ ಭಾರತವನ್ನು ಕಡೆಗಣಿಸಲು ಸಾಧ್ಯವಿಲ್ಲ. ಇನ್ನು 2047ರ ವೇಳೆಗೆ ಅಭಿವೃದ್ಧಿ ಹೊಂದಿದ ದೇಶವಾಗಲು, 30 ಟ್ರಿಲಿಯನ್ ಡಾಲರ್ ಗುರಿ ಮುಟ್ಟಿದಾಗ ಎಷ್ಟು ಪ್ರಭಾವಶಾಲಿಯಾಗಬಹುದು! ಯೋಚಿಸಿ.

ಭಾರತವು ಜಗತ್ತಿನ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗಿ ಹೊರ ಹೊಮ್ಮುತ್ತಿರುವ ಸಂದರ್ಭದಲ್ಲಿ ಖುಷಿ ಪಡುವವರ ಜತೆಗೆ ಕೆಲವರ ಅಪಸ್ವರಗಳೂ ಹೊರಟಿವೆ. ತಲಾ ಆದಾಯದಲ್ಲಿ ಭಾರತ ನೂರರ ಒಳಗೆಯೂ ಬರದಿರುವುದರಿಂದ ನಾಲ್ಕನೇ ದೊಡ್ಡ ಎಕಾನಮಿಯಾದರೇನು ಬಂತು? ಕೋಟ್ಯಂತರ ಬಡ ಭಾರತೀಯರ ಜೇಬು ಖಾಲಿಯಾಗಿದೆ ಎಂಬ ಪ್ರಶ್ನೆ! ನಿಜ, ತಲಾ ಆದಾಯದಲ್ಲಿ ಮೊದಲ 100 ದೇಶಗಳ ಪಟ್ಟಿಯಲ್ಲೂ ಭಾರತ ಇಲ್ಲ ಎಂಬುದು ಕಡೆಗಣಿಸಲಾಗದ ಸವಾಲೇ ಸರಿ. ಹೀಗಿದ್ದರೂ, ಭಾರತದ ಆರ್ಥಿಕತೆ ಬೆಳೆಯದಿದ್ದರೆ, 2013–14ರಲ್ಲಿ 74,920 ರುಪಾಯಿಯಷ್ಟಿದ್ದ ತಲಾ ಆದಾಯವು 2023–24ರ ವೇಳೆಗೆ 1 ಲಕ್ಷದ 60 ಸಾವಿರ ರುಪಾಯಿಗೆ ಏರಿದ್ದಾದರೂ ಹೇಗೆ? ಜತೆಗೆ ಪ್ರತಿ ವರ್ಷ ಜಿಡಿಪಿ ಬೆಳವಣಿಗೆಯ ವೇಗವೂ ಬೇರಾವುದೇ ಪ್ರಮುಖ ದೇಶಕ್ಕಿಂತ ಕಡಿಮೆ ಇಲ್ಲ. ಆದ್ದರಿಂದ ಮುಂದಿನ 20–25 ವರ್ಷಗಳಲ್ಲಿ ವಿಕಸಿತ ಭಾರತವಾದಾಗ, ತಲಾ ಆದಾಯದ ವಿವಾದವೂ ತಣ್ಣಗಾಗಲಿದೆ.

ಬೆಳವಣಿಗೆಯ ಸುದೀರ್ಘ ಪಯಣದಲ್ಲಿ ನಡೆಯುವಾಗ ಅಲ್ಲಲ್ಲಿ ಸಿಗುವ ಸಣ್ಣ ಪುಟ್ಟ ಗೆಲುವುಗಳನ್ನು ಕಂಡು ಆನಂದಿಸುವುದರಿಂದ, ಮತ್ತಷ್ಟು ಉತ್ಸಾಹದಿಂದ ಪುಟಿದು ಸಾಗಲು ಅದಮ್ಯವಾದ ಸ್ಫೂರ್ತಿ ಸಿಗುತ್ತದೆ. ಇದೂ ಅದೇ ರೀತಿ. ಭಾರತ 4 ಟ್ರಿಲಿಯನ್ ಡಾಲರ್ ಎಕಾನಮಿ ಆಗಿರುವುದಕ್ಕೆ ಸಂಭ್ರಮಿಸುವವರಿಗೆ ತಲಾ ಆದಾಯದ ಬಗ್ಗೆ ತಿಳಿದಿಲ್ಲ ಎಂದೇನಲ್ಲ. ಅವರೂ 4 ಟ್ರಿಲಿಯನ್‌ನಿಂದ 30 ಟ್ರಿಲಿಯನ್ ಡಾಲರ್ ಗುರಿಯನ್ನು ಮುಟ್ಟಬೇಕೆಂಬ ಛಲ, ಆತ್ಮವಿಶ್ವಾಸ ಇರುವವರೇ ಹೊರತಾಗಿ ಮೈಮರೆತವರಲ್ಲ. ಹೆಚ್ಚು ಬೇಡ, ಭಾರತದ ಕಳೆದ ಹತ್ತು ವರ್ಷಗಳ ಲೇಟೆಸ್ಟ್ ಇತಿಹಾಸ ಗಮನಿಸಿದರೆ ಸಾಕು. ಮೋರ್ಗಾನ್ ಸ್ಟ್ಯಾನ್ಲಿ 2013ರಲ್ಲಿ ಭಾರತವನ್ನು ಫ್ರಜೈಲ್ ಫೈವ್ (Fragile Five) ರಾಷ್ಟ್ರಗಳ ಪಟ್ಟಿಗೆ ಸೇರಿಸಿತ್ತು. ವಿದೇಶಿ ಹೂಡಿಕೆಗಳು ಭಾರಿ ನಷ್ಟಕ್ಕೀಡಾಗುವ ಅಪಾಯ ಇದೆ ಎಂದು ಎಚ್ಚರಿಸಿತ್ತು. ಆರ್ಥಿಕ ಪರಿಸ್ಥಿತಿ ಹದಗೆಡುತ್ತಿದೆ ಎಂದಿತ್ತು. ಆದರೆ ಹತ್ತು ವರ್ಷಗಳ ಬಳಿಕ ಇಂದು ಏನಾಗಿದೆ?

ಭಾರತ 2013–14ರಲ್ಲಿ 36 ಶತಕೋಟಿ ಡಾಲರ್ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಸ್ವೀಕರಿಸಿದ್ದರೆ, 2024–25ರಲ್ಲಿ 81 ಶತಕೋಟಿ ಡಾಲರ್‌ಗೆ ಏರಿಕೆಯಾಗಿದೆ. ಅಂದ್ರೆ, ರುಪಾಯಿ ಲೆಕ್ಕದಲ್ಲಿ 6 ಲಕ್ಷದ 88 ಸಾವಿರ ಕೋಟಿ! 2014ರಿಂದ 2025ರ ತನಕ 11 ವರ್ಷಗಳಲ್ಲಿ ಒಟ್ಟು 748 ಶತಕೋಟಿ ಡಾಲರ್ ವಿದೇಶಿ ನೇರ ಹೂಡಿಕೆಯನ್ನು ಭಾರತ ಪಡೆದಿದೆ. (63.58 ಲಕ್ಷ ಕೋಟಿ ರು.)

ಸೇವಾ ವಲಯ, ಕಂಪ್ಯೂಟರ್ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್, ಉತ್ಪಾದನೆ ಕ್ಷೇತ್ರಕ್ಕೆ ವಿದೇಶಿ ಹೂಡಿಕೆಯ ಉತ್ತಮ ಹರಿವು ಲಭಿಸಿದೆ. ಕಳೆದ ವರ್ಷ ಮಹಾರಾಷ್ಟ್ರ ಹೆಚ್ಚು ಎಫ್‌ಡಿಐ ಆಕರ್ಷಿಸಿದ್ದರೆ, ಎರಡನೇ ಸ್ಥಾನದಲ್ಲಿ ನಮ್ಮ ಹೆಮ್ಮೆಯ ಕರ್ನಾಟಕ ರಾಜ್ಯವಿದೆ. ಮೂರನೇ ಸ್ಥಾನದಲ್ಲಿ ದಿಲ್ಲಿ ಇದೆ. ಹೀಗೆ ವಿದೇಶಿ ಹೂಡಿಕೆದಾರರ ನೆಚ್ಚಿನ ತಾಣವಾಗಿ ಭಾರತ ಆಕರ್ಷಿಸಿದೆ ಎಂಬುದಕ್ಕೆ ಈ ಅಂಕಿ ಅಂಶಗಳೇ ಸಾಕ್ಷಿ.

'ಆಪರೇಷನ್ ಸಿಂದೂರ'ದ ಬಳಿಕ ಭಾರತದ ಸೇನಾಪಡೆಯ ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಶಕ್ತಿ ಪ್ರದರ್ಶನ ಜಗತ್ತನ್ನೇ ಬೆರಗುಗೊಳಿಸಿದೆ. ಪಾಕಿಸ್ತಾನದ ಅಣ್ವಸ್ತ್ರ ಬೆದರಿಕೆಯ ತಂತ್ರ ಮೊದಲ ಬಾರಿಗೆ ಮಣ್ಣುಮುಕ್ಕಿದೆ. ಇದೀಗ 4ನೇ ಅತಿ ದೊಡ್ಡ ಆರ್ಥಿಕತೆಯಾಗುವುದರೊಂದಿಗೆ, ಆರ್ಥಿಕವಾಗಿಯೂ ಭಾರತ–ಪಾಕಿಸ್ತಾನ ನಡುವೆ ಹೋಲಿಕೆಯೇ ಸಲ್ಲದು ಎಂಬುದು ಸಾಬೀತಾಗಿದೆ. ಮಹಾರಾಷ್ಟ್ರದ ಎಕಾನಮಿಯೇ ಇವತ್ತು ಪಾಕಿಸ್ತಾನಕ್ಕಿಂತ ದೊಡ್ಡದಿದೆ. ತಮಿಳುನಾಡು ಕೂಡ ಇದೇ ಹಾದಿಯಲ್ಲಿದೆ. ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಲಿಸ್ಟೆಡ್ ಆಗಿರುವ ಷೇರುಗಳ ಮಾರುಕಟ್ಟೆ ಮೌಲ್ಯ ಪಾಕ್ ಸ್ಟಾಕ್ ಎಕ್ಸ್‌ಚೇಂಜ್‌ಗಿಂತ 200 ಪಟ್ಟು ಹೆಚ್ಚು, ಎಲ್‌ಐಸಿಯ ಅಡಿಯಲ್ಲಿ ನಿರ್ವಹಣೆಯಾಗುತ್ತಿರುವ ಸಂಪತ್ತು (640 ಶತಕೋಟಿ ಡಾಲರ್) ಪಾಕಿಸ್ತಾನದ ಸಾಲಕ್ಕಿಂತ ಎರಡೂವರೆ ಪಟ್ಟು ಹೆಚ್ಚು. ಪಾಕ್‌ನ ವಿದೇಶಿ ವಿನಿಮಯ ಸಂಗ್ರಹ ಕೇವಲ 16 ಶತಕೋಟಿ ಡಾಲರ್, ಭಾರತದ್ದು 680 ಶತಕೋಟಿ ಡಾಲರ್.

ನೀವು ಹನ್ನೊಂದನೇ ಶತಮಾನದ ಪೂರ್ವಕ್ಕೆ ಹೋಗೋದೇ ಬೇಡ. ಸ್ವತಂತ್ರ ಭಾರತದ 78 ವರ್ಷಗಳನ್ನೇ ಲೆಕ್ಕಕ್ಕೆ ತೆಗೆದುಕೊಳ್ಳಿ. ಮೊದಲ ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಲು 60 ವರ್ಷ ಬೇಕಾಯಿತು. 2007ರ ತನಕ ಕಾಯಬೇಕಾಯಿತು. ಆದರೆ ಎರಡನೇ ಟ್ರಿಲಿಯನ್‌ಗೆ 7 ವರ್ಷ ಸಾಕಾಯಿತು. 2014ರಲ್ಲಿ ಸಾಧ್ಯವಾಯಿತು. 3ನೇ ಟ್ರಿಲಿಯನ್ 2021ರಲ್ಲಿ ಆಯಿತು. 4ನೇ ಟ್ರಿಲಿಯನ್ ಈಗ 2025ರಲ್ಲಿ, ಅಂದ್ರೆ ಕೇವಲ 4 ವರ್ಷದೊಳಗೆ ಸಾಧ್ಯವಾಗುತ್ತಿದೆ. 2047ಕ್ಕೆ 30 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗುವ ಗುರಿ ಮುಂದಿದೆ! ಹೀಗಾಗಿ ಇದನ್ನು ನಿರ್ಣಾಯಕ ಕಾಲಘಟ್ಟದ ಮಿಂಚಿನೋಟ ಎನ್ನಬಹುದು. ಹಾಗಂತ 143 ಕೋಟಿ ಜನಸಂಖ್ಯೆಯ ಭಾರತದ ಮುಂದೆ ಅನೇಕ ಸವಾಲುಗಳಿವೆ. ತಲಾ ಆದಾಯ ಹೆಚ್ಚಿಸಲು ಆರ್ಥಿಕ ಬೆಳವಣಿಗೆ ಅಗತ್ಯ. ನೀತಿ ಆಯೋಗದ ಮಾಜಿ ಸಿಇಒ ಅಮಿತಾಭ್ ಕಾಂತ್ ಇದನ್ನು ವಿವರಿಸಿದ್ದಾರೆ.

ಭಾರತದಲ್ಲಿ ಬಿಸಿನೆಸ್ ಮಾಡುವವರಿಗೆ ಅತಿಯಾದ ನಿಯಂತ್ರಣವನ್ನು, ಕಟ್ಟುಪಾಡುಗಳನ್ನು ಹಾಕಬಾರದು. ಅತಿಯಾದ ಲೈಸೆನ್ಸಿಂಗ್, ಸೆಕ್ಟರ್‌ಗಳನ್ನು ಆಧರಿಸಿದ ಪರವಾನಗಿಗಳು, ಹೆಜ್ಜೆ ಹೆಜ್ಜೆಗೂ ಎನ್‌ಒಸಿಗಳು ಅಂತ ಕಂಗೆಡಿಸಬಾರದು. ಎಲ್ಲ ಪರವಾನಗಿಗಳೂ ಡಿಜಿಟಲ್ ವ್ಯವಸ್ಥೆಯಲ್ಲಿ ಕ್ಲಿಯರ್ ಆಗಬೇಕು. ಜಿಎಸ್‌ಟಿಯ ದರ ಮತ್ತು ಸ್ಲ್ಯಾಬ್ ಅನ್ನು ಮತ್ತಷ್ಟು ಸರಳಗೊಳಿಸಬೇಕು. ಪೆಟ್ರೋಲಿಯಂ ಉತ್ಪನ್ನಗಳು, ವಿದ್ಯುತ್, ರಿಯಲ್ ಎಸ್ಟೇಟ್ ಅನ್ನು ಜಿಎಸ್‌ಟಿಗೆ ತರಬೇಕು. ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ ಸುಲಭವಾಗಿ ಸಾಲ ಸಿಗುವಂತಾಗಬೇಕು. ಎಲೆಕ್ಟ್ರಾನಿಕ್ಸ್, ಆಟೊಮೊಬೈಲ್ಸ್, ಮೆಶೀನರಿಗಳ ಮೇಲಿನ ತೆರಿಗೆ ಇಳಿಸಬೇಕು, ಕಾರ್ಮಿಕ ಮತ್ತು ಕಾರ್ಖಾನೆಯ ಔಟ್‌ಡೇಟೆಡ್ ಕಾನೂನುಗಳು ಸುಧಾರಣೆಯಾಗಬೇಕು, ಸಂಶೋಧನೆ ಮತ್ತು ಅಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡಬೇಕು. ಕೊನೆಯದಾಗಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಬೇಕು. ಏಕೆಂದರೆ ಟೂರಿಸಂನಲ್ಲಿ ದೇಶಕ್ಕೆ ಉಜ್ವಲ ಭವಿಷ್ಯ ಇದೆ. ಪ್ರವಾಸೋದ್ಯಮವನ್ನು ಸುಧಾರಿಸಿದರೆ ನಾನಾ ರಾಷ್ಟ್ರಗಳ ಪ್ರವಾಸಿಗರು ಆಗಮಿಸುತ್ತಾರೆ ಮತ್ತು ವಿದೇಶಿ ವಿನಿಮಯ ಸಂಗ್ರಹವೂ ಹೆಚ್ಚುತ್ತದೆ, ಹೇರಳ ಉದ್ಯೋಗಗಳೂ ಸೃಷ್ಟಿಯಾಗುತ್ತವೆ. ಹೋಟೆಲ್, ರೆಸ್ಟೋರೆಂಟ್ ವಲಯಗಳೂ ವಿಸ್ತರಿಸುತ್ತವೆ ಎನ್ನುತ್ತಾರೆ ಅಮಿತಾಭ್ ಕಾಂತ್.

ಹನ್ನೊಂದನೇ ಶತಮಾನಕ್ಕೆ ಮೊದಲು ತನ್ನ ಸುವರ್ಣ ಯುಗದಲ್ಲಿ ಭಾರತವು ಸಂಶೋಧನೆ ಮತ್ತು ಅಭಿವೃದ್ಧಿಗೆ ಒತ್ತು ಕೊಟ್ಟಿತ್ತು. ವಿದೇಶಿಯರ ಜತೆಗೆ ವ್ಯಾಪಾರ, ವಾಣಿಜ್ಯ ಸಂಬಂಧಗಳಿಗೆ ಮುಕ್ತವಾಗಿತ್ತು. ಪ್ರಾಚೀನ ಭಾರತೀಯ ವಿಶ್ವವಿದ್ಯಾಲಯಗಳಿಗೆ ವಿದೇಶಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ಜಾಗತೀಕರಣಕ್ಕೆ ಪ್ರಾಚೀನ ಭಾರತ ವಿಮುಖವಾಗಿರಲಿಲ್ಲ!

ಕೋವಿಡ್ ಬಳಿಕ ಕೆಲ ದೇಶಗಳು ಜಾಗತೀಕರಣದಿಂದ ವಿಮುಖವಾಗುತ್ತಿದ್ದರೆ, ಭಾರತ ಈಗಲೂ 'ಸ್ನೇಹಕ್ಕೆ ಬದ್ಧ, ಸಮರಕ್ಕೆ ಸಿದ್ಧ' ನೀತಿಯೊಂದಿಗೆ ಬೆಳೆಯುತ್ತಿರುವುದು ಗಮನಾರ್ಹ. ಆದ್ದರಿಂದಲೇ ಬ್ರಿಟನ್ ಜತೆಗೆ ಇತ್ತೀಚೆಗೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ನಡೆದಿದೆ. ಅಮೆರಿಕ, ಯುರೋಪ್ ಜತೆಗೂ ನಡೆಯಲಿದೆ! ಇಂಥ ಒಂದೊಂದು ನಡೆಯೂ ಅಧ್ಯಯನ ಯೋಗ್ಯ!

ಭಟ್ಟರ್ ಸ್ಕಾಚ್

- **ಎಲ್.ವಿ.ಸತೀಶ್, ಮೈಸೂರು**
ಭಟ್ರೇ, 'ವಿಶ್ವವಾಣಿ' ಜತೆಗೆ ಇನ್ನು 'ಪ್ರವಾಸಿ ಪ್ರಪಂಚ'ವನ್ನೂ ಓದಬೇಕಾ?
– **ಓದದಿದ್ದರೆ ಎಷ್ಟೆಲ್ಲ ಕಳೆದುಕೊಳ್ತೀಯಾ ಎಂಬುದರ ಪರಿಜ್ಞಾನವಿದೆಯಾ?!**

- **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
ಭಟ್ರೇ, ಕಮಲ್ ಹಾಸನ್ ಹೇಳಿಕೆಗೆ ಕನ್ನಡಿಗರು ಬಹಳ ತಲೆ ಕೆಡಿಸಿಕೊಂಡಿದ್ದಾರಲ್ಲ?
– **ತಲೆ ಇಲ್ಲದವನ ಹೇಳಿಕೆಗೆ ತಲೆಯನ್ನೇ ಕೆಡಿಸಿಕೊಳ್ಳಬೇಕಲ್ಲ ಎಂದು ಕೆಲ ಕನ್ನಡಿಗರು ಭಾವಿಸಿದ್ದಾರಂತೆ!**

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಬೆಳ್ಳಗಿರೋರೇ ಸೋಪ್ ಜಾಹೀರಾತಿಗೆ ಬೇಕೆಂದು ತಮನ್ನಾಳನ್ನು ಆರಿಸಿದರಾ?
– **ನಿಮ್ಮೂರಲ್ಲಿ ಬೆಳ್ಳಗಿರುವ ತಮ್ಮಣ್ಣ ಇದ್ದರೆ ಹೇಳಬಾರದಿತ್ತೇ?!**

- **ಡಾ.ಆನಂದ ಕುಲಿಗೋಡ, ಧಾರವಾಡ**
ಭಟ್ರೇ, ಮೈಸೂರು ಸ್ಯಾಂಡಲ್ ಸೋಪಿಗೆ ವಾಟಾಳ್ ನಾನೇ ರಾಯಭಾರಿ ಎನ್ನುತ್ತಿದ್ದಾರಲ್ಲ?
– **ಆ ಸೋಪ್ ಬಳಸಿದರೆ ಕೂದಲು ಉದುರಿ ಸುಂದರವಾಗಿ ಕಾಣುತ್ತೀರಾ ಅಂತಿದ್ದರೆ ಅವರನ್ನೇ ರೂಪದರ್ಶಿಯಾಗಿ ಮಾಡಬಹುದಿತ್ತು!**

- **ಜಿ.ಕೆ.ಗಣೇಶ, ಮಂಗಳೂರು**
ಭಟ್ರೇ, ಕನ್ನಡ ಸಿನಿಮಾ ನಟರಿಗೆ ಬಹಳ ಕೊಬ್ಬು ಅಂತಾರಲ್ಲ?
– **ಕೈಯಲ್ಲಿ ಸಿನಿಮಾ ಇಲ್ಲದಿದ್ದರೂ ಪರವಾಗಿಲ್ಲ, ಕೊಬ್ಬಾದರೂ ಇದೆಯಲ್ಲ?!**

- **ಗಣೇಶ ಅಂಬಾಡಿ, ಮಂಗಳೂರು**
ಭಟ್ರೇ, ಬೆಂಗಳೂರಿನ ರಸ್ತೆಗಳೆಲ್ಲ ಕಿತ್ತು ಹೋಗಿದೆಯಲ್ಲ?
– **ಗುತ್ತಿಗೆದಾರರು, ರಾಜಕಾರಣಿಗಳು ಬದುಕಬೇಡವಾ?!**

- **ಶೀಲಾ ಒಂಟಿ ಕೊಪ್ಪಲು, ಮೈಸೂರು**
ಭಟ್ರೇ, ಬುದ್ಧನಿಗೆ ಬೋಧಿ ವೃಕ್ಷದ ಕೆಳಗೆ ಜ್ಞಾನೋದಯ, ನ್ಯೂಟನ್‌ಗೆ ಸೇಬಿನ ಮರದ ಕೆಳಗೆ, ಈ ಕಾಲದ ಹುಡುಗರಿಗೆ?
– **ಹುಡುಗಿಯರು ಕೈಕೊಟ್ಟಾಗ!**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಇಡೀ ಭಾರತಕ್ಕೆ ಒಬ್ಬನೇ ಪಪ್ಪು, ಕರ್ನಾಟಕಕ್ಕೇ?
– **ಕನಿಷ್ಠ ಒಂದು ಡಜನ್!**

- **ಕಿರಣ್ ಪಾಟೀಲ, ಹುಬ್ಬಳ್ಳಿ**
ಭಟ್ರೇ, ನಿಮಗೆ ಯಾವ ಪ್ರಶ್ನೆ ಕೇಳಬೇಕು ಅನ್ನೋದೇ ಗೊತ್ತಾಗ್ತಾ ಇಲ್ಲವಲ್ಲ?
– **ಪ್ರಶ್ನೆ ಕೇಳೋದನ್ನೇ ಚಟ ಮಾಡಿಕೊಂಡ 'ಜಸ್ಟ್ ಆಸ್ಕಿಂಗ್' ಪ್ರಕಾಶ ರೈ ಕೇಳಬೇಕಿತ್ತು!**

- **ಮಂಗಳಾ ಭಾಗವತ, ಬೆಂಗಳೂರು**
ಭಟ್ರೇ, 'ಕುಡಿಯೋಣು ಬಾರಾ' ಪುಸ್ತಕ ಓದಿದ್ರೆ ಕುಡುಕರಾಗ್ತಾರಂತೆ, ಹೌದಾ?
– **ಹಾಗಾದರೆ ಅದನ್ನು ಬರೆದವರು ಏನಾಗಿರಬಹುದು!?**

ಸಣ್ಣ ಹೊಳೆ ದಾಟಲು ಒಂದೇ ಮರದ ಸಂಕ!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ಕನ್ನಡವನ್ನು ಕಂಪ್ಯೂಟರ್‌ನಲ್ಲಿ ಬಳಸುವವರಿಗೆ ಒಮ್ಮೊಮ್ಮೆ ಯುನಿಕೋಡ್‌ನಿಂದ ಆಸ್ಕಿಗೆ ಪರಿವರ್ತಿಸುವ ಅನಿವಾರ್ಯತೆ ಎದುರಾಗುವುದುಂಟು. ಅದಕ್ಕಾಗಿ ಅಂತರ್ಜಾಲದಲ್ಲಿ ಹುಡುಕಿದರೆ, 'ಸಂಕ – ಆಸ್ಕಿ ಯುನಿಕೋಡಿಗೆ ಕನ್ನಡದ ಸಂಕ' ಎಂಬ ಜಾಲತಾಣ ದೊರಕುತ್ತದೆ; ಅರವಿಂದ್ ಎಂಬ ಹೆಸರಿನ ಕಂಪ್ಯೂಟರ್ ತಜ್ಞರು ಹಲವು ವರ್ಷಗಳ ಹಿಂದೆಯೇ, ಈ 'ಸಂಕ'ವನ್ನು ನಿರ್ಮಿಸಿದ್ದರು: ಪದಗಳ ಫಾಂಟ್ ಪರಿವರ್ತಿಸುವ ಸಂಕ ಅದು. ಇಲ್ಲಿ 'ಸಂಕ' ಎಂದರೇನು ಎಂದು ಕೆಲವರಿಗಾದರೂ, ಆರಂಭದಲ್ಲಿ ಬೆರಗಾಗಿದ್ದುಂಟು. 'ಸಂಕ' ಎಂದರೆ, ಒಂದು ದಡದಿಂದ ಇನ್ನೊಂದು ದಡಕ್ಕೆ ಹೋಗಲು ಅನುಕೂಲ ಮಾಡಿಕೊಡುವ ಪುಟಾಣಿ ಸೇತುವೆ ಮತ್ತು ಇದು ಪದವು ಕರಾವಳಿಯಲ್ಲಿ ಬಳಕೆಯಲ್ಲಿರುವ ಪದ. ಅದರಲ್ಲೂ ವಿಶೇಷವಾಗಿ, ಮಳೆಗಾಲದಲ್ಲಿ ಸಂಕದ ಉಪಯೋಗ ಕರಾವಳಿ ಮತ್ತು ಮಲೆನಾಡಿನಲ್ಲಿ ಅನಿವಾರ್ಯ. ನಿರಂತರ ಮಳೆ ಸುರಿಯತೊಡಗಿದರೆ, ಮನೆ ಎದುರಿನ ಪುಟ್ಟ ತೋಡನ್ನು ದಾಟಲು ಸಹ ಅಷ್ಟೇ ಪುಟ್ಟ ಸಂಕ ಬೇಕು! ದೊಡ್ಡ ತೋಡುಗಳು, ಮಳೆಗಾಲದಲ್ಲಿ ಸಣ್ಣ ಹೊಳೆಯ ಸ್ವರೂಪವನ್ನೇ ಪಡೆಯುತ್ತವೆ : ಆಗ ಅವುಗಳನ್ನು ದಾಟಲು, ದೊಡ್ಡ ಮರದ ಕಾಂಡದ ಸಂಕ ಬೇಕು!

ನಮ್ಮೂರಲ್ಲಿ ಸಂಕವನ್ನು ನಿರ್ಮಿಸುವುದು ಉದ್ದನೆಯ ಮರದ ಕಾಂಡದಿಂದ. ತೋಡು ಅಥವಾ ಹಳ್ಳದ ಒಂದು ದಡದಿಂದ ಇನ್ನೊಂದು ದಡಕ್ಕೆ ಅದನ್ನು ಹಾಸಿರುತ್ತಾರೆ; ಕೆಳಗೆ ರಭಸದಿಂದ ಹರಿವ ನೀರು; ಮೇಲಿರುವ ಆ ಮರದ ಸಂಕದ ಮೇಲೆ ನಡೆದು, ಒಂದು ದಡದಿಂದ ಇನ್ನೊಂದು ದಡಕ್ಕೆ ಹೋಗುವುದು ನಮ್ಮೂರಿನ ದಿನಚರಿಯ ಸಹಜ ಚಟುವಟಿಕೆಗಳಲ್ಲಿ ಒಂದು. ಒಂದೆರಡು ಅಡಿ ಅಗಲದ ತೋಡಿನಿಂದ ಹಿಡಿದು, ಹದಿನೈದು ಇಪ್ಪತ್ತು ಅಡಿ ಅಗಲದ ಸಣ್ಣ ಹೊಳೆಗೆ (ದೊಡ್ಡ ತೋಡು) ಅಡ್ಡಲಾಗಿ ಸಹ ಇಂತಹ ಮರದ ಕಾಂಡವನ್ನು ಹಾಕುತ್ತಾರೆ; ತೋಡಿನ ಅಗಲ ತೀರಾ ಜಾಸ್ತಿ ಎನಿಸಿದಾಗ, ಹೆಚ್ಚು ಭದ್ರತೆಗಾಗಿ ಎರಡು ಮರಗಳನ್ನು ಒಟ್ಟೊಟ್ಟಿಗೆ ಎರಡೂ ದಡದ ಅಗಲಕ್ಕೆ ಮಲಗಿಸಿರುತ್ತಿದ್ದರು.

'ಸಂಕದ ಮೇಲಿ ನಡಿಗೆ' ಎಂದರೆ, ಕೆಳಗೆ ಹರಿಯುತ್ತಿರುವ ನೀರಿಗೆ ಬೀಳದೇ, ಅದರ ರಭಸ ಕಂಡು ಬೆದರದೇ, ಬ್ಯಾಲೆನ್ಸ್ ಮಾಡಿಕೊಂಡು ಆ ಏಕೈಕ ಮರದ ಕಾಂಡದ ಮೇಲೆ ನಡೆಯುವುದು! ನನ್ನ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸದ ಸಮಯದಲ್ಲಿ ಸಂಕಕ್ಕೂ ನನಗೂ ಅನುದಿನದ ನಂಟು. ನಮ್ಮ ಮನೆಯಿಂದ ಸುಮಾರು ಒಂದೂವರೆ ಕಿ.ಮೀ. ದೂರದಲ್ಲಿರುವ ಗೋರಾಜೆ ಶಾಲೆಗೆ ನನ್ನದು ಪ್ರತಿ ದಿನ ಚಾರಣ : ಅದು ಒಂದು ಕಿರಿಯ ಪ್ರಾಥಮಿಕ ಶಾಲೆ. ಮೂರು ಮತ್ತು ನಾಲ್ಕನೆಯ ತರಗತಿಯಲ್ಲಿ ನನಗೆ ಕನ್ನಡ ಕಲಿಸಿದ ಶಾಲೆ ಅದು. ಪ್ರತಿದಿನವೂ ಆ ಶಾಲೆಗೆ ಹೋಗುವಾಗ, ನಾನು ಹನ್ನೆರಡು ಬಾರಿ ಮರದ ಸಂಕವನ್ನು ದಾಟಬೇಕಿತ್ತು – ಅಂದರೆ, ಶಾಲೆಗೆ ಹೋಗುವ ದಾರಿಯಲ್ಲಿ ಮೂರು ತೋಡು (ಹಳ್ಳ)ಗಳಿದ್ದವು. ಒಂದು ದೊಡ್ಡ ತೋಡು, ಇನ್ನೆರಡು ಸಣ್ಣ ತೋಡುಗಳು. ಅವನ್ನು ದಾಟಲು ಬೆಳಗ್ಗೆ ಮೂರು ಬಾರಿ, ಮಧ್ಯಾಹ್ನ ಊಟಕ್ಕೆ ಬರುವಾಗ ಮೂರು ಬಾರಿ, ಊಟ ಮುಗಿಸಿ ಹೋಗುವಾಗ ಮೂರು ಬಾರಿ, ಸಂಜೆ ವಾಪಸ್ ಬರುವಾಗ ಮತ್ತೆ ಮೂರು ಬಾರಿ!

ನಮ್ಮ ಮನೆಯ ಎದುರಿನ ಅಗೇಡಿ ಅಂಚಿನಲ್ಲಿ ಸುಮಾರು ನೂರು ಮೀಟರ್ ನಡೆದು, ಬಲಭಾಗದಲ್ಲಿ ಸಿಗುವ ತೋಡಿನ ಅಂಚಿನಲ್ಲೇ, ಮುಂಡುಕನ ಹಿಂಡಲುಗಳ ಪಕ್ಕದಲ್ಲೇ ತುಸು ದೂರ ಸಾಗಿದ ನಂತರ, ಆ ತೋಡನ್ನೇ ದಾಟಿ ನಡೆಯಬೇಕಾದ ಅನಿವಾರ್ಯತೆ; ಇಲ್ಲೇ ಎದುರಾಗುವುದು ನನ್ನ ದಾರಿಯ ಮೊದಲ ಸಂಕ. ಮಳೆಗಾಲದಲ್ಲೋ, ಈ ತೋಡಿನಲ್ಲಿ ಕೆಂಪನೆಯ ನೀರು ರಭಸವಾಗಿ ಹರಿಯುತ್ತಿತ್ತು! ಒಮ್ಮೊಮ್ಮೆ ನಾಲ್ಕಾರು ದಿನ ಎಡೆಬಿಡದೆ ಮಳೆ ಸುರಿವ ಹಳ್ಳಿ ನಮ್ಮದು; ಅಂತಹ ದಿನಗಳಲ್ಲಿ ರಭಸವಾಗಿ ಹರಿಯುವ ನೀರನ್ನು ಆ ತೋಡಿನಲ್ಲಿ ನೋಡುವುದೇ ಒಂದು ವಿಶಿಷ್ಟ ಅನುಭವ; ಸುಳಿ ಸುಳಿ ಸುತ್ತುತ್ತಾ ಹರಿಯುವ ಆ ಕೆಂಪನೆಯ ನೀರನ್ನು ನೋಡುತ್ತಲೇ ಶಾಲೆಗೆ ಹೋಗುತ್ತಿದ್ದವು. ಆದರೆ ಈ ತೋಡು ಸಾಕಷ್ಟು ದೊಡ್ಡದು, ಮಕ್ಕಳು ಅಕಸ್ಮಾತ್ ಜಾರಿ ಬಿದ್ದರೆ ಕೊಚ್ಚಿ ಹೋಗುವಷ್ಟು ನೀರು ಒಮ್ಮೊಮ್ಮೆ ಅದರಲ್ಲಿ ಹರಿಯುತ್ತಿತ್ತು. ಆ ನೀರಿನ ರಭಸವನ್ನೇ ನೋಡುತ್ತಾ, ಸಂಕದ ಮೇಲೆ ನಡೆದರೆ ಕಾಲುಜಾರಿ ಬೀಳುವುದೇ ಸೈ. ಆ ನೀರಿನ ಭಯದಿಂದ ದೂರಾಗಲು ಜತೆಗಾರರು ಒಂದು ಉಪಾಯ ಹೇಳಿಕೊಡುತ್ತಿದ್ದರು 'ನೀರನ್ನು ಕಾಂಬುಕಾಗ, ಮರದ ಸಂಕವನ್ನು ಮಾತ್ರ ಕಂಡಕಂಡ್ ನಡಿಕ್. ಆಗ ಹೆದ್ರಿಕೆ ಆತಿಲ್ಲೆ'.

ನಮ್ಮ ಮನೆಯಿಂದ ಸುಮಾರು ಇನ್ನೂರು ಮೀಟರ್ ದೂರದಲ್ಲಿದ್ದ ಈ ಒಂದು ಸಂಕವನ್ನು ದಾಟುವಾಗ ಕೆಳಗಿನ ತೋಡಿಗೆ ಒಮ್ಮೆ ನಾನು ಬಿದ್ದಿದ್ದೆ! ಸುಮಾರು ಹದಿನೈದು ಅಡಿ ಅಗಲದ ತೋಡು ಅದು; ಎರಡೂ ದಡಗಳ ಆಧಾರದಿಂದ ಜೋಡಿಸಿರುವ ಮರದ ಸಂಕದ ಉದ್ದ ಸುಮಾರು ಇಪ್ಪತ್ತು ಅಡಿ. ಒಂದೇ ಮರ ಹಾಕಿದರೆ ದಾಟಲು ಕಷ್ಟವಾಗುತ್ತದೆ ಎಂದು ಎರಡು ಮರಗಳನ್ನು ಜೋಡಿಸಿದ್ದರು; ಅದರಲ್ಲೊಂದು ಮರ ಒರೆಕೋರೆಯಾಗಿತ್ತು. ಆಗಸ್ಟ್ ತಿಂಗಳಿನ ಒಂದು ದಿನ, ಆ ಸಂಕವನ್ನು ಬಹುಪಾಲು ದಾಟಿ, ಇನ್ನೇನು ಕೊನೆಯ ಮೂರು ಅಡಿ ಹೆಜ್ಜೆ ಹಾಕಿ ಆಚೆ ದಡ ಸೇರಬೇಕು ಎನ್ನುವಷ್ಟರಲ್ಲಿ, ಎರಡು ಮರಗಳ ನಡುವಿನ ಸಂದಿಯಲ್ಲಿ ಸಿಕ್ಕಿಕೊಂಡ ನನ್ನ ಕಾಲು ಎಡವಿತು! ಜಾರಿ ತೋಡಿಗೆ ಬಿದ್ದೆ; ಸುಮಾರು ಆರು ಅಡಿ ಆಳ; ಹೆಚ್ಚಿನ ಏಟಾಗುವ ಸಂಭವ ಇರಲಿಲ್ಲ; ಆ ಸಮಯದಲ್ಲಿ ತೋಡಿನಲ್ಲಿ ಹೆಚ್ಚು ನೀರು ಇರಲಿಲ್ಲ – ಬಿದ್ದ ರಭಸಕ್ಕೆ ಹಾಕಿದ್ದ ಅಂಗಿ ಚಡ್ಡಿ ಒದ್ದೆಯಾಯಿತು; ಕೈಲಿದ್ದ ಪುಸ್ತಕಗಳು ನೀರಿನಲ್ಲಿ ಸ್ನಾನ ಮಾಡಿದವು. ಅದೃಷ್ಟವಶಾತ್ ಯಾವುದೇ ಏಟು ಆಗಲಿಲ್ಲ. ಆಚೆ ದಡಕ್ಕೆ ಒತ್ತಿಕೊಂಡಂತೆ ಒಂದು ಮನೆ; ಅಲ್ಲಿನ ಮಕ್ಕಳು ಸಹ ನನ್ನ ಜತೆಯಲ್ಲೇ ಶಾಲೆಗೆ ಹೋಗುವವರು – ಅವರ ತಾಯಿ ಲಕ್ಷ್ಮಮ್ಮ ಎಂಬುವವರು ಓಡಿ ಬಂದು, ತೋಡಿನಿಂದ ಎದ್ದು ಮೇಲೆ ಬರಲು ಸಹಾಯ ಮಾಡಿ, ಅವರ ಮನೆಗೆ ಕರೆದುಕೊಂಡು ಹೋದರು.

'ಬಿದ್ದದ್ದಕ್ಕೆ ಗಾಯ ಎಂತ ಆಗಿಲ್ಲ ಅಲ್ದಾ? ಜಾಸ್ತಿ ನೀರಿರಲಿಲ್ಲ, ಒಳ್ಳೆದಾಯಿತು. ಇರಲಿ.. ನೀನು ಯಾವ ಕಾಲು ಎಡವಿ ಬಿದ್ದದ್ದು?' ಎಂದು ಕೇಳಿದರು. 'ಬಲಗಾಲು' ಎಂದೆ. 'ಓ, ಹಾಗಾದರೆ ನಿನಗೆ ಇವತ್ತು ಒಂದು ಒಳ್ಳೆಯ ಸುದ್ದಿ ಇರತ್. ಬಿದ್ದಿದ್ದೂ ಒಳ್ಳೆಯದಕ್ಕೇ. . . ನೀ ಏನೂ ಬೇಜಾರ್ ಮಾಡ್ಕಂಬುದೇ ಬೇಡ' ಎಂದು ಹುರಿದುಂಬಿಸಿದರು – ಬಿದ್ದ ನೋವನ್ನು ಮರೆಸುವ, ಸಕಾರಾತ್ಮಕ ಪ್ರೋತ್ಸಾಹದ ಮಾತುಗಳು ಅವು. ಅದೇ ಸಂಜೆ, ನಮ್ಮ ಶಾಲೆಯ ಅಧ್ಯಾಪಕರು, ಸ್ವಾತಂತ್ರ್ಯೋತ್ಸವದ ಆಚರಣೆಗೆ ಗೌರಿ ಎಂಬ ನಾಟಕ ಆಡಲು ಪಾತ್ರಧಾರಿಗಳನ್ನಾಗಿ ಆಯ್ಕೆ ಮಾಡುವಾಗ, ನನ್ನನ್ನು ಗೌರಿ ನಾಟಕದ ನಾಯಕನಟಿ ಪಾತ್ರಕ್ಕೆ ಆಯ್ಕೆ ಮಾಡಿದರು! ಅಂತೂ, ಸಂಕದ ಮೇಲೆ ಬಲಗಾಲು ಎಡವಿ ಕೆಳಗೆ ಬಿದ್ದರೂ, ಲಕ್ಷ್ಮಮ್ಮ ಹೇಳಿದಂತೆ, ನಾಟಕದಲ್ಲಿ ನಟಿಸುವ ಅವಕಾಶದ ಒಳ್ಳೆಯ ಸುದ್ದಿ ಅದೇ ದಿನ ಸಿಕ್ಕಿದ್ದಂತೂ ನಿಜ. ಅಕಸ್ಮಾತ್ ಆ ದಿನ ಜಾಸ್ತಿ ಮಳೆ ಬಂದಿದ್ದರೆ, ನೆರೆ ಇದ್ದಿದ್ದರೆ, ಸ್ವಲ್ಪ ದೂರವಾದರೂ ನೀರಿನಲ್ಲಿ ಕೊಚ್ಚಿಕೊಂಡು ಹೋಗಬೇಕಿತ್ತು!

ಗೋರಾಜಿ ಶಾಲೆಗೆ ಹೋಗಬೇಕಾದಾಗ, ಆ ಮೊದಲ ಸಂಕವನ್ನು ದಾಟಿದ ತಕ್ಷಣ ಒಂದಷ್ಟು ಮಕ್ಕಿಗದ್ದೆಗಳು, ನಂತರ ದಟ್ಟವಾಗಿ ಬೆಳೆದ ಹಕ್ಕಲು, ಗುಡ್ಡೆದಾರಿ. ಆ ಗುಡ್ಡೆಯನ್ನು ಇಳಿಯುವಾಗ ಇನ್ನೊಂದು ಮರದ ಸಂಕ – ಈ ತೋಡಿನ ಅಗಲ ಕಡಿಮೆ. ಆದರೆ ಸಂಕ ಇಳಿಜಾರಾಗಿತ್ತು – ದಾಟುವಾಗ ಸಣ್ಣಗೆ ಬೆದರುವಂತೆ ಮಾಡುತ್ತಿತ್ತು. ಆ ಸಂಕ ದಾಟಿದ ನಂತರ ಒಂದು ಬತ್ತದ ಗದ್ದೆ, ಅದರ ಅಂಚಿನಲ್ಲೇ ಸಾಗಿ ಎಡಕ್ಕೆ ತಿರುವಿದಾಗ, ಇನ್ನೊಂದು ತೋಡು ಎದುರಾಗುತ್ತದೆ. ಅದನ್ನು ದಾಟಲು ನಾಲ್ಕಾರು ಅಡಕೆ ಮರದ ದಬ್ಬೆಗಳನ್ನು ಜೋಡಿಸಿರುತ್ತಿದ್ದರು. ಅಷ್ಟೇನೂ ಅಗಲವಿಲ್ಲದ ತೋಡು ಅದು. ನಡೆಯುವಾಗ ಭಯ ಇರಲಿಲ್ಲ, ಆದರೆ, ಮುಂಡುಕನ ಮುಳ್ಳುಗಳು ಮೈಗೆ ತಾಗದಂತೆ ನಡೆಯುವ ಜಾಗ್ರತೆ ವಹಿಸಬೇಕಿತ್ತು.

ಈ ಮೂರು ಸಂಕಗಳನ್ನು ದಾಟಿ, ಹಾಡಿ ಗುಡ್ಡಗಳಲ್ಲಿ ನಡೆದು ಗೋರಾಜಿ ಶಾಲೆ ತಲುಪಿ, ಆ ಏಕೋಪಾಧ್ಯಾಯ, ಏಕ ಕೊಠಡಿಯ, ಗುಡಿಸಲು ಶಾಲೆಯಲ್ಲಿ ನಮ್ಮೆಲ್ಲರ ವಿದ್ಯಾಭ್ಯಾಸ. ಮಧ್ಯಾಹ್ನ ಊಟಕ್ಕೆ ಅದೇ ದಾರಿಯಲ್ಲಿ ವಾಪಸು; ಊಟ ಮುಗಿಸಿ, ಪುನಃ ಅದೇ ದಾರಿ ಹಿಡಿದು ನಡಿಗೆ; ಸಂಜೆ ಶಾಲೆ ಬಿಟ್ಟ ನಂತರ, ಅದೇ ದಾರಿಯಲ್ಲಿ, ಮೂರು ಸಂಕಗಳನ್ನು ದಾಟಿ ಮನೆಗೆ ವಾಪಸು. ದಾರಿಯುದ್ದಕ್ಕೂ ಗೋವೆಮರಗಳು (ಗೋಡಂಬಿ ಮರಗಳು) ಬೆಳೆದಿದ್ದ ಮಕ್ಕಿಗದ್ದೆಯ ಅಂಚು, ಅಲ್ಲಲ್ಲಿ ಬೃಹದಾಕಾರದ ಕಾಟುಮಾವಿನ ಮರಗಳು, ಕೆಲವು ಕಡೆ ದಟ್ಟ ಹಾಡಿ, ಆ ಹಾಡಿಯಲ್ಲಿ ಸಂಚರಿಸುವ ಹಕ್ಕಿಗಳು, ಮಂಗಗಳು, ಹಕ್ಕಲಿನ ಮರಗಳ ಮೇಲೆ ಓತಿಕ್ಯಾತಗಳ ಆಟ, ಅವುಗಳಿಗೆ ಕಲ್ಲೆಸೆಯುವ ಶಾಲಾ ಮಕ್ಕಳು – ಇವೆಲ್ಲವೂ ಗೋರಾಜೆ ಶಾಲೆಯ ಅನುಭವಗಳಲ್ಲಿ ಸೇರಿ ಹೋಗಿವೆ. ಪರಿಸರ, ಪ್ರಕೃತಿಯ ನಡುವೆಯೇ ಇದ್ದ ಆ 'ಕಿರಿಯ ಪ್ರಾಥಮಿಕ ಶಾಲೆ'ಗೆ ಪ್ರತಿ ದಿನ ನಡೆದು ಹೋಗುವುದೆಂದರೆ, ಆ ಕಿರಿವಯಸ್ಸಿನಲ್ಲೇ ಪರಿಸರದ ಪಾಠಗಳನ್ನು ಪಡೆದಂತೆ.

ಕರಡ ಬೆಳೆಯುತ್ತಿದ್ದ ಪುಟ್ಟ ಮೈದಾನದಲ್ಲಿದ್ದ ಗೋರಾಜೆ ಶಾಲೆಯಲ್ಲಿ ನಾಲ್ಕನೆಯ ಇಯತ್ತೆ ಪಾಸು ಮಾಡಿ, ಐದನೆಯ ತರಗತಿಗೆ ಹಾಲಾಡಿ ಶಾಲೆಗೆ ಸೇರಿದೆ. ಮೂರು ಕಿ.ಮೀ.ದೂರದಲ್ಲಿದ್ದ ಆ ಶಾಲೆಗೆ ಸಾಗಲು ಮೂರು ದಾರಿಗಳಿದ್ದು, ಎಲ್ಲಾ ದಾರಿಗಳಲ್ಲೂ ಸಂಕಗಳು! ಸಾಮಾನ್ಯವಾಗಿ ಅನುಸರಿಸುವ ದಾರಿ ಎಂದರೆ ನಮ್ಮ ಮನೆ ಎದುರಿನ ಅರ್ಧ ಕಿ.ಮೀ. ಉದ್ದನೆಯ ಬೈಲುದಾರಿಯಲ್ಲಿ ಸಾಗಿ, ಅದರ ತುದಿಯಲ್ಲಿರುವ ತೋಡನ್ನು ದಾಟಿ ಹಾಡಿದಾರಿಯನ್ನು ಅನುಸರಿಸುವುದು. ಈ ತೋಡನ್ನು ದಾಟಲು ಮರದ 'ಸಾರ' ಇತ್ತು. ಸುಮಾರು ಎರಡು ಅಡಿ ಉದ್ದದ ಹಲಗೆಯ ಚೂರುಗಳನ್ನು ಎರಡು ಮರದ ಮೋಪುಗಳಿಗೆ ಭದ್ರವಾಗಿ ಜೋಡಿಸಿ ಮಾಡಲಾಗಿದ್ದ ಈ ಸಾರದ ಮೇಲಿನ ನಡಿಗೆ ಸಾಕಷ್ಟು ಸುರಕ್ಷಿತ. ಒಂದೇ ಮರದ ಕಾಂಡದ ಸಂಕದ ಮೇಲಿನ ನಡಿಗೆಗಿಂತ, ಮರದ ಸಾರದ ಮೇಲಿನ ನಡಿಗೆ ಎಷ್ಟೋ ಉತ್ತಮ. ಒಮ್ಮೊಮ್ಮೆ ಆ ತೋಡಿನಲ್ಲಿ ನೆರೆ ಬಂದಾಗ, ನಾವೆಲ್ಲಾ ಮಕ್ಕಳು ಆ ಮರದ ಸಾರದ ಮೇಲೆ ನಿಂತು ಕೆಂಪನೆಯ ನೀರನ್ನು, ಅದು ರಭಸದಿಂದ ಹರಿಯುವ ಶೈಲಿಯನ್ನು ನೋಡುತ್ತಿದ್ದುದುಂಟು.

ಇದೇ ದಾರಿಯಲ್ಲಿ ಮುಂದುವರಿದು, ಹಂದಿಕೊಡ್ಲು ಹಾಡಿಯನ್ನು ದಾಟಿ ಇನ್ನೇನು ಮುಖ್ಯ ರಸ್ತೆಯ ಹತ್ತಿರ ಬಂದು ತಲುಪುತ್ತೇವೆ ಎನ್ನುವಷ್ಟರಲ್ಲಿ ಒಂದು ತೋಡು; ಅದನ್ನು ದಾಟಲು ಒಂದು ದಪ್ಪನೆಯ ಮರದ ಕಾಂಡವನ್ನು ಹಾಕಿರುತ್ತಿದ್ದರು. ಆದರೆ, ಆ ತೋಡಿನ ಒಂದು ದಡಕ್ಕೂ ಇನ್ನೊಂದು ದಡಕ್ಕೂ ಎತ್ತರದ ವ್ಯತ್ಯಾಸ ಇದ್ದುದರಿಂದ, ಈ ಸಂಕವು ತುಸು ಇಳಿಜಾರಾಗಿತ್ತು; ಆ ಇಳಿಜಾರಿನ ಸಂಕವನ್ನು ತುಸು ಜಾಗ್ರತೆಯಿಂದಲೇ ದಾಟಬೇಕಿತ್ತು.

ನಮ್ಮ ಶಾಲೆಗೆ ಹೋಗಲು ಇನ್ನೊಂದು ದಾರಿಯಿತ್ತು; ವಾಸ್ತವವಾಗಿ ಈ ದಾರಿಯಲ್ಲಿ ನಡೆದು ಹೋದರೆ, ಸುಮಾರು ಅರ್ಧ ಕಿ.ಮೀ. ಕಡಿಮೆ ದೂರ. ಆದರೆ, ದಾರಿಯುದ್ದಕ್ಕೂ ಗುಡ್ಡ, ಕಾಡು, ತುಸು ನಿರ್ಜನ ಪ್ರದೇಶ ಇದ್ದುದರಿಂದ, ಇಲ್ಲಿ ಹೆಚ್ಚು ಜನ ಹೋಗುತ್ತಿರಲಿಲ್ಲ. ಜತೆಗೆ, ವಿಶಾಲವಾದ ಬತ್ತದ ಬಯಲಿದ್ದ 'ಹೆರಬೈಲ್'ನ ಆ ದಾರಿಗಡ್ಡಲಾಗಿ ಸಣ್ಣಹೊಳೆಯೊಂದು ಹರಿಯುತ್ತಿತ್ತು. ಅದನ್ನು ದಾಟಲು ಒಂದೇ ಮರದ ಕಾಂಡದ ಸಂಕ. ಸುಮಾರು ಇಪ್ಪತ್ತೈದು ಅಡಿ ಅಗಲದ ಆ ಸಣ್ಣಹೊಳೆಯುಲ್ಲಿ ಸದಾ ಕಾಲ ನೀರು; ಮಳೆಗಾಲದಲ್ಲಿ ತುಂಬಾ ನೀರು, ಚಳಿಗಾಲದಲ್ಲಿ ಹದವಾದ ನೀರು, ಬೇಸಗೆಯಲ್ಲಿ ತುಸು ನೀರು. ಅದಕ್ಕೆ ಅಡ್ಡಲಾಗಿದ್ದ ಉದ್ದನೆಯ ಸಂಕವನ್ನು ದಾಟಲು, ಮಕ್ಕಳಿಗೆ ನಿಜವಾಗಿಯೂ ತುಸು ಭಯ. ಒಂದೇ ಆ ಮರದ ಆ ಸಂಕದ ಮಧ್ಯ ಭಾಗ ತಲುಪಿದಾಕ್ಷಣ ಅದು ಸಣ್ಣಗೆ ಅಲುಗಾಡಲು ಆರಂಭವಾಗುತ್ತಿತ್ತು! ಆಧಾರಕ್ಕೆಂದು ಅದಕ್ಕೊಂದು ಕೈಪಿಡಿಯಂತಹ ರಚನೆಯನ್ನು ಮಾಡುವ ಪ್ರಯತ್ನ ನಡೆಸುತ್ತಿದ್ದರು; ಆದರೆ ಅದು ಹೆಚ್ಚಿನ ಅವಧಿಯಲ್ಲಿ ಬಿದ್ದು ಹೋಗಿರುತ್ತಿದ್ದುದೇ ಜಾಸ್ತಿ. ಆದ್ದರಿಂದ ಆ ಸಂಕದ ಮೇಲಿನ ನಡಿಗೆ ಎಂದರೆ, ಮಕ್ಕಳಿಗಂತೂ ಹಗ್ಗದ ಮೇಲಿನ ನಡಿಗೆ. ಸಣ್ಣ ಮಕ್ಕಳು ಅದನ್ನು ದಾಟುವಾಗ ದೊಡ್ಡ ಮಕ್ಕಳು ಕೈ ಹಿಡಿದುಕೊಳ್ಳಲೇಬೇಕಿತ್ತು.

ಮಳೆಗಾಲದಲ್ಲಿ ಆ ತೋಡಿನಲ್ಲಿ ತುಂಬಾ ನೀರು ಇರುತ್ತಿದ್ದುದರಿಂದ, ಯಾವುದೇ ಕಾರಣಕ್ಕೂ ಆ ದಾರಿಯಲ್ಲಿ ಹೋಗಬಾರದೆಂದು ಮನೆಯವರು ತಾಕೀತು ಮಾಡುತ್ತಿದ್ದರು. ಸಣ್ಣಗೆ ಅಲುಗಾಡುತ್ತಿದ್ದ ಆ ಹೆರಬೈಲು ಸಂಕದ ಮೇಲಿನ ನಡಿಗೆಯನ್ನು ನೆನಪಿಸಿಕೊಂಡರೆ ಈಗಲೂ ಅಂಗೈ ಹಿಂದಿನ ರೋಮ ನೆಟ್ಟಗೆ ನಿಲ್ಲುತ್ತದೆ – ಸಂಕದ ಮೇಲಿನ ನಡಿಗೆಯ ರೋಚಕತೆಯನ್ನು ಮತ್ತೊಮ್ಮೆ ಅನುಭವಿಸಿದಂತಾಗುತ್ತದೆ.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವರ್ಗಾವಣೆ ಪ್ರಹಸನವಾಗಿಯೇ ಅಂತ್ಯಗೊಳ್ಳದಿರಲಿ

ಪ್ರತಿ ವರ್ಷದಂತೆ ಈ ಬಾರಿಯೂ ಮುಖ್ಯ ಕಾರ್ಯ ದರ್ಶಿಯವರು ವರ್ಗಾವಣೆ ಮಾರ್ಗಸೂಚಿಗಳನ್ನು ಹೊರಡಿಸಿ, ಅವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಕನಿಷ್ಠ ಅವಧಿ ಪೂರ್ಣಗೊಳಿಸದವರನ್ನು, ನಿವೃತ್ತಿಗೆ ಎರಡು ವರ್ಷಕ್ಕಿಂತ ಕಡಿಮೆ ಅವಧಿ ಇರುವವರನ್ನು ವರ್ಗಾಯಿಸದಿರುವುದು ಮತ್ತು ಸಕಾರಣವಿಲ್ಲದೆ ಅವಧಿಗೂ ಮೊದಲು ವರ್ಗಾವಣೆ ಮಾಡದಿರುವುದು, ವರ್ಗಾವಣೆ ಆದೇಶದಲ್ಲಿ ಹುದ್ದೆಯನ್ನು ತೋರಿಸಬೇಕಾದುದು ಮತ್ತು ಸಾಮಾನ್ಯ ವರ್ಗಾವಣೆಯ ಅವಧಿ ಮುಗಿದ ನಂತರ ಮುಖ್ಯ ಮಂತ್ರಿಯ ಅನುಮೋದನೆಯೊಂದಿಗೆ ವರ್ಗಾವಣೆ ಆದೇಶ ಹೊರಡಿಸುವುದು, ಅವುಗಳಲ್ಲಿ ಪ್ರಮುಖವಾದವು.

ಪ್ರತಿ ವರ್ಷವೂ ಮುಖ್ಯ ಕಾರ್ಯದರ್ಶಿಯಿಂದ ಇಂತಹ ಸೂಚನೆಗಳು ಯಥಾಪ್ರಕಾರ ಹೊರಡುವುದು, ಮಾರ್ಗಸೂಚನೆಗಳು ಉಲ್ಲಂಘನೆಯಾಗುವುದು, ಬಾಧಿತರಾದವರು ಕೆಎಟಿ ಮತ್ತು ಉಚ್ಚ ನ್ಯಾಯಾಲಯದ ಮೊರೆಹೋಗುವುದು, ಮಾಮೂಲಾಗಿದೆ, ಚರ್ವಿತಚರ್ವಣವೂ ಆಗಿಬಿಟ್ಟಿದೆ. ಕರ್ನಾಟಕ ಸರಕಾರದ ಸಚಿವಾಲಯದಲ್ಲಿ ಉನ್ನತ ಸ್ಥಾನದಲ್ಲಿದ್ದು, ನೌಕರರ ಸೇವಾ ವಿಷಯಗಳನ್ನು ನಿರ್ವಹಿಸಿ ನಿವೃತ್ತರಾಗಿರುವ ನನ್ನ ಹಿರಿಯ ಮಿತ್ರರೊಬ್ಬರ ಪ್ರಕಾರ, 1980ರ ದಶಕದ ಆದಿಭಾಗದಿಂದ ವರ್ಗಾವಣೆಯೆಂಬುದೊಂದು ದಂಧೆಯಾಗಿ ಮಾರ್ಪಟ್ಟಿದ್ದು, ಅದಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳ ಉಲ್ಲಂಘನೆ ಮಾಮೂಲಿನಂತಾಗಿದ್ದು, ಸಕಾರಣವಿಲ್ಲದ ಅವಧಿಪೂರ್ಣ ವರ್ಗಾವಣೆಯೇ ಅದರಲ್ಲಿ ಪ್ರಮುಖವಾದದ್ದು. ಪ್ರಭಾವಿ ನೌಕರರು ತಮಗೆ ಬೇಕಾದ ಶಾಸಕರನ್ನೋ, ಸಚಿವರನ್ನೋ ಹಿಡಿದುಕೊಂಡು, ಜತೆಗೆ ಹಣವನ್ನೂ ಖರ್ಚು ಮಾಡಿ ತಮಗೆ ಬೇಕಾದ ಹುದ್ದೆಗಳಿಗೆ ವರ್ಷದಲ್ಲಿ ಯಾವಾಗ ಬೇಕಾದರೂ ವರ್ಗಾವಣೆ ಮಾಡಿಸಿಕೊಳ್ಳುತ್ತಾರೆ, ಪ್ರಭಾವಿಗಳಲ್ಲದವರು ಯಾರಿಗೂ ಬೇಡದ ಹುದ್ದೆಗಳಿಗೆ ವರ್ಗಾವಣೆಗೊಳ್ಳುತ್ತಾರೆ. ಹುದ್ದೆಯನ್ನೇ ತೋರಿಸದಿರುವ ಕೆಲವರಂತೂ, ಸಂಬಳವೂ ಇಲ್ಲದೆ ಹುದ್ದೆಗಾಗಿ ದೀರ್ಘ ಕಾಲ ಕಾಯಬೇಕಾಗುತ್ತದೆ. ಮುಖ್ಯ ಮಂತ್ರಿಯವರ ಅನುಮೋದನೆ ಪಡೆದುಕೊಂಡ ವರ್ಗಾವಣೆ ಆದೇಶಗಳಿಗೆ ಪಾವಿತ್ರ್ಯ ತಾನೇ ತಾನಾಗಿ ಲಭಿಸಿಬಿಡುತ್ತದೆ! ಪ್ರತಿ ವರ್ಷದ ವರ್ಗಾವಣೆಯ ಮಾರ್ಗಸೂಚಿಯಂತೆ ಈ ವರ್ಷದ್ದೂ ಒಂದು ಪ್ರಹಸನವಾಗಿಯೇ ಅಂತ್ಯಗೊಳ್ಳದಿರಲಿ ಎಂಬುದು ಆಶಯ!

–ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಅರ್ಥ ಪೂರ್ಣ ಲೇಖನ

29/5/2025 ರ ನೂರೆಂಟು ವಿಶ್ವ ಓದಿದೆ. ಕನ್ನಡ ಕನ್ನಡಿಗರ ಬಗ್ಗೆ ಇತ್ತೀಚೆಗೆ ನೂರಾರು ಅಪ್ರಬದ್ಧ ಹೇಳಿಕೆಗಳು ಬರುತ್ತಿವೆ. ಕೆಲವು ಸೆಲೆಬ್ರಿಟಿಗಳು ಕನ್ನಡದ ಕುರಿತು ಮನಸ್ಸಿಗೆ ತೋಚಿದಂತೆ ಗಳುಪುತ್ತಿದ್ದಾರೆ. ನನಗೆ ಉರಿಯುತ್ತಿತ್ತು. ಮೊನ್ನೆ ನಟ ಕಮಲ್ ಹಾಸನ್ 'ಕನ್ನಡಕ್ಕೆ ತಾಯಿ ತಮಿಳು' ಎಂದು ಹಾವು ಬಿಟ್ಟ. ಅದಕ್ಕೂ ಮುಂಚೆ ಇದೇ ಮಹಾನ್ ಕಲಾವಿದ ಶಿವಣ್ಣನಿಗೆ ನಾನು ಚಿಕ್ಕಪ್ಪ ಎಂದು ಹೇಳಿ ಶಿವರಾಜ್ ಕುಮಾರ್ ಅವರನ್ನು ತಬ್ಬಿಕೊಂಡ. ಅಣ್ಣಾವ್ರ ಕುಟುಂಬದೊಂದಿಗೆ ಉತ್ತಮ ಬಾಂಧವ್ಯ ಇಟ್ಟುಕೊಂಡು ಆ ಮನೆಯ ಸಹೃದಯತೆ,ಅಣ್ಣಾವ್ರ ಹೃದಯ ವೈಶಾಲ್ಯ ಇಲ್ಲದೆ ಮಾತಾಡಿದ್ದು ತಪ್ಪೆನಿಸಿತು. ಹಾಗೆ ಈ ತರದ ಎಡಬಿಡಂಗಿ ಹೇಳಿಕೆಗಳು ಬಂದಾಗ ನಾವು ಆವೇಶಗೊಳ್ಳುವುದು ಸರಿಯಲ್ಲ ಎಂಬುದು ಈ ಬರಹದಿಂದ ಅರ್ಥವಾಯಿತು. ಇದೊಂದು ಅರ್ಥಪೂರ್ಣ ಲೇಖನ.

–ಬಿ.ಎಸ್.ಮೋಹನ್ ಕುಮಾರ್, ಬೆಂಗಳೂರು

ಒಂದು ಚಿಕ್ಕ ಬೆಂಕಿ ಕಡ್ಡಿ, ಇಡೀ ಮನೆಯನ್ನೇ ಸುಟ್ಟೀತಲ್ಲವೆ?

ಕನ್ನಡ ಭಾಷೆ, ಯಾರೋ ಸೋನು, ಕಮಲ್ ಹಾಸನ್, ತಮನ್ನಾ ಅಲ್ಲಾಡಿಸುವಷ್ಟು ದುರ್ಬಲವೋ ಎಂಬ ಪ್ರಶ್ನೆಯನ್ನು 29.05 ರ 'ನೂರೆಂಟು ವಿಶ್ವ' ನಮ್ಮ ಮುಂದಿಟ್ಟಿದೆ. ಅಲ್ಲಾ ಸ್ವಾಮಿ, ಒಂದು ಚಿಕ್ಕ ಬೆಂಕಿ ಕಡ್ಡಿ, ಇಡೀ ಮನೆಯನ್ನೇ ಸುಟ್ಟೀತಲ್ಲವೆ?

'ನಿಮ್ಮ ಕನ್ನಡ ಭಾಷೆ ಹುಟ್ಟಿದ್ದು ನಮ್ಮ ತಮಿಳಿನಿಂದ' ಅಂದ ಕಮಲ್ ಹಾಸನ್ ಅವರ ಮಾತನ್ನು ಅಷ್ಟು ಸಲೀಸಾಗಿ ತಳ್ಳಿಹಾಕಲು ಬರುತ್ತದೆಯೇ? ಅಷ್ಟಕ್ಕೂ ಅವರೊಬ್ಬ ಸೆಲಿಬ್ರಿಟಿ, ಕನ್ನಡ ಭಾಷೆಯ ಸಿನಿಮಾಗಳಲ್ಲೂ ನಟಿಸಿ ಕನ್ನಡಿಗರ ಮೆಚ್ಚುಗೆ ಪಡೆದವ. ಈಗ ಏಕಾಏಕಿ, ಅದೂ ಕನ್ನಡದ ಮೇರು ನಟ ಶಿವರಾಜ್ ಕುಮಾರ್ ಅವರನ್ನು ಪಕ್ಕದಲ್ಲೇ ಕುಳ್ಳಿರಿಸಿಕೊಂಡು, ಡಾ. ರಾಜ್‌ಕುಮಾರ್ ಅವರ ಬಹುದೊಡ್ಡ ಫ್ಯಾನ್ ಅನ್ನುತ್ತ, ಈ ರೀತಿ ಹೇಳಿಕೆ ಕೊಡುವುದರ ಹಿಂದಿರುವ ಉದ್ದೇಶವನ್ನು ಅರಿಯಲೇ ಬೇಕಲ್ಲವೇ? ಅವರೇನು ಭಾಷಾ ಜ್ಞಾನಿಯೋ ಅಂತ ಕೇಳಿದ್ದೂ ಇಲ್ಲಿ ಅಷ್ಟು ಸಮಂಜಸವಲ್ಲ. ಒಬ್ಬ ಹೆಸರು ಪಡೆದವ ಏನೇ ಹೇಳಿದರೂ, ಅದಕ್ಕೂ ಅದರದೇ ಆದ ಅರ್ಥ ಇದ್ದೇ ಇರುತ್ತದೆ. ತಮ್ಮ ಹಿರಿತನ ಅಥವಾ ದೊಡ್ಡಸ್ತಿಕೆಯನ್ನು ಮೆರೆಯಲು ಇನ್ನೊಬ್ಬರನ್ನು ತುಳಿಯುವ ಪ್ರಯತ್ನವೂ ನಡೆದೇ ಇರುತ್ತದೆ ಎಂಬುದೂ ನಿಜ. ಹೇಗಾದರೂ ಮಾಡಿ ಕನ್ನಡಿಗರನ್ನು ಕೆಣಕಬೇಕು ಎಂಬುದೂ ಉದ್ದೇಶ ಇರುವಾಗ, ಅದನ್ನು ಪ್ರತಿಭಟಿಸದೇ, ಏನೋ ಹೇಳಿದ್ದಾನೆ ಅಂತ ಸುಮ್ಮನಿದ್ದರೆ ಅದು ನಮಗೇ ಕಂಟಕವಾಗುವುದರಲ್ಲಿ ಅನುಮಾನವೇ ಇಲ್ಲ.

ಅದೇ ರೀತಿ, ಸೋನು ನಿಗಮ್. ತಾವು ಬಂದ ಕೆಲಸ ಪೂರೈಸಿಕೊಂಡು ಹೋಗುವುದನ್ನು ಬಿಟ್ಟು, ಕನ್ನಡಿಗರನ್ನು ಕೆಣಕುವ ಅವಶ್ಯಕತೆಯಾದರೂ ಏನಿತ್ತು? ಕನ್ನಡದ ಅದೆಷ್ಟೋ ಹಾಡುಗಳಿಗೆ ಧ್ವನಿಯಾಗಿ, ಕನ್ನಡಿಗರ ಮನ ಗೆದ್ದಿದ್ದರಿಂದ ಅವರಿಂದ ಕೆಲ ಕನ್ನಡ ಹಾಡು ಕೇಳುವ ಮನಸ್ಸಾಗುವುದೂ ಸಹಜ. ಅದಕ್ಕೇ ಪಹಲ್ಗಾಮ್ ದಾಳಿಯನ್ನು ಥಳುಕಿ ಹಾಕಿದ್ದು ಏನನ್ನು ಸೂಚಿಸುತ್ತದೆ. ಇವರೆಲ್ಲ ಬಡಪಾಯಿ ಕನ್ನಡಿಗರು, ತನ್ನ ಬಹುದೊಡ್ಡ ಪ್ರಶಂಸಕರು, ತಾನು ಹೇಳಿದ್ದಕ್ಕೆ ಮರು ಮಾತನಾಡುವವರಲ್ಲ ಎಂದೆಲ್ಲ ತಿಳಿದು ಈ ರೀತಿ ವರ್ತಿಸಿದರೆ ಅದನ್ನೂ ಕೇಳಿಕೊಂಡು, ಅವರು ಹಾಡಿದ ಹಾಡನ್ನೇ ಕೇಳಿಕೊಂಡು, ಅವರು ಕೇಳಿದಷ್ಟು ಸಂಭಾವನೆ ಕೊಟ್ಟು ಕೈ ಮುಗಿಯಬೇಕಿತ್ತೆ? ಅವರನ್ನು ಕರೆಯಿಸಿದ್ದು ನಮಗಾಗಿಯೋ, ಇನ್ನಾರಿಗೋ? ಇಲ್ಲಿ ಅವರ ಇಷ್ಟ-ಕಷ್ಟಗಳೂ ಮುಖ್ಯವಲ್ಲ. ಆದರೆ ಹಾಗೆ ಆಗಿದೆಯೇ? ತಾನೊಬ್ಬ 'ಸೆಲಿಬ್ರಿಟಿ' ಎಂಬ ದರ್ಪ! ಆ ದರ್ಪವನ್ನು ಮುರಿಯಲೇ ಬೇಕಿತ್ತು. ಅದೇ ಆಗಿದೆ.

ಇನ್ನೊಂದು ಉದಾಹರಣೆ, ಮೈಸೂರ್ ಸ್ಯಾಂಡಲ್ ಸೋಪಿಗೆ ತಮನ್ನಾ ಆಯ್ಕೆ. ನಾವೆಲ್ಲ ಕೇಳಿದ ಗಾದೆ ಮಾತೆಂದರೆ 'ಹಿತ್ತಲ ಗಿಡ ಮದ್ದಲ್ಲ' ಎಂಬುದು. ಇಲ್ಲೂ ಇದೇ ಆಗಿದೆ. ಅಂತಾರಾಷ್ಟ್ರೀಯ ಮನ್ನಣೆ ಪಡೆಯಬೇಕೆಂತಾದರೆ ಪರಭಾಷಿಕರನ್ನೇ ರಾಯಭಾರಿಯಾಗಿ ನೇಮಿಸಿಕೊಳ್ಳಬೇಕೆ? ಈಗಾಗಲೇ ಯಾವುದೇ ರಾಯಭಾರಿತ್ವ ಇಲ್ಲದಿದ್ದರೂ ಮೈಸೂರ್ ಸ್ಯಾಂಡಲ್ ಉತ್ತಮ ವಹಿವಾಟು ಮಾಡಿ, ಒಳ್ಳೆಯ ಲಾಭವನ್ನೂ ಗಳಿಸುತ್ತಿದೆ ಅಂದಮೇಲೆ ರಾಯಭಾರಿ ಸಂಸ್ಕೃತಿ ಏಕೆ? ಪೈಪೋಟಿ ಯುಗ ಎಂಬುದನ್ನು ಒಪ್ಪಿಕೊಂಡರೂ, ಕೆಲ ವಸ್ತುಗಳು ತಮ್ಮದೇ ಆದ ವಿಶಿಷ್ಟತೆಗಳನ್ನು ಹೊಂದಿ, ಗ್ರಾಹಕರ ಮನದಾಳದಲ್ಲಿ ಗಟ್ಟಿಯಾಗಿ ನೆಲೆ ನಿಂತಿರುತ್ತವೆ. ಅವುಗಳ ಬ್ರ್ಯಾಂಡ್ ಇಮೇಜ್ ಅಷ್ಟೊಂದು ಪ್ರಬಲವಾಗಿರುತ್ತದೆ. ಮಾಜಿ ಕ್ರಿಕೆಟಿಗರನ್ನು ಅರಣ್ಯ ಇಲಾಖೆ ರಾಯಭಾರಿಯಾಗಿ ನಾಮ ನಿರ್ದೇಶನ ಮಾಡಲಾಗುವುದು ಅಂತ ಅರಣ್ಯ ಸಚಿವರು ಹೇಳಿ ಲ್ಲವೆ? ಅವರೂ ಯಾವುದೇ ಸಂಭಾವನೆ ನಿರೀಕ್ಷಿಸುತ್ತಿಲ್ಲ. ಇವರ ಬದಲಿಗೆ ಇನ್ನಾರನ್ನೋ ಆಯ್ಕೆ ಮಾಡಿದ್ದರೆ ಏನಾಗುತ್ತಿತ್ತು? ಇವೆಲ್ಲ ಕಾಣಲು ಅತಿ ಸಣ್ಣ ವಿಷಯ ಅನಿಸಿದರೂ, ಪರಿಣಾಮ ಮಾತ್ರ ಅಗಾಧವಾದ್ದೇ ಇರುತ್ತದೆ. ಯಾರು, ಯಾವಾಗ, ಎಷ್ಟರ ಮಟ್ಟಿಗೆ ಅಲ್ಲಾಡಿಸುತ್ತಾರೆ ಎಂಬುದು ಮನವರಿಕೆಯಾಗುವುದು, ಯಾವಾಗ ಆಗಬೇಕಾದ ಅನಾಹುತಗಳೆಲ್ಲ ಆಗಿ ಮುಗಿದಿರುತ್ತವೋ ಆಗ.

ಕನ್ನಡದ ಅಸ್ಮಿತೆ ಉಳಿಸಿಕೊಳ್ಳಲು ಇಂತಹವುಗಳು ನಡೆಯುತ್ತಲೇ ಇರಬೇಕು. ಈಗಾಗಲೇ ಕನ್ನಡ ನಾಡಿನಲ್ಲಿ ಕನ್ನಡದ ಸ್ಥಿತಿ ಹೇಗಾಗುತ್ತಿದೆ ಎಂಬ ಅರಿವೂ ಎಲ್ಲವರಿಗೂ ಇದೆ. ಒಬ್ಬ ಸೋನು, ಒಬ್ಬ ಕಮಲ್ ಹಾಸನ್, ಒಬ್ಬ ತಮನ್ನಾ ಸೇರಿದಾಗಲೇ ಪ್ರಬಲವಾಗುವುದು. ಇಂತಹವುಗಳನ್ನು ಮೊಳಕೆಯಲ್ಲಿಯೇ ಚಿಪ್ಪರಿಸಿ ಬಿಡಬೇಕು. ಅಂದರೆ ಮಾತ್ರ ಮುಂದೆಂದೂ ಚಿಗುರದು!

–ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ

ರಾಷ್ಟ್ರೋತ್ಥಾನ @60: ವಿದ್ಯಯಾ ವಿಂದತೇ ಅಮೃತಂ!

ಪ್ರಚಲಿತ
ರವೀ ಸಜಂಗದ್ದೆ
vveditoped@gmail.com

ಭಾರತಾಂಬೆಯ ಮಡಿಲ ಮಣ್ಣಿನ ಸೊಗಡು, ಸೊಬಗು ಮತ್ತು ಸಂಸ್ಕೃತಿಯನ್ನು ವಿದ್ಯಾರ್ಥಿಗಳ ಮನಸು ಮತ್ತು ಹೃದಯದಲ್ಲಿ ತುಂಬಿದಾಗ ಅಂಥಾ ಮಕ್ಕಳು ಶ್ರೇಷ್ಠ ಜನಾಂಗವಾಗಿ ಹೊರಹೊಮ್ಮಲು ಸಾಧ್ಯವಾಗುವುದು. ಅನ್ಯಾನ್ಯ ಕಾರಣಗಳಿಂದ ಒಂದಷ್ಟು ಕುಗ್ಗುತ್ತಿರುವ ದೇಶದ ಅಂತಃಸತ್ವವನ್ನು ಮತ್ತೆ ಮೇಲೆತ್ತಿ, ಸದೃಢ ಸಶಕ್ತ, ಸುಶಿಕ್ಷಿತ ಪಡೆಯನ್ನು ನಿರ್ಮಿಸಲು ಸಂಸ್ಕೃತಿಯುಕ್ತ ಮತ್ತು ಸಂಸ್ಕಾರಯುತ ಶಿಕ್ಷಣದ ಅಗತ್ಯವಿದೆ. ವಿದ್ಯಾದಾನವು ಭಾರತದ ನೆಲದ ವಿಶಿಷ್ಟ ಗುಣ. ಜಗತ್ತಿಗೆ ಲಕ್ಷಾಂತರ ವಿದ್ವಾಂಸರು ಮತ್ತು ಬುದ್ಧಿವಂತರನ್ನು ನೀಡಿದ, ಪ್ರೌಢಿಮೆಯ ಶಿಕ್ಷಣ ನೀಡುತ್ತಾ ಸಮಾಜದ ಸರ್ವಾಂಗೀಣ ಭೌತಿಕ, ಆಧ್ಯಾತ್ಮಿಕ ಸಾಧನೆಗೆ ಬೆಳಕಾಗುವ ನಿಟ್ಟಿನಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳು ದೇಶಾದ್ಯಂತ ಕಾರ್ಯನಿರ್ವಹಿಸುತ್ತಿವೆ. ಅಂಥಾ ಉತ್ಕೃಷ್ಟ ಕಲಿಕಾ ಸಂಸ್ಥೆಗಳ ಸಾಲಲ್ಲಿ ಅಗ್ರಜನಾಗಿ ನಿಲ್ಲುವುದು ರಾಷ್ಟ್ರೋತ್ಥಾನ ಪರಿಷತ್.

ಸಮಾಜದ ಸ್ವಾಸ್ಥ್ಯ ಹಾಗೂ ಸಬಲತೆಯನ್ನು ಬಲಪಡಿಸುವ ನಿಟ್ಟಿನಲ್ಲಿ, ಆಧುನಿಕತೆಯ ಭರಾಟೆಯ ನಡುವೆ, ನಶಿಸುತ್ತಿರುವ ಸಂಸ್ಕಾರಯುತ ಶಿಕ್ಷಣವನ್ನು ಮತ್ತೆ ಹಳಿಗೆ ತರಲು ಹಾಗೂ ಶಿಕ್ಷಣ, ಸಾಹಿತ್ಯ, ಸೇವೆ ಮತ್ತು ಆರೋಗ್ಯ ಎನ್ನುವ ನಾಲ್ಕು ರಂಗಗಳ ತಳಹದಿಯ ಮೇಲೆ, ಸಮಾಜದ ಉತ್ಥಾನ ಮತ್ತು ಉದ್ಧಾರದ ಉದ್ದೇಶದಿಂದ ಜನುಮ ತಾಳಿದ ರಾಷ್ಟ್ರೋತ್ಥಾನ ಸಂಸ್ಥೆಗೆ ಈಗ ಅರವತ್ತರ ಹರೆಯ! ವ್ಯಕ್ತಿ, ವ್ಯಕ್ತಿತ್ವ, ಉತ್ಕೃಷ್ಟ ಯುವ ಜನಾಂಗ ಮತ್ತು ಶ್ರೇಷ್ಠ ಸಮಾಜ ನಿರ್ಮಾಣದ ಜತೆ ಜತೆಗೆ ಸರಕಾರದಿಂದ ಯಾವುದೇ ಸವಲತ್ತು ಕೇಳದೇ, ಸರಕಾರವನ್ನು ಒಂದು ಚೂರೂ ಅವಲಂಬಿಸದೇ ಈ ಸಂಸ್ಥೆ ಕಾರ್ಯೋನ್ಮುಖವಾಗಿದೆ. ಜತೆಗೆ ಸಮಾಜಕ್ಕೆ ಒಳ್ಳೆಯ, ಉತ್ತಮ, ಪೀಳಿಗೆಗಳು ನೆನಪಿಡುವ ಕೆಲಸವನ್ನು ಈ ಸಂಸ್ಥೆ ಸದ್ದಿಲ್ಲದೇ, ಪ್ರಚಾರ ಬಯಸದೇ ಕಳೆದ ಆರು ದಶಕಗಳಿಂದ ಮಾಡುತ್ತಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ಫೂರ್ತಿ ಮತ್ತು ಕೆಲವು ಮಹಾನುಭಾವರ ಸಮಾಜಮುಖಿ ಚಿಂತನೆಯ ಭಾಗವಾಗಿ 1965ರಲ್ಲಿ ಈ ಸಂಸ್ಥೆ ಸ್ಥಾಪಿತವಾಯಿತು. ರಾಷ್ಟ್ರೀಯ ವಿಚಾರಧಾರೆಗಳ ಶಿಕ್ಷಣದ ಜತೆಗೆ, ರಾಷ್ಟ್ರಪ್ರೇಮದ ಸಾಹಿತ್ಯ ಪ್ರಕಾರದಲ್ಲಿ ರಾಷ್ಟ್ರೋತ್ಥಾನ ನಿರಂತರ ಕೆಲಸ ಮಾಡುತ್ತಿದೆ. ಅಶಕ್ತರಿಗೆ, ಆರ್ಥಿಕವಾಗಿ ಸಬಲರಲ್ಲದ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಆರೋಗ್ಯ ಕ್ಷೇತ್ರದಲ್ಲಿ ಸಹಾಯ-ಸಹಕಾರ ನೀಡುತ್ತಾ ಬಂದಿದೆ. ಇದೆಲ್ಲವೂ ರಾಷ್ಟ್ರೋತ್ಥಾನ ಸಂಸ್ಥೆಯ ದೇಶಸೇವಾ ಯಜ್ಞ!

ರಾಷ್ಟ್ರೋತ್ಥಾನ ಶಾಲೆಗಳು ಪಂಚಮುಖಿ ಶಿಕ್ಷಣದ ತತ್ವಗಳನ್ನು ಅಳವಡಿಸುವ ಮೂಲಕ ವಿದ್ಯಾರ್ಥಿಗಳ ಪಂಚಕೋಶಾತ್ಮಕ ವಿಕಾಸ ಅಂದರೆ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿವೆ. ದೇಶದ ಪ್ರಾಚೀನ, ಕಾಲಾತೀತ ರಾಷ್ಟ್ರೀಯ ಸಂಸ್ಕೃತಿ ಮತ್ತು ವೈಜ್ಞಾನಿಕ ಕಲಿಕಾ ಸಂಪ್ರದಾಯಗಳ ಮೂಲಕ ಇಲ್ಲಿ ಮೌಲ್ಯಯುತ ಶಿಕ್ಷಣ ನೀಡಲಾಗುತ್ತಿದೆ. ಪರಂಪರೆಯಿಂದ ಬಂದಿರುವ ಸಾಂಪ್ರದಾಯಿಕ ಮತ್ತು ಶ್ರೇಷ್ಠ ಸಾಮಾಜಿಕ ಮೌಲ್ಯಗಳನ್ನು ಸಂರಕ್ಷಿಸುವ ಮತ್ತು ಉತ್ತೇಜಿಸುವ ನಿಟ್ಟಿನಲ್ಲಿ ಈ ಪ್ರಕಾರದ ಕಲಿಕೆಯು ಹೆಚ್ಚಿನ ಮಹತ್ವ ಪಡೆದುಕೊಂಡಿದೆ ಎಂದರೆ ತಪ್ಪಾಗಲಾರದು. ಗುಣಮಟ್ಟದ ಮತ್ತು ಧನಾತ್ಮಕ ಪರಿವರ್ತನೆಯ ಶಿಕ್ಷಣವು ಸಮಾಜದ ಎಲ್ಲ ವರ್ಗದ ಮಕ್ಕಳಿಗೂ ಲಭ್ಯವಾಗುವಂತೆ ಮಾಡುವುದು ರಾಷ್ಟ್ರೋತ್ಥಾನದ ಗುರಿ. ಜತೆಗೆ ಇದರ ಪ್ರಮುಖ ಕಾಳಜಿಯೆಂದರೆ ಮಕ್ಕಳು, ಪೋಷಕರು, ಶಿಕ್ಷಕರು ತಮ್ಮ ಪರಿಧಿಯಲ್ಲಿ ಸಕಾರಾತ್ಮಕ ಚಿಂತನೆ ಮತ್ತು ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಮೂಲಕ ವ್ಯಕ್ತಿತ್ವ ಪರಿವರ್ತನೆಯ ಸನ್ಮಾರ್ಗದ ಮೂಲಕ ಸಮಾಜದ ಸಾಮಾಜಿಕ ಸತ್ಪರಿವರ್ತನೆಯನ್ನು ಖಚಿತಪಡಿಸುವುದೂ ಆಗಿದೆ. ವಿದ್ಯಾರ್ಥಿ ಕೇಂದ್ರಿತ ಮತ್ತು ಆಕರ್ಷಕ-ಆಧುನಿಕ ಬೋಧನೆ, ಕಲಿಕಾ ವಾತಾವರಣ ಎಲ್ಲ ರಾಷ್ಟ್ರೋತ್ಥಾನ ಶಿಕ್ಷಣ ಸಂಸ್ಥೆಗಳ ಹೆಗ್ಗಳಿಕೆ. ಬಾಲ್ಯ ಶಿಕ್ಷಣ ಕೇಂದ್ರ, ಸಂಸ್ಥೆಗಳು, ರಾಜ್ಯ ಪಠ್ಯಕ್ರಮ ಶಾಲೆಗಳು, ಸಿಬಿಎಸ್‌ಸಿ ಶಾಲೆಗಳು ಮತ್ತು ಪಿಯುಸಿ ಕಾಲೇಜುಗಳೊಂದಿಗೆ ಆರಂಭವಾದ ಶಿಕ್ಷಣ ಯಜ್ಞವು ಈಗ ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧನೆ, ಉತ್ಕೃಷ್ಟ ಸಂಶೋಧನಾಧಾರಿತ ಪಠ್ಯಪುಸ್ತಕ ಮತ್ತು ಬೋಧನಾ ಕ್ರಮದೊಂದಿಗೆ ಅತ್ಯುತ್ತಮ ಶಿಕ್ಷಕ ವೃಂದವನ್ನೂ ಸೃಷ್ಟಿಸಿ ಸಮಾಜಕ್ಕೆ ಅನನ್ಯ ಕೊಡುಗೆ ನೀಡುತ್ತಿದೆ.

ರಾಷ್ಟ್ರೋತ್ಥಾನ ಶಿಕ್ಷಣ ವ್ಯವಸ್ಥೆಯ ಪರಿಧಿಯ ಕಿರುನೋಟ ಇಲ್ಲಿದೆ. ರಾಜ್ಯ ಪಠ್ಯಕ್ರಮದಡಿಯಲ್ಲಿ ರಾಜ್ಯದ ವಿವಿಧೆಡೆಯ 14 ಶಾಲೆಗಳಲ್ಲಿ 7,000+ ವಿದ್ಯಾರ್ಥಿಗಳು ನುರಿತ ಮುನ್ನೂರು ಅಧ್ಯಾಪಕರ ಗರಡಿಯಲ್ಲಿ ಕಲಿಯುತ್ತಿದ್ದಾರೆ. ಇತರ 14 ಕಡೆಗಳಲ್ಲಿ ಸಿಬಿಎಸ್‌ಸಿ ಪಠ್ಯಕ್ರಮದ ಅಡಿಯಲ್ಲಿ 15000+ ವಿದ್ಯಾರ್ಥಿಗಳು 800ಕ್ಕೂ ಹೆಚ್ಚಿನ ಅನುಭವಿ ಶಿಕ್ಷಕರ ಮಾರ್ಗದರ್ಶನದಲ್ಲಿ ಕಲಿಯುತ್ತಿದ್ದಾರೆ. ಈ ಶೈಕ್ಷಣಿಕ ವರ್ಷದಿಂದ ಉಡುಪಿ ಜಿಲ್ಲೆಯ ಬ್ರಹ್ಮಾವರ ಸಮೀಪದ ಚೇರ್ಕಾಡಿ ಗ್ರಾಮದ ಕೇಶವ ನಗರದಲ್ಲಿ ಇಪ್ಪತ್ತು ಎಕರೆ ವಿಶಾಲ ಪ್ರದೇಶದಲ್ಲಿ ಪ್ರಿ-ಕೆಜಿಯಿಂದ ಪಿಯುಸಿವರೆಗಿನ ಶಿಕ್ಷಣ ಒದಗಿಸಲು ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಸಿಬಿಎಸ್‌ಸಿ ಶಾಲೆ ಹಾಗೂ ಪದವಿಪೂರ್ವ ಕಾಲೇಜು ಲೋಕಾರ್ಪಣೆಯಾಯಿತು. ಈ ವರ್ಷ ಪ್ರಿ-ಕೆಜಿಯಿಂದ ಎಂಟನೆಯ ತರಗತಿಯವರೆಗೆ ಹಾಗೂ ಪ್ರಥಮ ಪಿಯುಸಿ (PCMB, PCMCS, Commerce) ತರಗತಿಗಳು ಆರಂಭವಾಗಿವೆ. ಸುಮಾರು 800+ ಮಕ್ಕಳು ಈಗಾಗಲೇ ದಾಖಲಾತಿ ಮಾಡಿಸಿಕೊಂಡಿದ್ದಾರೆ. ಹತ್ತಿರದ ಪರಿಸರದಿಂದ ಶಿಕ್ಷಣ ಕೇಂದ್ರಕ್ಕೆ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಪಿಯುಸಿ ವಿದ್ಯಾರ್ಥಿಗಳಿಗೆ JEE, NEET, KCET, CA, CS, CLAT ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ, scholarship ಜತೆಗೆ SSLC ಅಂಕಗಳನ್ನು ಆಧರಿಸಿ 100%ವರೆಗೂ ವಿದ್ಯಾರ್ಥಿ ವೇತನ ದೊರೆಯಲಿದೆ. ಉಡುಪಿ ಪರಿಸರದ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆಗೆ ಉತ್ತಮ ಅವಕಾಶವಿದು. ಇದೇ ಮೇ 30ರಂದು ವಿದ್ಯಾರಂಭ, ಅಕ್ಷರ ಪಾಠ ಸಮಾರಂಭಕ್ಕೆ ಶೃಂಗೇರಿ ಜಗದ್ಗುರುಗಳು ಆಗಮಿಸಿ ಶುಭಾಶೀರ್ವಾದ ನೀಡಲಿದ್ದಾರೆ.

ರಾಷ್ಟ್ರೋತ್ಥಾನ ಪರಿವಾರಕ್ಕೆ ಮತ್ತೊಂದು ಹೊಸ ಕಟ್ಟಡಗಳು ಧಾರವಾಡದ ಮಮ್ಮಿಗಟ್ಟಿ ಹಾಗೂ ಸತ್ತೂರಿಲ್ಲಿ ನಿರ್ಮಾಣಗೊಂಡಿವೆ. ಮೊನ್ನೆ ಮೇ 23ರ ವೈಶಾಖ ಕೃಷ್ಣೈಕಾದಶಿಯಂದು ಈ ಹೊಸ ಕಟ್ಟಡಗಳು ಲೋಕಾರ್ಪಣೆಗೊಂಡವು. ಇದರ ಜತೆಗೆ ಮೇ 28ರಂದು ರಾಷ್ಟ್ರೋತ್ಥಾನ ಪದವಿಪೂರ್ವ ಕಾಲೇಜು ದಾವಣಗೆರೆ ಇದರ ನೂತನ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ನಿಲಯಗಳ ಕಟ್ಟಡಗಳ ಉದ್ಘಾಟನೆ ನೆರವೇರಲಿದೆ. ಸಂಸ್ಕಾರಯುತ ಮತ್ತು ಮೌಲ್ಯಯುತ ಶಿಕ್ಷಣವನ್ನು ಸಮಾಜದ ಕೊನೆಯ ಹಂತದ ಜನರಿಗೂ ಕೈಗೆಟುಕುವ ಶುಲ್ಕದೊಡನೆ ನೀಡುವ ಸತ್ಕಾರ್ಯಕ್ಕೆ ಯೋಜನೆಯ ಈ ಬಾರಿಯ ಹಂತದಲ್ಲಿ ಹಲವು ಹೊಸ ಕೇಂದ್ರ ಮತ್ತು ಕಟ್ಟಡಗಳು ರಾಷ್ಟ್ರೋತ್ಥಾನ ಪರಿಷತ್ ಬಳಗಕ್ಕೆ ಸೇರಿಕೊಂಡು ಪರಿಷತ್ ಮತ್ತಷ್ಟು ಸದೃಢವಾಯಿತು.

ಕಾಲಾಂತರದಲ್ಲಿ ಭಾರತದ ಮೇಲೆ ನಡೆದ ಹಲವು ಆಕ್ರಮಣಗಳ ಹೊರತಾಗಿಯೂ ಭಾರತ ಇಷ್ಟು ಅಚಲವಾಗಿರಲು, ಸದೃಢವಾಗಿರಲು ಇಲ್ಲಿನ ಪರಂಪರಾಗತ ಶಿಕ್ಷಣ ವ್ಯವಸ್ಥೆಯೇ ಕಾರಣ. ಅಂಥಾ ಉತ್ಕೃಷ್ಟ ಬೋಧನಾ ಕ್ರಮವನ್ನು ರಾಷ್ಟ್ರೋತ್ಥಾನ ಪರಿಷತ್ತಿನ ಎಲ್ಲ ಶಿಕ್ಷಣ ಸಂಸ್ಥೆಗಳು ಚಾಚೂ ತಪ್ಪದೇ ಪಾಲಿಸುತ್ತಿವೆ. ಅದ್ಭುತ ವಿಚಾರ ಎಂದರೆ ಭಾರತದ ಮೇಲೆ ನಡೆದ ದಾಳಿಗಳಿಂದ ವೈರಿ ಪಡೆಗಳಿಗೆ ನಮ್ಮ ಕಟ್ಟಡಗಳು, ಶ್ರದ್ಧಾ ಕೇಂದ್ರಗಳು ಮತ್ತು ಒಂದಷ್ಟು ಜನರನ್ನು ನಿರ್ಮೂಲನೆ ಮಾಡಲಷ್ಟೇ ಸಾಧ್ಯವಾಯಿತು. ನಮ್ಮ ಆಚಾರ, ವಿಚಾರ, ಸಂಸ್ಕೃತಿ, ಉದಾತ್ತ ಮೌಲ್ಯ, ಚಿಂತನೆಗಳು ಮತ್ತು ಸನಾತನ ಧರ್ಮದ ಅನನ್ಯ ವಿಚಾರಗಳನ್ನು ಸಾಸಿವೆಯಷ್ಟೂ ಅಳಿಸಲು ಸಾಧ್ಯವಾಗಲಿಲ್ಲ. ಬದಲಾಗಿ ಪ್ರತಿಯೊಂದು ದಾಳಿಯೂ ನಮ್ಮೆಲ್ಲರ ಅಸ್ಮಿತೆಯನ್ನು, ಅಂತಃಸತ್ವವನ್ನು ಮತ್ತಷ್ಟು ದೃಢವಾಗಿಸಿತು, ಉನ್ನತವಾಗಿಸಿತು! ಅದು ಸನಾತನ ಧರ್ಮದ ಶ್ರೇಷ್ಠತೆ, ಅಂಥಾ ಶ್ರೇಷ್ಠತೆಯ ಶೈಕ್ಷಣಿಕ ರೂಪವೇ ರಾಷ್ಟ್ರೋತ್ಥಾನ ಪರಿಷತ್!

ಈ ರಾಷ್ಟ್ರೋತ್ಥಾನ ಪರಿವಾರದ ಶಕ್ತಿ ಎಂದರೆ ಅದರ ಶ್ರೇಯೋಭಿವೃದ್ಧಿಗಾಗಿ ನಿರಂತರ ದುಡಿಯುವ ಹಲವಾರು ಸಜ್ಜನರು. ಕಳೆದ ನಾಲ್ಕು ದಶಕಗಳಿಂದ ರಾಷ್ಟ್ರೋತ್ಥಾನದ ಉಸಿರು, ಅಸ್ಮಿತೆ, ನಾಡಿಮಿಡಿತ, ಹೃದಯ ಎಂದು ಕರೆಸಿಕೊಳ್ಳುವವರು ಅದರ ಕಾರ್ಯದರ್ಶಿಯಾಗಿ ಅದ್ಭುತವಾದ ಕೆಲಸ ಮಾಡುತ್ತಿರುವ ದಿನೇಶ್ ಹೆಗ್ಡೆ. ರಾಜ್ಯಾದ್ಯಂತ ರಾಷ್ಟ್ರೋತ್ಥಾನ ಪರಿವಾರದ ವಿಸ್ತಾರದಲ್ಲಿ ಅವರ ಕೊಡುಗೆ ಅಪಾರ. ಮಕ್ಕಳಿಗೆ ಅವರ ಭವಿಷ್ಯ ರೂಪಿಸುವ ಸಾಧನವಾಗಿ ಶಾಲೆಗಳು ಇರಬೇಕು ಎನ್ನುವ ಸದುದ್ದೇಶದಿಂದ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ರಾಷ್ಟ್ರೋತ್ಥಾನ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಗುರಿ ಇದೆ. ಶಿಕ್ಷಣ ಮತ್ತು ಸಮಾಜ ಇನ್ನೊಂದು ಎತ್ತರ ಮೇಲೇರಲು ಹಲವರು ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ. ದಾನಿಗಳು, ಸಜ್ಜನರು, ಮಹನೀಯರ ದೊಡ್ಡ ಬಳಗವೇ ಇರುವುದು ರಾಷ್ಟ್ರೋತ್ಥಾನ ಪರಿಷತ್ತಿನ ನಿಜವಾದ ಆಸ್ತಿ-ಶಕ್ತಿ!

ಆರೋಗ್ಯ, ಶಿಕ್ಷಣ, ಸಮಾಜಸೇವೆ, ರಾಷ್ಟ್ರೀಯ ಸಾಹಿತ್ಯ ಸ್ವಾವಲಂಬನೆ, ರಕ್ತದಾನ ಕ್ಷೇತ್ರದಲ್ಲಿ ರಾಷ್ಟ್ರೋತ್ಥಾನ ದೊಡ್ಡ ಮಟ್ಟದಲ್ಲಿ ಕೊಡುಗೆ ನೀಡುತ್ತಿದೆ. ಇವರು ನಡೆಸುವ ಶಿಕ್ಷಣ ಸಂಸ್ಥೆಗಳಿಗೆ ಯಾರೂ ಮಾಲೀಕರು ಇಲ್ಲದಿದ್ದರೂ ಮಾಲೀಕತ್ವ ವಹಿಸಿಕೊಂಡ ಹಿತೈಷಿಗಳು ಸಾವಿರಾರು ಸಂಖ್ಯೆಯಲ್ಲಿ ಇರುವುದು ನಿಜವಾದ ಆಸ್ತಿ. ಯಾರೋ ಕಟ್ಟಿದ್ದಾರೆ, ಯಾರೋ ಕೊಟ್ಟಿದ್ದಾರೆ, ಯಾರೋ ಮಾಡುತ್ತಿದ್ದಾರೆ ಎನ್ನುವ ವಿಚಾರ ಹೌದಾದರೂ ನಮ್ಮಿಂದ ಇಂಥಾ ವಿಚಾರಗಳಿಗೆ ಹೇಗೆ ಸಹಾಯಹಸ್ತ ಚಾಚಬಹುದು ಎನ್ನುವ ನಿಟ್ಟಿನಲ್ಲಿ ನಾವೆಲ್ಲರೂ ಯೋಚಿಸಬೇಕು. ನಮ್ಮ ಕೈಲಾದ ಸಹಕಾರ ಎಲ್ಲರೂ ನೀಡಿದಾಗ ಇಂಥಾ ಶಾಲೆಗಳು ಇನ್ನಷ್ಟು ಅಭಿವೃದ್ಧಿ ಹೊಂದಿ, ಎಲ್ಲೆಡೆಗಳಲ್ಲಿ ಇಂಥಾ ರಾಷ್ಟ್ರೀಯತೆಯನ್ನು ಪ್ರತಿಪಾದಿಸುವ ಸಂಸ್ಥೆಗಳು ಜನುಮ ತಾಳಲು ಸಾಧ್ಯ. ನಮ್ಮನ್ನು ಈ ಮಟ್ಟಕ್ಕೆ ಬೆಳೆಸಿದುದರ ಸ್ಮರಣಾರ್ಥ ಮತ್ತು ಕೊಡುಗೆಯಾಗಿ ನಮ್ಮ ಊರಿನ ಶಾಲೆಗಳಿಗೆ ಮತ್ತು ರಾಷ್ಟ್ರೋತ್ಥಾನ ಮುಂತಾದ ಸಮಾಜಮುಖಿ ಚಿಂತನೆಯ, ಲಾಭರಹಿತವಾಗಿ ಶಿಕ್ಷಣ ನೀಡುತ್ತಿರುವ ಸಂಸ್ಥೆಗಳನ್ನು ನಮ್ಮ ಕೊಡುಗೆಗಳ ಮೂಲಕ ಉಳಿಸಿ, ಬೆಳೆಸುವ ಮಹತ್ತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಮುಂದಿನ ಜನಾಂಗಕ್ಕೆ ಆಸ್ತಿ ಮಾಡುವುದು ದೊಡ್ಡದಲ್ಲ; ನಮ್ಮನ್ನು ಸಮಾಜದ ಆಸ್ತಿಯಾಗಿ ಪರಿವರ್ತಿಸಿಕೊಂಡು, ಸಾಮಾಜಿಕ ಆಸ್ತಿಯಾದ ಮುಂದಿನ ಜನಾಂಗವನ್ನು ಉತ್ತಮ ರೀತಿಯಲ್ಲಿ ಅಭಿವೃದ್ಧಿ ಪಡಿಸುವ ಪಣ ತೊಡಬೇಕಾಗಿದೆ. ಉತ್ತಮ ನಾಳೆಗಳನ್ನು ಮತ್ತು ಉತ್ತಮ ಜನಾಂಗವನ್ನು ರೂಪಿಸುವ ಕೈಂಕರ್ಯದಲ್ಲಿ ತೊಡಗುವ ಎಲ್ಲ ಸಂಘ-ಸಂಘಟನೆಗಳಿಗೂ ರಾಷ್ಟ್ರೋತ್ಥಾನ ಮಾದರಿ ಅಗ್ರಜ. ಇಂಥಾ ಪರಿಷತ್ತುಗಳು, ಇದರ ಹಿಂದೆ ದುಡಿಯುವ ಕೈಗಳು ನೂರ್ಮಡಿಯಾಗಲಿ. ಅರವತ್ತರ ಸಂಭ್ರಮದಲ್ಲಿ ಇರುವ ರಾಷ್ಟ್ರೋತ್ಥಾನ ಪರಿಷತ್ ಇನ್ನಷ್ಟು ಶಿಕ್ಷಣ ಸಂಸ್ಥೆಗಳನ್ನು ತನ್ನ ಬಳಗಕ್ಕೆ ಸೇರಿಸಿಕೊಂಡು, ಸಂಸ್ಕಾರಯುತ ಮತ್ತು ಮೌಲ್ಯಯುತ ಶಿಕ್ಷಣ ಸಂಪದ್ಭರಿತವಾಗಿ ದೇಶದಗಲ ಪಸರಿಸಲಿ.

'ವಿದ್ಯಯಾ ವಿಂದತೇ ಅಮೃತಂ' ಅಂದರೆ ವಿದ್ಯಾಭ್ಯಾಸದ ಮೂಲಕ ಮನುಷ್ಯ (ವಿದ್ಯಾರ್ಥಿ) ಯಶಸ್ಸು ಗಳಿಸುತ್ತಾನೆ ಮತ್ತು ಆ ಮೂಲಕ ಪರಮಾನಂದ ಪಡೆಯುತ್ತಾನೆ. ಅಂಥಾ ಸಹಸ್ರಾರು ಪರಮಾನಂದಿಗಳನ್ನು ಮತ್ತು ರಾಷ್ಟ್ರ ಪ್ರೇಮಿಗಳನ್ನು ತಯಾರಿಸಿ ಸಮಾಜಕ್ಕೆ ಕೊಡುವ ರಾಷ್ಟ್ರೋತ್ಥಾನ ಪರಿಷತ್ತಿಗೆ ಮತ್ತದರ ಹಿಂದಿರುವ ಆರ್‌ಎಸ್‌ಎಸ್‌ನಂತಹ ಮುಂತಾದ ಧೀಶಕ್ತಿಗಳಿಗೆ ದೊಡ್ಡದೊಂದು ಸಲಾಂ!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:136

2024-25ರಲ್ಲಿ ಆಹಾರ ಧಾನ್ಯ ಉತ್ಪಾದನೆ ಶೇ.6.6 ಹೆಚ್ಚಳದೊಂದಿಗೆ 35.40 ಕೋಟಿ ಟನ್‌ಗೆ ಏರಿಕೆ | ಭತ್ತ, ಗೋಧಿ, ಮೆಕ್ಕೆಜೋಳ, ನೆಲಗಡಲೆ, ಸೋಯಾಬೀನ್ ದಾಖಲೆ ಉತ್ಪಾದನೆ

ಆಹಾರ ಧಾನ್ಯ ದಾಖಲೆ ಉತ್ಪಾದನೆ !

ದೆಹಲಿ: ಭಾರತದಲ್ಲಿ ಈ ಬಾರಿ ಆಹಾರ ಧಾನ್ಯಗಳ ಉತ್ಪಾದನೆ ಶೇ.6.6ರಷ್ಟು ಹೆಚ್ಚಳ ಕಂಡಿದೆ. ಇದು ಕಳೆದ 8 ವರ್ಷಗಳಲ್ಲಿಯೇ ಗರಿಷ್ಠ ಮಟ್ಟದ ಪ್ರಗತಿಯಾಗಿದೆ. 2024-25ನೇ ಹಣಕಾಸು ವರ್ಷದಲ್ಲಿ ಭಾರತದ ಆಹಾರಧಾನ್ಯ ಉತ್ಪಾದನೆ 35.40 ಕೋಟಿ ಟನ್ ತಲುಪುವ ನಿರೀಕ್ಷೆ ಇದೆ. ಪ್ರಮುಖ ಬೆಳೆಗಳಾದ ಭತ್ತ, ಗೋಧಿ, ಮೆಕ್ಕೆಜೋಳ, ನೆಲಗಡಲೆ ಮತ್ತು ಸೋಯಾಬೀನ್ ಪ್ರಸಕ್ತ ಬೆಳೆ ವರ್ಷದಲ್ಲಿ ದಾಖಲೆ ಪ್ರಮಾಣದಲ್ಲಿ ಉತ್ಪಾದನೆಯಾಗಿವೆ.

ಬೆಂಬಲಬೆಲೆ, ಪ್ರಾಕೃತಿಕ ಹಾನಿಗೆ ಪರಿಹಾರ ಮತ್ತು ಕಡಿಮೆ ಬಡ್ಡಿದರದಲ್ಲಿ ಕೃಷಿ ಸಾಲ ಸೇರಿದಂತೆ ಕೇಂದ್ರ ಸರಕಾರ ಕೈಗೊಂಡ ಹಲವು ರೈತಸ್ನೇಹಿ ನೀತಿ ಮತ್ತು ರಾಜ್ಯ ಸರಕಾರಗಳಿಂದ ಸಮರ್ಪಕ ಅನುಷ್ಠಾನ ಕಾರಣ ದೇಶದಲ್ಲಿ ಈ ಬಾರಿ ಆಹಾರಧಾನ್ಯ ದಾಖಲೆ ಪ್ರಮಾಣದಲ್ಲಿ ಉತ್ಪಾದನೆಯಾಗಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಹರ್ಷ ವ್ಯಕ್ತಪಡಿಸಿದ್ದಾರೆ. ದೇಶದ ಒಟ್ಟಾರೆ ಆಹಾರಧಾನ್ಯ ಉತ್ಪಾದನೆಯ 3ನೇ ಅಂದಾಜು ವರದಿ ಬಿಡುಗಡೆ ಮಾಡಿದ ಸಚಿವ ಚೌಹಾಣ್, ಆಹಾರಧಾನ್ಯ ಉತ್ಪಾದನೆ ನಿರಂತರ ಹೆಚ್ಚುತ್ತಿದೆ. ಬೇಳೆಕಾಳು ಮತ್ತು ಎಣ್ಣೆಕಾಳು ಉತ್ಪಾದನೆ ಮಾತ್ರ ಇನ್ನಷ್ಟು ಹೆಚ್ಚಬೇಕಿದ್ದು, ಆ ನಿಟ್ಟಿನಲ್ಲಿ ಪ್ರಯತ್ನ ನಡೆದಿದೆ ಎಂದರು.

ಯಾವ ಧಾನ್ಯ-ಎಷ್ಟು ಉತ್ಪಾದನೆ

- **2024-25ನೇ ಹಣಕಾಸು ವರ್ಷದಲ್ಲಿ ಗೋಧಿ ಉತ್ಪಾದನೆ ಭಾರೀ ಏರಿಕೆಯಾಗಿ 11.70 ಕೋಟಿ ಟನ್ ತಲುಪಲಿದೆ. ಈ ಮೊದಲು 11.50 ಕೋಟಿ ಟನ್ ಎಂದು ಅಂದಾಜು ಮಾಡಲಾಗಿತ್ತು. ಇದಕ್ಕೂ ಹಿಂದಿನ ವರ್ಷ 11.30 ಕೋಟಿ ಟನ್ ಗೋಧಿ ಉತ್ಪಾದನೆಯಾಗಿತ್ತು.**
- **2023-24ನೇ ಹಣಕಾಸು ವರ್ಷದಲ್ಲಿ 13.80 ಕೋಟಿ ಟನ್ ಗಳಷ್ಟಿದ್ದ ಭತ್ತದ ಉತ್ಪಾದನೆ ಈ ಬಾರಿ 14.90 ಕೋಟಿ ಟನ್‌ಗಳಿಗೆ ಏರಿಕೆ ಆಗಲಿದೆ. ಮೆಕ್ಕೆಜೋಳದ ಉತ್ಪಾದನೆಯೂ 4.20 ಕೋಟಿ ಟನ್ ಮುಟ್ಟುವ ನಿರೀಕ್ಷೆ ಇದೆ.**
- **ಏಕದಳ ಧಾನ್ಯಗಳ ಉತ್ಪಾದನೆ 6 ಲಕ್ಷ ಟನ್‌ನಷ್ಟು ಇರಲಿದೆ. ಕಳೆದ ವರ್ಷಕ್ಕಿಂತ ಅಧಿಕ ಉತ್ಪಾದನೆ ಆಗಲಿದೆ. ಬೇಳೆಕಾಳುಗಳ ಉತ್ಪಾದನೆಯೂ ಹಿಂದಿನ ವರ್ಷಕ್ಕಿಂತ 10 ಲಕ್ಷ ಟನ್ ಹೆಚ್ಚಿರಲಿದೆ. ಈ ಬಾರಿ ಬೇಳೆಕಾಳು ಉತ್ಪಾದನೆ 25 ಲಕ್ಷ ಟನ್‌ಗಳಿಗೆ ತಲುಪಲಿದೆ.**
- **ತೈಲಬೀಜಗಳ ಉತ್ಪಾದನೆ 4.30 ಕೋಟಿ ಟನ್‌ಗೆ ಮುಟ್ಟಲಿದೆ. ಕಳೆದ ವರ್ಷ 4 ಕೋಟಿ ಟನ್‌ಗಳಷ್ಟಿತ್ತು.**
- **ಸೋಯಾಬೀನ್ ಉತ್ಪಾದನೆ 1.51 ಕೋಟಿ ಟನ್ ಹಾಗೂ ನೆಲಗಡಲೆ 1.12 ಕೋಟಿ ಟನ್‌ಗಳಷ್ಟಿರಲಿದೆ. ಕಳೆದ ವರ್ಷಕ್ಕಿಂತ ಸೋಯಾಬೀನ್ 21 ಲಕ್ಷ ಟನ್ ಮತ್ತು ನೆಲಗಡಲೆ 17 ಲಕ್ಷ ಟನ್ ಅಧಿಕ ಉತ್ಪಾದನೆ ಆಗಲಿದೆ.**
- **ಕಬ್ಬು ಉತ್ಪಾದನೆ 45 ಕೋಟಿ ಟನ್ ಮುಟ್ಟುವ ನಿರೀಕ್ಷೆ ಇದೆ.ಅಂದರೆ, ಹಿಂದಿನ ವರ್ಷಕ್ಕಿಂತ 21.18 ಲಕ್ಷ ಟನ್‌ಗಳಷ್ಟು ಹೆಚ್ಚು ಇರಲಿದೆ. ಸಾಸಿವೆ ಉತ್ಪಾದನೆ 1.26 ಕೋಟಿ ಟನ್ ತಲುಪಲಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅಂಕಿ ಅಂಶ ನೀಡಿದ್ದಾರೆ.**

ಕುಟುಂಬದ ಭಾಗವೇ, ಭೌಗೋಳಿಕವಾಗಿ ಬೇರೆ ಅಷ್ಟೆ

ಪಿಒಕೆ ಜನರೂ ನಮ್ಮವರೇ: ಸಚಿವ ರಾಜನಾಥ್ ಸಿಂಗ್

ದೆಹಲಿ: ಪಾಕಿಸ್ತಾನ ಆಕ್ರಮಿತ ಕಾಶ್ಮೀರದ (ಪಿಒಕೆ) ಜನರೂ ನಮ್ಮವರೇ ಆಗಿದ್ದಾರೆ. ಅವರೆಲ್ಲರೂ ಭಾರತದ ಜತೆ ಆಳವಾದ ನಂಟು ಹೊಂದಿದ್ದಾರೆ. ಭೌಗೋಳಿಕವಾಗಿ ಮತ್ತು ರಾಜಕೀಯವಾಗಿ ಪ್ರತ್ಯೇಕವಾಗಿದ್ದಾರೆ ಅಷ್ಟೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಗುರುವಾರ ಹೇಳಿದ್ದಾರೆ.

ದೆಹಲಿಯಲ್ಲಿ 'ಸಿಐಐ ಬಿಸಿನೆಸ್ ಶೃಂಗ ಸಭೆ'ಯಲ್ಲಿ ಗುರುವಾರ ಮಾತನಾಡಿದ ಸಿಂಗ್, ಪಿಒಕೆ ಜನರೆಲ್ಲರೂ ಮುಂದೊಂದು ದಿನ ಸ್ವಯಿಚ್ಛೆಯಿಂದಲೇ ಭಾರತದ ಜತೆಗೂಡಲಿದ್ದಾರೆ. ಆದರೆ ಕೆಲ ಜನರಷ್ಟೇ ದಾರಿ ತಪ್ಪಿದವರಾಗಿದ್ದಾರೆ ಎಂದರು.

ಆಪರೇಷನ್ ಸಿಂಧೂರ್ ಕಾರ್ಯಾಚರಣೆಯಲ್ಲಿ ಹೆಚ್ಚಿನದನ್ನು ಮಾಡಬಹುದಿತ್ತು. ಆದರೆ ಅಧಿಕಾರದ ಜತೆಗೆ ಸಂಯಮವೂ ಅಗತ್ಯ. ಭಾರತ ಈವರೆಗೂ ಸಂಯಮ-ಸಮತೋಲನ ಕಾಯ್ದುಕೊಂಡಿದೆ. ಈ ಸಂಯಮ ಮತ್ತು ಶಕ್ತಿಯ ಉತ್ತಮ ಸಮನ್ವಯವನ್ನು ಭಾರತ ಜಗತ್ತಿಗೆ ತೋರಿಸಿಕೊಟ್ಟಿದೆ ಎಂದು ನುಡಿದರು.

ರಕ್ಷಣಾ ಕ್ಷೇತ್ರ: ಸುಧಾರಿತ ಶಕ್ತಿಶಾಲಿ ಮಧ್ಯಮ ಶ್ರೇಣಿ ಯುದ್ಧ ವಿಮಾನ (ಎಎಂಸಿಎ) ಯೋಜನೆಗೆ ಇತ್ತೀಚೆಗೆ ಅನುಮೋದನೆ ನೀಡಲಾಗಿದೆ. ಭಾರತದಲ್ಲೇ ತಯಾರಾಗುವ ಇದು ಐದನೇ ತಲೆಮಾರಿನ ಯುದ್ಧ ವಿಮಾನವಾಗಿದೆ.



10 ವರ್ಷಗಳ ಹಿಂದೆ 1,000 ಕೋಟಿ ರು.ಗಿಂತ ಕಡಿಮೆ ಇದ್ದ ಭಾರತದ ರಕ್ಷಣಾ ಸಾಮಗ್ರಿಗಳ ವಲಯದ ರಫ್ತು ಈಗ 23,500 ಕೋಟಿ ರು.ಗೆ ಮುಟ್ಟಿದೆ. ಭಾರತದ ಭದ್ರತೆ ಮತ್ತು ಸಮೃದ್ಧಿಗೆ ರಕ್ಷಣಾ ಕ್ಷೇತ್ರದಲ್ಲೂ ಮೇಕ್-ಇನ್-ಇಂಡಿಯ ಅತ್ಯಗತ್ಯ. ಖಾಸಗಿ ವಲಯ ಮೊದಲ ಬಾರಿಗೆ ಪ್ರಮುಖ ರಕ್ಷಣಾ ಯೋಜನೆಯಲ್ಲಿ ತೊಡಗಿಸಿಕೊಂಡಿದೆ. ದೇಶದ ರಕ್ಷಣಾ ಸಾಮರ್ಥ್ಯ ವೃದ್ಧಿ ಮತ್ತು ಏರೋಸ್ಪೇಸ್ ವಲಯ ಹೊಸ ಎತ್ತರಕ್ಕೆ ಕೊಂಡೊಯ್ಯುವ ದಿಟ್ಟ ಮತ್ತು ನಿರ್ಣಾಯಕ ನಿರ್ಧಾರ ಕೈಗೊಳ್ಳಲಾಗಿದೆ.

-ರಾಜನಾಥ್ ಸಿಂಗ್ ರಕ್ಷಣಾ ಸಚಿವ

ಇದರಲ್ಲಿ 5 ಮೂಲಮಾದರಿಗಳನ್ನು ತಯಾರಿಸಿ ದೊಡ್ಡ ಪ್ರಮಾಣದಲ್ಲಿ ಯುದ್ಧ ವಿಮಾನಗಳ ತಯಾರಿಕೆ ಆರಂಭಿಸಲಾಗುವುದು. ಆ ಮೂಲಕ ರಕ್ಷಣಾ ವಲಯದಲ್ಲಿ ಸ್ವಾವಲಂಬನೆಗೆ ಒತ್ತು ನೀಡಲಾಗುವುದು ಎಂದು ರಕ್ಷಣಾ ಸಚಿವರು ವಿವರಿಸಿದರು.

ಟ್ರಂಪ್ ಮನಸೋಇಚ್ಛೆ ವಿದೇಶಿ ಸರಕುಗಳ ಮೇಲೆ ವಿಧಿಸಿದ್ದ ಪ್ರತಿಸುಂಕಕ್ಕೆ ತಡೆ

ಟ್ರಂಪ್‌ಗೆ ಏಕಕಾಲದಲ್ಲಿ ಎರಡು ದೊಡ್ಡ ಹೊಡೆತ

ವಾಷಿಂಗ್ಟನ್: ತುರ್ತು ಅಧಿಕಾರಗಳನ್ನು ಬಳಸಿಕೊಂಡು ವಿವಿಧ ದೇಶಗಳ ಆಮದು ಉತ್ಪನ್ನಗಳ ಮೇಲೆ ಮನಸೋಇಚ್ಛೆ ಪ್ರತಿಸುಂಕ ವಿಧಿಸುತ್ತಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಟಾಟೋಪಕ್ಕೆ ಅಮೆರಿಕದ ಫೆಡರಲ್ ನ್ಯಾಯಾಲಯ ತಡೆಯೊಡ್ಡಿದೆ.

ಡೊನಾಲ್ಡ್ ಟ್ರಂಪ್ ಪ್ರತಿಸುಂಕ ಕ್ರಮಗಳನ್ನು ಕಾನೂನುಬಾಹಿರ ಎಂದು ಅಮೆರಿಕದ ಫೆಡರಲ್ ನ್ಯಾಯಾಲಯ ಬುಧವಾರ ತೀರ್ಪು ನೀಡಿದೆ. ಇದು ಟ್ರಂಪ್ ಆಡಳಿತಕ್ಕೆ ದೊಡ್ಡ ಹೊಡೆತ ನೀಡಿದೆ.

ಮ್ಯಾನ್‌ಹಾಟನ್ ನಗರದಲ್ಲಿನ ಅಂತಾರಾಷ್ಟ್ರೀಯ ವ್ಯಾಪಾರ ನ್ಯಾಯಾಲಯದ ಮೂವರು ನ್ಯಾಯಮೂರ್ತಿಗಳ ಪೀಠ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಏ.2ರಂದು ಹೊರಡಿಸಿದ ಕಾರ್ಯನಿರ್ವಾಹಕ ಆದೇಶಗಳೆಲ್ಲವೂ ಕಾನೂನು ಬಾಹಿರ ಎಂದು ಘೋಷಿಸಿದೆ. ಅಮೆರಿಕಕ್ಕೆ ಬರುವ ವಿದೇಶಿ ಸರಕುಗಳ ಮೇಲೆ ಶೇ.10 ಮೂಲ ಸುಂಕ ವಿಧಿಸುವುದರ ಜತೆಗೇ ಮತ್ತು ಚೀನಾ ಮತ್ತು ಯುರೋಪಿಯನ್ ಒಕ್ಕೂಟದ ದೇಶಗಳ ಮೇಲೆ ಗರಿಷ್ಠ ಪ್ರಮಾಣದ ಪ್ರತಿಸುಂಕವನ್ನು ಅಧ್ಯಕ್ಷ ಟ್ರಂಪ್ ಹೊರಡಿಸಿದ್ದ ಆದೇಶ ಹೇರಿತ್ತು. ಸುಂಕ ಕ್ರಮವನ್ನು ಸಮರ್ಥಿಸಲು ಟ್ರಂಪ್, ಅಂತಾರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರ ಕಾಯಿದೆಯನ್ನು ಬಳಸುವುದು ಅಧ್ಯಕ್ಷೀಯ ಅಧಿಕಾರದ ಮೇಲಿನ ಸಾಂವಿಧಾನಿಕ ಮಿತಿಗಳನ್ನು ಉಲ್ಲಂಘಿಸಿದಂತಾಗಿದೆ ಎಂದು ನ್ಯಾಯಾಲಯ ಹೇಳಿದೆ.

ಟ್ರಂಪ್ ಆಡಳಿತ ಕಾನೂನಿನ ಮಿತಿಗಳನ್ನು ಮೀರಿ ತುರ್ತು ಅಧಿಕಾರ ಬಳಸಿಕೊಂಡು ಅಮೆರಿಕ ವ್ಯಾಪಾರ ನೀತಿ ರೂಪಿಸಿದ್ದಾರೆ. ಆ ಮೂಲಕ ದೇಶದ ಆರ್ಥಿಕ ವ್ಯವಸ್ಥೆಗೆ ಅಡ್ಡಿ ಮಾಡುತ್ತಿದ್ದಾರೆ ಎಂದು ಹಲವರು ಮೊಕದ್ದಮೆ ಹೂಡಿದ್ದರು.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ 'ವಿಮೋಚನಾ ದಿನ' ಸುಂಕಗಳನ್ನು ಕಾನೂನು ಬಾಹಿರ ಎನ್ನುವುದರ ಜತೆಗೇ ಅಮೆರಿಕದ ಫೆಡರಲ್ ನ್ಯಾಯಾಲಯ, ಅಧ್ಯಕ್ಷರಿಗಿರುವ ತುರ್ತು ಅಧಿಕಾರಗಳ ಅಡಿಯಲ್ಲಿ ವ್ಯಾಪಕ ಆಮದು ಸುಂಕಗಳನ್ನು ವಿಧಿಸುವ ಅವರ ಯೋಜನೆಗೆ ತಡೆಯಾಜ್ಞೆ ನೀಡಿದೆ. ಅಮೆರಿಕದ ವ್ಯಾಪಾರ ಕೊರತೆಯು ರಾಷ್ಟ್ರೀಯ ತುರ್ತು ಪರಿಸ್ಥಿತಿಯಾಗಿದೆ ಎಂದು ವಾದಿಸಿ ಟ್ರಂಪ್ ಹೆಚ್ಚಿನ ದೇಶಗಳ ಮೇಲೆ ಸುಂಕಗಳನ್ನು ವಿಧಿಸಿದ್ದರು. ಕೆನಡಾ, ಚೀನಾ ಮತ್ತು ಮೆಕ್ಸಿಕೊ ಸೇರಿದಂತೆ ದೇಶಗಳ ಸರಕುಗಳನ್ನು ಗುರಿಯಾಗಿಸಿಕೊಂಡು ಸುಂಕಗಳನ್ನು ಸಮರ್ಥಿಸಲು ಅವರು 1977 ರ ಅಂತರರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರ ಕಾಯ್ದೆ (ಐಇಇಪಿಎ)ಯನ್ನು ಅವಲಂಬಿಸಿದ್ದರು. ಅಕ್ರಮ ವಲಸೆ ಮತ್ತು ಅಮೆರಿಕಕ್ಕೆ ಮಾದಕವಸ್ತುಗಳ ಹರಿವನ್ನು ಎದುರಿಸಲು ಈ ಕ್ರಮ ಅಗತ್ಯ ಎಂದು ಅವರ ಆಡಳಿತ ಹೇಳಿಕೊಂಡಿದೆ.

ಟ್ರಂಪ್ ಸಹವಾಸಕ್ಕೆ ಮಸ್ಕ್ ವಿದಾಯ

ಡೋಜ್‌ಗೆ ರಾಜೀನಾಮೆ ಹಿಂದೆ 2 ಕಾರಣ

ವಿಶ್ವದ ನಂ.1 ಶ್ರೀಮಂತ ಉದ್ಯಮಿ, ಟೆಸ್ಲಾ ಎಲೆಕ್ಟ್ರಿಕ್ ಕಾರು ಮತ್ತು 'ಸ್ಪೇಸ್ ಎಕ್ಸ್' ಕಂಪನಿಗಳ ಮಾಲೀಕ ಎಲಾನ್ ಮಸ್ಕ್, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸರಕಾರ ರಚಿಸಿದ್ದ 'ಆಡಳಿತ ಸುಧಾರಣೆ' ಇಲಾಖೆಯ ಪ್ರಮುಖ ಹುದ್ದೆಯ ತೊರೆಯಲು ನಿರ್ಧರಿಸಿ ಬುಧವಾರ ಸಂಜೆ ರಾಜೀನಾಮೆ ಘೋಷಿಸಿದ್ದಾರೆ. ಇದು ಡೊನಾಲ್ಡ್ ಟ್ರಂಪ್ ಅವರ ಮಹತ್ವಾಕಾಂಕ್ಷೆಗೆ ದೊಡ್ಡ ಹಿನ್ನಡೆ ಉಂಟು ಮಾಡಿದೆ. ಸರಕಾರದಲ್ಲಿನ ವೆಚ್ಚ ಕಡಿತಕ್ಕಾಗಿ ಟ್ರಂಪ್ ಆರಂಭಿಸಿದ್ದ 'ಡಿಒಜಿಇ' ಇಲಾಖೆಯಲ್ಲಿನ ಜವಾಬ್ದಾರಿಯನ್ನು ಇನ್ನು ನಿರ್ವಹಿಸಲು ಸಾಧ್ಯವಾಗದು. ನನ್ನದೇ ಆದ ಕಂಪನಿಗಳ ಪ್ರಗತಿಯ ಕಡೆಗೆ ಗಮನ ಕೇಂದ್ರೀಕರಿಸಬೇಕಿದೆ ಎಂದಿರುವ ಮಸ್ಕ್, ದೊಡ್ಡ ಮಟ್ಟದ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಟ್ರಂಪ್ ಅವರಿಗೆ ಧನ್ಯವಾದ ಹೇಳಿದ್ದಾರೆ.

ಬುಧವಾರ ರಾತ್ರಿ 'ಎಕ್ಸ್' ಖಾತೆಯಲ್ಲಿ ಮಸ್ಕ್ ಈ ಮಾಹಿತಿ ಹಂಚಿಕೊಂಡಿದ್ದಾರೆ. ಒಂದು ಮೂಲದ ಪ್ರಕಾರ, ಚುನಾಯಿತರಲ್ಲದ ವ್ಯಕ್ತಿ ಅಮೆರಿಕ ಸರಕಾರದಲ್ಲಿ ಗರಿಷ್ಠ 130 ದಿನಗಳವರೆಗಷ್ಟೇ ಉನ್ನತ ಹುದ್ದೆಗಳನ್ನು ಅಲಂಕರಿಸಲು ಸಾಧ್ಯ ಎಂಬ ಸಮಯ ಮಿತಿ ಇದೆ. ಹಾಗಾಗಿ ಮಸ್ಕ್ ಪದತ್ಯಾಗ ಅನಿವಾರ್ಯವಾಗಿದೆ ಎನ್ನಲಾಗಿದೆ.

ಪ.ಬಂಗಾಳದಲ್ಲಿ ಪ್ರಧಾನಿ ಮೋದಿ ಗುಡುಗು

'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ಮುಗಿದಿಲ್ಲ

ಕೋಲ್ಕತ್ತ: ಭಯೋತ್ಪಾದನೆಯನ್ನು ಹುಟ್ಟು ಹಾಕಿ ಬೆಳೆಸುತ್ತಿರುವ ಪಾಕಿಸ್ತಾನದ ವಿರುದ್ಧ ಭಾರತ ನಡೆಸುತ್ತಿರುವ ಆಪರೇಷನ್ ಸಿಂಧೂರ್ ಸೇನಾ ಕಾರ್ಯಾಚರಣೆ ಮುಕ್ತಾಯಗೊಂಡಿಲ್ಲ. ಅದು ಈಗಲೂ ಮುಂದುವರಿದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.



ಪಶ್ಚಿಮ ಬಂಗಾಳ ರಾಜ್ಯದ ಆಲಿಪುರ್‌ದೌರ್ ನಗರದಲ್ಲಿ ಸಾರ್ವಜನಿಕ ಸಭೆಯಲ್ಲಿ ಗುರುವಾರ ಮಾತನಾಡಿದ ಮೋದಿ, ಪಶ್ಚಿಮ ಬಂಗಾಳದ ನೆಲದಲ್ಲಿ ನಿಂತು ದೇಶದ 140 ಕೋಟಿ ಜನರ ಪರವಾಗಿ ಹೇಳುತ್ತಿರುವೆ. ಭಾರತೀಯ ಮಾತೆಯರಿಗೆ ಅಪಮಾನ ಮಾಡಿದ ಭಯೋತ್ಪಾದಕರನ್ನು ನಾಮಾವಶೇಷ ಮಾಡುವವರೆಗೂ ಭಾರತೀಯ ಸೇನೆಯ ಆಪರೇಷನ್ ಸಿಂಧೂರ ಮುಂದುವರಿಯಲಿದೆ ಎಂದು ಗುಡುಗಿದರು. ಭಾರತದ ಶತ್ರು ಪಾಕಿಸ್ತಾನದ ಮೇಲೆ ನಮ್ಮ ಯೋಧರು 2016ರಲ್ಲಿ ಸರ್ಜಿಕಲ್ ಸ್ಟ್ರೈಕ್ ಮತ್ತು 2019ರಲ್ಲಿ ಏರಿಯಲ್ ಸ್ಟ್ರೈಕ್ ಹಾಗೂ ಈಗ ಆಪರೇಷನ್ ಸಿಂಧೂರ್ ಎಂದು ಮೂರು ಬಾರಿ ಹೊಡೆತ ಕೊಟ್ಟಿದ್ದೇವೆ. ಗಡಿಯಾಚೆಯಿಂದ ಭಯೋತ್ಪಾದನೆ ನಡೆಸುತ್ತಿದ್ದ ಪಾಕ್‌ನ ಉಗ್ರರ ನೆಲೆಗಳನ್ನೇ ನಾಶ ಪಡಿಸಿದ್ದೇವೆ ಎಂದರು. ಸಿಕ್ಕಿಂ ಪ್ರವಾಸ ರದ್ದು: ಗುರುವಾರ ಬೆಳಗ್ಗೆಯೇ ಸಿಕ್ಕಿಂ ರಾಜ್ಯಕ್ಕೆ ತೆರಳಬೇಕಿದ್ದ ಪ್ರಧಾನಿ ಮೋದಿ, ಧಾರಾಕಾರ ಮಳೆ, ಪ್ರತಿಕೂಲ ಹವಾಮಾನದ ಕಾರಣ ಸಿಕ್ಕಿಂ ಪ್ರವಾಸವನ್ನು ಕೊನೆ ಕ್ಷಣದಲ್ಲಿ ಕೈಬಿಟ್ಟರು. ಸಿಕ್ಕಿಂ ಜನರನ್ನು ಉದ್ದೇಶಿಸಿ ವರ್ಚುವಲ್ ಭಾಷಣ ಮಾಡಿದರು.

'ಸಿಂಧೂರ ಸೀರೆ' ಸ್ವಾಗತ!

ಮಧ್ಯಪ್ರದೇಶದ ಭೂಪಾಲ್‌ಗೆ ಶನಿವಾರ ಭೇಟಿ ನೀಡಲಿರುವ ಪ್ರಧಾನಿ ಮೋದಿ ಅವರನ್ನು ಬಿಜೆಪಿ ಮಹಿಳಾ ಘಟಕ ವಿಶೇಷ ರೀತಿಯಲ್ಲಿ ಸ್ವಾಗತಿಸಲು ಸಿದ್ಧತೆ ಮಾಡಿಕೊಂಡಿದೆ. ರಾಜ್ಯಾದ್ಯಂತದ 1300 ಬಿಜೆಪಿ ಮಹಿಳಾ ಮಂಡಲಗಳ 15 ಸಾವಿರಕ್ಕೂ ಅಧಿಕ ಸದಸ್ಯೆಯರು 'ಸಿಂಧೂರ ವರ್ಣದ ಸೀರೆ' ಧರಿಸಿ ಮೇ 31ರಂದು ಮೋದಿ ಅವರನ್ನು ವಿಶೇಷ ರೀತಿಯಲ್ಲಿ ಬರಮಾಡಿಕೊಳ್ಳಲಿದ್ದಾರೆ.

ಮಾಡಲು ಸಾಕಷ್ಟು ಉತ್ತಮ ಕೆಲಸಗಳಿವೆ: ಕೈಗೆ ತಿರುಗೇಟು

ದೆಹಲಿ: 'ಟೀಕಾಕಾರರಿಗೆ, ಟ್ರೋಲ್ ಮಾಡುವವರಿಗೆ ಸದಾ ಸ್ವಾಗತ. ಆದರೆ, ಅವರಿಗೆ ಪ್ರತಿಕ್ರಿಯಿಸುತ್ತಾ ಕೂರಲು ನನಗೆ ಸಮಯವಿಲ್ಲ. ನನಗೆ ಮಾಡಲು ಸಾಕಷ್ಟು ಉತ್ತಮ ಕೆಲಸಗಳಿವೆ' ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ತಮ್ಮದೇ ಪಕ್ಷದ ಕೆಲವು ಮುಖಂಡರಿಗೆ ತಿರುಗೇಟು ನೀಡಿದ್ದಾರೆ. 'ಪಾಕಿಸ್ತಾನದ ಉಗ್ರವಾದ, ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲಿನ ಉಗ್ರ ದಾಳಿ ಬಗ್ಗೆ ಭಾರತದ ಸರ್ವಪಕ್ಷ ನಿಯೋಗಗಳು, ವಿವಿಧ ದೇಶಗಳಿಗೆ ತೆರಳಿ ಪ್ರಸ್ತುತಪಡಿಸುತ್ತಾ ಪಾಕ್ ಮುಖವಾಡ ಕಳಚುತ್ತಿವೆ. ಆದರೆ, ಸರ್ವಪಕ್ಷ ನಿಯೋಗದ ನೇತೃತ್ವ ವಹಿಸಿರುವ ತಮ್ಮದೇ ಪಕ್ಷದ ಸಂಸದ ಶಶಿ ತರೂರ್ ವಿರುದ್ಧ ಕಾಂಗ್ರೆಸ್ ಟೀಕಾಸ್ತ್ರ ಪ್ರಯೋಗಿಸುತ್ತಿದೆ.

2019ರಲ್ಲಿನ ಸರ್ಜಿಕಲ್ ದಾಳಿ ಮತ್ತು ಇತ್ತೀಚಿನ ಆಪರೇಷನ್ ಸಿಂಧೂರ್ ಬಗ್ಗೆ ಪ್ರಶ್ನೆ ಮಾಡುತ್ತಿರುವ ಕಾಂಗ್ರೆಸ್ ನಾಯಕ ಉದಿತ್ ರಾಜ್, ಶಶಿ ತರೂರ್‌ರನ್ನು ಕುಟುಕಿದ್ದಾರೆ. 'ನೀವು ಬಿಜೆಪಿಯ ಸೂಪರ್ ವಕ್ತಾರ ಎಂದು ಪ್ರಧಾನಿ ಮೋದಿ ಘೋಷಿಸಲಿ, ಭಾರತಕ್ಕೆ ವಾಪಸಾಗುವುದಕ್ಕೂ ಮುನ್ನವೇ ನಿಮ್ಮನ್ನು ವಿದೇಶಾಂಗ ಸಚಿವರೆಂದು ಪ್ರಕಟಿಸಲಿ ಎಂದು ಒತ್ತಾಯಿಸುವೆ' ಎಂದು ಕಟಕಿಯಾಡಿದ್ದಾರೆ. ಇದಕ್ಕೆಲ್ಲ ಪ್ರತಿಕ್ರಿಯಿಸಲು ನನಗೆ ಸಮಯವಿಲ್ಲ. ಆದರೆ, ಗಡಿ ನಿಯಂತ್ರಣ ರೇಖೆ ಬಳಿ ನಮ್ಮ ಯೋಧರು ತೋರಿದ ಪರಾಕ್ರಮ ಹಾಗೂ ನನ್ನ ಬಗ್ಗೆ ಅಸೂಯೆ ಹೊಂದಿರುವವರಿಗೆ ಉತ್ತರಿಸಲು ಹೋಗುವುದಿಲ್ಲ ಎಂದಿದ್ದಾರೆ.

ಪಹಲ್ಗಾಮ್ ದಾಳಿ ರೂವಾರಿ ಸೈಫುಲ್ಲಾ ಜಿಹಾದಿ ಭಾಷಣ!

ಕಸೂರ್: ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏ.22ರಂದು ಪ್ರವಾಸಿಗರ ಮೇಲೆ ನಡೆದ ಭಯೋತ್ಪಾದಕ ದಾಳಿ ಹಿಂದಿನ ಸೂತ್ರಧಾರ ಎಂದೇ ಹೇಳಲಾಗಿರುವ ಪಾಕಿಸ್ತಾನ ಮೂಲದ ಲಷ್ಕರ್-ಎ-ತಯ್ಯಬಾ (ಎಲ್‌ಇಟಿ) ಕಮಾಂಡರ್ ಸೈಫುಲ್ಲಾ ಕಸೂರಿ ಪಂಜಾಬ್ ಪ್ರಾಂತ್ಯದ ಕಸೂರ್ ನಗರದಲ್ಲಿ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದಾನೆ. ಪಾಕ್‌ನ ಪರಮಾಣು ಶಕ್ತಿ ಸಾಧನಗಳ ಪರೀಕ್ಷೆ ನಡೆದ ವರ್ಷದ ಸ್ಮರಣಾರ್ಥ ಪಾಕಿಸ್ತಾನ್ ಮಾರ್ಕಾಜಿ ಮುಸ್ಲಿಂ ಲೀಗ್ ಪಕ್ಷ ಆಯೋಜಿಸಿದ್ದ ರ್‍ಯಾಲಿಯಲ್ಲಿ ಪಾಲ್ಗೊಂಡ ಸೈಫುಲ್ಲಾ, ಭಾರತದ ವಿರುದ್ಧ ಘೋಷಣೆ ಕೂಗಿ, ಪ್ರಚೋದನಾಕಾರಿ ಭಾಷಣ ಮಾಡಿದ್ದಾನೆ. ಪಹಲ್ಗಾಮ್ ದಾಳಿ ರೂವಾರಿ ಎಂದು ನನ್ನನ್ನು ದೂಷಿಸಲಾಗಿದೆ. ನನ್ನ ಹೆಸರು ಈಗ ವಿಶ್ವದಲ್ಲೇ ಪ್ರಸಿದ್ಧವಾಗಿದೆ ಎಂದಿದ್ದಾನೆ. ಆಪರೇಷನ್ ಸಿಂಧೂರ್ ವೇಳೆ ಹತನಾದ ಉಗ್ರ ಮುದಸ್ಸಿರ್ ಶಹೀದ್ ಹೆಸರಿನಲ್ಲಿ ಅಲಹಾಬಾದ್‌ನಲ್ಲಿ ರಸ್ತೆ ಮತ್ತು ಆಸ್ಪತ್ರೆ ನಿರ್ಮಿಸುವ ಯೋಜನೆಯನ್ನೂ ಕಸೂರಿ ಇದೇ ವೇದಿಕೆಯಲ್ಲಿ ಘೋಷಿಸಿದ್ದಾನೆ.

ಪಾಕ್ ರಾಜಕೀಯ ನಾಯಕರು ಮತ್ತು ಎಲ್‌ಇಟಿ ಸಂಸ್ಥಾಪಕ ಹಫೀಜ್ ಸಯೀದ್ ಪುತ್ರ, ಭಯೋತ್ಪಾದಕ ತಲ್ಹಾ ಸಯೀದ್ ಸೇರಿದಂತೆ ಹಲವು ಮೋಸ್ಟ್ ವಾಂಟೆಡ್ ಭಯೋತ್ಪಾದಕರೂ ಈ ರಾಜಕೀಯ ಸಭೆಯ ವೇದಿಕೆಯಲ್ಲಿದ್ದರು. ಆ ಬಳಿಕ ಮಾತನಾಡಿದ ಭಾರತದ ಮೋಸ್ಟ್ ವಾಂಟೆಡ್ ಉಗ್ರರ ಪಟ್ಟಿಯಲ್ಲಿ 32ನೇ ಸ್ಥಾನದಲ್ಲಿರುವ ತಲ್ಹಾ ಸಯೀದ್, ಜಿಹಾದಿ ಘೋಷಣೆ ಕೂಗಿದ್ದಾನೆ. ಪ್ರಚೋದನಾಕಾರಿ ಭಾಷಣ ಮಾಡಿದ್ದಾನೆ.

ಸೈಬರ್ ವಂಚಕರ ವಿರುದ್ಧ ಸಿಬಿಐ ಆಪರೇಷನ್ ಚಕ್ರ: 6 ಸೆರೆ

ದೆಹಲಿ: ಸೈಬರ್ ಅಪರಾಧ ಮತ್ತು ಡಿಜಿಟಲ್ ಬಂಧನದಂತಹ ವಂಚನೆ ಪ್ರಕರಣಗಳು ನಡೆಯದಂತೆ ತಡೆಯಲು ಕೇಂದ್ರೀಯ ತನಿಖಾ ದಳ (ಸಿಬಿಐ) 'ಆಪರೇಷನ್ ಚಕ್ರ-5' ಹೆಸರಲ್ಲಿ ಏಕಕಾಲದಲ್ಲಿ ಹರಿಯಾಣ ಮತ್ತು ಉತ್ತರ ಪ್ರದೇಶದ 19 ಕಡೆ ದಾಳಿ ನಡೆಸಿ 6 ಪ್ರಮುಖ ಆರೋಪಿಗಳನ್ನು ಬಂಧಿಸಿದೆ. ಹತ್ತಾರು ಮೊಬೈಲ್‌ಫೋನ್, ಲ್ಯಾಪ್‌ಟಾಪ್, ಹಾರ್ಡ್‌ಡಿಸ್ಕ್, ಸರ್ವರ್ ಇಮೇಜ್, ಸಿಮ್ ಕಾರ್ಡ್‌ಗಳು ಮತ್ತು ಪೆನ್‌ಡ್ರೈವ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ನೂರಾರು ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಸೈಬರ್ ವಂಚಕರಿಗೆ ಸಿಮ್ ಕಾರ್ಡ್ ಮಾರಿದ ಟೆಲಿಕಾಂ ಕಂಪನಿಗಳ 'ಪಾಯಿಂಟ್ ಆಫ್ ಸೇಲ್'(ಪಿಒಎಸ್) ಏಜೆಂಟ್‌ಗಳಿರುವ ಸ್ಥಳಗಳಿಗೂ ಸಿಬಿಐ ದಾಳಿ ನಡೆಸಿ ಸಂಘಟಿತ ಶೋಧ ನಡೆಸಿದೆ. ಇದೇ ವೇಳೆ, ಜಪಾನ್ ನಾಗರಿಕರನ್ನು ಗುರಿಯಾಗಿಸಿ ನಡೆಸಲಾಗುತ್ತಿದ್ದ ಅಂತಾರಾಷ್ಟ್ರೀಯ ತಂತ್ರಜ್ಞಾನ ಹಗರಣದಲ್ಲಿ ತೊಡಗಿದ್ದ 2 ಅಕ್ರಮ ಕಾಲ್ ಸೆಂಟರ್‌ಗಳನ್ನೂ ನಾಶಪಡಿಸಲಾಗಿದೆ. ಅಂತಾರಾಷ್ಟ್ರೀಯ ಸಂಘಟಿತ ಸೈಬರ್ ಅಪರಾಧ ಜಾಲಗಳ ವಿರುದ್ಧ ಕಾರ್ಯಾಚರಣೆಗಾಗಿಯೇ 'ಆಪರೇಷನ್ ಚಕ್ರ-5' ಆರಂಭಿಸಿರುವ ಸಿಬಿಐ, ಅಮೆರಿಕದ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ (ಎಫ್‌ಬಿಐ), ಸೈಬರ್ ಕ್ರೈಮ್ ಡೈರೆಕ್ಟೊರೇಟ್ ಮತ್ತು ಇಂಟರ್‌ಪೋಲ್‌ನ ಐಎಫ್‌ಸಿಎಸಿಸಿ, ಯುನೈಟೆಡ್ ಕಿಂಗ್ಡಂನ ನ್ಯಾಷನಲ್ ಕ್ರೈಮ್ ಏಜೆನ್ಸಿ(ಎನ್‌ಸಿಎ), ಸಿಂಗಾಪುರ ಪೊಲೀಸ್ ಮತ್ತು ಜರ್ಮನಿಯ ಬಿಕೆಎ ಸೇರಿದಂತೆ ಅಂತಾರಾಷ್ಟ್ರೀಯ ಸಹವರ್ತಿಗಳೊಂದಿಗೆ ಅಂತಾರಾಷ್ಟ್ರೀಯ ಪೊಲೀಸ್ ಸಹಕಾರದಲ್ಲಿ ಸಿಬಿಐ ನಿಕಟವಾಗಿ ಕಾರ್ಯನಿರ್ವಹಿಸುತ್ತಿದೆ.

ಐವರು ಆರೋಪಿಗಳು ಟೆಲಿಕಾಂ ಕಂಪನಿಗಳ ನಿಯಮಗಳ ಉಲ್ಲಂಘಿಸಿ ಸಿಮ್‌ಕಾರ್ಡ್‌ಗಳನ್ನು ಮೋಸದಿಂದ ಮಾರಿದ್ದಾರೆ.

ಬೆಂಗಳೂರು ಎಚ್‌ಎಎಲ್ ಸ್ಥಳಾಂತರಕ್ಕೆ ಯತ್ನಿಸಿಲ್ಲ

ಹೈದರಾಬಾದ್: ಕರ್ನಾಟಕದ ಬೆಂಗಳೂರು ನಗರದಲ್ಲಿರುವ ಹಿಂದೂಸ್ತಾನ್ ಏರೋನಾಟಿಕ್ಸ್ ಲಿ.(ಎಚ್‌ಎಎಲ್) ಘಟಕವನ್ನು ಆಂಧ್ರಪ್ರದೇಶಕ್ಕೆ ಸ್ಥಳಾಂತರಿಸಲು ತಾವು ಪ್ರಯತ್ನ ಮಾಡುತ್ತಿಲ್ಲ ಎಂದು ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಬುಧವಾರ ಹೇಳಿದ್ದಾರೆ. ಅವೆಲ್ಲವೂ ಕಪೋಲಕಲ್ಪಿತ, ರಾಜಕೀಯ ಪ್ರೇರಿತ ವರದಿಗಳಾಗಿವೆ ಎಂದೂ ಹೇಳಿದ್ದಾರೆ.



ಆಂಧ್ರಪ್ರದೇಶದಲ್ಲಿ ಹೊಸದಾಗಿ ರಕ್ಷಣಾ ಸಾಮಗ್ರಿಗಳ ತಯಾರಿಕಾ ಘಟಕಗಳನ್ನು ಸ್ಥಾಪಿಸಬೇಕು ಎಂದು ಕೇಂದ್ರ ಸರಕಾರಕ್ಕೆ ಮನವಿ ಮಾಡಿರುವೆ. ಆದರೆ, ಬೇರೆ ರಾಜ್ಯಗಳಲ್ಲಿ ಹಾಲಿ ಇರುವ ಘಟಕಗಳನ್ನು ನಮ್ಮ ರಾಜ್ಯಕ್ಕೆ ಸ್ಥಳಾಂತರಿಸಿ ಎಂದು ಒತ್ತಾಯಿಸಿಯೂ ಇಲ್ಲ, ಮನವಿಯನ್ನೂ ಮಾಡಿಲ್ಲ ಎಂದು ನಾಯ್ಡು ಸ್ಪಷ್ಟಪಡಿಸಿದ್ದಾರೆ. ಕಡಪ ಜಿಲ್ಲೆಯಲ್ಲಿನ ಮಹಾನಾಡು ಸಭೆಯಲ್ಲಿ ಬುಧವಾರ ಮಾತನಾಡಿದ ಅವರು, ಎಚ್‌ಎಎಲ್ ಈಗಾಗಲೇ ಹಲವು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಗೊಂಡಿದೆ. ಅಂತಹ ಘಟಕವನ್ನು ಸ್ಥಳಾಂತರಿಸುವಂತೆ ಹೇಗೆ ಕೇಳಲು ಸಾಧ್ಯ. ಅದೆಲ್ಲವೂ ಅಸಾಧ್ಯವಾದ ಕಾರ್ಯ ಎಂದು ಹೇಳಿದರು. ವಿಮಾನಗಳ ತಯಾರಿಕೆ ಮತ್ತು ರಕ್ಷಣಾ ಸಂಬಂಧಿತ ಕೈಗಾರಿಕೆಗಳ ಸ್ಥಾಪನೆಗೆ ಅನಂತಪುರ ಜಿಲ್ಲೆಯ ಲೇಪಾಕ್ಷಿ ಕ್ಷೇತ್ರ ಹೆಚ್ಚು ಸೂಕ್ತವಾಗಿದೆ ಎಂದಿದ್ದಾರೆ.

ಅಮರನಾಥ ಯಾತ್ರೆ: 42,000 ಯೋಧರು

ದೆಹಲಿ: ಜಮ್ಮು-ಕಾಶ್ಮೀರ ಭಾಗದಲ್ಲಿನ ಅಮರನಾಥದಲ್ಲಿನ ಗುಹಾಂತರ ಹಿಮಲಿಂಗದ ದರ್ಶನಕ್ಕಾಗಿ ಸದ್ಯದಲ್ಲೇ ವಾರ್ಷಿಕ ಅಮರನಾಥ ಯಾತ್ರೆ ಆರಂಭವಾಗಲಿದ್ದು, ಭದ್ರತಾ ಕಾರ್ಯಕ್ಕಾಗಿ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ 42,000 ಸಿಬ್ಬಂದಿಗಳ 580 ತುಕಡಿಗಳ ನಿಯೋಜನೆ ಮಾಡಲಾಗುತ್ತಿದೆ.



ಇದರಲ್ಲಿ 424 ತುಕಡಿಗಳನ್ನು ಕೇಂದ್ರ ಸರಕಾರದ ಸೂಚನೆ ಮೇರೆಗೆ ಕೇಂದ್ರಾಡಳಿತ ಪ್ರದೇಶಕ್ಕೆ ಕಳುಹಿಸಲಾಗುವುದು. ಆಪರೇಷನ್ ಸಿಂಧೂರ್ ವೇಳೆ ಕೇಂದ್ರಾಡಳಿತ ಪ್ರದೇಶಕ್ಕೆ ಸ್ಥಳಾಂತರಗೊಂಡ 80 ತುಕಡಿಗಳನ್ನು ಯಾತ್ರೆಯ ಮಾರ್ಗ, ಶ್ರೀನಗರ ಮತ್ತಿತರ ಪ್ರದೇಶಗಳಿಗೆ ಸ್ಥಳಾಂತರಗೊಳಿಸಲಾಗುವುದು ಎಂದು ಅಧಿಕೃತ ಮೂಲಗಳು ಗುರುವಾರ ತಿಳಿಸಿವೆ. ಅಮರನಾಥ ಯಾತ್ರೆ ಜು.3ರಂದು ಪ್ರಾರಂಭವಾಗಿ ಆ.9ರಂದು ಕೊನೆಗೊಳ್ಳಲಿದೆ. ಜೂನ್ 2ನೇ ವಾರದೊಳಗೆ ಜಮ್ಮು-ಕಾಶ್ಮೀರದಲ್ಲಿ ಕರ್ತವ್ಯಕ್ಕೆ ನಿಯೋಜನೆಯಾಗುವಂತೆ ಕೇಂದ್ರ ಗೃಹ ಸಚಿವಾಲಯ ಈ ಪಡೆಗಳಿಗೆ ಆದೇಶಿಸಿದೆ ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ಗುರುವಾರ ತಿಳಿಸಿದ್ದಾರೆ. ಏ.22ರ ಪಹಲ್ಗಾಮ್ ಉಗ್ರ ದಾಳಿಯಲ್ಲಿ 25 ಪ್ರವಾಸಿಗರು, ಒಬ್ಬ ಸ್ಥಳೀಯ ವ್ಯಕ್ತಿ ಸಾವನ್ನಪ್ಪಿದ ಹಿನ್ನೆಲೆ ಈ ಬಾರಿ ಅಮರನಾಥ ಯಾತ್ರೆಗೆ ಹೆಚ್ಚಿನ ಭದ್ರತೆ ಒದಗಿಸಲಾಗುತ್ತಿದೆ.

ಒಂದು ಯೋಜನೆಯೂ ಸಕಾಲದಲ್ಲಿ ಮುಗಿದಿಲ್ಲ

ದೆಹಲಿ: ಭಾರತೀಯ ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ.ಸಿಂಗ್, ಯುದ್ಧ ವಿಮಾನಗಳ ವಿಲೇವಾರಿ, ಯುದ್ಧೋಪಕರಣಗಳ ಪೂರೈಕೆಗೆ ಸಂಬಂಧಿಸಿದಂತೆ ರಕ್ಷಣಾ ಕ್ಷೇತ್ರದಲ್ಲಿನ ವಿವಿಧ ಯೋಜನೆಗಳಲ್ಲಿ ನಿರಂತರ ವಿಳಂಬ ಆಗುತ್ತಿರುವುದಕ್ಕೆ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ದೆಹಲಿಯಲ್ಲಿ ನಡೆದ ಸಿಐಐ ವಾರ್ಷಿಕ ಶೃಂಗಸಭೆಯಲ್ಲಿ ಗುರುವಾರ ಮಾತನಾಡಿದ ಸಿಂಗ್, ರಕ್ಷಣಾ ಇಲಾಖೆಗೆ ಸಂಬಂಧಿಸಿದ ಯಾವುದೇ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಸತತ ವಿಳಂಬವಾಗುತ್ತಿದೆ.

ಲಘು ಯುದ್ಧ ವಿಮಾನ(ಎಲ್‌ಸಿಎ) ಪೂರೈಕೆಯಂತೂ ಸಮಯಕ್ಕೆ ಸರಿಯಾಗಿ ಆಗಲೇ ಇಲ್ಲ. ಪರಿಣಾಮ ವಾಯುಪಡೆ ಸವಾಲಿನ ಪರಿಸ್ಥಿತಿ ಎದುರಿಸಬೇಕಾಗಿ ಬರುತ್ತಿದೆ ಎಂಬ ವರದಿಗಳಿವೆ. ಅದರ ಬೆನ್ನಲ್ಲೇ ಏರ್‌ಚೀಫ್ ಮಾರ್ಷಲ್‌ರ ಈ ಹೇಳಿಕೆ ಉಲ್ಲೇಖಾರ್ಹ. ಒಪ್ಪಂದಪತ್ರಕ್ಕೆ ಸಹಿ ಹಾಕುವಾಗಲೇ ಸಮಯಕ್ಕೆ ಸರಿಯಾಗಿ ಪೂರ್ಣಗೊಳ್ಳುವುದಿಲ್ಲ ಎಂಬ ಖಾತ್ರಿ ನಮಗಿರುತ್ತದೆ. ಹಾಗಿದ್ದೂ ಒಪ್ಪಂದಪತ್ರಕ್ಕೆ ಸಹಿ ಹಾಕುತ್ತೇವೆ. ನಂತರ ಆ ಪ್ರಕ್ರಿಯೆ ನಿಧಾನಗೊಳ್ಳುತ್ತದೆ. ಸಾಧಿಸಲು ಸಾಧ್ಯವಾಗದಿರುವುದರ ಬಗ್ಗೆ ನಾವೇಕೆ ಭರವಸೆ ನೀಡಬೇಕು? ಎಂದು ಪ್ರಶ್ನಿಸಿದರು.

ಪಿಒಕೆ ದಕ್ಷಿಣೆ ಕೊಡಿ: ಸೇನೆಗೆ ಶ್ರೀ ಆಗ್ರಹ

ದೆಹಲಿ: ಭಾರತ-ಪಾಕಿಸ್ತಾನ ನಡುವಿನ ಸಂಘರ್ಷಕ್ಕೆ ಕಾರಣವಾಗಿರುವ 'ಪಾಕ್ ಆಕ್ರಮಿತ ಕಾಶ್ಮೀರ'(ಪಿಒಕೆ) ಅನ್ನು ಭಾರತಕ್ಕೆ ಮರಳಿ ಸೇರಿಸಬೇಕು ಎಂದು ಸನಾತನ ಧರ್ಮದ ಆಧ್ಯಾತ್ಮಿಕ ನಾಯಕ, ಜಗದ್ಗುರು ರಾಮಭದ್ರಾಚಾರ್ಯರು ಹೇಳಿದ್ದಾರೆ. ಚಿತ್ರಕೂಟದಲ್ಲಿನ ಆಶ್ರಮಕ್ಕೆ ಭೇಟಿ ನೀಡಿದ ಭಾರತೀಯ ಸೇನಾಪಡೆ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರನ್ನು ಸನ್ಮಾನಿಸಿದ ಶ್ರೀಗಳು, ಸೇನಾಧಿಕಾರಿಯಿಂದ ಪಿಒಕೆಯನ್ನು ಗುರುದಕ್ಷಿಣೆಯಾಗಿ ಕೇಳಿದರು. 'ಉಪೇಂದ್ರ ದ್ವಿವೇದಿ ಅವರಿಗೆ ರಾಮ ಮಂತ್ರ ಸಮೇತ ದೀಕ್ಷೆ ನೀಡಿದೆ. ಪ್ರತಿಯಾಗಿ 'ಪಿಒಕೆ ಮರಳಿ ತನ್ನಿ' ಎಂದು ಗುರುದಕ್ಷಿಣೆ ಕೇಳಿದೆ ಎಂದು ಶ್ರೀಗಳು ಸುದ್ದಿಸಂಸ್ಥೆಗೆ ತಿಳಿಸಿದರು. ಇದೇ ವೇಳೆ ಜನರಲ್ ಉಪೇಂದ್ರ ದ್ವಿವೇದಿ ಅವರು ಆಶ್ರಮದಲ್ಲಿರುವ ಸದ್ಗುರು ನೇತ್ರ ಚಿಕಿತ್ಸಾಲಯದಲ್ಲಿ ಸಿಮ್ಯುಲೇಟರ್ ಯಂತ್ರಕ್ಕೆ ಚಾಲನೆ ನೀಡಿದರು. ನೂತನ ಆಪರೇಷನ್ ಥಿಯೇಟರ್ ವೀಕ್ಷಿಸಿದರು.

ಸಮಾಚಾರ ಸಣ್ಣದಲ್ಲ

ಬಿಷ್ಣೋಯ್ ಗ್ಯಾಂಗ್ ಶಾರ್ಪ್‌ಶೂಟರ್ ಹತ

ಲಖನೌ: ಲಾರೆನ್ಸ್ ಬಿಷ್ಣೋಯ್ ತಂಡದ ಶಾರ್ಪ್ ಶೂಟರ್ ನವೀನ್ ಕುಮಾರ್ ಉತ್ತರ ಪ್ರದೇಶದ ಹಾಪುರದಲ್ಲಿ ಪೊಲೀಸರ ಗುಂಡೇಟಿನಿಂದ ಹತನಾಗಿದ್ದಾನೆ. ಹಾಪುರ್‌ನ ಠಾಣಾ ಕೊತ್ವಾಲಿ ಪ್ರದೇಶದಲ್ಲಿ ಬುಧವಾರ ತಡರಾತ್ರಿ ನಡೆದ ಗುಂಡಿನ ಚಕಮಕಿಯಲ್ಲಿ ಬಿಷ್ಣೋಯ್ ಗ್ಯಾಂಗ್‌ನ ಪ್ರಮುಖ ಸದಸ್ಯ, ಗಾಜಿಯಾಬಾದ್ ಜಿಲ್ಲೆಯ ಲೋನಿ ನಿವಾಸಿ ನವೀನ್ ಕುಮಾರ್‌ಗೆ ಗುಂಡಿಕ್ಕಲಾಗಿದೆ ಎಂದು ಉತ್ತರ ಪ್ರದೇಶ ಪೊಲೀಸರು ಗುರುವಾರ ತಿಳಿಸಿದ್ದಾರೆ. ಬಿಷ್ಣೋಯ್ ಗ್ಯಾಂಗ್ ಸದಸ್ಯರು ಕೊತ್ವಾಲಿಯಲ್ಲಿರುವ ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು. ಈ ವೇಳೆ ಬಿಷ್ಣೋಯ್ ಗ್ಯಾಂಗ್ ಸದಸ್ಯರು ಪೊಲೀಸರ ಮೇಲೆಯೇ ಗುಂಡು ಹಾರಿಸಿದರು. ಪ್ರತಿಯಾಗಿ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ನವೀನ್ ಕುಮಾರ್ ಗಂಭೀರ ಗಾಯಗೊಂಡ. ಆಸ್ಪತ್ರೆಗೆ ಕರೆದೊಯ್ಯುವಾಗ ಮೃತಪಟ್ಟ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ನವೀನ್ ವಿರುದ್ಧ ದೆಹಲಿಯ ಠಾಣಾ ಫರ್ಷ್ ಬಜಾರ್‌ನಲ್ಲಿ ಕೊಲೆ, ದರೋಡೆ, ಅಪಹರಣ ಸೇರಿದಂತೆ 20ಕ್ಕೂ ಹೆಚ್ಚು ಅಪರಾಧ ಪ್ರಕರಣ ದಾಖಲಾಗಿವೆ.

ಕರಾಚಿ ವಿ.ನಿಲ್ದಾಣ ನೀರಿಲ್ಲದೇ ಸಂಕಷ್ಟ

ಇಸ್ಲಾಮಾಬಾದ್: ಕರಾಚಿ ವಿಮಾನ ನಿಲ್ದಾಣದಲ್ಲಿ ನೀರಿನ ಅಭಾವ ಉಂಟಾಗಿ ಪ್ರಯಾಣಿಕರು ಪರದಾಡುತ್ತಿದ್ದಾರೆ. ವಿಮಾನ ನಿಲ್ದಾಣದ ಶೌಚಾಲಯದಲ್ಲಿ ಹನಿಯಷ್ಟೂ ನೀರಿಲ್ಲ. ಶೌಚ ವ್ಯವಸ್ಥೆ ಪೂರ್ಣ ಹದಗೆಟ್ಟಿದೆ ಎಂದು ಪಾಕಿಸ್ತಾನದ ಚಿತ್ರನಟಿಯೊಬ್ಬರು ಸಾಮಾಜಿಕ ಜಾಲತಾಣದಲ್ಲಿ ಹೇಳಿಕೊಂಡಿದ್ದಾರೆ.



ಸಮಸ್ಯೆ ಕುರಿತು ವಿಡಿಯೊ ಚಿತ್ರೀಕರಿಸಿ ಜಾಲತಾಣದಲ್ಲಿ ಹಂಚಿಕೊಂಡಿರುವ ನಟಿ ಹೀನಾ ಬಾಯತ್, 'ಈಗ ನಾನು ಕರಾಚಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್‌ನಲ್ಲಿದ್ದೇನೆ. ಪಾಕ್ ಸಾಧನೆಗಳ ಕುರಿತು ನಾವಿಂದು ಸಂಭ್ರಮಾಚರಣೆ ಮಾಡಬೇಕಿದೆ. ಶೌಚಾಲಯದಲ್ಲಿ ಒಂದು ಹನಿಯೂ ನೀರಿಲ್ಲ. ಶೌಚಾಲಯಕ್ಕೆ ಹೋಗಬೇಕು ಎನ್ನುತ್ತಿರುವ ಮಕ್ಕಳನ್ನು ಸಮಾಧಾನ ಪಡಿಸಲಾಗದೇ ಪೋಷಕರು ಪರದಾಡುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಪಹಲ್ಗಾಮ್ ಉಗ್ರ ದಾಳಿ ಬಳಿಕ ಭಾರತ, ಸಿಂಧೂ ಜಲ ಒಪ್ಪಂದವನ್ನು ರದ್ದುಗೊಳಿಸಿದೆ. ನೀರಿಲ್ಲದೇ ಪಾಕ್ ಪರದಾಡುತ್ತಿದೆ.

ಧೈರ್ಯವಿದ್ದರೆ ನಾಳೆ ಚುನಾವಣೆ ಮಾಡಿ

ಕೋಲ್ಕತ್ತ: ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿಗೆ ಸವಾಲು ಹಾಕುವೆ. ಧೈರ್ಯವಿದ್ದರೆ ನಾಳೆಯೇ ಚುನಾವಣೆ ಘೋಷಿಸಿ. ಪಶ್ಚಿಮ ಬಂಗಾಳ ನಿಮ್ಮ ಸವಾಲು ಸ್ವೀಕರಿಸಲು ಸಿದ್ಧವಾಗಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುರುವಾರ ಹೇಳಿದ್ದಾರೆ. ನಮ್ಮ ರಾಜ್ಯಕ್ಕೆ ಬಂದು ಪ್ರಧಾನಿ ಮೋದಿ ಹೇಳುತ್ತಿರುವುದನ್ನು ಕೇಳಿ ನನಗೆ ಆಘಾತ, ದುಃಖ ಎರಡೂ ಉಂಟಾಗಿದೆ. ಪ್ರತಿಪಕ್ಷಗಳು ನಿಮ್ಮ ಕರೆಗೆ ಓಗೊಟ್ಟು ವಿದೇಶಕ್ಕೆ ನಿಯೋಗದಲ್ಲಿ ತೆರಳಿವೆ. ನಮ್ಮ ಪಕ್ಷದ ಸಂಸದ ಅಭಿಷೇಕ್ ಬ್ಯಾನರ್ಜಿ ಕೂಡ ಸರ್ವ ಪಕ್ಷ ನಿಯೋಗದಲ್ಲಿದ್ದಾರೆ. ಪಾಕ್‌ನ ಭಯೋತ್ಪಾದನೆ ಖಂಡಿಸಿ ಮಾತನಾಡುತ್ತಿದ್ದಾರೆ. ಆದರೆ, ಇಲ್ಲಿ ನೀವು ಪ್ರಧಾನಿಯಾಗಿ ಮಾತನಾಡುವ ಬದಲಾಗಿ ಬಿಜೆಪಿ ನಾಯಕರಂತೆ ನಮ್ಮ ಸರಕಾರವನ್ನು ಟೀಕಿಸುತ್ತಾ ಇದ್ದೀರಿ ಎಂದು ಮಮತಾ ಪ್ರಧಾನಿ ವಿರುದ್ಧ ಕಿಡಿಕಾರಿದ್ದಾರೆ. ನೆನಪಿಡಿ, ಸಮಯ ಒಂದೇ ರೀತಿ ಇರುವುದಿಲ್ಲ ಎಂದೂ ಮೋದಿ ಅವರನ್ನು ಎಚ್ಚರಿಸಿದ್ದಾರೆ.

ಪಾಕ್ ಜತೆ ಮಾತು ಸದ್ಯಕ್ಕಿಲ್ಲ: ಭಾರತ

ದೆಹಲಿ: ಉಪಖಂಡದಲ್ಲಿ ಶಾಂತಿ ಸ್ಥಾಪನೆಗೋಸ್ಕರವಾದರೂ ಮಾತುಕತೆ ನಡೆಸೋಣ ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಗೋಗರೆದಿದ್ದರೂ 'ಸದ್ಯಕ್ಕೆ ನಿಮ್ಮ ಜತೆ ಮಾತುಕತೆ ಅಸಾಧ್ಯ' ಎಂದು ಭಾರತ ಕಡ್ಡಿ ಮುರಿದಂತೆ ಹೇಳಿದೆ. ಮೊದಲು ಭಯೋತ್ಪಾದರನ್ನು ಸೃಷ್ಟಿಸುವುದನ್ನು ಕೈಬಿಡಿ, ಭಯೋತ್ಪಾದನೆಗೆ ಬೆಂಬಲ ನೀಡುವುದನ್ನು ಪೂರ್ಣವಾಗಿ ನಿಲ್ಲಿಸಿ. ಪಾಕಿಸ್ತಾನ ಆಕ್ರಮಿತ ಜಮ್ಮು-ಕಾಶ್ಮೀರದ ಭೂಪ್ರದೇಶವನ್ನು ಭಾರತಕ್ಕೆ ಗೌರವವಾಗಿ ವಾಪಸ್ ಮಾಡಿ. ಆನಂತರವಷ್ಟೇ ಮಾತುಕತೆ ಸಾಧ್ಯ ಎಂದು ಭಾರತದ ವಿದೇಶಾಂಗ ಸಚಿವಾಲಯ ಗುರುವಾರ ಸ್ಪಷ್ಟವಾಗಿ ಹೇಳಿದೆ. ಪಾಕ್ ಜತೆಗಿನ ಸಂಬಂಧ ವಿಷಯದಲ್ಲಿ ಭಾರತದ ನಿಲುವು ಸ್ಪಷ್ಟ. ಯಾವುದೇ ಒಪ್ಪಂದ, ಮಾತುಕತೆ ದ್ವಿಪಕ್ಷೀಯವಾಗಿರಬೇಕು. ಭಯೋತ್ಪಾದನೆ-ಮಾತುಕತೆ ಒಟ್ಟಿಗೆ ಸಾಗಲು ಸಾಧ್ಯವಿಲ್ಲ. ಪಿಒಕೆ ಮರಳಿ ಭಾರತಕ್ಕೆ ಹಸ್ತಾಂತರವಾದ ಬಳಿಕ ಮಾತುಕತೆ ಬಗ್ಗೆ ಆಲೋಚಿಸಬಹುದಾಗಿದೆ ಎಂದು ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

{ ಜೈರಾಮ್ ರಮೇಶ್ } ಕಾಂಗ್ರೆಸ್ ಪ್ರ.ಕಾರ್ಯದರ್ಶಿ

ಪಹಲ್ಗಾಮ್ ದಾಳಿ ವೇಳೆ, ನಂತರ ನಡೆದ ಆಪರೇಷನ್ ಸಿಂಧೂರ್, ದಿಢೀರ್ ಕದನ ವಿರಾಮ ಬಗ್ಗೆ ಚರ್ಚಿಸಲು ವಿಶೇಷ ಅಧಿವೇಶನಕ್ಕೆ ಪ್ರತಿಪಕ್ಷಗಳು ಒತ್ತಾಯಿಸಿದಾಗ ಬಿಜೆಪಿ ಸರಕಾರ ನಿರ್ಲಕ್ಷಿಸಿತು. ಆದರೆ, ಈಗ 1975ರ ವೇಳೆಯ 'ತುರ್ತು ಪರಿಸ್ಥಿತಿ'ಗೆ 50 ವರ್ಷವಾಗಿದೆ ಎಂಬ ಕಾರಣಕ್ಕೆ ಸಂಸತ್ತಿನ ವಿಶೇಷ ಅಧಿವೇಶನ ಕರೆಯಲು ಸರಕಾರ ಯೋಚಿಸುತ್ತಿದೆ.

ಸಮಾಚಾರ ಸಣ್ಣದಲ್ಲ

ಮರೆಯದ ಮಾತುಗಳು ಕೃತಿ ಬಿಡುಗಡೆ

ಮಂಗಳೂರು: ಡಾ. ಮಾಲತಿ ಶೆಟ್ಟಿ ಮಾಣೂರು ಸಾರಥ್ಯದ ಅಮೃತ ಪ್ರಕಾಶ ಪತ್ರಿಕೆ ಸಾಹಿತ್ಯಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಾ ಬಂದಿದೆ. ಇದರ ವತಿಯಿಂದ ನಡೆಯುವ ಅಮೃತ ಪ್ರಕಾಶ 44ನೇ ಸರಣಿ ಕೃತಿ ವಜ್ರ ರಾವ್ ಅವರ ಲೇಖನ ಸಂಕಲನ ''ಮರೆಯದ ಮಾತುಗಳು'' ಕೃತಿ ಬಿಡುಗಡೆ ಕಾರ್ಯಕ್ರಮ ಮಂಗಳೂರಿನ ಪತ್ರಿಕಾ ಭವನದಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಕೀಲರು ಹಾಗೂ ಲೇಖಕರು ಹರಿಕಥಾ ಪರಿಷತ್ (ರಿ), ಮಂಗಳೂರು ಇದರ ಅಧ್ಯಕ್ಷರಾದ ಮಹಾಬಲ ಶೆಟ್ಟಿ ವಹಿಸಿದ್ದರು. ಲೇಖಕರು ಹಾಗೂ ಮಾಜಿ ಚೇಯರ್‌ಮಾನ್ ಎಸ್. ಎಸ್. ನಾಯಕ್ ಇವರು ''ಮರೆಯದ ಮಾತುಗಳು'' ಕೃತಿ ಬಿಡುಗಡೆಗೊಳಿಸಿದರು. ಕೃತಿಯ ಲೇಖಕಿ ವಜ್ರಾ ರಾವ್, ಅಮೃತ ಪ್ರಕಾಶ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕಿ ಡಾ. ಮಾಲತಿ ಶೆಟ್ಟಿ ಮಾಣೂರು ಕವಿಯತ್ರಿ ಶಿಕ್ಷಕಿ ಸುರೇಖಾ ಯಾಳವಾರ ಉಪಸ್ಥಿತರಿದ್ದರು. ಡಾ. ಮಾಲತಿ ಶೆಟ್ಟಿ ಮಾಣೂರು ಸ್ವಾಗತಿಸಿದರು. ಸುರೇಖಾ ಯಾಳವಾರ ಕಾರ್ಯಕ್ರಮ ನಿರೂಪಿಸಿದರು.

ರಹೀಂ ಮನೆಗೆ ನಾಯಕರ ಭೇಟಿ

ಬಂಟ್ವಾಳ: ದುಷ್ಕರ್ಮಿಗಳಿಂದ ಹತ್ಯೆಗೊಳಗಾದ ರಹೀಂ ಕೊಳತ್ತಮಜಲು ಅವರ ಮನೆಗೆ ಸಮಸ್ತ ಉಲಮಾ ನಾಯಕರು ಭೇಟಿ ನೀಡಿ ಮನೆ ಮದಿಗೆ ಸಾಂತ್ವನ ಹೇಳಿದರು. ನಿಯೋಗದಲ್ಲಿ ಸಮಸ್ತ ಕೇರಳ ಜಂಇಯ್ಯತುಲ್ ಉಲಮಾ ಕರ್ನಾಟಕ ಮುಶಾವರದ ಪ್ರಧಾನ ಕಾರ್ಯದರ್ಶಿ ಬಿ.ಕೆ ಅಬ್ದುಲ್ ಖಾದಿರ್ ಅಲ್ ಖಾಸಿಮಿ ಬಂಬ್ರಾಣ, ಕಾರ್ಯಾಧ್ಯಕ್ಷರಾದ ಕೆ.ಎಂ ಉಸ್ಮಾನುಲ್ ಫೈಝಿ ತೋಡಾರು, ಯು.ಕೆ ಅಬ್ದುಲ್ ಅಝೀಝ್ ದಾರಿಮಿ ಚೊಕ್ಕಬೆಟ್ಟು, ಕೆ.ಪಿ.ಎಂ ಶರೀಫ್ ಫೈಝಿ ಕಡಬ, ಅಹ್ಮದ್ ದಾರಿಮಿ ಕಂಬಳಬೆಟ್ಟು, ಕೆ.ಐ ಅಬ್ದುಲ್ ಖಾದಿರ್ ದಾರಿಮಿ ಕುಕ್ಕಿಲ, ಶರೀಫ್ ದಾರಿಮಿ ಪೊಮ್ಮಲೆ ಮುಂತಾದ ಉಲಮಾಗಳು ಇದ್ದರು.

'ಪಿಲಿ ಪಂಜ' ಸಿನಿಮಾ ಟೀಸರ್ ಬಿಡುಗಡೆ

ಮಂಗಳೂರು: ಯಸ್ ಬಿ ಗ್ರೂಪ್ಸ್ ಅರ್ಪಿಸುವ, ಶಿಯಾನ ಪ್ರೊಡಕ್ಷನ್ ಹೌಸ್ ಬ್ಯಾನರ್ ನಡಿ ತಯಾರಾದ ಬಹು ನಿರೀಕ್ಷಿತ ಪಿಲಿಪಂಜ ತುಳು ಸಿನಿಮಾದ ಟೀಸರ್ ನ್ನು ನಿರ್ದೇಶಕ ದೇವದಾಸ ಕಾಪಿಕಾಡ್ ಬಿಡುಗಡೆ ಗೊಳಿಸಿದರು. ಟೀಸರ್ ನ್ನು ವೀಕ್ಷಿಸಿದ ದೇವದಾಸ್ ಕಾಪಿಕಾಡ್ ಅವರು ತುಳುವಿನಲ್ಲಿ ಮತ್ತೊಂದು ಸದಭಿರುಚಿಯ ಸಿನಿಮಾವನ್ನು ಪಿಲಿಪಂಜದ ಮೂಲಕ ನೋಡಲು ಸಾಧ್ಯವಿದೆ ಎಂದರು. ಸಿನಿಮಾ ತಂಡಕ್ಕೆ ಶುಭ ಹಾರೈಸಿದರು. ತುಳು ಸಿನಿಮಾರಂಗದಲ್ಲಿ ವಿಭಿನ್ನ ತಂತ್ರಜ್ಞಾನದಿಂದ ತಯಾರಾದ ಪಿಲಿಪಂಜ ಸಿನಿಮಾ ನವೆಂಬರ್ 7ರಂದು ತುಳುನಾಡಿನಾದ್ಯಂತ ಬಿಡುಗಡೆಯಾಗಲಿದೆ, ಸಿನಿಮಾದ ಟೀಸರ್ ಈಗಾಗಲೇ ಬಿಡುಗಡೆಯಾಗಿ ಭಾರೀ ಸದ್ದು ಮಾಡಿದೆ, ಟೀಸರ್ ನಮ್ಮನ್ನು ಇನ್ನಷ್ಟು ಕುತೂಹಲ ಮೂಡಿಸವಂತೆ ಮಾಡಿದೆ, ಸಿನಿಮಾ ಯಶಸ್ವಿಯಾಗುವುದರಲ್ಲಿ ಎರಡು ಮಾತಿಲ್ಲ, ತುಳು ಕಲಾಭಿಮಾನಿಗಳು ನವೆಂಬರ್ 7ರಂದು ಬಿಡುಗಡೆಯಾಗುವ ಈ ಸಿನಿಮಾವನ್ನು ನೋಡಿ ಚಿತ್ರತಂಡವನ್ನು ಬೆಂಬಲಿಸಬೇಕೆಂದು ಚಿತ್ರತಂಡ ವಿನಂತಿಸಿದೆ.ಈ ಸಂದರ್ಭದಲ್ಲಿ ನಿರ್ಮಾಪಕ ಪ್ರತೀಕ್ ಯು ಪೂಜಾರಿ ಕಾವೂರು , ನಿರ್ದೇಶಕ ಭರತ್ ಶೆಟ್ಟಿ, ಎಕ್ಸಿಕ್ಯೂಟಿವ್ ಪ್ರೊಡ್ಯೂಸರ್ ಹಾಗೂ ಕಲಾವಿದ ರಮೇಶ್ ರೈ ಕುಕ್ಕುವಳ್ಳಿ ಉಪಸ್ಥಿತರಿದ್ದರು.

ಬಜಾಜ್ ಫೈನಾನ್ಸ್ ದರೋಡೆಗೆ ಯತ್ನ

ಲಿಂಗಸಗೂರು: ಪಟ್ಟಣದಲ್ಲಿರುವ ಬಜಾಜ್ ಫೈನಾನ್ಸ್ ಶಾಖೆಯಲ್ಲಿ ಬುಧವಾರ ರಾತ್ರಿ ಕಳ್ಳತನ ಪ್ರಯತ್ನ ನಡೆದ ಘಟನೆ ಜರುಗಿದೆ. ರಾತ್ರಿ ಒಂದರಿಂದ ಎರಡು ಗಂಟೆಯ ಸಮಯದಲ್ಲಿ ದರೋಡೆಗೆ ಪ್ರಯತ್ನ ನಡೆದಿದ್ದು, ಬೀಟ್ ಪೊಲೀಸ್ ವಾಹನ ಬರುವುದನ್ನು ಗಮನಿಸಿದ ದರೋಡೆಕೋರರು ಪರಾರಿಯಾಗಿದ್ದಾರೆ. ದರೋಡೆಕೋರರು ಫೈನಾನ್ಸ್ ನ ಕಿಟಕಿ ಗ್ಲಾಸನ್ನು ಹೊಡೆದುಹಾಕಿ ದರೋಡೆಗೆ ಯತ್ನಸಿದ್ದಾರೆ. ಆದರೆ ಯಾವುದೆ ಹಣ ಒಡವೆ ಕಳುವಾಗಿಲ್ಲ ಎನ್ನಲಾಗುತಿದೆ. ಘಟನ ಸ್ಥಳಕ್ಕೆ ಡಿವೈಎಸ್ಪಿ ದತ್ತಾತ್ರೇಯ ಕರ್ನಾಡ, ಪಿ ಐ ಪುಂಡಲೀಕ್ ಪಟಾದಾರ್ ರವರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸಿಎಂ ಮಾಧ್ಯಮ ಸಲಹೆಗಾರ ಜಿಲ್ಲೆಗೆ

ಮಂಗಳೂರು: ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ ಪ್ರಭಾಕರ್ ಮೇ 30 ರಂದು ದಕ್ಷಿಣ ಕನ್ನಡ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಮೇ 30ರ ಬೆಳಗ್ಗೆ ಮಂಗಳೂರು ವನಿತಾ ಪಯ ಪಾರ್ಕ್ 'ಗ್ರೀನ್ ಮತ್ತು ಕ್ಲೀನ್ ಮಂಗಳೂರು' ಉದ್ಘಾಟನೆ, 9:30 – ಬಿಜೈ ಕಾಪಿಕಾಡ್ ಸರಕಾರಿ ಅಂಗನವಾಡಿ ಶಾಲೆಯ ಮಕ್ಕಳಿಗೆ ಕೊಡೆ ವಿತರಣೆ, 11– ಬೆಳ್ತಂಗಡಿ ತಾಲೂಕಿನ ಕುತ್ಲೂರು ಸರಕಾರಿ ಶಾಲೆಯಲ್ಲಿ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ರಾತ್ರಿ 7:15 – ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಬೆಂಗಳೂರಿಗೆ ತೆರಳಲಿದ್ದಾರೆ.

{ಡಿ.ಕೆ.ಶಿವಕುಮಾರ್} ಡಿಸಿಎಂ

ಜಲಸಂಪನ್ಮೂಲ ಇಲಾಖೆ ಎಂಜಿನಿಯರ್‌ಗಳ ವರ್ಗಾವಣೆ ಕುರಿತು ಮುಖ್ಯ ಕಾರ್ಯದರ್ಶಿಗಳಿಗೆ ಬರೆದ ಪತ್ರದ ಬಗ್ಗೆ ಪ್ರತಿಕ್ರಿಯಿಸುತ್ತಾ, ಜಲಸಂಪನ್ಮೂಲ ಇಲಾಖೆಯಲ್ಲಿ ಹೆಚ್ಚು ಇಂಜಿನಿಯರ್‌ಗಳಿಲ್ಲ. ನಮಗೆ ತುರ್ತಾಗಿ ಇಂಜಿನಿಯರ್‌ಗಳು ಬೇಕು. ಹೀಗಾಗಿ ನಮ್ಮ ಇಲಾಖೆಯಿಂದ ಯಾರನ್ನೂ ಬೇರೆಡೆಗೆ ಕಳಿಸಬೇಡಿ.

ಜಿಲ್ಲೆಯಾದ್ಯಂತ ಪ್ರತಿಭಟಿಸುವುದಾಗಿ ಎಸ್‌ಕೆ ಸಂಘಟನೆಯಿಂದ ಎಚ್ಚರಿಕೆ

ಹತ್ಯೆ: ಕ್ಷಿಪ್ರ ಕ್ರಮಕ್ಕಾಗಿ ಆಗ್ರಹ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕೊಳ್ತಮಜಲು ನಿವಾಸಿ ಅಬ್ದುಲ್ ರಹೀಂ ಎಂಬ ಅಮಾಯಕ ಕೂಲಿ ಕಾರ್ಮಿಕನ ಹತ್ಯೆಗೆ ಸಂಚು ರೂಪಿಸಿದವರು ಹಾಗೂ ಪ್ರಚೋದನಾಕಾರಿ ಭಾಷಣ ನಡೆಸಿದವರನ್ನು ಕ್ಷಿಪ್ರವಾಗಿ ಬಂಧಿಸಬೇಕು. ಇಲ್ಲದಿದ್ದರೆ ಸಂಘಟನೆಯು ಜಿಲ್ಲೆಯಾದ್ಯಂತ ಪ್ರತಿಭಟನೆಯನ್ನು ನಡೆಸಲಿದೆ ಎಂದು ಎಸ್‌ಕೆ ಎಸ್ಸೆಸ್ಸೆಫ್ ಎಚ್ಚರಿಸಿದೆ.

ಮಂಗಳೂರು ಪ್ರೆಸ್ ಕ್ಲಬ್ ನಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಸಂಘಟನೆಯ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಅನೀಸ್ ಕೌಸರಿ ಮಾತನಾಡಿದರು.

ದುಷ್ಕರ್ಮಿಗಳು ಅಬ್ದುಲ್ ರಹೀಂ ಎಂಬ ಅಮಾಯಕ ಯುವಕನನ್ನು ಬರ್ಬರವಾಗಿ ಹತ್ಯೆಗೈದಿದ್ದಾರೆ. ಅವರ ಜೊತೆಗಿದ್ದ ಖಲಂದರ್ ಎನ್ನುವ ಯುವಕನಿಗೂ ಮಾರಣಾಂತಿಕ ಹಲ್ಲೆ ನಡೆಸಲಾಗಿದೆ. ದ.ಕ ಜಿಲ್ಲೆಯಲ್ಲಿ ಕೋಮು ಪ್ರೇರಿತ ಕೊಲೆಗಳ ಸರಣಿ ಮುಂದುವರಿಯುತ್ತಿದ್ದು, ಇದು ಸಾರ್ವಜನಿಕರನ್ನು ಭಯಭೀತರನ್ನಾಗಿಸಿದೆ. ಜನ ಸಾಮಾನ್ಯರ ವಿಶೇಷವಾಗಿ ದಿನಕೂಲಿ ಕೆಲಸ ಮಾಡಿ ಬದುಕುವವರ ದಾರಿ ಇದು ಕಸಿಯುತ್ತಿದೆ. ಕಾನೂನಿನ ಭಯವಿಲ್ಲದೆ ಕೋಮುವಾದಿ ಶಕ್ತಿಗಳು ನಿರಂತರ ದ್ವೇಷ ಭಾಷಣ ಮಾಡುವವರಿಂದ ರಹೀಮನ ಹತ್ಯೆ ನಡೆದಿದೆ. ಗೃಹ ಇಲಾಖೆಯ ವೈಫಲ್ಯವೂ ಕಾರಣವಾಗಿದೆ ಎಂದು ಅವರು ಆರೋಪಿಸಿದರು.

ಮೃತ ಅಬ್ದುಲ್ ರಹೀಂ ಜಾತ್ಯತೀತ ತತ್ವವನ್ನು ಅಳವಡಿಸಿಕೊಂಡು ಬದುಕಿದಂತಹ ವ್ಯಕ್ತಿಯಾಗಿದ್ದು, ಯಾವುದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾದವನಲ್ಲ. ದಕ್ಷಿಣ ಕನ್ನಡ ಜಿಲ್ಲೆಯ 500ರಷ್ಟು ಮೊಹಲ್ಲಾಗಳಿಗೆ ನೇತೃತ್ವ ನೀಡುತ್ತಿರುವ ಧಾರ್ಮಿಕ ಯುವಜನ ಸಂಘಟನೆಯ ಕಾರ್ಯ ಕರ್ತ ಮತ್ತು ಸ್ಥಳೀಯ ಮೊಹಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿದ್ದ. ತನ್ನ ಪಾಡಿಗೆ ದುಡಿದು ಕುಟುಂಬ ನಿರ್ವಹಣೆ ಮಾಡುತ್ತಿದ್ದ. ಮೃತ ಅಬ್ದುಲ್ ರಹೀಂ ಸ್ಮರಣಾರ್ಥ ಜಿಲ್ಲೆಯ 100 ಕೇಂದ್ರಗಳಲ್ಲಿ ರಕ್ತದಾನ ಹಾಗೂ 3000 ಶಾಖಾ ಕೇಂದ್ರಗಳಲ್ಲಿ ಪ್ರಾರ್ಥನಾ ಸಂಗಮ ನಡೆಸಲು ಸಂಘಟನೆ ವತಿಯಿಂದ ತೀರ್ಮಾನಿಸಲಾಗಿದೆ ಎಂದು ಅವರು ಈ ಸಂದರ್ಭ ತಿಳಿಸಿದರು.

ಸುದಿಗೋಷ್ಠಿಯಲ್ಲಿ ಸಂಘಟನೆಯ ರಾಜ್ಯ ಸಮಿತಿ ಅಧ್ಯಕ್ಷ ಮುಫ್ತಿ ರಫೀಖ್ ಅಹ್ಮದ್ ಹುದವಿ, ಕೋಶಾಧಿಕಾರಿ ಸಯ್ಯಿದ್ ಅಮೀರ್ ತಂಙಳ್ ಕಿನ್ಯ, ಕೇಂದ್ರ ಸಮಿತಿ ಪ್ರಧಾನ ಕಾರ್ಯದರ್ಶಿ ಓ.ಪಿ. ಅಶ್ರಫ್, ರಾಜ್ಯ ಸಮಿತಿ ಕಾರ್ಯಕಾರಿ ಸದಸ್ಯರಾದ ಖಾಸಿಂ ದಾರಿಮಿ, ರಿಯಾಝ್ ರಹ್ಮಾನಿ, ತಾಜುದ್ದೀನ್ ರಹ್ಮಾನಿ, ಮುಹಮ್ಮದ್ ಮಾಸ್ಟರ್ ಉಪಸ್ಥಿತರಿದ್ದರು.

ಸುದ್ದಿಗೋಷ್ಠಿಯಲ್ಲಿ ಎಸ್‌ಕೆ ಎಸ್ಸೆಸ್ಸೆಫ್ ಸಂಘಟನೆಯ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಅನೀಸ್ ಕೌಸರಿ ಮಾತನಾಡಿದರು.

ಮೃತನ ಕುಟುಂಬಕ್ಕೆ 50 ಲಕ್ಷ ಪರಿಹಾರ ಕೊಡಿ

ಅಮಾಯಕ ಅಬ್ದುಲ್ ರಹೀಂ ನ ಮನೆಗೆ ಗೃಹ ಸಚಿವರು, ಉಸ್ತುವಾರಿ ಸಚಿವರು ಮೃತರ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿ, ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರ ಧನ ಪರಿಹಾರ ಕೊಡಬೇಕು. ಕೋಮು ದ್ವೇಷದ ಭಾಷಣ ಮಾಡುವವರ ಬಗ್ಗೆ ಗೃಹ ಇಲಾಖೆಗೆ ಮಾಹಿತಿ ಇದೆ. ಹಾಗಾಗಿ ಅಂತಹವರನ್ನು ಬಂಧಿಸಿ ಕ್ರಮ ಕೈಗೊಳ್ಳಬೇಕು ಎಂದು ಅನೀಸ್ ಕೌಸರಿ ಆಗ್ರಹಿಸಿದರು.

ನಿರಂತರ ಹತ್ಯೆಗಳಿಗೆ ಜಿಲ್ಲಾ ಪೊಲೀಸರ ವೈಫಲ್ಯ ಕಾರಣ



ಪತ್ರಿಕಾಗೋಷ್ಠಿಯಲ್ಲಿ ಫಾರೂಕ್ ಉಳ್ಳಾಲ್ ಮಾತನಾಡಿದರು.

ಉಳ್ಳಾಲ: ದ.ಕ. ಜಿಲ್ಲೆಯ ಶಾಂತಿ ಹದಗೆಡಲು, ನಿರಂತರ ಕೊಲೆಗಳು ನಡೆಯಲು ಪೊಲೀಸ್ ಇಲಾಖೆ ವೈಫಲ್ಯ ಕಾರಣ. ಸುಹಾಸ್ ಶೆಟ್ಟಿ ಕೊಲೆಯ ಬಳಿಕ ನಡೆದ ಘಟನೆ, ಸಂತಾಪ ಸಭೆಯಲ್ಲಿ ಶ್ರೀಕಾಂತ್ ಶೆಟ್ಟಿ, ಭರತ್ ಕುಮ್ಡೇಲ್ ಕೋಮುಪ್ರಚೋದನಾ ಭಾಷಣ ಮಾಡಿದ ಸಂದರ್ಭದಲ್ಲಿ ಪೊಲೀಸ್ ಇಲಾಖೆ ದಿಟ್ಟತನದಿಂದ ಕ್ರಮ ಕೈಗೊಂಡಿದ್ದರೆ ಅಬ್ದುಲ್ ರಹ್ಮಾನ್ ಎಂಬ ಅಮಾಯಕ ವ್ಯಕ್ತಿ ಯ ಕೊಲೆ ನಡೆಯುತ್ತಿರಲಿಲ್ಲ ಎಂದು ಕೆಪಿಸಿಸಿ ಸಂಯೋಜಕ ಫಾರೂಕ್ ಉಳ್ಳಾಲ್ ಹೇಳಿದರು.

ಉಳ್ಳಾಲ ನಗರ ಕಾಂಗ್ರೆಸ್ ವತಿಯಿಂದ ಪ್ರೆಸ್ ಕ್ಲಬ್ ನಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬಜ್ಪೆ ಯಲ್ಲಿ ನಡೆದ ಸಭೆಯಲ್ಲಿ ಶ್ರೀಕಾಂತ್ ಶೆಟ್ಟಿ , ಅದೇ ರೀತಿ ಭರತ್ ಕುಮ್ಡೇಲ್ ಅವರ ಕೋಮು ಪ್ರಚೋದನೆ ಭಾಷಣ ಅಬ್ದುಲ್ ರಹ್ಮಾನ್ ಕೊಲೆಗೆ ಪ್ರೇರಣೆ ನೀಡಿದೆ. ಪೊಲೀಸರು ಇವರಿಬ್ಬರನ್ನು ಆರೋಪಿಗಳನ್ನಾಗಿ ಪರಿಗಣಿಸಿ ಅವರ ವಿರುದ್ಧ ಚಾರ್ಜ್ ಶೀಟ್ ದಾಖಲು ಮಾಡಬೇಕು. ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸರಕಾರ ಪೊಲೀಸ್ ಇಲಾಖೆಗೆ ಇಂತಹ ಸಂದರ್ಭದಲ್ಲಿ ಉತ್ತಮ ಮಾರ್ಗದರ್ಶನ ನೀಡಬೇಕು. ಕೋಮುಪ್ರಚೋದಕ ಭಾಷಣದ ಪ್ರೇರಣೆ ಯಿಂದ ಕೊಲೆಯಾದ ಅಬ್ದುಲ್ ರಹ್ಮಾನ್ ಕುಟುಂಬ ಕ್ಕೆ ಸೂಕ್ತ ಪರಿಹಾರ ನೀಡಬೇಕು.

ಆಸ್ಪತ್ರೆಯಲ್ಲಿ ಚಿಕಿತ್ಸೆ ಯಲ್ಲಿರುವ ವ್ಯಕ್ತಿ ಗೆ ಆಸ್ಪತ್ರೆ ವೆಚ್ಚ ಮಾತ್ರವಲ್ಲ ದೆ ಮುಂದಿನ ಜೀವನಕ್ಕೆ ಅನುಕೂಲ ಆಗುವಂತೆ ಉತ್ತಮ ಪರಿಹಾರ ಸರಕಾರ ನೀಡಲು ಒತ್ತಯಿಸಿದರು.

ಸುದ್ದಿಗೋಷ್ಠಿ ಯಲ್ಲಿ ನಗರಸಭೆ ಕೌನ್ಸಿಲರ್ ಅಯ್ಯೂಬ್ ಮಂಚಿಲ, ಕಾಂಗ್ರೆಸ್ ನಗರ ಅಧ್ಯಕ್ಷ ಮುಸ್ತಫಾ ಅಬ್ದುಲ್ಲಾ, ರಶೀದ್ ಯೂಸುಫ್ ಉಪಸ್ಥಿತರಿದ್ದರು.

ಅಲ್ಪಸಂಖ್ಯಾತರಲ್ಲಿ ಕ್ಷಮೆ ಯಾಚಿಸಲಿ



ತೊಕ್ಕೊಟ್ಟಿನ ಪ್ರೆಸ್ ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಟಿಯಲ್ಲಿ ನೌಶಾದ್ ಮಲಾರ್‌ಮಾತನಾಡಿದರು.

ಉಳ್ಳಾಲ: ಬಂಟ್ವಾಳದಲ್ಲಿ ಕೊಲೆಯಾಗಿರುವ ಅಬ್ದುಲ್ ರಹಿಮಾನ್ ಅವರ ಮೇಲೆ ಯಾವುದೇ ಕೇಸುಗಳಿಲ್ಲದಿದ್ದರೂ ಹಳೆಯ ವೈಷಮ್ಯದಿಂದ ಕೊಲೆ ನಡೆದಿದೆ ಎಂದು ಹೇಳಿಕೆ ನೀಡಿರುವ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂ ರಾವ್ ಅವರು ಅಲ್ಪಸಂಖ್ಯಾತರಲ್ಲಿ ಬಹಿರಂಗ ಕ್ಷಮೆ ಯಾಚಿಸಬೇಕೆಂದು ಮುಸ್ಲಿಂ ಯೂತ್ ಲೀಗ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ನೌಶಾದ್ ಮಲಾರ್ ಆಗ್ರಹಿಸಿದರು.

ತೊಕ್ಕೊಟ್ಟಿನ ಪ್ರೆಸ್ ಕ್ಲಬ್‌ನಲ್ಲಿ ಗುರುವಾರದಂದು ನಡೆದ ಸುದ್ದಿಗೋಷ್ಟಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಗೃಹಚಾರ ಹಿಡಿದ ಗೃಹಮಂತ್ರಿ,ಜಿಲ್ಲೆಗೆ ಮದುಮಗನಂತೆ ಬಂದು ಹೋಗುವ ಉಸ್ತುವಾರಿ ಸಚಿವರ ಮೇಲೆ ಅಲ್ಪ ಸಂಖ್ಯಾತರಿಗೆ ಇನ್ನು ಭರವಸೆ ಉಳಿದಿಲ್ಲ.ಜಿಲ್ಲಾಡಳಿತ ,ಪೊಲೀಸ್ ಇಲಾಖೆಯ ವೈಫಲ್ಯ ದಿಂದ ಬಂಟ್ವಾಳದ ಅಮಾಯಕ ಯುವಕ ಅಬ್ದುಲ್ ರಹ್ಮಾನ್ ಕೊಲೆ ನಡೆದಿದೆ. ರಾಜ್ಯ ಕಾಂಗ್ರೆಸ್ ಸರಕಾರದ ಮೇಲೆ ಅಲ್ಪ ಅಂಖ್ಯಾತರು ಭರವಸೆ ಇಟ್ಟರೂ ಸರಕಾರ ಮಾತ್ರ ನಮಗೆ ರಕ್ಷಣೆ ನೀಡುತ್ತಿಲ್ಲ ಎಂದು ಆರೋಪಿಸಿದರು. ಮುಸ್ಲಿಂ ಯೂತ್ ಲೀಗ್ ನ ರಾಜ್ಯ ಸಮಿತಿ ಸದಸ್ಯರಾದ ಶಬೀರ್ ತಲಪಾಡಿ, ಜಿಲ್ಲಾಧ್ಯಕ್ಷರಾದ ಹನೀಫ್ ಕುಂಜತ್ತೂರು,ಸದಸ್ಯರಾದ ಅಹಮ್ಮದ್ ಪೆರಿಬೈಲ್, ಹನೀಫ್ ಎಸ್ .ಬಿ ಉಚ್ಚಿಲ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

25 ಲಕ್ಷ ರುಪಾಯಿ ಪರಿಹಾರ ನೀಡಿ

ಮಂಗಳೂರಲ್ಲಿ ವಯನಾಡಿನ ಅಶ್ರಪ್ ಎಂಬ ಅಮಾಯಕ ಯುವಕನ ಮೇಲೆ ಗುಂಪೊಂದು ಹಲ್ಲೆಗೈದು ಕೊಲೆ ಮಾಡಿತ್ತು.ಇದೀಗ ಮತ್ತೊಬ್ಬ ಅಮಾಯಕ ಅಲ್ಪ ಸಂಖ್ಯಾತ ಯುವಕನನ್ನು ಕೊಲೆಯಾಗಿದೆ. ಜಿಲ್ಲೆಯಲ್ಲಿ ಪುಂಡಾಟಿಕೆ ನಡೆಸುವವರನ್ನ ನಿಯಂತ್ರಿಸಲು ರಾಜ್ಯದ ಕಾಂಗ್ರೆಸ್ ಸರಕಾರ ವಿಫಲವಾಗಿದೆ. ಮುಸ್ಲಿಮರ ಮಾತುಗಳನ್ನು ಪಡೆದು ಅಧಿಕಾರ ಗಿಟ್ಟಿಸಿದ ಕಾಂಗ್ರೆಸ್ ಸರಕಾರದಿಂದ ಹತ್ತು ಶೇಕಡದಷ್ಟು ಮುಸ್ಲಿಮರನ್ನ ರಕ್ಷಿಸಲು ಸಾಧ್ಯವಾಗಿಲ್ಲ.ರಾಜ್ಯ ಸರಕಾರವು ಅಶ್ರಫ್ ವಯನಾಡು ಮತ್ತು ಅಬ್ದುಲ್ ರಹ್ಮಾನ್ ಅವರ ಕುಟುಂಬಕ್ಕೆ ತಲಾ 25 ಲಕ್ಷ ರುಪಾಯಿ ಪರಿಹಾರ ನೀಡಬೇಕೆಂದು ಆಗ್ರಹಿಸಿದರು.

ಅತಿವೃಷ್ಟಿ ಹಾನಿಗೆ ತ್ವರಿತವಾಗಿ ಸ್ಪಂದಿಸಿ: ಸಚಿವೆ

ಉಡುಪಿ: ಅತಿವೃಷ್ಟಿಯಿಂದ ಉಂಟಾಗುವ ಪ್ರವಾಹ, ಅದರಿಂದಾಗುವ ಇತರೆ ಸಮಸ್ಯೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವುದರೊಂದಿಗೆ ತ್ವರಿತವಾಗಿ ಸ್ಪಂದಿಸಿ, ಯಾವುದೇ ಜನ, ಜಾನುವಾರುಗಳಿಗೆ ಹಾನಿಯಾಗದಂತೆ ಎಚ್ಚರಿಕೆ ವಹಿಸಿ ಎಂದು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅಧಿಕಾರಿಗಳಿಗೆ ಸೂಚಿಸಿದರು.

ಅವರು ಮೇ 29ರಂದು ನಗರದ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದ ಕೆಸ್ವಾನ್ ವೀಡಿಯೋ ಕಾನ್ಫರೆನ್ಸ್ ಸಭಾಂಗಣದಲ್ಲಿ ಮಳೆ ಹಾನಿ ಬಗ್ಗೆ ಚರ್ಚಿಸಲು ಅಧಿಕಾರಿಗಳೊಂದಿಗೆ ಆನ್‌ಲೈನ್ ಮೂಲಕ ಸಭೆ ನಡೆಸಿ ಮಾತನಾಡಿದರು.

ಈ ಬಾರಿ ಅವಧಿಗೆ ಮುನ್ನವೇ ಜಿಲ್ಲೆಯಾದ್ಯಂತ ಪೂರ್ವ ಮುಂಗಾರು ಮಳೆ ನಿರೀಕ್ಷೆಗಿಂತ ಹೆಚ್ಚಾಗಿದೆ. ಜನವರಿಯಿಂದ ಈವರೆಗೆ ವಾಡಿಕೆಯಂತೆ 177. 4 ಮಿ.ಮೀ ಮಳೆಯಾಗಬೇಕಿತ್ತು. ಆದರೆ, 801.7 ಮಿ.ಮೀ ಕ್ಕೂ ಅಧಿಕ ಮಳೆಯಾಗಿ, ಮೂರು ಪಟ್ಟು ಹೆಚ್ಚಾಗಿದೆ.

ಜಿಲ್ಲಾ ಹಾಗೂ ತಾಲೂಕು ಮಟ್ಟಗಳಲ್ಲಿ ಕಂಟ್ರೋಲ್ ರೂಂಗಳು 24★7 ಕಾರ್ಯನಿರ್ವಹಿಸಬೇಕು. ಯಾವುದೇ ಮಳೆಹಾನಿ ದೂರುಗಳು ಬಂದಲ್ಲಿ ಕೂಡಲೇ ಸ್ಪಂದಿಸಬೇಕು. ಅತಿವೃಷ್ಟಿಯಿಂದ ತೊಂದರೆಗೊಳಗಾದವರಿಗೆ ಪರಿಹಾರವನ್ನು ಸಹ ತ್ವರಿತವಾಗಿ ನೀಡಬೇಕು ಎಂದರು.ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸತ್ಯವತಿ ಜಿ. ಮಾತನಾಡಿ, ಅಧಿಕಾರಿಗಳು ಹಾಗೂ ಸಿಬ್ಬಂದಿ ಕೇಂದ್ರಸ್ಥಾನಗಳಲಿದ್ದು, ಪ್ರಕೃತಿ ವಿಕೋಪ ನಿರ್ವಹಣೆ ಕಾರ್ಯಗಳನ್ನು ಶೀಘ್ರವಾಗಿ ಕೈಗೊಳ್ಳಲು ಕಾರ್ಯ ಪ್ರವೃತ್ತರಾಗಿರಬೇಕು. ಜನಸಾಮಾನ್ಯರಿಗೆ ಸ್ಪಂದಿಸಲು ಅನುಕೂಲವಾಗುವ ಹಾಗೆ ತಮ್ಮ ಮೊಬೈಲ್ ಅನ್ನು ದಿನದ ಇಪ್ಪತ್ತನಾಲ್ಕು ಗಂಟೆಯೂ ಸಕ್ರೀಯವಾಗಿ ಇಟ್ಟುಕೊಂಡು ದೂರು ಬಂದಾಗ ಕೂಡಲೇ ಸ್ಪಂದಿಸಬೇಕೆಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ಅರುಣ್ ಕೆ, ಡಿ.ಎಫ್.ಓ ಗಣಪತಿ, ಸಹಾಯಕ ಕಮೀಷನರ್ ರಶ್ಮಿ ಎಸ್, ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲೂಕು ತಹಸೀಲ್ದಾರರುಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದ ಕೆಸ್ವಾನ್ ವೀಡಿಯೋ ಕಾನ್ಫರೆನ್ಸ್ ಸಭಾಂಗಣದಲ್ಲಿ ಸಭೆ ನಡೆಸಿ ಮಾತನಾಡಿದರು.

ಜಿಲ್ಲೆಗೆ ಹೊರಗಿನಿಂದ ಆಗಮಿಸುವ ಪ್ರವಾಸಿಗರಿಗೆ ಕಡಲ ತೀರದಲ್ಲಿ ಹಾಗೂ ಹಳ್ಳ, ಕೊಳ್ಳ, ಜಲಪಾತಗಳ ಬಗ್ಗೆ ಅರಿವಿಲ್ಲದೇ ಪ್ರಾಣಹಾನಿ ಪ್ರಕರಣಗಳು ಉಂಟಾಗುವ ಸಾಧ್ಯತೆಗಳು ಇವೆ. ಈ ಬಗ್ಗೆ ಸಾರ್ವನಿಕರಿಗೆ ಮುನ್ಸೂಚನೆ ನೀಡುವ ಫಲಕಗಳನ್ನು ಅಳವಡಿಸಿ.

-ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

ಅನಾಹುತ ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಿ



ಪ್ರಾಕೃತಿಕ ವಿಕೋಪ ಕುರಿತು ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಸುನಿಲ್ ಕುಮಾರ್ ಮಾತನಾಡಿದರು.

ಉಡುಪಿ: ಪ್ರಾಕೃತಿಕ ವಿಕೋಪಕ್ಕೆ ಕಾರ್ಕಳ ಕ್ಷೇತ್ರದಲ್ಲಿ ಯಾವೊಂದು ಅನಾಹುತ ಸಂಭವಿಸದಂತೆ ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಶಾಸಕ ಸುನಿಲ್ ಕುಮಾರ್ ಕುಮಾರ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮುಂದಿನ ದಿನಗಳಲ್ಲಿ ನಮ್ಮ ಜಾಗೃತಿಯಿಲ್ಲದೇ ಅನಾಹುತ ನಡೆಯಿತು ಎಂಬಂತಹ ಘಟನೆಗಳು ಉಭಯ ತಾಲೂಕಿನಲ್ಲಿ ನಡೆಯಬಾರದು. ಈ ನಿಟ್ಟಿನಲ್ಲಿ ಎಲ್ಲಾ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು. ಸಮಸ್ಯೆ ಅಥವಾ ಜವಾಬ್ದಾರಿಗಳನ್ನು ನಮ್ಮದಲ್ಲ ಎಂದು ಬೇರೆ ಇಲಾಖೆಗಳಿಗೆ ವರ್ಗಾಯಿಸದೇ ಯಾವುದೇ ಸಮಸ್ಯೆ ಬಂದರೂ ಎಲ್ಲಾ ಇಲಾಖೆಗಳು ಜತೆಯಾಗಿ ಕಾರ್ಯನಿರ್ವಹಿಸಬೇಕು ಎಂದರು.

ನಾಟ್‌ರೀಚೇಬಲ್ ಆಗದಿರಲಿ: ಅವಶ್ಯವಾಗಿ ಮುಂದಿನ ಮೂರು ತಿಂಗಳು ಯಾವುದೇ ಅಧಿಕಾರಿಗಳ ಫೋನ್ ನಾಟ್‌ರೀಚೇಬಲ್ ಆಗದಿರಲಿ. ಬಂದಂತಹ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಿ ಪರಿಹಾರಕ್ಕಾಗಿ ಸಾರ್ವಜನಿಕರೊಂದಿಗೆ ಸೌಹಾರ್ದಯುತವಾಗಿ ಮಾತುಕತೆ ನಡೆಸಿ.

ನೀವು ಫೋನ್ ರಿಸಿವ್ ಮಾಡದಿದ್ದಲ್ಲಿ ಮೇಲಾಧಿಕಾರಿಗಳಿಗೆ ಫೋನ್ ಹೋಗುತ್ತೆ. ನಿಮ್ಮ ಫೋನ್‌ಗಳನ್ನು ಅಲರ್ಟ್ ಆಗಿ ಇಟ್ಟುಕೊಳ್ಳಿ ಎಂದು ಸುನಿಲ್ ಕುಮಾರ್ ಹೇಳಿದರು.

ಮಕ್ಕಳ ಚಲನವಲನದ ಬಗ್ಗೆ ಗಮನವಿರಲಿ: ಮಕ್ಕಳ ಚಲನವಲನದ ಬಗ್ಗೆ ಹೆಚ್ಚಿನ ಗಮನ ಹರಿಸಿ. ಈ ಬಗ್ಗೆ ಉಭಯ ತಾಲೂಕಿನ ತಹಶೀಲ್ದಾರ್, ಇಓ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರು ಜಂಟಿಯಾಗಿ ಶಾಲಾ ಮುಖ್ಯ ಶಿಕ್ಷಕರೊಂದಿಗೆ ಮಾತುಕತೆ ನಡೆಸಿ ಕ್ರಮ ಕೈಗೊಳ್ಳಬೇಕಿದೆ. ಗ್ರೂಪ್‌ಗಳಲ್ಲಿ ಮೆಸೇಜ್ ಅಥವಾ ವಾಯ್ಸ್ ಮೆಸೇಜ್ ಹಾಕಿದೆ ಎಂಬ ಕಾರಣ ಯಾವುದನ್ನೂ ಕೊಡಬೇಡಿ. ಏಕೆಂದರೆ ಅವುಗಳಿಂದ ಪಾಕೃತಿಕ ವಿಕೋಪ ತಡೆಗಟ್ಟಲು ಸಾಧ್ಯವಿಲ್ಲ. ಆದ್ದರಿಂದ ನೀವೇ ಖುದ್ದಾಗಿ ವೈಯಕ್ತಿಕವಾಗಿ ಗಮನಹರಿಸಬೇಕು ಎಂದು ಸುನಿಲ್ ಕುಮಾರ್ ಹೇಳಿದರು.

ಆಕ್ಸಿಡೆಂಟ್ ಝೋನ್: ತಾಲೂಕಿನಲ್ಲಿ ಸುಮಾರು ಎಂಟು ಸ್ಪಾಟ್‌ಗಳಲ್ಲಿ ನಿರಂತರವಾಗಿ ಆಕ್ಸಿಡೆಂಟ್ ಸಂಭವಿಸುತ್ತಿದೆ. ಈ ಸ್ಪಾಟ್‌ಗಳ ಬಗ್ಗೆ ಮುಖ್ಯವಾಗಿ ಪಿಡಬ್ಲ್ಯೂಡಿ ಮತ್ತು ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು ನಿಗಾ ವಹಿಸಬೇಕು ಎಂದು ಹೇಳಿದರು.

ಉಡುಪಿ ಜಿಲ್ಲಾ ಅಪರ ಜಿಲ್ಲಾಧಿಕಾರಿ ಅಬಿದ್ ಗದ್ಯಾಲ್, ಕುಂದಾಪುರ ವಿಭಾಗ ಸಹಾಯಕ ಕಮೀಷನರ್ ರಶ್ಮಿ ಆರ್., ಜಿಲ್ಲಾ ತೋಟಗಾರಿಕೆ ಇಲಾಖೆ ಉಪನಿರ್ದೇಶಕಿ ಭುವನೇಶ್ವರಿ, ಕಾರ್ಕಳ ತಾಲೂಕು ತಹಶೀಲ್ದಾರ್ ಪ್ರದೀಪ್ ಆರ್., ಹೆಬ್ರಿ ತಾಲೂಕು ತಹಶೀಲ್ದಾರ್ ಪ್ರಸಾದ್, ಪುರಸಭಾ ಅಧ್ಯಕ್ಷ ಯೋಗೀಶ್ ದೇವಾಡಿಗ, ಕಾರ್ಕಳ ತಾ. ಪಂ. ಕಾರ್ಯ ನಿರ್ವಹಣಾಧಿಕಾರಿ ಪ್ರಶಾಂತ್ ರಾವ್, ವನ್ಯಜೀವಿ ಇಲಾಖೆ ಎಸಿಎಫ್ ಶ್ರೀಧರ್, ಕಾರ್ಕಳ ತಾ. ಪಂ. ಕಾರ್ಯ ನಿರ್ವಹಣಾಧಿಕಾರಿ ವಿಜಯಾ, ಪುರಸಭೆ ಮುಖ್ಯಾಧಿಕಾರಿ ಲೀನಾ ಬ್ರಿಟ್ಟೋ ವೇದಿಕೆಯಲ್ಲಿ ಉಪಸ್ಥಿತರಿದ್ದರು. ತಾಲೂಕು ಮಟ್ಟದ ಅಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಆಡಳಿತ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡರು.

ಸಿಕ್ಕಿಂ ಮಣಿಪಾಲ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಡಾ. ಜಿ. ಕೆ. ಪ್ರಭು

ಉಡುಪಿ: ಬೆಂಗಳೂರಿನ ಮಣಿಪಾಲ್ ಎಜುಕೇಶನ್ ಆ್ಯಂಡ್ ಮೆಡಿಕಲ್ ಗ್ರೂಪ್ ನ ಮುಖ್ಯ ಶೈಕ್ಷಣಿಕ ಅಧಿಕಾರಿ ಡಾ. ಗೋಪಾಲಕೃಷ್ಣ ಪ್ರಭು ಅವರನ್ನು ಸಿಕ್ಕಿಂ ಮಣಿಪಾಲ ವಿಶ್ವವಿದ್ಯಾಲಯದ ಕುಲಪತಿಯಾಗಿ ನೇಮಕಗೊಂಡಿದ್ದು, ಜುಲೈ 1 ರಂದು ಅಧಿಕಾರ ಸ್ವೀಕರಿಸಲಿರುವರು. ಮೂಲತಃ ಕಾರ್ಕಳದವರಾದ ಡಾ. ಜಿ. ಕೆ. ಪ್ರಭು ಒಂದು ವರ್ಷದಿಂದ ಎಂಇಎಂಜಿಯಲ್ಲಿ ಸಿಎಒ ಆಗಿ ಕಾರ್ಯ ನಿರ್ವಹಿಸುತ್ತಿದ್ದು, 2018ರ ಫೆಬ್ರವರಿಯಿಂದ ಜೈಪುರ ಮಣಿಪಾಲ ಯುನಿವರ್ಸಿಟಿಯ ಅಧ್ಯಕ್ಷರಾಗಿದ್ದರು.

ಅವರು ಕಾರ್ಕಳ ಶ್ರೀ ಮದ್ಭುವನೇಂದ್ರ ಪ್ರೌಢಶಾಲೆ ಮತ್ತು ಭುವನೇಂದ್ರ ಕಾಲೇಜಿನ ಹಳೆ ವಿದ್ಯಾರ್ಥಿ. ಮೂರು ದಶಕಗಳಿಂದ ಮಾಹೆ ವಿ.ವಿ.ಯಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದಲ್ಲದೇ ಸಹಕುಲಪತಿ (ತಾಂತ್ರಿಕ ಮತ್ತು ನಿರ್ವಹಣೆ), ಕುಲಸಚಿವ, ಎಂಐಟಿ ನಿರ್ದೇಶಕರಾಗಿದ್ದರು.

ಪ್ರಭು ಅವರು, ಎಂಐಟಿಯಲ್ಲಿ ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಶನ್ ಎಂಜಿನಿಯರಿಂಗ್ ಉಪನ್ಯಾಸಕರಾಗಿ ವೃತ್ತಿ ಜೀವನ ಆರಂಭಿಸಿದ್ದರು. ಬಳಿಕ ವಿಭಾಗ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ್ದರು. ಬಯೋಮೆಡಿಕಲ್ ಎಂಜಿನಿಯರಿಂಗ್ ಸೊಸೈಟಿ ಆಫ್ ಇಂಡಿಯಾದ ಸಕ್ರಿಯ ಸದಸ್ಯರಾದ ಅವರು ಸಂಶೋಧನ ಕ್ಷೇತ್ರದಲ್ಲೂ ಸಾಧನೆ ಮಾಡಿದ್ದಾರೆ.

ಗ್ರಾಪಂ ಅಧ್ಯಕ್ಷರ ಆಯ್ಕೆ: ಚುನಾವಣಾಧಿಕಾರಿ ನೇಮಕ

ಉಡುಪಿ: ವಿವಿಧ ಕಾರಣಗಳಿಂದ ತೆರವಾಗಿರುವ ಜಿಲ್ಲೆಯ ಹೆಬ್ರಿ ತಾಲೂಕಿನ ನಾಡ್ಪಾಲು ಗ್ರಾಮ ಪಂಚಾಯತಿಯ ಮುಂದಿನ ಅವಧಿಗೆ ಅಧ್ಯಕ್ಷರ ಸ್ಥಾನ (ಮೀಸಲಾತಿ: ಅನುಸೂಚಿತ ಜಾತಿ–ಮಹಿಳೆ) ಕ್ಕೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಲುವಾಗಿ ಕಾರ್ಕಳದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಶ್ರೀನಿವಾಸ ಅವರನ್ನು ಗೊತ್ತುಪಡಿಸಿದ ಅಧಿಕಾರಿಯನ್ನಾಗಿ ನೇಮಿಸಲಾಗಿದ್ದು, ಸದ್ರಿ ರವರು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 45 ಹಾಗೂ (ಗ್ರಾಮ ಪಂಚಾಯತ್ ಅಧ್ಯಕ್ಷ ಚುನಾವಣೆ) ನಿಯಮಗಳು 1995 ರ ನಿಯಮ 4 ರಿಂದ 11 ರ ವರೆಗಿನ ನಿಯಮದಂತೆ, ಚುನಾವಣೆ ನಡೆಸಿ, ಅಧ್ಯಕ್ಷ ಸ್ಥಾನವನ್ನು ಆಯ್ಕೆ ಮಾಡುವಂತೆ ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಡಾ. ಕೆ ವಿದ್ಯಾಕುಮಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಮೃತಾ ಏಕಾಂಗಿ ಬೈಕ್ ಸವಾರಿ

ಮಂಗಳೂರು: ಅತೀ ಕಿರಿಯ ವಯಸ್ಸಿನಲ್ಲಿ ಏಕಾಂಗಿಯಾಗಿ ಅತೀ ಹೆಚ್ಚು ಬೈಕ್ ಸವಾರಿ ನಡೆಸಿ ಗಿನ್ನಿಸ್ ದಾಖಲೆ ಮಾಡಿದ ಕುಂಬಳೆ ನಿವಾಸಿ ಅಮೃತಾ ಜೋಶಿಯವರು ತಮ್ಮ ಬೈಕ್ ಸವಾರಿಯನ್ನು ಗಲ್ಫ್ ದೇಶಗಳಿಗೆ ವಿಸ್ತರಿಸಿದ್ದಾರೆ. ಇದೆ ತಿಂಗಳು ಮೇ 5 ರಂದು ಮಂಗಳೂರು ವಿಮಾನ ನಿಲ್ದಾಣದಿಂದ ದುಬೈಗೆ ತೆರಳಿದ್ದರು. ದುಬೈಗೆ ತೆರಳುವ ಮೊದಲು ತನ್ನ ಕೆ ಟಿ ಎಂ ಡ್ಯೂಕ್ ಬೈಕ್‌ನ್ನು ಹಡಗಿನಲ್ಲಿ ಕೊಚ್ಚಿಯಿಂದ ದುಬೈಗೆ ಕಳಿಸಿದ್ದರು.ಮೇ 8ರಿಂದ ಅಬುದಾಭಿಯಿಂದ ಬೈಕ್ ಯಾತ್ರೆಯನ್ನು ಪ್ರಾರಂಭಿಸಿ ಯು ಎ ಇ ಯ 7 ಎಮಿರೆಟ್ಸ್ ಗಳಾದ ದುಬೈ, ಅಜ್ಮಾನ್, ಶಾರ್ಜಾ, ಫುಜೈರಾ, ರಸಾ ಅಲ್ ಖೈಮಾ, ಉಮ್ಮ ಅಲ್ ಕ್ವೈನ್ ರಾಜ್ಯಗಳಿಗೆ ಸಂಚರಿಸಲಿದ್ದಾರೆ. ಅದರೊಂದಿಗೆ ದುಬೈಯ ಹಾಟ್ಟಾ ಗಡಿಯಿಂದ ಮಸ್ಕತ್ ಒಮಾನಿಗೆ ತೆರಳಿ ಮರಳಿ ಪುನಃ ದುಬೈಗೆ ಮರಳಿದ್ದಾರೆ. ಅಮೃತಾಳ ಏಐ 14 ಕಾಸರಗೋಡು ರಿಜಿಸ್ಟ್ರೇಷನ್ ಬೈಕ್‌ನ್ನು ಕಂಡು ಅವರು ಸಂದರ್ಶಿಸಿದ ಸ್ಥಳಗಳಲ್ಲಿ ಅವರಿಗೆ ಸ್ಥಳೀಯರಿಂದ ವ್ಯಾಪಕ ಬೆಂಬಲ ದೊರಕಿದೆ ಹಾಗೂ ಜೂನ್ 1ಕ್ಕೆ ಅವರು ಕುಂಬಳೆಗೆ ತಲುಪಲಿದ್ದಾರೆ. ಈ ಮೊದಲು 2022 ರಲ್ಲಿ ಭಾರತದಲ್ಲಿ ಏಕಾಂಗಿಯಾಗಿ 23,000 ಕಿಲೋಮೀಟರ್ ಸಂಚರಿಸಿ ಗಿನ್ನಿಸ್ ದಾಖಲೆ ನಿರ್ಮಿಸಿದ್ದಾರೆ. ಈಗಾಗಲೇ ಅವರು ನೇಪಾಳ, ಮ್ಯಾನ್ಮರ, ಬಾಂಗ್ಲಾದೇಶ, ಭೂತನ್, ಶ್ರೀಲಂಕಾಕ್ಕೆ ತೆರಳಿದ್ದಾರೆ ಮತ್ತು ಒಟ್ಟಾಗಿ 50,000 ಕಿಲೋಮೀಟರ್ ಸಂಚರಿಸಿರುತ್ತಾರೆ. ಮಾತ್ರವಲ್ಲದೆ 2 ಇಂಡಿಯನ ಬುಕ್ ರೆಕಾರ್ಡ್ ಮತ್ತು 1 ಏಷ್ಯಾ ಬುಕ್ ರೆಕಾರ್ಡ್ ಗಳಿಸಿದ್ದಾರೆ.

ರಹೀಂ ಪೋಷಕರಿಗೆ ಡಿಸೋಜಾ ಸಾಂತ್ವನ

ಮಂಗಳೂರು: ಕೊಳ್ತಮಜಲು ಅಬ್ದುಲ್ ರೆಹೆಮಾನ್ರವರನ್ನು ಕೋಮುವಾದಿಗಳ ಗುಂಪೊಂದು ವ್ಯಾಪಾರ ದೃಷ್ಟಿಯಿಂದ ಕರೆದು ಕೊಲೆ ಮಾಡುವ ಮೂಲಕ ಸಮಾಜದಲ್ಲಿ ಮಾಡಿದ ಹೇಯ ಕೃತ್ಯ ಮಾಡಿದೆ ಎಂದು ವಿಧಾನ ಪರಿಷತ್ ಶಾಸಕ ಐವನ್ ಡಿ'ಸೋಜಾ ಖಂಡಿಸಿದ್ದಾರೆ.ರೆಹಮಾನ್ ಮನೆಗೆ ಭೇಟಿ ನೀಡಿ ಅವರ ಕುಟುಂಬಸ್ಥರಿಗೆ ಸಾಂತ್ವನ ನೀಡಿದರು. ಇದರ ಹಿಂದೆ ಇರುವ ಶಕ್ತಿಗಳನ್ನು ಯಾವುದೇ ಮುಲಾಜಿಲ್ಲದೇ ಮಟ್ಟಹಾಕಲು ಸರಕಾರವು ಬದ್ದವಾಗಿದೆ ಎಂದು ತಿಳಿಸಿದರು ಇದೇ ಸಂದರ್ಭದಲ್ಲಿ ಮಾತನಾಡಿದ ಐವನ್ ಡಿ'ಸೋಜಾರವರು ಸಮಾಜದಲ್ಲಿ ಘಾತುಕ ಶಕ್ತಿಗಳು ಮತ್ತು ಧರ್ಮದ ಜಾತಿಯ ಆಧಾರದಲ್ಲಿ ನಡೆಯುತ್ತಿರುವ ಗಲಭೆಗಳು ಸಮಾಜಕ್ಕೆ ದೊಡ್ಡ ಕಂಟಕವಾಗಿ ಮಾರ್ಪಟ್ಟಿದೆ. ಇದನ್ನು ಯಾವುದೇ ರೀತಿಯಲ್ಲಿ ಸಹಿಸಲಾಗುವುದಿಲ್ಲ ಇದರ ಹಿಂದೆ ಇರುವ ಘಾತುಕ ಶಕ್ತಿಯನ್ನು ಹುಡುಕಿ ಮಟ್ಟಹಾಕಲು ಸರಕಾರ ಬದ್ದವಾಗಿದೆ. ಈಗಾಗಲೇ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ತಿಳಿಸಲಾಗಿದೆ. ಗೃಹಸಚಿವರು ಹಾಗೂ ದ.ಕ. ಜಿಲ್ಲಾ ಉಸ್ತುವಾರಿ ಸಚಿವರು ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡಿದ್ದಾರೆ. ಶಾಂತಿ ನೆಲೆಸಲು ಬೇಕಾದ ಕ್ರಮ ಕೈಗೊಳ್ಳುವುದರ ಜತೆಗೆ ಪ್ರಚೋದನಕಾರಿ ಭಾಷಣಗಳ ಬಗ್ಗೆ ಪೋಲಿಸರು ತೆಗೆದುಕೊಳ್ಳಬೇಕಾದ ತೀರ್ಮಾನದ ಬಗ್ಗೆ ಸರಕಾರವು ಪುನರ್ಪರಿಶೀಲನೆ ನಡೆಸಲಿದೆ ಎಂದು ಐವನ್ ಡಿ'ಸೋಜಾ ತಿಳಿಸಿದರು.

ತಕ್ಷಣ ಬಂಧಿಸದಿದ್ದರೆ 'ಎಸ್ಪಿ ಕಚೇರಿ ಚಲೊ'

ಮಂಗಳೂರು: ಪಿಕಪ್ ವಾಹನ ಚಾಲಕ ಅಬ್ದುಲ್ ರಹಿಮಾನ್‌ನನ್ನು ಸಂಘಪರಿವಾರದ ನಿರ್ದೇಶನದಂತೆ ಹತ್ಯೆ ನಡೆಸಿದ ಸೂತ್ರಧಾರನಾಗಿರುವ ಅಶ್ರಫ್ ಕಲಾಯಿ ಹಂತಕ ಭರತ್ ಕುಮ್ಡೇಲ್‌ನ ವಿರುದ್ಧ ಕೊಲೆ ಪ್ರಕರಣ ದಾಖಲಿಸಿ 24 ಗಂಟೆಯ ಒಳಗಡೆ ಬಂಧಿಸದಿದ್ದರೆ ಎಸ್ಪಿ ಕಚೇರಿ ಚಲೋ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲಾದ್ಯಂತ ತೀವ್ರ ಸ್ವರೂಪದ ಹೋರಾಟ ನಡೆಸಲಾಗುವುದೆಂದು ಎಸ್‌ಡಿಪಿಐ ದಕ್ಷಿಣ ಕನ್ನಡ ಗ್ರಾಮಾಂತರ ಜಿಲ್ಲಾ ಉಪಾಧ್ಯಕ್ಷ ಹಾಗೂ ಬಂಟ್ವಾಳ ಪುರಸಭೆಯ ಉಪಾಧ್ಯಕ್ಷ ಮೂನಿಷ್ ಅಲಿ ಎಚ್ಚರಿಕೆ ನೀಡಿದ್ದಾರೆ. ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು ಗ್ಯಾಂಗ್‌ವಾರ್ ನಲ್ಲಿ ಹತ್ಯೆಯಾದ ಸುಹಾಸ್ ಶೆಟ್ಟಿಯ ಹತ್ಯೆಯ ನಂತರ ದಕ್ಷಿಣ ಕನ್ನಡ ಜಿಲ್ಲೆಯ ಹಲವು ಭಾಗಗಳಲ್ಲಿ ಮುಸ್ಲಿಂ ಯುವಕರ ಹತ್ಯಾ ಯತ್ನ ನಡೆದಿತ್ತು. ಮಾತ್ರವಲ್ಲದೆ ಸಂಘಪರಿವಾರದ ನಾಯಕರಾದ ಭರತ್ ಕುಮ್ಡೇಲ್, ಶ್ರೀಕಾಂತ್ ಶೆಟ್ಟಿ, ಶಿವಾನಂದ ಮೆಂಡನ್ ಸೇರಿದಂತೆ ಹಲವು ಸಂಘಪರಿವಾರದ ನಾಯಕರು ಹತ್ಯೆಗೆ ಪ್ರತೀಕಾರ ನಡೆಸುತ್ತೇವೆ ಎಂದು ಬಹಿರಂಗವಾಗಿ ಉಗ್ರ ಭಾಷಣ ಬಿಗಿದು ಮುಸ್ಲಿಂ ಯುವಕರ ಹತ್ಯೆಯ ಬಗ್ಗೆ ಮುನ್ನೆಚ್ಚರಿಕೆ ನೀಡಿದ್ದರೂ, ಪೊಲೀಸ್ ಇಲಾಖೆ ಹಾಗೂ ಸರಕಾರ ಅವರ ವಿರುದ್ಧ ಕಠಿಣ ಕ್ರಮ ಕೈಗೊಂಡು ಬಂಧಿಸಿ ತನಿಖೆ ನಡೆಸದೆ ನಿರ್ಲಕ್ಷ್ಯ ತೋರಿದ್ದರಿಂದ ಕೊಳ್ತಮಜಲುವಿನಲ್ಲಿ ಮುಸ್ಲಿಂ ಯುವಕನ ಹತ್ಯೆಯಾಗಿದೆ. ಭರತ್ ಕುಮ್ಡೇಲ್ ಬಂಧನವಾಗದಿದ್ದಲ್ಲಿ ಎಸ್ಪಿ ಕಚೇರಿ ಚಲೋ ಸೇರಿದಂತೆ ಜಿಲ್ಲಾಧ್ಯಂತ ತೀವ್ರ ಸ್ವರೂಪದ ಹೋರಾಟವನ್ನು ಎಸ್‌ಡಿಪಿಐ ನಡೆಸಲಿದೆ ಎಂದು ಮೂನಿಷ್ ಅಲಿ ಎಚ್ಚರಿಕೆ ನೀಡಿದ್ದಾರೆ.

ಕಾಂಗ್ರೆಸ್‌ಗೆ ವಿಶೇಷ ಯೋಜನೆ ರೂಪಿಸಿ

ಉಡುಪಿ: ಕಾಂಗ್ರೆಸ್‌ನವರ ಗ್ಯಾರಂಟಿಗಾಗಿ ಹೊಟ್ಟೆಬಟ್ಟೆ ಕಟ್ಟಿಕೊಳ್ಳುವ ದಯನೀಯ ಸ್ಥಿತಿ ಮಂಗಳೂರಿನ ಜನರಿಗೆ ಬಂದಿಲ್ಲ. ಗ್ಯಾರಂಟಿ ಘೋಷಣೆಯ ಬಳಿಕವೂ ಉಡುಪಿ– ದಕ್ಷಿಣಕನ್ನಡದಲ್ಲಿ ಮಖಾಡೆ ಮಲಗಿರುವ ಕಾಂಗ್ರೆಸ್‌ನ್ನು ಎಬ್ಬಿಸುವುದಕ್ಕೆ ವಿಶೇಷ ಯೋಜನೆ ರೂಪಿಸಿ ಎಂದು ಮಾಜಿ ಸಚಿವ ವಿ.ಸುನೀಲ್ ಕುಮಾರ್ ಡಿಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಡಿ.ಕೆ.ಶಿವಕುಮಾರ್ ಅವರಿಗೆ ಕನಕಪುರದ ಆಚೆಗೆ ಬೇರೇನು ನಡೆಯುತ್ತಿದೆ ಎಂಬುದೇ ಗೊತ್ತಿಲ್ಲ. ಹೀಗಾಗಿ ಅನ್ಯ ಜಿಲ್ಲೆಗಳ ಬಗ್ಗೆ ಮಾತನಾಡುತ್ತಿದ್ದಾರೆ. ಈ ಹಿಂದೆ ಬೆಂಗಳೂರು ನಗರದ ಜನತೆಯ ಬಗ್ಗೆಯೂ ಹೀಗೆ ಮಾತನಾಡಿದ್ದರು. ಮಂಗಳೂರು ಸೇರಿದಂತೆ ಕರಾವಳಿಯ ಜನರು ಸ್ವಾಭಿಮಾನಿಗಳು. ಬೆಂಗಳೂರಿನ ನಂತರ ಅತಿ ಹೆಚ್ಚು ತೆರಿಗೆ ಸಂಗ್ರಹ ವಾಗುವುದು ಇಲ್ಲಿಂದಲೇ. ನಿಮ್ಮ ಗ್ಯಾರಂಟಿ ನಂಬಿ ಮತದಾನ ಮಾಡುವಂತ ಬೌದ್ಧಿಕ ದಾರಿದ್ರ್ಯ ನಮಗೆ ಬಂದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಗ್ಯಾರಂಟಿ ಜಾರಿಯಾದ ಮೇಲೆ ಮಂಗಳೂರಿನವರು ಅರ್ಜಿ ಸಲ್ಲಿಸಬಾರದು ಎಂದು ಕರಾರು ಹೇರಿದ್ದಿರೇ ? ಮಂಗಳೂರು ಕರ್ನಾಟ ಕದ ಭಾಗವಾಗಿರುವುದರಿಂದ ಇಲ್ಲಿನ ಜನ ಅರ್ಜಿ ಸಲ್ಲಿಸಿ ದ್ದಾರೆ. ಅಷ್ಟಕ್ಕೂ ನಿಮ್ಮ ಗ್ಯಾರಂಟಿ ಯೋಜನೆ ಕನಕಪುರದವರಿಗೆ ಮಾತ್ರ ಸೀಮಿತವಲ್ಲ. ರಾಜ್ಯದ ಕರದಾತರ ಹಣದಲ್ಲಿ ಅನುಷ್ಠಾನ ಮಾಡುತ್ತಿದ್ದೀರಿ. ಹೊಟ್ಟೆಬಟ್ಟೆ ಕಟ್ಟಿಯಾದರೂ ನೀವು ಇದನ್ನು ಅನುಷ್ಟಾನ ಮಾಡಬೇಕೆ ವಿನಾ ನಿಲ್ಲಿಸುವುದಕ್ಕೆ ಕಳ್ಳಮಾರ್ಗ ಹುಡುಕಬೇಡಿ ಎಂದು ವ್ಯಂಗ್ಯವಾಡಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರ ಎರಡನೇ ಅವಧಿಯ ಆರಂಭದ ನಾಲ್ಕು ತಿಂಗಳ ಆಡಳಿತದ ಹಲವಾರು ಅನಿರೀಕ್ಷಿತ ಏರಿಳಿತಗಳಿಗೆ ಕಾರಣವಾಗಿದೆ. ಅಲ್ಲಿನ ಸರಕಾರವು ಆರಂಭದಲ್ಲಿ ಕಠಿಣ ವಲಸೆ ನೀತಿ ಮತ್ತು ಸುಂಕ ಸಮರಗಳು ಜಾಗತಿಕವಾಗಿ ಹಲವು ಸಮಸ್ಯೆಗಳನ್ನು ಒಂದೆಡೆ ಸೃಷ್ಟಿಸಿದರೆ, ಇದೀಗ ಟ್ರಂಪ್ ಸರಕಾರದ ವಿರುದ್ಧ ತೆರಿಗೆ ಯುದ್ಧಕ್ಕೆ ನ್ಯಾಯಾಲಯವು ತಡೆ ತಂದಿರುವುದು ನಿಜಕ್ಕೂ ಭಾರೀ ಹಿನ್ನಡೆ. ಭಾರತ-ಪಾಕ್ ಕದನ ವಿರಾಮದ ಮಧ್ಯಸ್ಥಿಕೆಗೆ ತಾನೇ ಕಾರಣ ಎಂದು ಟ್ರಂಪ್ ಜಗಜ್ಜಾಹೀರು ಮಾಡಿದ್ದರೂ, ಪ್ರಧಾನಿ ಮೋದಿ ಇದನ್ನು ನಿರಾಕರಿಸಿದಾಗ ಟ್ರಂಪ್ ಪಾತ್ರ ಏನೂ ಇರಲಿಲ್ಲ ಎಂದು ಇಡೀ ಜಗತ್ತಿಗೇ ತಿಳಿಯಿತು. ಇದೀಗ ಸರಕಾರದಿಂದ ಎಲನ್ ಮಸ್ಕ್ ಕೂಡಾ ನಿರ್ಗಮಿಸಿದ್ದು ಅಮೆರಿಕಾ ಸರಕಾರದಲ್ಲಿ ತಾಳಮೇಳ ಸರಿ ಇಲ್ಲ ಎಂಬುದನ್ನೂ ಬೊಟ್ಟು ಮಾಡಿದೆ.

4 ತಿಂಗಳ ಟ್ರಂಪ್ ಆಡಳಿತ ಮಂತ್ರಕ್ಕಿಂತ ಉಗುಳೇ ಜಾಸ್ತಿ

ನರೇಂದ್ರ ಪಾರೆಕಟ್

ಅದು ಜನವರಿ 20, 2025, ಡೊನಾಲ್ಡ್ ಟ್ರಂಪ್ ಎರಡನೇ ಬಾರಿ ಅಮೆರಿಕದ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದ ದಿನ. ಟ್ರಂಪ್ ಅಧಿಕಾರ ಸ್ವೀಕರಿಸಿ ನಾಲ್ಕು ತಿಂಗಳು ಕಳೆದಿದ್ದರೂ, ವಿಶ್ವದ ದೊಡ್ಡಣ್ಣ ಹಿಂದೆಂದೂ ಕಂಡಿರದ ರೀತಿಯಲ್ಲಿ ತನ್ನ ನೀತಿಯನ್ನು ಈ ಕಿರು ಅವಧಿಯಲ್ಲಿ ಬದಲಾಯಿಸಿ ಕೊಂಡಿದೆ. 'ಅಮೆರಿಕ ಫಸ್ಟ್, ಮೇಕ್ ಅಮೆರಿಕ ಗ್ರೇಟ್ ಅಗೈನ್' ಎಂಬ ನೀತಿಯನ್ನು ಟ್ರಂಪ್ ಈ ಬಾರಿ ಜಾರಿಗೆ ತರುವ ಪ್ರಯತ್ನ ಮಾಡಿ ಕೈ ಸುಟ್ಟುಕೊಳ್ಳುತ್ತಿದ್ದಾರೆ ಎಂಬುದಂತೂ ಸುಳ್ಳಲ್ಲ.

ಡೊನಾಲ್ಡ್ ಟ್ರಂಪ್ ಎರಡನೇ ಅವಧಿಯಲ್ಲಿ ಕಠಿಣ ವಲಸೆ ನೀತಿ, ಸುಂಕ ಸಮರ ಸೇರಿ ಅನೇಕ ವಿಚಾರಗಳು ಜಗತ್ತಿಗೆ ಭಾರೀ ಸಮಸ್ಯೆಯನ್ನು ಸೃಷ್ಟಿ ಸಿವೆ. ಅಮೆರಿಕನ್ನರ ಮೇಲೂ ಅದರ ಪರಿಣಾಮ ಬಿದ್ದಿದೆ. ಹಲವು ಆದೇಶಗಳಿಗೆ ಸಹಿ ಹಾಕಿದ್ದು, ಕೇಸ್ ಹಾಕಿದ್ದು ಹಾಗೂ ಅಕ್ರಮ ವಲಸಿಗರ ಮೇಲೆ ದಾಳಿ ಮಾಡಿದ್ದು ಟ್ರಂಪ್ ತೆಗೆದುಕೊಂಡ ಆತುರದ ನಿರ್ಧಾರ. ಹುಟ್ಟಿನಿಂದ ಪೌರತ್ವ ಹಕ್ಕಿಗೆ ತಡೆ ನೀಡುವ ಹಲವು ಆದೇಶಗಳಿಗೆ ಸಹಿ ಹಾಕಿದ್ದಾರೆ. ಅದರ ಜೊತೆ ಅಕ್ರಮ ವಲಸಿಗರನ್ನು ಪತ್ತೆ ಹಚ್ಚಿ ಲಕ್ಷಾಂತರ ಜನರನ್ನು ಅವರವರ ದೇಶಕ್ಕೆ ಸೇನಾ ವಿಮಾನಗಳಲ್ಲಿ ಗಡೀಪಾರು ಮಾಡಿ ಟೀಕೆಗಳಿಗೂ ಗುರಿಯಾದರು.

ಗ್ರೀನ್ ಕಾರ್ಡ್ ಇದ್ದರೂ ಶಾಶ್ವತ ಪೌರತ್ವ ಇಲ್ಲ: ಅಮೆರಿಕದ ವೀಸಾ ನಿಯಮಗಳಲ್ಲಿ ಹಲವು ಬದಲಾವಣೆಗಳನ್ನು ಟ್ರಂಪ್ ಆಡಳಿತ ತಂದಿದೆ. ಗ್ರೀನ್ ಕಾರ್ಡ್ ಹೊದಿರುವವರೂ ಶಾಶ್ವತವಾಗಿ ಅಮೆರಿಕ ದಲ್ಲಿ ನೆಲೆಸಲು ಅವಕಾಶ ನೀಡಲ್ಲ ಎಂದು ಹೇಳಲಾ ಗಿದ್ದು, ಸಕ್ರಮವಾಗಿ ನೆಲೆಸಿದವರಿಗೂ ಆತಂಕ ಶುರು ವಾಗುವಂತೆ ಮಾಡಿದೆ, ಅದರ ಜೊತೆ ವಿದ್ಯಾರ್ಥಿ ವೀಸಾಗಳಲ್ಲಿಯೂ ಕೂಡ ಬದಲಾವಣೆ ತಂದಿದ್ದು, ಸಣ್ಣ ಸಣ್ಣ ತಪ್ಪಿಗೂ ವೀಸಾ ರದ್ದಾಗುವ ಆತಂಕದಲ್ಲಿ ವಿದ್ಯಾರ್ಥಿಗಳಿದ್ದಾರೆ. ಗ್ರೀನ್ ಕಾರ್ಡ್ ಹೊಂದಿರು ವವರ ಮದುವೆ ವಿಚಾರದಲ್ಲೂ ನಿಯಮಗಳು ಬದ ಲಾಗಿವೆ. ವಿದ್ಯಾರ್ಥಿಗಳು ತಮ್ಮ ವ್ಯಾಸಂಗ ಮುಗಿಸಿ ಉದ್ಯೋಗ ಸೇರಲು ನೀಡುತ್ತಿದ್ದ ಸಮಯದ ಯೋಜನೆಯನ್ನು ಕೂಡ ರದ್ದುಗೊಳಿಸುವ ಬಿಲ್ ಅನ್ನು ಡೊನಾಲ್ಡ್ ಟ್ರಂಪ್ ಆಡಳಿತ ಮಂಡನೆ ಮಾಡಿದೆ. ಇದು ಕೂಡ ವಿದ್ಯಾರ್ಥಿಗಳಲ್ಲಿ ಆತಂಕ ಸೃಷ್ಟಿಸಿದ್ದು, ವಲಸಿಗರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅಮೆರಿಕದ ಕನಸು ನರಕವಾಗಿದೆ. ವಲಸಿಗರಿಗೆ ಕಠಿಣ ನಿಯಮಗಳನ್ನು ಟ್ರಂಪ್ ತಂದಿದ್ದು, ವಲಸಿಗರು ಯಾವಾಗಲೂ ತಮ್ಮ ಐ.ಡಿಗಳನ್ನು ಇಟ್ಟುಕೊಂಡೇ ಅಮೆರಿಕದಲ್ಲಿ ಓಡಾಡಬೇಕಿರುವ ಪರಿಸ್ಥಿತಿ ಇದೆ. ಸೋಶಿಯಲ್ ಮೀಡಿಯಾದಲ್ಲಿ ಅಮೆರಿಕ ವಿರುದ್ಧ ವಾಗಲಿ, ಅಲ್ಲಿನ ಸರ್ಕಾರದ ವಿರುದ್ಧವಾಗಲಿ ಏನು ಬರೆಯುವಂತಿಲ್ಲ ಎಂಬ ನಿಯಮಗಳನ್ನು ಕೂಡ ತರಲಾಗಿದೆ.

ಕದನ ವಿರಾಮ: ಟ್ರಂಪ್ ಮತ್ತೆ ಸುಳ್ಳು

ಭಾರತ ಮತ್ತು ಪಾಕಿಸ್ತಾನ ನಡುವಿನ ಕದನ ವಿರಾಮಕ್ಕೆ ತಾನು ಮಧ್ಯಸ್ಥಿಕೆ ವಹಿಸಿದ್ದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 8ನೇ ಬಾರಿ ಹೇಳಿದ್ದಾರೆ. ಇತ್ತೀಚೆಗೆ ಇದಕ್ಕೆ ಶ್ವೇತಭವನ ಸ್ಪಷ್ಟನೆ ನೀಡಿ, ಅದು ಮಧ್ಯಸ್ಥಿಕೆ ಅಲ್ಲ, ಸಹಾಯ ಮಾತ್ರ ಎಂದಿದ್ದರೂ ಟ್ರಂಪ್ ತಮ್ಮ ಹಳೆಯ ಹೇಳಿಕೆಯನ್ನು ಪುನರಾವರ್ತಿಸಿದ್ದಾರೆ. ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಂಫೋಸಾ ಜತೆಗಿನ ಭೇಟಿ ವೇಳೆ ಮಾತನಾಡಿದ ಟ್ರಂಪ್, ಭಾರತ-ಪಾಕ್ ನಡುವೆ ಗುಂಡಿನ ದಾಳಿ ದೊಡ್ಡದಾಗುತ್ತಾ, ಆಳವಾಗುತ್ತಾ ಹೋಗುತ್ತಿತ್ತು.ಹಾಗಾಗಿ ಭಾರತ-ಪಾಕಿಸ್ತಾನ ನಡುವಿನ ಕದನವನ್ನು ನಾನು ಇತ್ಯರ್ಥಪಡಿಸಿಕೊಂಡಿದ್ದೇನೆ. ಭಾರತ-ಪಾಕ್ ಜತೆ ನಮ್ಮ ದೊಡ್ಡ ವ್ಯಾಪಾರ ನಡೆಯುತ್ತದೆ ಎಂದರು. ಪಾಕಿಸ್ತಾನವು ಕೆಲವು ಅತ್ಯುತ್ತಮ ಜನರನ್ನು ಮತ್ತು ಒಳ್ಳೆಯ, ಶ್ರೇಷ್ಠ ನಾಯಕರನ್ನು ಹೊಂದಿದೆ ಮತ್ತು ಭಾರತ ನನ್ನ ಸ್ನೇಹಿತ ಮೋದಿಯನ್ನು ಹೊಂದಿದೆ. ಅವರು ಒಳ್ಳೆಯ ವ್ಯಕ್ತಿಗಳು, ಅವರಿಬ್ಬರ ಜತೆಗೂ ಮಾತನಾಡಿದೆ ಎಂದರು. ಆಗ ದಕ್ಷಿಣ ಆಫ್ರಿಕಾದ ಅಧ್ಯಕ್ಷರು, ನಾನೂ ಮೋದಿಯ ಒಳ್ಳೆಯ ಸ್ನೇಹಿತ ಎಂದು ಹೇಳಿ ಟ್ರಂಪ್ ಮುಜುಗರಕ್ಕೀಡಾಗುವಂತೆ ಮಾಡಿದರು.

ಟ್ರಂಪ್‌ಗೆ ಸಡ್ಡು ಹೊಡೆದ ಇರಾನ್

ಅಮೆರಿಕ-ಇರಾನ್ ಸಂಬಂಧ ಒಂದು ರೀತಿಯಲ್ಲಿ ಎಣ್ಣೆ-ಸೀಗೆಕಾಯಿ ಸಂಬಂಧ ಇದ್ದ ಹಾಗೆ. ಉಭಯ ರಾಷ್ಟ್ರಗಳ ನಾಯಕರು ಒಬ್ಬರ ಮುಖ ಮತ್ತೊಬ್ಬರು ನೋಡಿದರೆ ಸಾಕು, ಉರಿದು ಬೀಳ್ತಾರೆ. ಅದರಲ್ಲೂ ಪರಮಾಣು ಒಪ್ಪಂದ ವಿಚಾರದಲ್ಲಿ ಅಮೆರಿಕ ಮತ್ತು ಇರಾನ್ ನಾ ಕೊಡೆ, ನೀ ಬಿಡೆ ಎಂಬಂತೆ ವರ್ತಿಸುತ್ತಿವೆ. ಹೇಗಾದರೂ ಮಾಡಿ ಇರಾನ್‌ನನ್ನು ಪರಮಾಣು ಒಪ್ಪಂದಕ್ಕೆ ಒಪ್ಪಿಸಬೇಕು ಎಂದು ಹಠ ತೊಟ್ಟಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇದಕ್ಕಾಗಿ ಎಲ್ಲಾ ತಂತ್ರಗಳನ್ನೂ ಅನುಸರಿಸುತ್ತಿದ್ದಾರೆ. ಡೊನಾಲ್ಡ್ ಟ್ರಂಪ್ ಯುದ್ಧ ಆಯ್ಕೆಯನ್ನೂ ಮುಕ್ತವಾಗಿ ಇಟ್ಟುಕೊಂಡಿರುವದಾಗಿ ಹೇಳುತ್ತಿದ್ದಾರೆ. ಆದರೆ ಇರಾನ್ ಅಮೆರಿಕ ಅಧ್ಯಕ್ಷರ ಯಾವುದೇ ಬೆದರಿಕೆಗಳಿಗೆ ಬಗ್ಗುವ ಲಕ್ಷಣ ಕಂಡುಬರುತ್ತಿಲ್ಲ. ಇದು ಟ್ರಂಪ್ ಅವರನ್ನು ಮತ್ತಷ್ಟು ಹೈರಾಣಾಗಿಸಿದೆ. ಇದೇ ಕಾರಣಕ್ಕೆ ಇರಾನ್‌ನನ್ನು ಮಾತುಕತೆಯ ಮೇಜಿನ ಮೇಲೆ ಕರೆತರಲು ಏನು ಮಾಡಬಹುದು ಎಂಬುದರ ಕುರಿತು ಗಂಭೀರವಾಗಿ ಚಿಂತಿಸುತ್ತಿದ್ದಾರೆ.

ಟ್ರಂಪ್‌ಗೆ ದ. ಆಫ್ರಿಕಾ ಅಧ್ಯಕ್ಷ ಟಾಂಗ್

ಅಮೆರಿಕ ಅಧ್ಯಕ್ಷ ಟ್ರಂಪ್ ಇತ್ತೀಚೆಗೆ ತನ್ನದೇ ಕಚೇರಿಯಲ್ಲಿ ಮುಜುಗರಕ್ಕೀಡಾಗಿದ್ದು, ದಕ್ಷಿಣ ಆಫ್ರಿಕಾ ಅಧ್ಯಕ್ಷ ಸಿರಿಲ್ ರಾಮಫೋಸಾ ಭೇಟಿ ವೇಳೆ ಆ ಘಟನೆ ನಡೆದಿದೆ. ಸುದ್ದಿಗಾರರೊಬ್ಬರು, ಅಮೆರಿಕ ಅಧ್ಯಕ್ಷರು ಏರ್ ಫೋರ್ಸ್ ಒನ್ ಆಗಿ ಬಳಸಲು ಯೋಜಿಸಿರುವ ಕತಾರ್‌ನಿಂದ ದಾನ ಮಾಡಿದ ಬೋಯಿಂಗ್ 747 ಅನ್ನು ಸ್ವೀಕರಿಸುವ ಬಗ್ಗೆ ಟ್ರಂಪ್ ಅವರನ್ನು ಕೇಳಿದಾಗ, ಟ್ರಂಪ್ ವರದಿಗಾರನ ವಿರುದ್ಧ ವಾಗ್ದಾಳಿ ನಡೆಸಿದರು. ಬಿಳಿ ರೈತರನ್ನು ಒಳಗೊಂಡ ಸಮಸ್ಯೆಗಳಿಂದ ಗಮನವನ್ನು ಬೇರೆಡೆ ಸೆಳೆಯಲು ಪ್ರಯತ್ನಿಸುತ್ತಿದ್ದೀರಿ ಎಂದು ಹೇಳಿದರು. ಈ ವೇಳೆ ಹಾಸ್ಯ ಚಟಾಕಿ ಹಾರಿಸಿದ ದ.ಆಫ್ರಿಕಾ ಅಧ್ಯಕ್ಷ ಸಿರಿಲ್ ರಾಮಫೋಸಾ, 'ನಿಮಗೆ ಕೊಡಲು ನನ್ನ ಬಳಿ ವಿಮಾನವಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು' ಎಂದು ಹೇಳಿದರು.

ತೆರಿಗೆ ಯುದ್ಧಕ್ಕೆ ಬ್ರೇಕ್ ಹಾಕಿದ ಕೋರ್ಟ್

ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಳಿಕ ದೇಶದಲ್ಲಿ ಸಾಕಷ್ಟು ಬದಲಾವಣೆಯನ್ನು ತಂದಿದ್ದಾರೆ. ಟ್ರಂಪ್ ಪ್ರಾರಂಭಿಸಿದ್ದ ತೆರಿಗೆ ಯುದ್ಧಕ್ಕೆ ಅಲ್ಲಿನ ನ್ಯಾಯಾಲಯ ಈಗ ತಡೆ ಹಿಡಿದಿದೆ. ಅಮೆರಿಕದ ವ್ಯಾಪಾರ ಪಾಲುದಾರರಿಂದ ಆಮದುಗಳ ಮೇಲೆ ವ್ಯಾಪಕ ಸುಂಕ ವಿಧಿಸುವ ಮೂಲಕ ಅಧ್ಯಕ್ಷ ತಮ್ಮ ಅಧಿಕಾರವನ್ನು ಮೀರಿದ್ದಾರೆ ಎಂದು ನ್ಯಾಯಾಲಯ ಹೇಳಿದೆ. ಈ ಮೂಲಕ ಡೊನಾಲ್ಡ್ ಟ್ರಂಪ್ ಆಡಳಿತ ಜಾರಿಗೆ ತರಲು ಮುಂದಾಗಿದ್ದ ವ್ಯಾಪಕ ತೆರಿಗೆ ನೀತಿಗೆ ಬ್ರೇಕ್ ಹಾಕಿದೆ. ಈ ಕಾರಣದಿಂದಾಗಿ ಟ್ರಂಪ್‌ಗೆ ಭಾರೀ ಹಿನ್ನಡೆಯಾಗಿದೆ. ಅಮೆರಿಕ ಕಾಂಗ್ರೆಸ್‌ಗೆ ಮಾತ್ರ ವಾಣಿಜ್ಯ ನೀತಿ ನಿಯಮ ರೂಪಿಸುವ ಅಧಿಕಾರವನ್ನು ಅಮೆರಿಕ ಸಂವಿಧಾನ ನೀಡಿದೆ ಎಂದು ನ್ಯಾಯಾಲಯವು ಸರಕಾರಕ್ಕೆ ತಿಳಿಸಿದೆ. ಏಪ್ರಿಲ್ 22ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕಿಸ್ತಾನ ಮೂಲದ ಭಯೋತ್ಪಾದಕರು ನಡೆಸಿದ ಭಯೋತ್ಪಾದಕ ದಾಳಿಯ ನಂತರ ಭಾರತ ಹಾಗೂ ಪಾಕಿಸ್ತಾನದ ನಡುವೆ ಉದ್ವಿಗ್ನತೆ ಏರ್ಪಟ್ಟಿತ್ತು. ಆಗ ಕದನ ವಿರಾಮ ಏರ್ಪಡಿಸಲು ಟ್ರಂಪ್ ಉಭಯ ದೇಶಗಳಿಗೆ ವ್ಯಾಪಾರ ನಿರ್ಬಂಧದ ಬೆದರಿಕೆಯನ್ನು ಹಾಕಿದ ಕುರಿತೂ ಕೂಡ ನ್ಯಾಯಾಲಯ ಉಲ್ಲೇಖ ಮಾಡಿದೆ. ಎಲ್ಲಾ ವಾದಗಳನ್ನು ತಿರಸ್ಕರಿ ಸಿದ ಮ್ಯಾನ್‌ಹ್ಯಾಟನ್ ಮೂಲದ ಮೂವರು ನ್ಯಾಯಾಧೀಶರ ಅಂತಾರಾಷ್ಟ್ರೀಯ ವಾಣಿಜ್ಯ ನ್ಯಾಯಾ ಲಯವು ಐಇಇಪಿಎ ಅಡಿಯಲ್ಲಿ ಅಧ್ಯಕ್ಷರಿಗೆ ಅಪರಿಮಿತ ಅಧಿಕಾರಗಳನ್ನು ನಿಯೋಜಿಸಿಲ್ಲ ಎಂದು ತೀರ್ಪು ನೀಡಿತು. ಅಸಾಮಾನ್ಯ ಮತ್ತು ಅಸಾಧಾರಣ ಬೆದರಿಕೆಯನ್ನು ಎದುರಿಸಲು ತುರ್ತು ಪರಿಸ್ಥಿತಿಯ ಸಮಯ ದಲ್ಲಿ ಅಗತ್ಯ ಆರ್ಥಿಕ ನಿರ್ಬಂಧಗಳನ್ನು ವಿಧಿಸಲು ಮಾತ್ರ ಅಧ್ಯಕ್ಷರಿಗೆ ವಿಶೇಷ ಅಧಿಕಾರ ನೀಡುತ್ತದೆ ಎಂದು ಪೀಠ ಹೇಳಿದೆ. ಅಮೆರಿಕದ ಆರ್ಥಿಕತೆಯನ್ನು ರಕ್ಷಿಸಲು, ಅಮೆರಿಕದ ಸಂವಿಧಾನವು ಕಾಂಗ್ರೆಸ್‌ಗೆ ವಿಶೇಷ ಅಧಿಕಾರವನ್ನು ನೀಡುತ್ತದೆ ಎಂದು ನ್ಯಾಯಾಲಯ ತನ್ನ ತೀರ್ಪಿನಲ್ಲಿ ಹೇಳಿದೆ.

ಎಲಾನ್ ಮಸ್ಕ್ ದಿಢೀರ್ ನಿರ್ಗಮನ

ಸ್ಪೇಸ್ ಎಕ್ಸ್ ಸಂಸ್ಥಾಪಕ ಎಲಾನ್ ಮಸ್ಕ್ ಅನ್ನು ಡೋಜ್ ಅಂದ್ರೇ ಸರಕಾರಿ ದಕ್ಷತೆ ಇಲಾಖೆಯ ಮುಖ್ಯಸ್ಥರನ್ನಾಗಿ ಮಾಡಿ ಸುಮಾರು 2 ಲಕ್ಷ 80 ಸಾವಿರ ಫೆಡರಲ್ ಉದ್ಯೋಗಿಗಳನ್ನು ಕೆಲಸದಿಂದ ತೆಗೆದುಹಾಕಿದ್ದು ಕೂಡ ಭಾರೀ ವಿವಾದವಾಗಿತ್ತು. ಈ ಬಗ್ಗೆ ಹಲವು ಪ್ರತಿಭಟನೆಗಳು ಕೂಡ ನಡೆದಿವೆ, ನಡೆಯುತ್ತಿವೆ. ಆದರೆ ಬುಧವಾರ ತಮ್ಮ ಅವಧಿ ಕೊನೆಗೊಂಡಿದೆ ಎಂದು ಎಲಾನ್ ಮಸ್ಕ್ ಘೋಷಿ ಸಿದ್ದಾರೆ. ಟ್ರಂಪ್ ಅವರಿಗೆ ಕೃತಜ್ಞತೆ ಸಲ್ಲಿಸುವ ಮೂಲಕ ಟೆಸ್ಲಾ ಮತ್ತು ಸ್ಪೇಸ್‌ಎಕ್ಸ್ ಸಿಇಒ ಅವರು ತಮ್ಮ ಮಾಲೀಕತ್ವದ ಸಾಮಾಜಿಕ ಮಾಧ್ಯಮ ವೇದಿಕೆಯಾದ ಎಕ್ಸ್‌ನಲ್ಲಿ ಸುದ್ದಿ ಹಂಚಿಕೊಂಡಿದ್ದಾರೆ. ಟ್ರಂಪ್ ಅವರ ಶಾಸಕಾಂಗ ಕಾರ್ಯಸೂಚಿಯ ಕೇಂದ್ರ ಬಿಂದುವನ್ನು ಟೀಕಿಸಿದ ಒಂದು ದಿನದ ನಂತರ ಮಸ್ಕ್ ಅವರಿಂದ ಈ ಮಹತ್ವದ ನಿರ್ಧಾರ ಹೊರಬಂದಿದೆ.

3ನೇ ವಿಶ್ವ ಮಹಾಯುದ್ಧಕ್ಕೂ ಸಾಧ್ಯತೆ

ಟ್ರಂಪ್‌ಗೆ ರಷ್ಯಾ ಮಾಜಿ ಅಧ್ಯಕ್ಷರ ಎಚ್ಚರಿಕೆ

ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರಷ್ಯಾದಿಂದ ವಶಪಡಿಸಿಕೊಂಡ ಉಕ್ರೇನಿಯನ್ ಪ್ರದೇಶಗಳನ್ನು ಹಿಂಪಡೆಯಲು ಅಥವಾ ರಷ್ಯಾದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಪ್ರಯತ್ನಿಸಿದರೆ, ಅದು ಮೂರನೇ ಮಹಾಯುದ್ಧಕ್ಕೆ ಕಾರಣವಾಗಬಹುದು ಎಂದು ರಷ್ಯಾದ ಮಾಜಿ ಅಧ್ಯಕ್ಷ ಡಿಮಿಟ್ರಿ ಮೆಡ್ವೆಡೆವ್ ಅವರು ತೀಕ್ಷ್ಣವಾಗಿ ಎಚ್ಚರಿಸಿದ್ದಾರೆ. ವ್ಲಾಡಿಮಿರ್ ಪುಟಿನ್ ಅವರು ಬೆಂಕಿ ಯೊಂದಿಗೆ ಸರಸವಾಡುತ್ತಿದ್ದಾರೆ ಎಂಬ ಡೊನಾಲ್ಡ್ ಟ್ರಂಪ್ ಹೇಳಿಕೆಗೆ ಪ್ರತಿಯಾಗಿ, ಡಿಮಿಟ್ರಿ ಮೆಡ್ವೆಡೆವ್ ಈ ಆಘಾತ ಕಾರಿ ಹೇಳಿಕೆ ನೀಡಿದ್ದಾರೆ. ಪ್ರಸ್ತುತ ರಷ್ಯಾದ ಭದ್ರತಾ ಮಂಡಳಿಯ ಉಪಾಧ್ಯಕ್ಷ ರಾಗಿ ಕಾರ್ಯನಿರ್ವಹಿಸುತ್ತಿದ್ದು, ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಡೊನಾಲ್ಡ್ ಟ್ರಂಪ್ ಅವರನ್ನು ಉದ್ದೇಶಿಸಿ ಮೂರನೇ ಮಹಾಯುದ್ಧದ ಬೆದರಿಕೆಯ ಟ್ವೀಟ್ ಮಾಡಿದ್ದಾರೆ. ಇಷ್ಟೇ ಅಲ್ಲದೇ ಉಕ್ರೇನ್‌ನಲ್ಲಿ ಶಾಂತಿಯನ್ನು ಸ್ಥಾಪಿಸುವ ಟ್ರಂಪ್ ಅವರ ಸಂಭಾವ್ಯ ಯೋಜನೆಯನ್ನು, ಡಿಮಿಟ್ರಿ ಮೆಡ್ವೆಡೆವ್ ಅವರು ಅಪಕ್ವ ಎಂದು ಜರಿದಿದ್ದಾರೆ. ಅಮೆರಿಕದ ಸ್ಥಾಪಿತ ವ್ಯವಸ್ಥೆಯು ರಷ್ಯಾವನ್ನು ಇನ್ನೂ ಅರ್ಥಮಾಡಿಕೊಂಡಿಲ್ಲ ಎಂಬ ಡಿಮಿಟ್ರಿ ಹೇಳಿಕೆ ಇದೀಗ ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ.ಉಕ್ರೇನ್ ರಾಜಧಾನಿ ಕೈವ್ ಮೇಲಿನ ಇತ್ತೀಚಿನ ರಷ್ಯಾ ಡ್ರೋನ್ ದಾಳಿಯನ್ನು ತೀವ್ರವಾಗಿ ಟೀಕಿಸಿದ್ದ ಅಮೆರಿಕ ಅಧ್ಯಕ್ಷ ಟ್ರಂಪ್, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹುಚ್ಚರಂತೆ ವರ್ತಿಸುತ್ತಿದ್ದಾರೆ ಎಂದು ಗುಡುಗಿದ್ದರು. ಪುಟಿನ್ ಬೆಂಕಿಯೊಂದಿಗೆ ಸರಸವಾಡು ತ್ತಿದ್ದು, ಇಂತಹ ದುಸ್ಸಾಹಸಗಳನ್ನು ಕೂಡಲೇ ನಿಲ್ಲಿಸದಿದ್ದರೆ ರಷ್ಯಾ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಅಮೆರಿಕ ಅಧ್ಯಕ್ಷರು ನೇರ ಎಚ್ಚರಿಕೆ ನೀಡಿದ್ದರು. ಒಟ್ಟಿನಲ್ಲಿ ರಷ್ಯಾ-ಉಕ್ರೇನ್ ಸುದೀರ್ಘ ಸಮರಕ್ಕೆ ಸಂಬಂಧಿಸಿದಂತೆ, ಡೊನಾಲ್ಡ್ ಟ್ರಂಪ್ ಅವರಿಗೆ ಡಿಮಿಟ್ರಿ ಮೆಡ್ವೆಡೆವ್ ಅವರ 3ನೇ ಮಹಾಯುದ್ಧದ ಎಚ್ಚರಿಕೆಗಳು ಜಾಗತಿಕ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ವಿದ್ಯಾರ್ಥಿಗಳ ವೀಸಾ ರದ್ದು ಎಚ್ಚರಿಕೆ

ಅಮೆರಿಕವು ದೇಶದಲ್ಲಿರುವ ಭಾರತೀಯ ಮತ್ತು ವಿದೇಶಿ ವಿದ್ಯಾರ್ಥಿಗಳಿಗೂ ಹೊಸ ಎಚ್ಚರಿಕೆ ನೀಡಿದೆ. ಭಾರತದಲ್ಲಿನ ಅಮೆರಿಕ ರಾಯಭಾರ ಕಚೇರಿ ಹಂಚಿಕೊಂಡ ಪ್ರಕಟಣೆಯ ಪ್ರಕಾರ, ವಿದೇಶಿ ವಿದ್ಯಾರ್ಥಿಗಳು ತರಗತಿಗಳಿಗೆ ನಿರಂತರವಾಗಿ ಗೈರು ಹಾಜರಾದರೆ ಅಥವಾ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಕೊಂಡವರ ವೀಸಾವನ್ನು ರದ್ದುಗೊಳಿಸುತ್ತೇವೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ವಿದ್ಯಾರ್ಥಿಗಳು ತಮ್ಮ ಕೋರ್ಸ್‌ಗಳನ್ನು ಅರ್ಧಕ್ಕೇ ತೊರೆದು ವಿಶ್ವವಿದ್ಯಾಲಯ ಹೋದರೆ ಅಂತವರ ವೀಸಾವನ್ನು ರದ್ದುಗೊಳಿಸಲಾಗುತ್ತದೆ ಎಂದು ಅಮೆರಿಕ ಆಡಳಿತ ಹೇಳಿದೆ.

ಮಹಾರಾಷ್ಟ್ರದಲ್ಲಿ ಸತತ ಮಳೆ ಆರ್ಭಟ ▸▸ ಯಾದಗಿರಿ ಜಿಲ್ಲೆ ನದಿ ಪಾತ್ರದ ಗೋಳು

ಕೃಷ್ಣಾ ಪ್ರವಾಹ ಎದುರಿಸಲು ಸಿದ್ಧತೆ ಜಿಲ್ಲಾಡಳಿತ ಯಂತ್ರ ಸಿಬ್ಬಂದಿ ಬದ್ಧತೆ

ಜಿಲ್ಲಾ ನೋಟ

ವೀರೇಶ ಎಸ್ ಕೆಂಭಾವಿ, ಯಾದಗಿರಿ

ಮಹಾರಾಷ್ಟ್ರದ ಪಶ್ಚಿಮ ಘಟ್ಟದಲ್ಲಿ ಮಳೆ ಆರ್ಭಟ ಜೋರಾಗಿದ್ದು, ಇದರಿಂದಾಗಿ ಭೀಮಾ ನದಿಗೆ ಪ್ರವಾಹದ ಭೀತಿ ಎದುರಾಗಿದೆ. ಇಲ್ಲಿ ಸಂಭವಿಸಬಹುದಾದ ಪರಿಣಾಮ ತಡೆಯಲು ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ.

ಭೀಮಾ ನದಿ ಪ್ರವಾಹದಿಂದ 35 ಗ್ರಾಮ ಹಾಗೂ ಕೃಷ್ಣಾ ನದಿ ಪ್ರವಾಹ ಬಂದಲ್ಲಿ 45 ಗ್ರಾಮಗಳು ಬಾಧಿತವಾಗುವ ಸಾಧ್ಯತೆ ಇದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ನೀರು ಬಂದು ಪ್ರವಾಹದಂತಹ ಪರಿಸ್ಥಿತಿ ನಿಭಾಯಿಸಲು ಯೋಜನೆ ರೂಪಿಸಲಾಗಿದೆ. ಅದರಂತೆ ಈ ಗ್ರಾಮಗಳ ಜನರಲ್ಲಿ ಅರಿವು ಮೂಡಿಸುವ ಕೆಲಸ ನಡೆಯುತ್ತಿದೆ. ಅಲ್ಲದೆ ಈಗಾಗಲೇ ಒಂದು ಸುತ್ತಿನ ಸಭೆ ಸಹ ನಡೆಸಿರುವ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಕೆಲವೊಂದಿಷ್ಟು ಸೂಚನೆಗಳು ಸಹ ನೀಡಿದ್ದಾರೆ. ನದಿ ತೀರದ ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಜಿಲ್ಲಾಡಳಿತ ಮತ್ತು ಜಿಲ್ಲಾ ಪೊಲೀಸ್ ಇಲಾಖೆ ಕಳೆದ ಎರಡು ದಿನಗಳಿಂದ ನದಿ ತೀರದ ಗ್ರಾಮಸ್ಥರಿಗೆ ಡಂಗೂರ ಹಾಗೂ ಮೈಕ್‌ಗಳ ಮೂಲಕ ಅರಿವು ಮೂಡಿಸಿ ನದಿ ದಡಕ್ಕೆ ತೆರಳದಂತೆ ಎಚ್ಚರಿಕೆ ನೀಡಲಾಗುತ್ತಿದೆ.

ಮೈದುಂಬಿದ ಭೀಮಾ

ಯಾದಗಿರಿ ನಗರದ ಹೊರವಲಯದ ಭೀಮಾ ನದಿಗೆ ಮಹಾರಾಷ್ಟ್ರದಿಂದ ನೀರು ಹರಿದು ಬರುತ್ತಿದ್ದು ಇಲ್ಲಿಯವರೆಗೂ ಬತ್ತಿ ಹೋಗಿದ್ದ ಭೀಮೆ ಮೈದುಂಬಿ ಹರಿಯುತ್ತಿದೆ. ಕೆಳ ಭಾಗದ ನದಿಗೆ ನೀರು ಹರಿಸಲಾಗುತ್ತಿದೆ. ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಗುರಸಣಗಿ- ಯಾದಗಿರಿ ಬ್ರಿಡ್ಜ್ ಕಂ ಬ್ಯಾರೇಜ್‌ನಿಂದ ಭೀಮಾ ನದಿಗೆ 5 ಸಾವಿರ ಕ್ಯುಸೆಕ್ ಒಳಹರಿವು ಇದ್ದರೆ, ಅಷ್ಟೆ ಪ್ರಮಾಣದ ನೀರನ್ನು ಹೊರ ಹರಿಸಲಾಗುತ್ತಿದೆ. ಇನ್ನುಳಿದಂತೆ ಸೊನ್ನ ಬ್ಯಾರೇಜ್, ಸನ್ನತಿ ಬ್ಯಾರೇಜ್ ಮೂಲಕವೂ ಭೀಮಾ ನದಿಗೆ ಹರಿ ಬಿಡಲಾಗಿದೆ. ಒಟ್ಟಾರೆಯಾಗಿ ಎರಡು ದಿನಗಳಲ್ಲಿ 30 ಸಾವಿರ ಕ್ಯುಸೆಕ್ ನೀರು ಭೀಮಾ ಒಡಲು ಸೇರಿದೆ.

ಎಲ್ಲಿ ಎಷ್ಟು ಗ್ರಾಮಗಳು

ಭೀಮಾ ನದಿ ಪಾತ್ರದಲ್ಲಿ ಮೂರು ತಾಲೂಕುಗಳ 35 ಗ್ರಾಮಗಳಿದ್ದು, ಅವುಗಳಲ್ಲಿ ಶಹಾಪುರ ತಾಲೂಕಿನ 7 ಗ್ರಾಮಗಳು ಯಾದಗಿರಿ ತಾಲೂಕಿನ 9 ವಡಗೇರಾ ತಾಲೂಕಿನ 19 ಗ್ರಾಮಗಳು ಸೇರಿದಂತೆ ಭೀಮಾ ನದಿ ಪಾತ್ರದಲ್ಲಿ ಈ ಮೂರು ತಾಲೂಕುಗಳ 35 ಗ್ರಾಮಗಳಿವೆ. ಕೃಷ್ಣಾ ನದಿ ಪಾತ್ರದಲ್ಲಿ ಹುಣಸಗಿ ಸುರಪುರ ಶಹಾಪುರ, ವಡಗೇರಾ ತಾಲೂಕು ಒಳಗೊಂಡಂತೆ 45 ಗ್ರಾಮಗಳಿವೆ. ಭೀಮಾ ನದಿ ವ್ಯಾಪ್ತಿಯ ಶಹಾಪುರ ತಾಲೂಕಿನ 3 ಹೋಬಳಿಗಳು, ಯಾದಗಿರಿ ತಾಲೂಕಿನ ಎರಡು ಹೋಬಳಿ ವಡಗೇರಾ ತಾಲೂಕಿನ ಎರಡು ಹೋಬಳಿಗಳು ನದಿ ಪಾತ್ರದಲ್ಲಿದ್ದು ಪ್ರವಾಹ ಪರಿಸ್ಥಿತಿ ಎದುರಿಸುತ್ತವೆ ಎಂದು ಅಧಿಕಾರಿಗಳ ಯೋಚನೆ.

ನೋಡಲ್ ಅಧಿಕಾರಿಗಳು

ಪ್ರವಾಹ ಎದುರಾದರೆ ಅದನ್ನು ನಿಭಾಯಿಸಲೆಂದು ಅಧಿಕಾರಗಳ ತಂಡ ರಚಿಸಿರುವ ಜಿಲ್ಲಾಡಳಿತ ಅದರ ಮೇಲೆ ಒಬ್ಬರಂತೆ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಯೆಂದು ನೇಮಕ ಮಾಡಲಾಗಿದೆ. ಈ ತಂಡ ಜನತೆ ಮತ್ತು ಜಾನುವಾರುಗಳನ್ನು ಸ್ಥಳಾಂತರ ಮಾಡಬೇಕಾಗಿ ಬಂದಲ್ಲಿ ಏನು ಮಾಡಬೇಕೆಂಬ ಎನ್ನುವ ಕುರಿತು ನಿರ್ದೇಶನ ನೀಡಲಾಗಿದೆ.

ಮಹಾರಾಷ್ಟ್ರ ಹಾಗೂ ನದಿಗಳ ಮೇಲ್ಭಾಗದಲ್ಲಿ ಹೆಚ್ಚಿನ ಮಳೆಯಾಗುತ್ತಿರುವುದರಿಂದ, ಈ ಹಿಂದಿನ ವರ್ಷಗಳಲ್ಲಿ ಬಂದಿದ್ದ ಪ್ರವಾಹದ ಅನುಭವ ಆಧಾರದ ಮೇಲೆ ನದಿ ದಡಕ್ಕೆ ಬರುವ ಗರಿಷ್ಠ ನೀರಿನ ಮಟ್ಟದ ಬಗ್ಗೆ ಮುಂಚಿತವಾಗಿ ಗುರುತಿಸಬೇಕು. ಈಗಾಗಲೇ ನೇಮಿಸಿದ ನೋಡಲ್ ಅಧಿಕಾರಿಗಳು ತಮ್ಮ ತಂಡಗಳೊಂದಿಗೆ ಸಂಬಂಧಿಸಿದ ಗ್ರಾಮಗಳಿಗೆ ಭೇಟಿ ನೀಡಿ ಅರಿವು ಮೂಡಿಸಬೇಕು.

-ಡಾ. ಸುಶೀಲಾ.ಬಿ, ಜಿಲ್ಲಾಧಿಕಾರಿ

ಪ್ರತಿ ವರ್ಷದ ಭೀತಿ

ಮಳೆಗಾಲ ಆರಂಭವಾಗುತ್ತಿದಂತೆ ಜಿಲ್ಲೆಯ ಕೆಲವು ಸೇತುವೆಗಳು ಜಲಾವೃತ್ತಗೊಂಡು ಅಪಾಯದ ಮಟ್ಟ ಮೀರಿ ಹರಿಯುತ್ತವೆ. ಅದರಲ್ಲಿಯೂ ಶಹಾಪುರ ತಾಲೂಕಿನ ಕೊಳ್ಳೂರು (ಎಂ) ಸೇತುವೆ ಕಥೆಯಂತೂ ಹೇಳತೀರದಾಗಿದೆ. ಕಳೆದ ಬಾರಿಯೂ ಕೂಡಾ ನಾರಾಯಣಪುರ ಜಲಾಶಯದಿಂದ ಅಪಾರ ಪ್ರಮಾಣದ ನೀರು ಕೃಷ್ಣಾ ನದಿಗೆ ಹರಿಬಿಟ್ಟ ಹಿನ್ನಲೆ ಪ್ರವಾಹ ಉಂಟಾಗಿ ಬೆಳೆಗಳು ನಾಶವಾಗಿದ್ದವು.

ಜಿಲ್ಲಾಧಿಕಾರಿ ಸೂಚನೆ

ಜನ, ಜಾನುವಾರುಗಳ ಪ್ರಾಣ ಹಾನಿಯಾಗದಂತೆ ನೋಡಿಕೊಳ್ಳಲು ಮುನ್ನೆಚ್ಚರಿಕೆ ವಹಿಸಿ. ಕಳೆದ ವರ್ಷ ಪ್ರವಾಹ ಸಂದರ್ಭದಲ್ಲಿ ಬಂದಿದ್ದ ಗರಿಷ್ಠ ಮಟ್ಟದ ನೀರಿನ ಕುರಿತು ಡಿ-ಮಾರ್ಕೇಶನ್ ಮಾಡುವುದು. ಹಿರಿಯರು,ಮಹಿಳೆಯರು, ಗರ್ಭಿಣಿಯರು, ಮಕ್ಕಳಿಗೆ ಅವಶ್ಯಕ ಔಷಧಿ ಇರುವಂತೆ ನೋಡಿಕೊಳ್ಳಬೇಕು.

ಬೀಳುವ ಹಂತದಲ್ಲಿರುವ ಮನೆಗಳು, ಶಾಲಾ, ಅಂಗನವಾಡಿ ಕಟ್ಟಡಗಳನ್ನು ಮುಂಚಿತವಾಗಿ ಗುರುತಿಸಬೇಕು. ನಿರಂತರ 24 ಗಂಟೆಗಳ ಕಾಲ ನೀರಿನ ಹರಿವು ಪ್ರಮಾಣ ಕುರಿತು, ಬರುವ ಎಚ್ಚರಿಕೆಗಳ ಬಗ್ಗೆ ನಿಗಾ ಇಡಿ.

ಕಾಲ ಕಾಲಕ್ಕೆ ಮನೆ ಹಾಗೂ ಬೆಳೆ ಹಾನಿ,ಜನ, ಜಾನುವಾರುಗಳ ಪ್ರಾಣ ಹಾನಿ ಬಗ್ಗೆ ಪರಿಶೀಲಿಸಿ, ನೈಜ ವರದಿ ಸಲ್ಲಿಸಬೇಕು.ಅಧಿಕಾರಿಗಳು ಕೇಂದ್ರ ಸ್ಥಾನ ಬಿಡದಂತೆ ಸೂಚನೆ.

ಘತ್ತರಗಾ, ಹಿಪ್ಪರಗಿಯಲ್ಲಿ ಸೇತುವೆ ಮುಳುಗಡೆ ▸▸ ಜಿಲ್ಲೆಯಲ್ಲಿ ಸಿಡಿಲಿಗೆ 4 ಜೀವ ಬಲಿ

ಮುಂಗಾರು ಮಳೆ ತಂದ ಹಾನಿ ಫಜೀತಿ ಭೀಮಾ ನದಿ ಪಾತ್ರದಲ್ಲಿ ಪ್ರವಾಹ ಭೀತಿ

ಜಿಲ್ಲಾ ನೋಟ

ದೇವೇಂದ್ರ ಜಾಡಿ, ಕಲಬುರಗಿ

ಜಿಲ್ಲೆಗೆ ಈ ವರ್ಷ ಅವಧಿಗೂ ಮೊದಲೇ ಮುಂಗಾರು ಪ್ರವೇಶವಾಗಿದ್ದು, ನಿರಂತರ ಸುರಿದ ಮಳೆಗೆ 30 ವರ್ಷದ ಹಳೆಯ ಕಟ್ಟಡ ಕುಸಿದು ಬಿದ್ದಿದೆ. ವಿವಿಧ ತಾಲೂಕಿನಲ್ಲಿ ಮನೆಗಳು ಕುಸಿದು ಬಿದ್ದಿವೆ. ವಿದ್ಯುತ್ ಸ್ಪರ್ಶಕ್ಕೆ ಜಾನುವಾರು ಮರಣ ಹೊಂದಿವೆ. ಸಿಡಿಲಿಗೆ ನಾಲ್ಕು ಜೀವ ಬಲಿಯಾಗಿದ್ದು, ಜಿಲ್ಲೆಯ ಬಹುತೇಕ ನದಿ, ಹಳ್ಳ, ಕೊಳ್ಳಗಳು ತುಂಬಿ ಹರಿಯುತ್ತಿದ್ದು, ನೀರಿನ ಮಟ್ಟ ಹೆಚ್ಚಾಗಿ ಸೇತುವೆಗಳು ಮುಳುಗಡೆಗೊಂಡ ಘಟನೆ ಕಲಬುರಗಿ ಜಿಲ್ಲೆಯಲ್ಲಿ ನಡೆದಿದೆ.

ಹೆಚ್ಚುವರಿ ಮಳೆ

ಜಿಲ್ಲೆಗೆ ಕಳೆದ ಮೇ 26ರಂದು ಮುಂಗಾರು ಪ್ರವೇಶವಾಗಿದ್ದು, ಸುಮಾರು 56 ಮೀಮಿ ನಷ್ಟು ಪೂರ್ವ ಮುಂಗಾರು ಸುರಿದಿದೆ. ಒಟ್ಟಾರೆ ಜಿಲ್ಲೆಯಲ್ಲಿ 159 ಮೀಮಿ ನಷ್ಟು ಮಳೆಯಾಗಿದ್ದು, 150ಕ್ಕೂ ಅಧಿಕ ಶೇಕಡಾವಾರು ಹೆಚ್ಚುವರಿ ಮಳೆ ಬಿದ್ದಿದೆ. ಅಲ್ಲಲ್ಲಿ ಪ್ರಾಣಿ, ಜೀವ ಬಲಿಯಾಗಿದ್ದು, ಇನ್ನೂ ಕೆಲವಡೆ ಮನೆಗಳು ಕುಸಿದು ಬಿದ್ದು ಜನಜೀವನ ದುಸ್ತರವಾಗಿದೆ. ಮುಂಗಾರು ಆರಂಭದಲ್ಲೇ ಸಾರ್ವಜನಿಕರಲ್ಲಿ ಆಂತಕ ಉಂಟಾಗಿದ್ದು, ಮುಂದಿನ ದಿನಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಬೀಳುವ ನಿರೀಕ್ಷೆ ಇದ್ದು, ಅತಿವೃಷ್ಟಿಯ ಭಯ ಜನರಲ್ಲಿ ಮೂಡಿದೆ.

ಸಿಡಿಲಿಗೆ 4 ಮಂದಿ

ಏಪ್ರಿಲ್ 1 ರಿಂದ ಮೇ 28 ರವರೆಗೆ ಜಿಲ್ಲೆಯಲ್ಲಿ ಸಿಡಿಲಿನಿಂದಾಗಿ 4 ಮಂದಿ ಸಾವನ್ನಪ್ಪಿದ್ದಾರೆ. ಅಫಜಲಪುರ, ಜೇವರ್ಗಿ, ಕಮಲಾಪುರ ಹಾಗೂ ಯಾದ್ರಾಮಿ ತಾಲೂಕುಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಇದಲ್ಲದೇ, ಜಾನುವಾರುಗಳು ಸಹ ಸಿಡಿಲು, ವಿದ್ಯುತ್ ಸ್ಪರ್ಶಕ್ಕೆ ಬಲಿಯಾಗಿವೆ. 31 ದೊಡ್ಡ ಪ್ರಾಣಿಗಳು ಮತ್ತು 33 ಸಣ್ಣ ಪ್ರಾಣಿಗಳು ಸಾವನ್ನಪ್ಪಿವೆ. ಚಿತ್ತಾಪುರ ತಾಲೂಕಿನಲ್ಲಿ 12 ಸಣ್ಣ ಪ್ರಾಣಿಗಳು, ಆಳಂದ ತಾಲೂಕಿನಲ್ಲಿ 10 ಸಣ್ಣ ಪ್ರಾಣಿಗಳು ಸಾವನ್ನಪ್ಪಿವೆ. ಇದರ ಜತೆಗೆ 29 ಮನೆಗಳಿಗೆ ಹಾನಿಯಾಗಿವೆ. ಚಿತ್ತಾಪುರದಲ್ಲಿ 13 ಮನೆಗಳು ಭಾಗಶಃ ಹಾನಿಗೊಳಗಾಗಿವೆ. ಚಿಂಚೋಳಿಯಲ್ಲಿ 13 ಹಾಗೂ ಆಳಂದದಲ್ಲಿ 2 ಮನೆಗಳು ಹಾನಿಗೊಳಗಾಗಿವೆ.

ತೋಟಗಾರಿಕೆ ಬೆಳೆ ನಷ್ಟ

ಕಲಬುರಗಿ ಜಿಲ್ಲೆಯಲ್ಲಿ 2025-26ರ ಮುಂಗಾರು ಅತಿವೃಷ್ಟಿಯಿಂದ 104.66 ಹೆಕ್ಟೇರ್ ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿದೆ. ಅಫ್ಜಲಪುರದಲ್ಲಿ 30.25 ಹೆಕ್ಟೇರ್, ಕಲಬುರಗಿಯಲ್ಲಿ 27.14 ಹೆಕ್ಟೇರ್ ಬೆಳೆ ನಷ್ಟವಾಗಿದೆ. ಜಿಲ್ಲೆಯಲ್ಲಿ ಒಟ್ಟು 63.02 ಹೆಕ್ಟೇರ್ ಬಾಳೆ, 24.55 ಹೆಕ್ಟೇರ್ ಪಪ್ಪಾಯಿ ಹಾನಿಯಾಗಿದೆ. ಒಟ್ಟು 11 ತಾಲೂಕುಗಳಲ್ಲಿ ಬೆಳೆಗಳು 33-50% ಹಾಗೂ 50%ಕ್ಕಿಂತ ಹೆಚ್ಚು ಹಾನಿಗೊಳಗಾಗಿವೆ. ಆದರೆ, ವಾಣಿಜ್ಯ ಬೆಳೆಗಳ ಭೂಮಿಗೆ ಯಾವುದೇ ಹನಿಯಾಗಿಲ್ಲ ಎಂದು ತಿಳಿದು ಬಂದಿದೆ.

ಅವಧಿಗೂ ಮೊದಲೇ ಜಿಲ್ಲೆಗೆ ಮುಂಗಾರಿನ ಪ್ರವೇಶವಾಗಿದೆ. 56 ಮೀಮಿ ಮಳೆಯಾಗಿ ಶೇ.150ರಷ್ಟು ಹೆಚ್ಚುವರಿಯಾಗಿ ಮಳೆಯಾಗಿದೆ. ಮೇ 31ರ ವರೆಗೂ ಮಳೆಯಗಲಿದೆ. ಜೂನ್‌ನಲ್ಲಿ ಕೊಂಚ ಬಿಡುವು ನೀಡಲಿದೆ. ಈ ವರ್ಷ ವಾಡಿಕೆಗಿಂತ ಹೆಚ್ಚು ಮಳೆಯ ನಿರೀಕ್ಷೆ ಇದ್ದು ಜನರು ಎಚ್ಚರ ವಹಿಸಬೇಕು

-ಸಮದ್ ಪಟೇಲ್, ಜಂಟಿ ನಿರ್ದೇಶಕ, ಕೃಷಿ ಇಲಾಖೆ

ಕಟ್ಟಡ ಕುಸಿತ

ಜಿಲ್ಲೆಯಲ್ಲದೇ, ಕಲಬುರಗಿ ನಗರದಲ್ಲೂ ಸುರಿದ ನಿರಂತರ ಮಳೆಗೆ ನಗರದ ಸೂಪರ್ ಮಾರ್ಕೆಟ್ ಬಳಿ 30 ವರ್ಷದ ಹಳೆಯ ಕಟ್ಟಡವೊಂದು ಕುಸಿದು ಬಿದ್ದಿದೆ. ಸೂಪರ್ ಮಾರ್ಕೆಟ್‌ನಲ್ಲಿರುವ ಕಲ್ಕತ್ತಾ ಕಾಂಪ್ಲೆಕ್ಸ್‌ನ ಮುಂದಿನ ಭಾಗ ನಿರಂತರ ಮಳೆಗೆ ಕುಸಿದು ಬಿದ್ದಿದೆ. ರಾತ್ರಿ ವೇಳೆಯಲ್ಲಿ ಕಟ್ಟಡ ಕುಸಿದು ಬಿದಿದ್ದರಿಂದ ಯಾವುದೇ ಅನಾಹುತ ಸಂಭವಿಸಿಲ್ಲ.

ಮಳೆಗೆ 30 ವರ್ಷದ ಹಳೆಯ ಕಟ್ಟಡ ಕುಸಿದು ಬಿದ್ದಿದೆ.

ಜಾನುವಾರು ಸಾವು

ಕಳೆದ ಹದಿನೈದು ದಿನಗಳಿಂದ ತಾಲೂಕಿನಲ್ಲಿ ಗುಡುಗು ಸಹಿತ ಮಳೆಯಿಂದ ಝುಳಕಿ ಕೆ. ಶುಕ್ರವಾಡಿ, ನಿಂಬರ್ಗಾ, ಯಳಸಂಗಿ ಗ್ರಾಮಗಳಲ್ಲಿ ಎತ್ತು, ಆಕಳು ಸಾವನ್ನಪ್ಪಿವೆ. ಮದಗುಣಕಿ ಗ್ರಾಮದ ಈರಣ್ಣ ಸಲಬಣ್ಣ ಮಡ್ಡೆ ಮನೆಯ ಗೋಡೆ ಕುಸಿದಿದೆ. ಇಲ್ಲಿವರೆಗೂ ಯಾವುದೇ ರೀತಿ ಜೀವ ಹಾನಿಯಾಗಿಲ್ಲ ಎಂದು ವರದಿಯಾಗಿದೆ. ಸಾರ್ವಜನಿಕರು ಹಳ್ಳ, ಕೆರೆ ದಡದಲ್ಲಿ ಬಟೆ ತೊಳೆಯಬಾರದು, ದನ, ಕರುಗಳನ್ನು ಮೇಯಿಸಬಾರದು, ಅಪಾಯವಿರುವ ಸೇತುವೆ ಕಡೆ ಸಂಚರಿಸಬಾರದು ಎಂದು ತಾಲೂಕು ಆಡಳಿತ ಸಾರ್ವಜನಿಕರಿಗೆ ಮುನ್ನೆಚ್ಚರಿಕೆ ನೀಡಿದೆ.

13 ಮನೆಗಳಿಗೆ ಹಾನಿ

ತಾಲೂಕಿನಲ್ಲಿ ಒಂದು ತಿಂಗಳುಗಳಿಂದ ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಮನೆಗಳಿಗೆ ಮತ್ತು ಜಾನುವಾರುಗಳಿಗೆ ಅಪಾರ ಹಾನಿಯಾಗಿದೆ. ತಾಲೂಕಿನ ತುಮಕುಂಟಾ, ಕನಕಪೂರ್, ದೇಗಲ್ಮಡಿ, ಗಾರಂಪಳ್ಳಿ, ಐನೋಳಿ, ಲಿಂಗಾನಗರ ತಾಂಡಾ ಮತ್ತು ಚಿಂಚೋಳಿ ಸೇರಿ ಒಟ್ಟು 13 ಮನೆಗಳು ಹಾನಿಯಾಗಿವೆ. ಜತೆಗೆ ನಿಡಗುಂದಾ, ಖಿನಿ ನಾಯಕ ತಾಂಡಾ, ರುಸ್ತಂಪೂರ್ ಘತ್ತುನಾಯಕ ತಾಂಡಾದಲ್ಲಿ ತಲಾ ಒಂದು, ಒಂಟಿಚಿಂತಾದಲ್ಲಿ ನಾಲ್ಕು ಸೇರಿ ಒಟ್ಟು 8 ಪಶುಗಳಿಗೆ ಹಾನಿಯಾಗಿವೆ.

ಸಿಡಿಲಿಗೆ 9 ಕುರಿ ಬಲಿ

ಚಿತ್ತಾಪುರ ತಾಲೂಕಿನಾದ್ಯಂತ ಸಿಡಿಲು ಸಮೇತ ಸುರಿದ ಭಾರಿ ಮಳೆಗೆ ದನಕರುಗಳು, ಕುರಿಗಳು ಸೇರಿ ಮನೆಗಳು ಬಿದ್ದು ಅಪಾರ ಹಾನಿಯಾಗಿದೆ. ವಿವಿಧ ಗ್ರಾಮಗಳಲ್ಲಿ ಹದಿಮೂರು ಮನೆಗಳು ಬಿದ್ದು ಅಪಾರ ಹಾನಿಯಾಗಿದೆ. ಇನ್ನೂ, ಸಿಡಿಲು ಬಡಿದು 2 ದನಗಳು, 9 ಕುರಿಗಳು ಸಾವನ್ನೊಪ್ಪಿವೆ..

ಸೇತುವೆ ಮುಳುಗಡೆ

ಕಲಬುರಗಿ ಜಿಲ್ಲೆಯಾದ್ಯಂತ ಸುರಿಯುತ್ತಿರುವ ಬಾರಿ ಮಳೆಯಿಂದಾಗಿ ಹಳ್ಳ ಕೊಳ್ಳಗಳು ತುಂಬಿ ಹರಿಯುತ್ತಿವೆ. ಕಮಲಾಪುರ ತಾಲೂಕಿನ ಹಿಪ್ಪರಗಾ ಗ್ರಾಮದ ಸೇತುವೆ ಮುಳುಗಡೆಯಾಗಿದೆ. ಕುದಮೂಡ-ಕಲಕುಟಗಾ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸೇತುವೆಯಾಗಿದ್ದು, ಸೇತುವೆ ಮುಳುಗಡೆ ಹಿನ್ನಲೆ ವಾಹನ ಸವಾರರು, ಜನರು ಓಡಾಡಲು ಹಿಂದೇಟು ಹಾಕುತ್ತಿದ್ದಾರೆ.

ಆರಾಮ

ಕನಕಗಿರಿಯಲ್ಲೊಂದು ಅಂದದ ರೆಸಾರ್ಟ್!

ಹವಾ ನಿಯಂತ್ರಿತ ಸೌಲಭ್ಯ ಉಳ್ಳ ಐಶಾರಾಮಿ ಕೊಠಡಿ. ರುಚಿಕರ ಊಟಕ್ಕೆ ಪಕ್ಕದಲ್ಲೇ ಕ್ಯಾಂಟೀನ್ ಸೌಲಭ್ಯ. ಸುತ್ತಲೂ ಸುಂದರ ಪರಿಸರ. ಮನಸ್ಸು ತಣಿಸಿಕೊಳ್ಳಲು ಸುಸಜ್ಜಿತ ಈಜುಕೊಳ. ಮಕ್ಕಳ ಮೋಜಿಗಾಗಿ ರೇನ್ ಡ್ಯಾನ್ಸ್ ಸೌಲಭ್ಯ!

ಇಷ್ಟೆಲ್ಲ ಸೌಲಭ್ಯ ಹೊಂದಿದ 'ಬಿರ್ಲಾ ಜಂಗಲ್ ರೆಸಾರ್ಟ್ ಹಾಗೂ ಬ್ಲೂ ಮೂನ್ ಕೌಂಟಿ ರೆಸಾರ್ಟ್' ಇರೋದು ಕೊಪ್ಪಳ ಜಿಲ್ಲೆ ಕನಕಗಿರಿ ಹೊರ ಹೊಲಯದಲ್ಲಿ. ಈ ರೆಸಾರ್ಟ್ ವಿಶ್ವ ಪಾರಂಪರಿಕ ಹಂಪಿ ಹಾಗೂ ದೇಶಾದ್ಯಂತ ಭಕ್ತರನ್ನು ಸೆಳೆಯುತ್ತಿರುವ ಅಂಜನಾದ್ರಿ, ಬೆಟ್ಟದಿಂದ ಕೇವಲ 30 ಕಿ.ಮೀ. ದೂರದಲ್ಲಿದೆ. ಕನಕಗಿರಿಯ ಗಂಗಾಧರ ಸಜ್ಜನ ಅವರ ಮಾಲೀಕತ್ವದ ರೆಸಾರ್ಟ್ ಪ್ರವಾಸಿಗರನ್ನು ಸೆಳೆಯುತ್ತಿದೆ. ವಾರಾಂತ್ಯದಲ್ಲಿ ಅಂಜನಾದ್ರಿ, ಹಂಪಿಗೆ ಬರುವ ಪ್ರವಾಸಿಗರು ಕೇವಲ ಅರ್ಧ ಗಂಟೆಯಲ್ಲಿ ಇಲ್ಲಿಗೆ ತಲುಪಬಹುದು.

ಪ್ರವಾಸೋದ್ಯಮ ಕ್ಷೇತ್ರದಲ್ಲಿ ವಿಶೇಷ ಸೇವೆ ನೀಡುವ ಮೂಲಕ ಹಂಪಿಗೆ ಬರುವ ಪ್ರವಾಸಿಗರ ಗಮನ ಸೆಳೆದಿರುವ ಗಂಗಾಧರ ಸಜ್ಜನ ಅವರು, ಸಮಾಜ ಸೇವೆಯಲ್ಲೂ ತೊಡಗಿಕೊಂಡಿದ್ದಾರೆ. ಸಮಾಜಕ್ಕೆ ಅವರು ನೀಡಿದ ಸರ್ವತೋಮುಖ ಕೊಡುಗೆಯನ್ನು ಗುರುತಿಸಿ, ಇವರಿಗೆ 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಗ್ಲೋಬಲ್ ಪ್ರಶಸ್ತಿ

ಪ್ರವಾಸೋದ್ಯಮ ಕ್ಷೇತ್ರದ ಸಾಧನೆಗೆ ಮತ್ತು ಸಮಾಜ ಸೇವೆಗಾಗಿ ಗಂಗಾಧರ ಸಜ್ಜನ ಅವರ ಕೊಡುಗೆಯನ್ನು ಗುರುತಿಸಿ, ಅವರಿಗೆ 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್' ಪ್ರಶಸ್ತಿಯನ್ನು ನೀಡಲಾಗಿದೆ. ಇತ್ತೀಚೆಗೆ ಜಾರ್ಜಿಯಾ ದೇಶದಲ್ಲಿ ನಡೆದ ಅದ್ಧೂರಿ ಸಮಾರಂಭದಲ್ಲಿ, ಹಲವು ಗಣ್ಯರ ಸಮ್ಮುಖದಲ್ಲಿ ಇವರಿಗೆ ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಕನಕಗಿರಿಯಿಂದ ಕಲಕೇರಿ ರಸ್ತೆಯಲ್ಲಿನ ಈ ರೆಸಾರ್ಟ್‌ಗೆ ಕುಟುಂಬ ಸಮೇತ ಭೇಟಿ ನೀಡಬಹುದು. ರೆಸಾರ್ಟ್‌ಗೆ ಹೋಗುತ್ತಿದ್ದಂತೆಯೇ ಗ್ರಾಮೀಣ ಸೊಗಡಿನ ಪ್ರವೇಶ ದ್ವಾರಗಳು ಪ್ರವಾಸಿಗರನ್ನು ಸ್ವಾಗತಿಸುತ್ತವೆ. ವಾಹನ ನಿಲುಗಡೆಗೆ ವಿಶಾಲವಾದ ಜಾಗವಿದೆ. ರೆಸಾರ್ಟ್‌ನಲ್ಲಿ ಮಕ್ಕಳ ಆಟಕ್ಕೆ ಜಾರು ಬಂಡಿ, ಜೋಕಾಲಿ, ಪ್ರಾಣಿಗಳ ಕಲಾಕೃತಿ, ಬೆಳಕಿನ ಆಟಕ್ಕೆ ಅವಕಾಶ ಇದೆ. ಜೊತೆಗೆ ಮಕ್ಕಳೊಂದಿಗೆ ಆಟವಾಡಲು ಈಜು ಕೊಳವಿದ್ದು, ಆಧುನಿಕ ಸೌಲಭ್ಯದೊಂದಿಗೆ ನಿರ್ವಹಣೆ ಮಾಡಲಾಗುತ್ತದೆ. ಮಕ್ಕಳಿಗಾಗಿ ಪ್ರತ್ಯೇಕ ಈಜು ಕೊಳ ಇರುವುದು ವಿಶೇಷ. ಈಜುಕೊಳದಲ್ಲಿ ಈಜಿದ ನಂತರ ರೇನ್ ಡ್ಯಾನ್ಸ್ ಸೌಲಭ್ಯ ಇದೆ. ಇಲ್ಲಿಗೆ ಮಕ್ಕಳ ಒಮ್ಮೆ ಭೇಟಿ ನೀಡಿ, ಮನರಂಜನೆಗೆ ಅನುಭವಿಸಿದರೆ ಮತ್ತೆ ಮತ್ತೆ ಹೋಗಬೇಕು ಎನ್ನುವಂತ ಸಾಕಷ್ಟು ಸೌಲಭ್ಯ ಇವೆ.

ಗಂಗಾಧರ ಸಜ್ಜನ ಮಾಲೀಕತ್ವ

ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿ ವಿಶ್ವ ಪಾರಂಪರಿಕ ಪಟ್ಟಿಯಲ್ಲಿದ್ದು, ಸದ್ಯ ದೇಶ ವಿದೇಶದ ಪ್ರವಾಸಿಗರನ್ನು ಸೆಳೆಯತ್ತಿದೆ. ವಿಜಯನಗರ ಸಾಮ್ರಾಜ್ಯದ ಅರಸರ ಸಾಮಂತ ದೊರೆಗಳ ರಾಜಧಾನಿಯೇ ಕನಕಗಿರಿ. ಇಂಥ ಐತಿಹಾಸಿಕ ಪಟ್ಟಣದಲ್ಲಿ ಗಂಗಾಧರ ಸಜ್ಜನ ಅವರ ರೆಸಾರ್ಟ್ ನೆಲೆಯೂರಿವೆ. ಕನಕಗಿರಿಯಲ್ಲಿ ಪ್ರವಾಸೋದ್ಯಮ ಬೆಳವಣಿಗೆಗೆ ಸಾಕಷ್ಟು ಅವಕಾಶ ಇದ್ದರೂ, ಈ ಹಿಂದೆ ಮೂಲಭೂತ ಸೌಲಭ್ಯಗಳ ಕೊರತೆ 'ಯಿಂದಾಗಿ ಪ್ರವಾಸಿಗರು ಕನಕಗಿರಿ ಕಡೆಗೆ ಮುಖ ಮಾಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ಕನಕಗಿರಿ ಪಟ್ಟಣದಲ್ಲಿ ಪ್ರವಾಸೋದ್ಯಮ ಬೆಳೆಸುವ ಜೊತೆ ಜೊತೆಗೆ ತಾವೂ ಉದ್ಯಮದಲ್ಲಿ ಯಶಸ್ಸು ಸಾಧಿಸುವ ಉದ್ದೇಶದಿಂದ ಗಂಗಾಧರ ಸಜ್ಜನ ಕನಕಗಿರಿ ಸಮೀಪದಲ್ಲಿ ರೆಸಾರ್ಟ್ ನಿರ್ಮಾಣ ಮಾಡಿದ್ದಾರೆ.

ಸಾಮಾನ್ಯ ಕೃಷಿಕ ಕುಟುಂಬದಲ್ಲಿ ಜನಿಸಿದ್ದ ಗಂಗಾಧರ ಸಜ್ಜನ ಅವರು, ಸದ್ಯ ರೆಸಾರ್ಟ್ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ. ಮೂಲತಃ ಕೊಪ್ಪಳ ಜಿಲ್ಲೆ ಕನಕಗಿರಿ ಪಟ್ಟಣದ ಗಂಗಾಧರ ಸಜ್ಜನ, ಕೃಷಿಕ ಕುಟುಂಬದವರು. ತಂದೆ ಹಂಪಣ್ಣ ಕೃಷಿ ಚಟುವಟಿಕೆಯಲ್ಲಿ ಎತ್ತಿದ ಕೈ; ಜೊತೆಗೆ ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದರು. ಮಾಜಿ ಸಂಸದ ಎಚ್.ಜಿ.ರಾಮುಲು ಮತ್ತು ಮಾಜಿ ಸಚಿವ ಮಲ್ಲಿಕಾರ್ಜುನ ನಾಗಪ್ಪ ಅವರ ಆಪ್ತರಾಗಿದ್ದರು. ತಂದೆಯಿಂದ ಪ್ರಭಾವಿತರಾದ ಗಂಗಾಧರ ಸಜ್ಜನ, ತಮ್ಮ ಕಾಲೇಜು ದಿನದಿಂದ ಸಮಾಜಿಕ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ನಂತರ ಶಿಕ್ಷಣ ಸಂಸ್ಥೆ ಮತ್ತು ರೆಸಾರ್ಟ್ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲೂ ಸಾಧನೆ

ಗಂಗಾಧರ ಸಜ್ಜನ ಕೇವಲ ಕೃಷಿ ಮತ್ತು ರೆಸಾರ್ಟ್ ಮಾತ್ರವಲ್ಲದೇ ಶಿಕ್ಷಣ ಕ್ಷೇತ್ರದಲ್ಲೂ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಭೂಮಿಕಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಡಿ ಕನಕಗಿರಿಯಲ್ಲಿ ಪವನ್ ಸ್ಕೂಲ್ ಎಂಬ ಶಿಕ್ಷಣ ಸಂಸ್ಥೆ ನಡೆಸುತ್ತಿದ್ದಾರೆ. ಒಂದರಿಂದ 8ನೇ ತರಗತಿ ವರೆಗೆ ಇರುವ ಪ್ರಾಥಮಿಕ ಶಾಲೆಯಲ್ಲಿ ಸದ್ಯ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ತಾಲೂಕು ಕೇಂದ್ರ, ಕನಕಗಿರಿಯಲ್ಲಿ ಅತ್ಯಂತ ಸೂಕ್ತ ಶುಲ್ಕ ಪಡೆದು, ಗುಣಮಟ್ಟ ಶಿಕ್ಷಣ ನೀಡುವಲ್ಲಿ ಪವನ್ ಸ್ಕೂಲ್ ಕೆಲಸ ಮಾಡುತ್ತಿದೆ.

ಶಾಲೆಯಲ್ಲಿ 12ಕ್ಕೂ ಹೆಚ್ಚು ಅನುಭವಿ ಮತ್ತು ನುರಿತ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಗಂಗಾಧರ ಅವರ ಪತ್ನಿ ಜಯಲಕ್ಷ್ಮಿ ಸಜ್ಜನ ಅವರು ಶಿಕ್ಷಣ ಸಂಸ್ಥೆಗೆ ಅಧ್ಯಕ್ಷರಾಗಿದ್ದು, ಗಂಗಾಧರ ಸಜ್ಜನ ಅವರು ಕಾರ್ಯದರ್ಶಿಯಾಗಿ ಸಂಸ್ಥೆ ನಡೆಸುತ್ತಿದ್ದಾರೆ. ಕನಕಗಿರಿ ಪಟ್ಟಣಕ್ಕೆ ವಿಜಯನಗರ ಸಾಮ್ರಾಜ್ಯ ಕಾಲದ ಇತಿಹಾಸ ಇದೆ. ಆದರೆ, ಇಲ್ಲಿ ಪ್ರವಾಸೋದ್ಯಮ ಅಷ್ಟಾಗಿ ಬೆಳೆದಿಲ್ಲ. ಈ ಹಿನ್ನೆಲೆ ರಾಜ್ಯದ ನಾನಾ ಜಿಲ್ಲೆ ಸೇರಿದಂತೆ ದೇಶ- ವಿದೇಶಿಗರ ಪ್ರವಾಸಿಗರನ್ನು ಸೆಳೆಯಲು ಆರ್ಥಿಕವಾಗಿ ಹಿಂದುಳಿದ ಕನಕಗಿರಿ ಪಟ್ಟಣದ ಹೊರ ಹೊಲಯದಲ್ಲಿ ರೆಸಾರ್ಟ್ ಸ್ಥಾಪಿಸಿದ್ದಾರೆ; ಇಲ್ಲಿ ದೊರಕುವ ಸೇವೆಯನ್ನು ಪ್ರವಾಸಿಗರು ಬಹಳಷ್ಟು ಇಷ್ಟಪಟ್ಟಿದ್ದಾರೆ. ಆ ಮೂಲಕ, ಹಂಪಿಗೆ ನೀಡುವ ಪ್ರವಾಸಿಗರ ಭೇಟಿ ಸಾರ್ಥಕಗೊಳ್ಳುತ್ತಿದೆ. ಗಂಗಾಧರ ಸಜ್ಜನ ಅವರು ಸಾಮಾಜಿಕ ಇಚ್ಛಾಶಕ್ತಿಯೊಂದಿಗೆ ಉದ್ಯಮ ನಡೆಸುತ್ತಿದ್ದಾರೆ.

ಹಂಪಿ ಪ್ರವಾಸಿಗರಿಗೆ ಯೋಗ್ಯ ದರದಲ್ಲಿ ವಸತಿ

ಗೌರವ ಡಾಕ್ಟೊರೇಟ್

ಗಂಗಾಧರ ಸಜ್ಜನ ಅವರ ಸಮಾಜಮುಖಿ ಕೆಲಸ ಗುರುತಿಸಿ, ಸಾಕಷ್ಟು ಸಂಘ- ಸಂಸ್ಥೆಗಳು ಸನ್ಮಾನಿಸಿವೆ. ಅನೇಕ ಸಂಸ್ಥೆಗಳು ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿವೆ. ಅದರಂತೆ ಸ್ವಿಟ್ಜರ್ಲೆಂಡ್‌ನ ಜಿನಿವಾ ಮೂಲದ ಭಾರತ್ ವರ್ಚುವಲ್ ಯೂನಿವರ್ಸಿಟಿ ಫಾರ್ ಪೀಸ್ ಅಂಡ್ ಎಜುಕೇಷನ್ ಸಂಸ್ಥೆಯು ಇವರಿಗೆ ಕಳೆದ 2023ರಲ್ಲಿ ಬೆಂಗಳೂರಿನಲ್ಲಿ ಗಂಗಾಧರ ಸಜ್ಜನ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

ಸಮಾಜ ಸೇವೆಯಲ್ಲಿ ಸದಾ ಮುಂದು

ಗಂಗಾಧರ ಸಜ್ಜನ ಮತ್ತವರ ಕುಟುಂಬ ಸಮಾಜ ಸೇವೆಯಲ್ಲೂ ಸದಾ ಮುಂದು. ಕರೋನ ಕಾಲದಲ್ಲಿ ಸಾಕಷ್ಟು ಮಂದ ಬಡ ಕುಟುಂಬಗಳಿಗೆ ಆಹಾರದ ಕಿಟ್ ಕೊಡುಗೆ ನೀಡುವ ಮೂಲಕ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಇನ್ನು ಗಂಗಾಧರ ಸಜ್ಜನ ಮತ್ತವರ ಸಹೋದರರು ಪ್ರತಿ ವರ್ಷವೂ ಕನಕಗಿರಿಯ ಬಡ ಕುಟುಂಬಕ್ಕೆ ಜಾತ್ರೆ, ವೇಳೆ ಕಿರಾಣಿ ಕೊಡಿಸುವ ಮೂಲಕ ಸಮಾಜಮುಖಿ ಕೆಲಸದಲ್ಲಿ ತೊಡಗಿದ್ದಾರೆ. ನಮ್ಮ ಸಮಾಜದಲ್ಲಿ ಕಷ್ಟದಲ್ಲಿರುವವರಿಗೆ ಸ್ಪಂದಿಸುವ ಮೂಲಕ, ಸಮಾಜದ ಋಣ ತೀರಿಸಬೇಕು ಎಂಬುದು ಅವರ ಹಂಬಲ ಎನಿಸಿದೆ. ಗಂಗಾಧರ ಸಜ್ಜನ ಮತ್ತವರ ಕುಟುಂಬ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದೆ. ಶಿವರಾಜ ತಂಗಡಗಿ ಅವರು ಕಳೆದ 2008ರಲ್ಲಿ ಕನಕಗಿರಿ ಕ್ಷೇತ್ರಕ್ಕೆ ಬಂದಾಗಿನಿಂದ ಗಂಗಾಧರ ಸಜ್ಜನ ಅವರ ಸಹೋದರ ಸಂಗಪ್ಪ ಸಜ್ಜನ ಸಚಿವರೊಂದಿಗೆ ಗುರುತಿಸಿಕೊಂಡಿದ್ದಾರೆ. ಸಜ್ಜನ ಕುಟುಂಬದ ಯಾವುದೇ ಕಾರ್ಯಕ್ರಮದಲ್ಲಿ ತಪ್ಪದೇ ಭಾಗಿ ಆಗುತ್ತಾರೆ. ಜೊತೆಗೆ ನಮ್ಮ ಕುಟುಂಬದ ಎಲ್ಲ ಕೆಲಸಕ್ಕೆ ಸಚಿವ ಶಿವರಾಜ ತಂಗಡಗಿ ಅವರ ಸಲಹೆ ಸೂಚನೆ ಇರುತ್ತದೆ ಎನ್ನುತ್ತಾರೆ ಗಂಗಾಧರ ಸಜ್ಜನ.

ವಿಶ್ವ ವಿಖ್ಯಾತ ಪ್ರವಾಸಿ ತಾಣ ಎನಿಸಿರುವ ಹಂಪಿಗೆ ಸನಿಹದಲ್ಲಿರುವ ಕನಕಗಿರಿಯಲ್ಲಿ ರೆಸಾರ್ಟ್ ಸ್ಥಾಪನೆ ಮಾಡಿ, ಪ್ರವಾಸಿಗರಿಗೆ ಉತ್ತಮ ಸೇವೆ ನೀಡುತ್ತಿರುವ ಗಂಗಾಧರ ಸಜ್ಜನ ಮತ್ತು ಅವರ ತಂಡವು, ಆ ಮೂಲಕ ನಮ್ಮ ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿಗೂ ಸಾಕಷ್ಟು ಕೊಡುಗೆ ನೀಡುತ್ತಿರುವುದು ಗಮನಾರ್ಹ ಎನಿಸಿದೆ.

ನೀರು ಕುಡಿಯುವ ಅಳಿಲು!

• ರಘುನಾಥ ರಾವ್ ತಾಪ್ಸೆ

ಫೋಟೋ ತೆಗೆಯುವ ಮುಂಚೆ ಛಾಯಾಗ್ರಾಹಕ ಸ್ಮೈಲ್ ಪ್ಲೀಸ್, ಎಂದು ಹೇಳಿದಂತೆ, ಬಳ್ಳಾರಿಯ ಕಂಟೋನ್ಮೆಂಟ್ ರೈಲು ನಿಲ್ದಾಣದಲ್ಲಿನ ಮರದ ಮೇಲೆ ಓಡಾಡುತ್ತಿದ್ದ ಅಳಿಲಿನ ಫೋಟೋ ತೆಗೆಯಲು ನಾನು ಮುಂದಾದಾಗ 'ಬಾರಯ್ಯ... ಬಾರೋ ಅಳಿಲಯ್ಯಾ ಒಂದು ಚೆಂದದ ಫೋಟೋಗೆ ಪೋಸ್ ಕೊಡಯ್ಯಾ' ಎಂದು ಮನದಲ್ಲೇ ಕೇಳುತ್ತಿದ್ದಂತೆ... ನನ್ನ ಕೋರಿಕೆ ಅಳಿಲು ಕೇಳಿಸಿ ಕೊಂಡಿತೆಂಬಂತೆ, ನಾಲ್ಕಾರು ಫೋಟೋಗೆ ಪೋಸ್ ಕೊಡಲು ಒಂದು ಅಳಿಲು ಮುಂದಾಯಿತು!

ಈಗ ವಿಷಯಕ್ಕೆ ಬರೋಣ. ಬಳ್ಳಾರಿಯಲ್ಲಿ ಬಿಸಿಲು ಕಾಲ ಮತ್ತೊಂದು ಬಿರು ಬೇಸಿಗೆಕಾಲ ಎಂದು ಬೀಚಿ ಹೇಳಿದ್ದರು; ಆ ಬಳ್ಳಾರಿ ನನ್ನ ಮಾವನ ಊರು. ಬಳ್ಳಾರಿ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣಕ್ಕೆ ಬೆಳಿಗ್ಗೆ 7.30ಕ್ಕೆ ಬಂದು ರೈಲಿಗಾಗಿ ಕಾಯುತ್ತಿದ್ದೆ; ಅಲ್ಲಿನ ಕಾಂಪೌಂಡ್ ಗೋಡೆ ಮೇಲೆ ಒಂದು ಹಿಡಿ ಪುಳಿಯೋಗರೆ ಹಾಕಿದ್ದನ್ನು ಗಮನಿಸಿದೆ. ಇದು ಯಾರಿಗೆ ಇರಬಹುದು ಎಂದು ಊಹಿಸುತ್ತಿದಂತೆ ಪಕ್ಕದ ಮರ ಒಂದರಲ್ಲಿದ್ದ ಅಳಿಲು ಅತ್ತ ಇತ್ತ ನೋಡುತ್ತಾ ಕಾಂಪೌಂಡ್ ಮೇಲಿದ್ದ ಪುಳಿಯೋಗರೆಯ ರುಚಿ ನೋಡಲು ಬಂತು! ಫೋಟೋಗೆ ಪೋಸ್ ಕೊಟ್ಟರೆ ಆ ಅಳಿಲಿನ ಒಂದು ಆಕರ್ಷಕ ಫೋಟೋ ತೆಗೆಯಬೇಕು ಎಂದು ಮನದಾಸೆಗೆ ಅಳಿಲು ನನ್ನ ಕಡೆಗೆ ನೋಡುತ್ತಿದ್ದಂತೆ.... ಪೋಸ್ ಕೊಟ್ಟಿತು. ನನ್ನ ಮೊಬೈಲ್ ಕ್ಲಿಕ್ ಮಾಡಿಯೇ ಬಿಟ್ಟಿತು. ವಾವ್... ಕಲ್ಪನೆಗೂ ಮೀರಿದ ಅವಕಾಶ ಅಲ್ಲವೇ... ಸಾಮಾನ್ಯವಾಗಿ ಅಕ್ಕ ಪಕ್ಕದಲ್ಲಿ ಬರುವ ಜನರ ಕಂಡು ಭಯಪಟ್ಟು ಓಡುವ ಅಳಿಲು...ನನ್ನ ಮನದಾಸೆಗೆ ಪೋಸ್ ಕೊಟ್ಟಿದ್ದು ಖುಷಿ ಆಯ್ತು.

ಮುಂದಿನ ವಾರ ಪುನಃ ಬಳ್ಳಾರಿಗೆ ಪಯಣ; ಅದೇ ಬಳ್ಳಾರಿ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣಕ್ಕೆ ಬೆಳಿಗ್ಗೆ 7.30ಕ್ಕೆ ಬಂದು ರೈಲು ಬರುವಿಕೆಗಾಗಿ ಪ್ಲಾಟ್ ಫಾರಂನಲ್ಲಿ ಕಾಯ್ತಾ ಇದ್ದಾಗ ನನ್ನ ಗಮನ ರೈಲ್ವೆ ಕಾಂಪೌಂಡ್ ಪಕ್ಕದಲ್ಲಿ ಮರಕ್ಕೆ ನೀರಿನ ಪ್ಲಾಸ್ಟಿಕ್ ಬಾಟಲ್ ತೂಗಿ ಹಾಕಿದ್ದನ್ನು ಕಂಡೆ. ಹಿಂದಿನ ವಾರ ಅಳಿಲು ಪುಳಿಯೋಗರೆ ತಿನ್ನವ ಪೋಸ್ ಕೊಟ್ಟಂತೆ ಇಂದು ನೀರು ಕುಡಿಯುವ ಪೋಸ್ ಕೊಟ್ಟರೆ ತುಂಬಾ ಖುಷಿ ಆಗುತ್ತದೆ... ಎಂದುಕೊಂಡೆ.

ಚಿಂವ್ ಚಿಂವ್ ಎಂದು ಕೂಗುತ್ತಾ ಮರದಲ್ಲಿ ಓಡಾಡುತ್ತಿದ್ದ ಅಳಿಲು ಕ್ಷಣಾರ್ಧದಲ್ಲಿ ನೀರಿನ ಬಾಟಲ್ ಬಳೀ ಬಂತು! ಜತೆಗೆ, ಬಿಸಿಲ ಬೇಗೆ ನೀಗಿಸಲೆಂದು ನೀರು ಕುಡಿಯತೊಡಗಿತು;ತಲೆ ಎತ್ತಿ ಫೋಟೋ ಕ್ಲಿಕ್ಕಿಸಲು ಪೋಸ್ ಕೊಟ್ಟೇ ಬಿಟ್ಟಿತು. ನನಗಂತೂ ಅಚ್ಚರಿ! ಪ್ರಾಣ ಪಕ್ಷಿಗಳ ಜೀವ ಉಳಿಸಲು ಈ ಬಿಸಿಲುನಾಡಿನ ರೈಲು ನಿಲ್ದಾಣದಲ್ಲಿ ಅಳಿಲುಗಳಿಗೆ ನೀರು, ಆಹಾರ ನೀಡಿ ಮಾನವೀಯತೆ ತೋರಿದವರಿಗೆ ಧನ್ಯವಾದಗಳು.

ಪುರಿ ಜಗನ್ನಾಥ ಸ್ವಾಮಿಯ ಅಪೂರ್ವ ದೇವಾಲಯ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಪುರಿ ಜಗನ್ನಾಥ ದೇವಾಲಯವು ವಿಷ್ಣುವಿನ ಒಂದು ರೂಪವಾದ ಜಗನ್ನಾಥ ದೇವರು ಮತ್ತು ಅವನ ಇಬ್ಬರು ಸಹೋದರರಾದ ಬಲರಾಮ ಮತ್ತು ಸುಭದ್ರರಿಗೆ ಸಮರ್ಪಿತವಾದ ದೇವಾಲಯ. ಪ್ರಪಂಚದಲ್ಲೇ ಅತ್ಯಂತ ದೊಡ್ಡದಾದ ಪುರಿ ಜಗನ್ನಾಥ್ ಅಡುಗೆ ಮನೆಯ ವಿಶೇಷ ನೀವು ತಿಳಿಯಬೇಕು. ಬರೋಬ್ಬರಿ 1000 ಬಾಣಸಿಗರಿಂದ ಇಲ್ಲಿಯ ಅಡುಗೆ ತಯಾರಾಗತ್ತೆ. ಕಟ್ಟಿಗೆ ಒಲೆಯ ಮೇಲೆಯೇ ಮಹಾಪ್ರಸಾದ ಮಾಡುವುದು ಇಲ್ಲಿಯ ನಿಯಮ. ಅಲ್ಲಿ ಅಡುಗೆಗೆ ಬಳಸುವ ಕಟ್ಟಿಗೆ ಸಾಮಾನ್ಯದಲ್ಲ. ಸ್ವತಃ ರಥೋತ್ಸವದ ಕಟ್ಟಿಗೆ ಇದಾಗಿದ್ದು, ಪ್ರತಿ ಬಾರಿಯೂ ಇಲ್ಲಿ ಹೊಸದೊಂದು ರಥ ನಿರ್ಮಾಣವಾಗಬೇಕೆಂಬ ನಿಯಮವಿದೆ. ಹಳೆಯ ರಥದ ಕಟ್ಟಿಗೆಯನ್ನ ಅಡಿಗೆಗೆ ಬಳಿಸಬೇಕೆಂಬ ನಿಯಮ ಸಹ ಮೊದಲಿಂದಲೂ ಇದೆ. ಇಲ್ಲಿ ಅದೆಷ್ಟೇ ಭಕ್ತಾದಿಗಳು ಬಂದರೂ ಒಂದಿಷ್ಟು ಕಮ್ಮಿಯಾಗದಂತೆ ಒಂದಿಷ್ಟೂ ಉಳಿಯದೆ ಇರುವುದು ಆಶ್ಚರ್ಯ ಮತ್ತು ಪವಾಡವೇ ಎನ್ನಬಹುದು.

ಇಲ್ಲಿ ಜಗನ್ನಾಥ ಸ್ವಾಮಿಗೆ 56 ಬಗೆಯ ಬಕ್ಷ ಭೋಜನದ ನೈವೇದ್ಯವನ್ನ 6 ಮುಹೂರ್ತದಲ್ಲಿ ಸಮರ್ಪಿಸಲಾಗತ್ತೆ. ಅದು ಸಹ ಮಣ್ಣಿನ ಮಡಿಕೇಯಲ್ಲೇ ನಿತ್ಯ 56 ಬಗೆಯ ವಿಧ ಎಂಬುದಕ್ಕೂ ಒಂದು ಹಿನ್ನೆಲೆ ಇದೆ. ಶ್ರೀಕೃಷ್ಣ ವೃಂದಾವನದಲ್ಲಿ ಇದ್ದಾಗ ದಿನಕ್ಕೆ 8 ಬಾರಿಯಂತೆ ಆಹಾರ ಸ್ವೀಕರಿಸುತ್ತಿದ್ದನಂತೆ. ಜನರಿಗಾಗಿ ಗೋವರ್ಧನ ಗಿರಿ ಪರ್ವತ ಎತ್ತಿ ಹಿಡಿದಾಗ 7 ದಿನ ಉಪವಾಸವಿದ್ದ ಕಾರಣ ಆ 7 ದಿನದ ದಿನಕ್ಕೆ 8 ರಂತೆ 56 ಬಗೆಯ ಭಕ್ಷ್ಯ ನೈವೇದ್ಯ ಮಾಡಲಾಗತ್ತೆ. ಇದರಲ್ಲಿ ಎಲ್ಲಾ ಸಾತ್ವಿಕ ಆಹಾರವಿದ್ದು ಈರುಳ್ಳಿ ಬೆಳ್ಳುಳ್ಳಿ ನಿಷಿದ್ಧವಾಗಿರತ್ತೆ. ಈ ಬೃಹದಾಕಾರದ ಅಡುಗೆ ಮನೆಯಲ್ಲಿ ಗಂಗೆ ಮತ್ತು ಯಮುನೆ ಎಂಬ ಎರಡು ಭಾವಿಗಳಿದ್ದು ಅಡುಗೆಗೆ ಅದೇ ಭಾವಿಯಿಂದ ನೀರು ಬಳಿಸುವುದು ಇಲ್ಲಿಯ ನಿಯಮ.

ಅಡುಗೆ ಮನೆಯ ಮೇಲ್ವಿಚಾರಣೆಯಾಗಿ ಸ್ವತಃ ಮಹಾಲಕ್ಷ್ಮೀಯೇ ವೀಕ್ಷಿಸುತ್ತಿರುತ್ತಾಳೆ ಎನ್ನುವ ನಂಬಿಕೆ ಸಹ ಇದೆ. ಅಡುಗೆ ನಿಯಮದಲ್ಲಿ ಏನಾದರೂ ವ್ಯತ್ಯಾಸವಾದಲ್ಲಿ ಶ್ವಾನವೊಂದು ಅಡುಗೆ ಮನೆ ಪ್ರವೇಶ ಮಾಡತ್ತೆಯಂತೆ. ಅಲ್ಲಿಗೆ ಏನೋ ವ್ಯತ್ಯಾಸವಾಗಿದೆ ಎಂದರ್ಥ ತಪ್ಪಿಗಾಗಿ ಮಾಡಿದ ಅಡಿಗೆಯನ್ನೆಲ್ಲ ಭೂಮಿಯಲ್ಲಿ ಹೂಳಲಾಗತ್ತೆ. ಮತ್ತೊಂದು ಬಾರಿ ಅಡಿಗೆ ಮಾಡಲಾಗತ್ತೆ. ಇನ್ನೊಂದು ವಿಶೇಷವೆಂದರೆ ಇಲ್ಲಿ ಮಡಿಕೆಯ ಮೇಲೆ ಮಡಿಕೆಯಂತೆ ಒಂದರಮೇಲೊಂದು ಮೂರು ಮಡಿಕೆ ಇಟ್ಟು ಅಡುಗೆ ಮಾಡಲಾಗತ್ತೆ. 3 ಮಡಿಕೆಯಲ್ಲೂ ಒಂದೇ ಸಮಯಕ್ಕೆ ಆಹಾರ ಸಿದ್ದವಾಗಿರತ್ತೆ. ಅಡುಗೆಗೆ ಸಾಮಾನ್ಯವಾದ ಸ್ವಾದವಿದ್ದರೂ ದೇವರ ನೈವೇದ್ಯದ ನಂತರ ಗಮಗಮಿಸುತ್ತ ಅಪರಿಮಿತವಾದ ರುಚಿಯಿಂದ ಕೂಡಿರುತ್ತೆ ಎನ್ನಲಾಗುತ್ತದೆ. ಅಡುಗೆ ಮನೆಯಲ್ಲಿ 750 ಒಲೆಗಳಿದ್ದು ಈ ಅಗ್ನಿಯು ಯಾವತ್ತೂ ಆರುವುದಿಲ್ಲ ನಿರಂತರವಾಗಿ ಅಡಿಗೆ ಆಗುತ್ತಲೇ ಇರತ್ತೆ ಎನ್ನಲಾಗತ್ತೆ. ಇಲ್ಲಿರುವ ಅಗ್ನಿಯನ್ನ ವೈಷ್ಣವ ಅಗ್ನಿ ಅಂತ ಹೇಳಲಾಗತ್ತೆ. ನಿತ್ಯ ಬರೋಬ್ಬರಿ 50 ಸಾವಿರದಿಂದ 1 ಲಕ್ಷ ಜನರು ಸ್ವಾಮಿಯ ಪ್ರಸಾದ ಸೇವಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗ್ತಾರೆ. ಇನ್ನೂ ರಥೋತ್ಸವ ಸಮಯದಲ್ಲಿ 15 ಲಕ್ಷದವರೆಗೂ ಜನಸೇರಿರುತ್ತಾರೆ ಎಂದು ಹೇಳಲಾಗತ್ತೆ. ಇಲ್ಲಿಯ ಪ್ರಸಾದವಾಗಿ ಅನ್ನ ಜೊತೆಗೆ ಗಟ್ಟಿ ಬೇಳೆ, ಪುಳಿಯೋಗರೆ , ಒಂದು ತರಹದ ಪಲ್ಯ ಮತ್ತು ಚಟ್ನಿ, ಸಿಹಿ ಪೊಂಗಲ್, ದಾಲ್ ಕಿಚ್ಡಿ ರಸ್ಮಲೈ, ಹೋಳಿಗೆ ತರಹದ ಒಂದು ಸಿಹಿ ತಿಂಡಿ ಇದಿಷ್ಟು ದಿನ ನಿತ್ಯದ ಪ್ರಸಾದದ ವಿಶೇಷ.

ಇಂತಹ ಅಪರೂಪದ ದೇವಾಲಯಕ್ಕೆ ಖಂಡಿತ ಭೇಟಿ ಕೊಟ್ಟು ಅಲ್ಲಿನ ಪ್ರಸಾದವನ್ನು ಸ್ವೀಕರಿಸಿ ಪುರಿ ಜಗನ್ನಾಥ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕು. ಭಾರತದ ದೇವಾಲಯಗಳ ಐತಿಹ್ಯವನ್ನು ನಮ್ಮ ಮಕ್ಕಳಿಗೂ ತಿಳಿಸಬೇಕು.

ಉತ್ತಮ ಚಿಂತನೆಗಳೇ ನಿತ್ಯಭೋಜನವಾಗಲಿ

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಚಿತ್ತದನುಭವ ಭಾವ ಸಂಭಾವನೆಗಳೆಲ್ಲ
ಭತ್ತವದನು ವಿಚಾರಯುಕ್ತಿಗಳು ಕುಟ್ಟೆ
ತತ್ತ್ವತಂಡುಲ ದೊರೆಗುಮದು ವಿವೇಚಿತತತ್ತ್ವ
ನಿತ್ಯ ಭೋಜನ ನಮಗೆ - ಮಂಕುತಿಮ್ಮ||

ನಾವುಗಳು ಮನುಜರು; ಜಗತ್ತಿನಲ್ಲಿ ಅದ್ಯಾವ ಪ್ರಾಣಿ ಸಂಕುಲಕ್ಕೂ ದೊರೆಯದ ಚಿಂತನೆ, ಜ್ಞಾನಾರ್ಜನೆ, ಯೋಚನೆ, ವಿಮರ್ಶೆ, ಭಾವನೆಗಳು ಈ ಮಾನವರಿಗೆ ಮಾತ್ರ ಈ ಸೃಷ್ಟಿಯು ದಯಪಾಲಿಸಿದೆ. ಈ ಮಾನವನ ಚಿತ್ತದ ಅನುಭವ, ಅನುಭಾವ, ಆಲೋಚನೆ, ತಾರ್ಕಿಕ ಚಿಂತನೆಗಳೆಲ್ಲವೂ ಸಹ ಒಂದು ರೀತಿಯಲ್ಲಿ ಭತ್ತವಿದ್ದಂತೆ, ಅಂತಹ ಭತ್ತವನ್ನ ವಿಚಾರಯುಕ್ತಿ ಎಂಬ ಒನಕೆಯಿಂದ ಕುಟ್ಟಿದಾಗ ನಮಗೆ ವಿವೇಕ ಎಂಬ ಅಕ್ಕಿಯು ದೊರೆಯುತ್ತದೆ. ಅಂತಹ ವಿವೇಕದಿಂದ ಬಂದ ಅಕ್ಕಿಯು ನಮಗೆ ಜೀವನದ ನಿತ್ಯದ ಭೋಜನವಾಗಬೇಕು ಎಂದು ಈ ಪದ್ಯದಲ್ಲಿ ತಿಳಿಸುತ್ತಾ, ನಮ್ಮ ನಿತ್ಯದ ಮಾನಸಿಕ ವ್ಯವಸ್ಥೆಗಳು, ಚಿಂತನೆಗಳು, ತಾತ್ವಿಕ ತತ್ವಗಳು, ಒಳ್ಳೆಯ ವಿಚಾರಗಳನ್ನು ನಾವು ದಿನನಿತ್ಯವೂ ಸೇವಿಸುವ ಭೋಜನದಂತೆ ಇರಬೇಕು ಎಂಬುದು ಈ ಕಗ್ಗದ ಅರ್ಥವಾಗಿರುತ್ತದೆ.

ಮನುಷ್ಯನೆಂಬ ಪ್ರಾಣಿಯು ಈ ಜಗದಲ್ಲಿ 84 ಲಕ್ಷ ಜೀವರಾಶಿಯನ್ನು ದಾಟಿ ಬಂದಂತಹ ಒಂದು ಜೀವಿ, ಈ ಸೃಷ್ಟಿಯಲ್ಲಿ ಬೇರೆ ಯಾವ ಜೀವಿಗೂ ಇರದಂತಹ ಅಪ್ರತಿಮ ಶಕ್ತಿಯಾದ ಮಾತು, ಸಂಹವನ, ಅರ್ಜನೆ, ಗ್ರಹಸುವಿಕೆ, ಭಾವನೆಗಳು, ಜ್ಞಾನ, ವಿದ್ಯೆ ಹೀಗೆ ಹಲವಾರು ಅದ್ವಿತೀಯ ಅಂಶಗಳನ್ನು ಈ ಮಾನವ ಜೀವಿ ಈ ಸೃಷ್ಟಿಯಲ್ಲಿ ಗಳಿಸಿದ್ದು, ಈ ಜ್ಞಾನ, ವಿದ್ಯೆ, ಹಾಗೂ ತಿಳಿಯುವ ಕುತೂಹಲದ ಮನಸ್ಥಿತಿಯಲ್ಲಿ ಎಲ್ಲವನ್ನೂ ತಿಳಿಯುವ ಕುತೂಹಲಿಗನಾಗಿ ಎಲ್ಲವನ್ನೂ ಶೋಧಿಸುತ್ತಾ ಸತ್ಯದ ತಡಕಾಟದಲ್ಲಿದ್ದ ಈ ಮನುಷ್ಯನಿಗೆ ಹಲವಾರು ಸಂಗತಿಗಳು ಹೊರ ಹಮ್ಮಿದವು. ಇದರಲ್ಲಿ ಆ ದೈವ ಸಾಕ್ಷಾತ್ಕಾರ, ಸೃಷ್ಟಿಯ ನಿಗೂಢತೆ ಎಲ್ಲವೂ ಹೊರ ಬಂದವು. ಕೆಲವು ಸಮಯದಲ್ಲಿ ಹಲವು ಕೆಟ್ಟ ಸಂಗತಿಗಳು ಹೊರಬಂದವು; ನಾನೇ ಅಂತಿಮ, ನಾನೇ ಮೇಲು ಎನ್ನುವ ಭಾವಗಳೂ ಸಹ ಇವನಲ್ಲಿ ಮೊಳೆತವು. ಈ ಜಗತ್ತು ನನಗಾಗಿಯೇ, ನನ್ನಿಂದಲೇ ಎಂಬ ಈರ್ಷೆ ಈ ಮಾನವನಲ್ಲಿ ಬೆಳೆದು ಎಲ್ಲವನ್ನೂ ತನ್ನ ಅಧೀನ ಎಂದುಕೊಂಡೇ ಇಂದಿಗೂ ಮಾನವನು ಈ ಜಗದಲ್ಲಿ ಜೀವಿಸುತ್ತಿದ್ದಾನೆ. ಆದರೆ ಸಂತರು, ಮಹಾಂತರು, ಪ್ರವಾದಿಗಳೆಲ್ಲರೂ ಸಹ ಈ ಜಗದಲ್ಲಿ ತಮ್ಮ ಅನುಭವ, ಅನುಭಾವಗಳನ್ನು ಒರೆಗೆ ಹಚ್ಚಿ ದೈವೀ ಸಾಕ್ಷಾತ್ಕಾರಕ್ಕೆ ಪ್ರಯತ್ನಿಸಿದರು. ಅದರಂತೆಯೇ ಈ ಪದ್ಯದಲ್ಲಿ ನಮ್ಮ ಚಿತ್ತ (ಮನಸ್ಸು)ದ ಅನುಭವ, ಅನುಭಾವ, ಜ್ಞಾನಗಳು, ವಿದ್ಯೆಗಳೆಲ್ಲವೂ ಭತ್ತದಂತೆ ಇರಬೇಕು, ಆ ಜ್ಞಾನ, ಅನುಭವ, ಅನುಭಾವಗಳನ್ನು ವಿಚಾರಗಳು ಎನ್ನುವ ಒನಕೆಯಿಂದ ಕುಟ್ಟಿ ಆ ಭತ್ತದಿಂದ ವಿವೇಕ ಎನ್ನುವ ಅಕ್ಕಿಯನ್ನು ತೆಗೆದು, ಆ ವಿವೇಕ ಎನ್ನುವ ಅಕ್ಕಿಯನ್ನೇ ನಾವು ದಿನ ನಿತ್ಯದ ಭೋಜನವನ್ನಾಗಿ ಸ್ವೀಕರಿಸಬೇಕು ಎಂದು ಹೇಳಿದ್ದಾರೆ.

ನಾವು ಮಾನವರು, ನಮಗೂ ಅರಿಷಡ್ವರ್ಗಂಗಳ ಸೆಳೆತವೂ ಉಂಟು, ಇದಕ್ಕೆ ಕಾರಣ ಆತನಲ್ಲಿ ಇರುವ ಆಶೆ ಆಕಾಂಕ್ಷೆಗಳೂ ಇರಬಹುದು, ಆದರೆ ವಿಚಾರಗಳ ವಿಚಾರ ಮಂಥನಗಳಲ್ಲಿ ಯಾವುದು ಅವಶ್ಯಕತಯೋ, ಯಾವುದು ಯುಕ್ತವೋ, ಯಾವುದು ಉತ್ತಮವೋ ಅದನ್ನು ಆರಿಸಿಕೊಂಡು, ವೈಚಾರಿಕ ಆಡಂಬರಗಳಿಲ್ಲದೇ, ನೈಜವಾದ, ಘನವಾದ, ಸತ್ಯವಾದ ನಿಷ್ಠೆಯನ್ನು ಬೆಳೆಸಿಕೊಂಡು ಈ ಜೀವನ ಸವೆಸುವುದು ಸೂಕ್ತ ಎಂಬುದು ಈ ಜೀವನದ ಗುರಿಯಾಗಬೇಕು, ಜೀವನದ ನಿಜ ಸಾರ್ಥಕತೆಯನ್ನು ಗಳಿಸಿಕೊಳ್ಳಬೇಕು, ಸದ್ಗತಿ, ಸನ್ನಡತೆ, ಕ್ಷಮಾ, ಭಾತೃತ್ವ, ಭಾವೈಕ್ಯತೆ, ಪ್ರೀತಿ, ವಿಶ್ವಾಸಗಳು, ಕ್ಷಮೆಯಂತಹ ಉತ್ತಮ ನಡೆಗಳೇ ನಮ್ಮ ದಿನ ನಿತ್ಯದ ಅಡುಗೆಯ ಊಟದಂತೆ ಸೇವನೆ ಆಗಬೇಕು.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1	2		3	■	■	4		5
■		■	6	7			■	
8			■		■		■	
■		■	9		10	■	11	
12	■	13		■	14		■	
15		■	16	17		■	18	■
	■	19	■		■	20		
	■	21			22	■		■
23			■	■	24			

ಎಡದಿಂದ ಬಲಕ್ಕೆ

1. ಕೋಲು ಹಿಡಿದು ಮಾಡುವ ಗದ್ದಲ (4)
4. ಮನದ ನಡುವೆ ಸಿಲುಕಿದ ಜಳಕ (3)
6. ಕಾಡಿನ ಅರಸ (4)
8. ಕೌಟುಂಬಿಕ ವ್ಯಕ್ತಿ ಅಸ್ತವ್ಯಸ್ತವಾಗಿದ್ದಾನೆ (3)
9. ಅರಣ್ಯ (3)
11. ಮರವನ್ನು ಕೆತ್ತುವ ಉಪಕರಣ (2)
13. ದೇಹದ ಮೇಲಿನ ವ್ರಣ (2)
14. ವೇಗ ಅಥವಾ ಯಮ (2)
15. ಗೆಲುವಿಗೆ ಮತ್ತೊಂದು ಹೆಸರು (2)
16. ಬಾಡಿ ಹೋಗು ಎಂದರ್ಥ (3)
20. ಆನಂದ, ಸಂತೋಷ (3)
21. ಸೂರ್ಯನಿಗೆ ಮತ್ತೊಂದು ಹೆಸರು (4)
23. ವಿರಳವಾದ ನೆತ್ತರು (3)
24. ಹಣ ತಿನ್ನುವವರಿಗೆ ಈ ಪ್ರಾಣಿಯ ಹೋಲಿಕೆ ಏಕೆ? (4)

ಮೇಲಿಂದ ಕೆಳಕ್ಕೆ

2. ಅರಗಿನ ಮನೆ (4)
3. ರಾಮನ ಮಗ (2)
4. ಮಜವಾಗಿದೆ ಈ ಹಂತ (3)
5. ರೂಢಿಯಿಂದ ಬಂದಿರುವ ಪದ್ಧತಿ (5)
7. ಎತ್ತ ಕಡೆಯಿಂದ ನೋಡಿದರೂ ಕಣ್ಣೇ (3)
9. ದೇಹದ ಜೊತೆಗೆ ಕೆಲಸ (3)
10. ಜನರು ತಂದೊಪ್ಪಿಸಿದ ಕಾಣಿಕೆ (3)
17. ಬುದ್ಧಿ ತುಂಬಿರುವ ಶಿರ (3)
18. ಮಾನಸಿಕ ರೋಗವಿರುವಾತ (4)
19. ದುಃಖದಿಂದ ಕೂಡಿದ ಎಂದರ್ಥ (3)
22. ಮನ್ಮಥನ ಪತ್ನಿ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ಕೋಲಾಹಲ 4. ಮಜ್ಜನ 6. ವನರಾಜ 8. ಸ್ಥಗೃಹ 9. ಕಾನನ 11. ಉಳಿ 13. ಗಾಯ 14. ಜವ 15. ಜಯ 16. ಕಮರು 20. ವಿನೋದ 21. ದಿನಕರ 23. ರಕುತ 24. ತಿಮಿಂಗಿಲ

ಮೇಲಿಂದ ಕೆಳಕ್ಕೆ
2. ಲಕ್ಷಾಗೃಹ 3. ಲವ 4. ಮಜಲು 5. ನಡವಳಿಕೆ 7. ನಯನ 9. ಕಾಯಕ 10. ನಜರು 17. ಮಸ್ತಕ 18. ಮನೋರೋಗಿ 19. ರುದಿತ 22. ರತಿ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಭಾರತಕ್ಕೆ ಮಿಶ್ರ ರಿಲೇ ಚಿನ್ನ

ಗುಮಿ: ಭಾರತ ತಂಡವು 26ನೇ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಮಿಶ್ರ ರಿಲೇ ಓಟದ ಚಿನ್ನವನ್ನು ತನ್ನಲ್ಲೇ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು. ಎರಡನೇ ದಿನವಾದ ಬುಧವಾರ ಭಾರತದ ಅಥ್ಲೆಟುಗಳು ವೈಯಕ್ತಿಕ ವಿಭಾಗದಲ್ಲಿ ನಾಲ್ಕು ಬೆಳ್ಳಿ, ಒಂದು ಕಂಚಿನ ಪದಕವನ್ನು ಗೆದ್ದುಕೊಂಡು ಗಮನ ಸೆಳೆದರು. ರೂಪಲ್ ಚೌಧರಿ, ಸಂತೋಷ್ ಕುಮಾರ್, ವಿಶಾಲ್ ಟಿ.ಕೆ. ಮತ್ತು ಶುಭಾ ವೆಂಕಟೇಶನ್ ಅವರನ್ನೊಳಗೊಂಡ ತಂಡ 30.18.12 ಸೆಕೆಂಡುಗಳಲ್ಲಿ ಗುರಿ ತಲುಪಿತು. ಇವರಲ್ಲಿ ರೂಪಲ್ ಚೌಧರಿ ಮಹಿಳೆಯರ 400 ಮೀ. ಓಟದಲ್ಲಿ ಬೆಳ್ಳಿ ಪದಕವನ್ನೂ ಗೆದ್ದುಕೊಂಡಿದ್ದರು. ಪುರುಷರ ರಿಲೇ ಓಟದ ಸ್ಪರ್ಧೆಯಲ್ಲಿ ಭಾರತ ಫೈನಲ್‌ಗೆ ಪ್ರವೇಶಿಸಿದೆ. ರಿನ್ಸ್ ಜೋಸೆಫ್, ಧರ್ಮವೀರ್ ಚೌಧರಿ, ಮನು ತೆಕ್ಕಿನಾಲಿಲ್ ಸಾಜಿ ಮತ್ತು ಮೋಹಿತ್ ಕುಮಾರ್ ಅವರನ್ನೊಳಗೊಂಡ ಭಾರತ ತಂಡವು 3 ನಿಮಿಷ 06.28 ಸೆಕೆಂಡುಗಳಲ್ಲಿ ಗುರಿ ಮುಟ್ಟಿತು. ಫೈನಲ್ ರೇಸ್‌ನಲ್ಲಿ ಭಾರತಕ್ಕೆ ಶ್ರೀಲಂಕಾ, ಚೀನಾ ಹಾಗೂ ಕಜಕಿಸ್ತಾನದ ಕಠಿಣ ಸವಾಲು ಎದುರಾಗಲಿದೆ.

ಗುಕೇಶ್ ಗೆಲುವಿನ ಹಳಿಗೆ



ಸ್ಟಾವೆಂಜರ್ (ಜರ್ಮನಿ): ಸತತ ಎರಡು ಸೋಲುಗಳ ಬಳಿಕ ವಿಶ್ವ ಚಾಂಪಿಯನ್ ಡಿ. ಗುಕೇಶ್ ಕೊನೆಗೂ ಗೆಲುವಿನ ಹಾದಿಗೆ ಮರಳಿದರು. ನಾರ್ವೆ ಚೆಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ವಿಶ್ವದ ಎರಡನೇ ಕ್ರಮಾಂಕದ ಆಟಗಾರ ಹಿಕಾರು ನಕಾಮುರ ಅವರನ್ನು ಸೋಲಿಸಿದರು. ಮೊದಲ ಎರಡು ಸುತ್ತುಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಭಾರತದ ಇನ್ನೊಬ್ಬ ಆಟಗಾರ ಅರ್ಜುನ್ ಇರಿಗೇಶಿ (4.5 ಅಂಕ) ಅವರು ಮೂರನೇ ಸುತ್ತಿನಲ್ಲಿ ಅಮೆರಿಕದ ಫ್ಯಾಬಿಯಾನೊ ಕರುವಾನ (6 ಅಂಕ) ಎದುರು ಸೋಲನುಭವಿಸಿದರು. ಮೊದಲ ಎರಡು ಸುತ್ತುಗಳಲ್ಲಿ ಗುಕೇಶ್ ಕ್ರಮವಾಗಿ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತು ಅರ್ಜುನ್ ಕೈಲಿ ಸೋಲನುಭವಿಸಿದ್ದರು. ಮೂರನೇ ಸುತ್ತಿನಲ್ಲಿ ಬಿಳಿ ಕಾಯಿಗಳಲ್ಲಿ ಆಡಿದ ಗುಕೇಶ್ ಅವರು ವಿಶ್ವದ ಶ್ರೇಷ್ಠ ರ‍್ಯಾಪಿಡ್ ಮತ್ತು ಬ್ಲಿಟ್ಸ್ ಆಟಗಾರರಲ್ಲಿ ಒಬ್ಬರಾದ ನಕಾಮುರಾ (4.5) ಅವರನ್ನು ಸಮಯದ ಒತ್ತಡಕ್ಕೆ ಸಿಲುಕಿಸಿ 42 ನಡೆಗಳಲ್ಲಿ ಗೆದ್ದು ಮೂರು ಅಂಕ ಪಡೆದರು. ಈ ಟೂರ್ನಿಯಲ್ಲಿ ಇನ್ನೂ ಮೂರು ಸುತ್ತುಗಳಿವೆ.

ಇಂದಿನಿಂದ ಲಯನ್ಸ್ ಟೆಸ್ಟ್

ಕ್ಯಾಂಟರ್‌ಬರಿ (ಇಂಗ್ಲೆಂಡ್): ಭಾರತ-ಎ ತಂಡ ಶುಕ್ರವಾರ ಇಲ್ಲಿ ಆರಂಭವಾಗುವ ನಾಲ್ಕು ದಿನಗಳ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ಲಯನ್ಸ್ ತಂಡವನ್ನು ಎದುರಿಸಲಿದೆ. ಈ ತಂಡದಲ್ಲಿರುವ ಯಶಸ್ವಿ ಜೈಸ್ವಾಲ್, ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಸೇರಿದಂತೆ ಕೆಲವು ಮುಂಚೂಣಿ ಟೆಸ್ಟ್ ಆಟಗಾರರು ಇಂಗ್ಲೆಂಡ್‌ನ ಪರಿಸ್ಥಿತಿಗೆ ಒಗ್ಗಿಕೊಳ್ಳಲು ತವಕದಲ್ಲಿದ್ದಾರೆ. ಜೈಸ್ವಾಲ್, ನಿತೀಶ್ ಜೊತೆಗೆ ಅಭಿಮನ್ಯು ಈಶ್ವರನ್, ಧ್ರುವ್ ಜುರೇಲ್, ಕರುಣ್ ನಾಯರ್ ಅವರೂ ತಂಡದಲ್ಲಿದ್ದಾರೆ. ವೇಗದ ಬೌಲರ್‌ಗಳಾದ ಆಕಾಶ್ ದೀಪ್ ಮತ್ತು ಶಾರ್ದೂಲ್ ಠಾಕೂರ್ ಅವರೂ ಆಡಲಿದ್ದು, ಅಲ್ಲಿನ ಪಿಚ್‌ಗಳ ಅನುಭವ ಪಡೆಯಲಿದ್ದಾರೆ. ಕರುಣ್ ನಾಯರ್ ಹೊರತುಪಡಿಸಿ ಉಳಿದವರಿಗೆ ಇದು ಮೊದಲ ಬಾರಿಯ ಇಂಗ್ಲೆಂಡ್ ಪ್ರವಾಸವಾಗಿದೆ. ಭಾರತ ಸೀನಿಯರ್ ತಂಡ ಜೂನ್ 20ರಂದು ಐದು ಟೆಸ್ಟ್‌ಗಳ ಸರಣಿಯ ಮೊದಲ ಪಂದ್ಯ ಆಡಲಿದೆ. ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಟೆಸ್ಟ್ ನಿವೃತ್ತಿಯಿಂದ ತೆರವಾಗಿರುವ ಸ್ಥಾನಗಳಿಗೆ ಪೈಪೋಟಿ ಇದ್ದು, ಜೈಸ್ವಾಲ್ ಅವರೊಂದಿಗೆ ಇನಿಂಗ್ಸ್ ಆರಂಭಿಸುವ ಆಟಗಾರ ಯಾರೆಂಬುದು ಸ್ಪಷ್ಟವಾಗಬೇಕಿದೆ.

ಇಂದಿನ ಪಂದ್ಯ

7.30 PM

ಗುಜರಾತ್ ಟೈಟನ್ಸ್ vs ಮುಂಬೈ ಇಂಡಿಯನ್ಸ್

ಪಿ.ಸಿ.ಎ ಸ್ಟೇಡಿಯಂ ಚಂಡೀಗಢ

ಆರ್‌ಸಿಬಿ ಟ್ರೋಫಿ ಗೆಲ್ಲುವುದು ಖಚಿತ

ಈ ಬಾರಿಯ ಐಪಿಎಲ್‌ನಲ್ಲಿ ಆರ್‌ಸಿಬಿ ಖಂಡಿತವಾಗಿಯೂ ಚಾಂಪಿಯನ್ ಪಟ್ಟ ಅಲಂಕರಿಸುತ್ತದೆ ಹಾಗೂ ವಿರಾಟ್ ಕೊಹ್ಲಿ ಟೂರ್ನಿ ಶ್ರೇಷ್ಠ ಪ್ರಶಸ್ತಿ ಪಡೆಯಲಿದ್ದಾರೆ. ಈ ಬಾರಿ ಆರ್‌ಸಿಬಿ ಟ್ರೋಫಿ ಗೆಲ್ಲುತ್ತದೆ ಎಂದು ಹೇಳುವುದಕ್ಕೆ ಬಲವಾದ ಕಾರಣವೂ ಇದೆ, ಅದೇನೆಂದರೆ ಪ್ರತಿ ಆವೃತ್ತಿಯಲ್ಲೂ ತಂಡಕ್ಕೆ ಅಂತಿಮ ಘಟ್ಟದಲ್ಲಿ ಒಂದು ಕಪ್ಪುಚುಕ್ಕಿ ಇರುತ್ತಿತ್ತು, ಆದರೆ ಈ ಸಲ ಅಂತಹದ್ದ್ಯಾವುದೂ ಇಲ್ಲದೆ ಪ್ಲೇ ಆಫ್ ಹಂತದಲ್ಲಿ ಜಾಶ್ ಹೇಝಲ್‌ವುಡ್ ತಂಡಕ್ಕೆ ಮರಳಿರುವುದು ಆರ್‌ಸಿಬಿಗೆ ಈ ವರ್ಷದ ಶುಭ ಸಂಕೇತವಾಗಿದೆ

-**ಶೇನ್ ವ್ಯಾಟ್ಸನ್**, ಮಾಜಿ ಕ್ರಿಕೆಟಿಗ

ಸುಯಾಶ್, ಹ್ಯಾಝಲ್‌ವುಡ್ ದಾಳಿಗೆ ಪಂಜಾಬ್ ಧೂಳೀಪಟ | ಫಿಲ್ ಸಾಲ್ಟ್ ಅರ್ಧ ಶತಕ

ಆರ್‌ಸಿಬಿ ಫೈನಲ್‌ಗೆ

ಚಂಡೀಗಢ: ಇಲ್ಲಿನ ಮುಲ್ಲನ್ಪುರದ ಮಹಾರಾಜ ಯಾದವೀಂದ್ರ ಸಿಂಗ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಐಪಿಎಲ್ ಟೂರ್ನಿಯ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಆರ್‌ಸಿಬಿ ತಂಡವು ಪಂಜಾಬ್ ಕಿಂಗ್ಸ್ ವಿರುದ್ಧ 8 ವಿಕೆಟ್‌ಗಳ ಜಯ ಸಾಧಿಸಿದೆ. ಆ ಮೂಲಕ 9 ವರ್ಷಗಳ ನಂತರ ಐಪಿಎಲ್ ಫೈನಲ್ ಪ್ರವೇಶಿಸಿ ಈ ಸಲ ಕಪ್ ಗೆಲ್ಲಲು ಕೇವಲ ಒಂದು ಮೆಟ್ಟಿಲನ್ನು ಮಾತ್ರ ಬಾಕಿ ಉಳಿಸಿಕೊಂಡಿದೆ. ಜೂನ್-3ರಂದು ನಡೆಯುವ ಫೈನಲ್ ಪಂದ್ಯದಲ್ಲಿ ಎಲಿಮಿನೇಟರ್-2 ಪಂದ್ಯದಲ್ಲಿ ವಿಜೇತರಾದ ತಂಡವನ್ನು ಆರ್‌ಸಿಬಿ ಎದುರಿಸಲಿದೆ.

ಸುಯಾಶ್ ಶರ್ಮಾ ಮತ್ತು ಹ್ಯಾಝಲ್‌ವುಡ್ ಅವರ ಮಾರಕ ದಾಳಿಗೆ ಸಿಲುಕಿ ಕೇವಲ 101 ರನ್‌ಗಳಿಗೆ ಗಳಿಸಿ ಆಲೌಟ್ ಆದ ಪಂಜಾಬ್ ತಂಡದ ಸ್ಕೋರ್ ಅನ್ನು ಬೆನ್ನಟ್ಟಿದ ಆರ್‌ಸಿಬಿ, ಫಿಲ್ ಸಾಲ್ಟ್ ಅವರ ಅರ್ಧಶತಕದ ನೆರವಿನಿಂದ ಕೇವಲ 10 ಓವರ್‌ಗಳಲ್ಲಿ ಭರ್ಜರಿ ಗೆಲುವನ್ನು ಪಡೆಯಿತು.

ಆರ್‌ಸಿಬಿ ಪರ ಬ್ಯಾಟಿಂಗ್‌ಗೆ ಇಳಿದ ಫಿಲ್ ಸಾಲ್ಟ್ ಮತ್ತು ವಿರಾಟ್ ಕೊಹ್ಲಿ ಮೊದಲ ವಿಕೆಟಿಗೆ 30 ರನ್ ಪೇರಿಸಿದರು. 12 ಬಾಲ್‌ಗಳಿಂದ 12 ರನ್ ಗಳಿಸಿದ ಕೊಹ್ಲಿ, ಜೈಮಿಸನ್ ಬೌಲಿಂಗ್‌ನಲ್ಲಿ ಜಾಶ್ ಇಂಗ್ಲಿಸ್‌ಗೆ ಕ್ಯಾಚ್ ನೀಡಿ ಔಟ್ ಆದರು.

ಆ ಬಳಿಕ ಬಂದ ಮಯಾಂಕ್ ಅಗ್ರವಾಲ್ 13 ಬಾಲ್‌ಗಳಲ್ಲಿ 19 ರನ್ ಗಳಿಸಿ ಮುಶೀರ್ ಖಾನ್ ಬೌಲಿಂಗ್‌ನಲ್ಲಿ ಶ್ರೇಯಸ್ ಅಯ್ಯರ್‌ಗೆ ಕ್ಯಾಚ್ ಕೊಟ್ಟು ಔಟ್ ಆದರು. ಆ ನಂತರ ಬಂದ ಆರ್‌ಸಿಬಿ ನಾಯಕ ರಜತ್ ಪಾಟೀದಾರ್‌ರವರು ಫಿಲ್ ಸಾಲ್ಟ್ ಜತೆ ಸೇರಿ ಇನ್ನಿಂಗ್ಸ್ ಮುಂದುವರಿಸಿ ಆರ್‌ಸಿಬಿಯ ಸುಲಭ ಗೆಲುವಿಗೆ ಕಾರಣರಾದರು. ಪಾಟೀದಾರ್ 8 ಬೌಲ್‌ಗಳನ್ನು ಎದುರಿಸಿ 15 ರನ್ ಗಳಿಸಿ ಅಜೇಯರಾಗಿ ಉಳಿದರೆ, ಫಿಲ್ ಸಾಲ್ಟ್ 27 ಬಾಲ್‌ಗಳನ್ನು ಎದುರಿಸಿ 56 ರನ್ ಗಳಿಸಿ ಅಜೇಯರಾಗಿ ಉಳಿದರು. ಸಾಲ್ಟ್ ಅವರ ಇನ್ನಿಂಗ್ಸ್‌ನಲ್ಲಿ 3 ಸಿಕ್ಸರ್ ಮತ್ತು 6 ಬೌಂಡರಿಗಳಿದ್ದವು. ಆರ್‌ಸಿಬಿ ತಂಡವು 10 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 106 ರನ್ ಗಳಿಸಿ ಭರ್ಜರಿ ಗೆಲುವನ್ನು ತನ್ನದನ್ನಾಗಿರಿಸಿತು.

ಟಾಸ್ ಸೋತು ತವರಿನಲ್ಲಿ ಬ್ಯಾಟಿಂಗ್ ಆರಂಭಿಸಿದ ಪಂಜಾಬ್ ಕಿಂಗ್ಸ್ ತಂಡಕ್ಕೆ 2ನೇ ಓವರ್‌ನಲ್ಲೇ ಆಘಾತ ಎದುರಾಯಿತು. 7 ರನ್ ಗಳಿಸಿದ್ದ ಪ್ರಿಯಾಂಶ್ ಆರ್ಯ ವಿಕೆಟ್ ಒಪ್ಪಿಸಿದರು. 3ನೇ ಓವರ್‌ನಲ್ಲಿ ಮತ್ತೊಬ್ಬ ಆರಂಭಿಕ ಬ್ಯಾಟರ್ ಪ್ರಭ್‌ಸಿಮ್ರನ್ ಸಿಂಗ್ 10 ಎಸೆತಗಳಲ್ಲಿ ತಲಾ ಒಂದು ಬೌಂಡರಿ, ಸಿಕ್ಸರ್ ಸಹಿತ 18 ರನ್ ಗಳಿಸಿ ಭುವನೇಶ್ವರ್ ಕುಮಾರ್ ಬೌಲಿಂಗ್‌ನಲ್ಲಿ ಜಿತೇಶ್ ಶರ್ಮಾಗೆ ಕ್ಯಾಚ್ ನೀಡಿ ಔಟ್ ಆದರು.

ಗಾಯದಿಂದ ಚೇತರಿಸಿಕೊಂಡು ಆರ್‌ಸಿಬಿ ತಂಡವನ್ನು ಸೇರಿಕೊಂಡಿದ್ದ ಜೋಶ್ ಹ್ಯಾಝಲ್‌ವುಡ್ ಪವರ್ ಪ್ಲೇನಲ್ಲೇ ಪಂಜಾಬ್ ನಾಯಕ ಶ್ರೇಯಸ್ ಅಯ್ಯರ್ (2) ಹಾಗೂ ಜೋಶ್ ಇಂಗ್ಲಿಸ್ (4) ವಿಕೆಟ್ ಪಡೆದರು. ಸ್ಟೋಯಿನಿಸ್ ಒಂದೆರಡು ಬೌಂಡರಿ ಬಾರಿಸಿ ಚೇತರಿಕೆಯ ಮುನ್ಸೂಚನೆ ನೀಡಿದ್ದರು. ಆದರೆ ಪವರ್ ಪ್ಲೇ ನಂತರ ಸ್ಪಿನ್ನರ್ ಸುಯಾಶ್ ಶರ್ಮಾ ಪಂಜಾಬ್ ಬ್ಯಾಟರ್‌ಗಳನ್ನು ಕ್ರೀಸ್‌ನಲ್ಲಿ ಬಹಳ ಹೊತ್ತು ತಳವೂರದಂತೆ ಮಾಡಿದರು. ಸ್ಫೋಟಕ ಆಟಗಾರ ಶಶಾಂಕ್ ಸಿಂಗ್ (3) ಹಾಗೂ ಮುಷೀರ್ ಖಾನ್ (0) ವಿಕೆಟ್‌ಗಳನ್ನು ತಮ್ಮ ಮೊದಲನೇ ಓವರ್‌ನಲ್ಲಿ ಸುಯಾಶ್ ಶರ್ಮಾ ಪಡೆದರು. ಒಂದು ಓವರ್‌ನ ನಂತರ ತಮ್ಮ 2ನೇ ಓವರ್‌ನಲ್ಲಿ17 ಎಸೆತಗಳಲ್ಲಿ ತಲಾ 2 ಬೌಂಡರಿ, ಸಿಕ್ಸರ್ ಸಹಿತ 26 ರನ್ ಗಳಿಸಿ ಆಡುತ್ತಿದ್ದ ಸ್ಟೋಯಿನಿಸ್ ಅವರನ್ನು ಕ್ಲೀನ್ ಬೌಲ್ಡ್ ಮಾಡುವ ಮೂಲಕ ಪಂಜಾಬ್‌ನ ಬೆನ್ನು ಮೂಳೆಯನ್ನು ಮುರಿದರು. ಪಂಜಾಬ್ ತಂಡವು 100 ರನ್‌ಗಳ ಗಡಿ ದಾಟುವುದು ಅನುಮಾನ ಎನ್ನುವ ಸಂದರ್ಭದಲ್ಲಿ ಒಮರ್ಝೈ ಹಾಗೂ ಹಪ್ರೀತ್ ಬ್ರಾರ್ 19 ರನ್‌ಗಳ ಜತೆಯಾಟ ಪ್ರದರ್ಶಿಸಿದರು. ಆದರೆ ರೊಮಾರಿಯೋ ಶೆಫರ್ಡ್, ಬ್ರಾರ್‌ರನ್ನು ಬೌಲ್ಡ್ ಮಾಡಿದರು. 15ನೇ ಓವರ್‌ನ ಮೊದಲ ಎಸೆತದಲ್ಲೇ ಹ್ಯಾಝಲ್‌ವುಡ್ 18 ರನ್ ಗಳಿಸಿದ್ದ ಒಮರ್ಝೈ ವಿಕೆಟ್ ಪಡೆದು ಪಂಜಾಬ್ ಇನ್ನಿಂಗ್ಸ್ ಅನ್ನು ಮುಕ್ತಾಯಗೊಳಿಸಿದರು. ಆರ್‌ಸಿಬಿ ಪರ ಸುಯಾಶ್ ಶರ್ಮಾ 17ಕ್ಕೆ 3, ಹ್ಯಾಝುವುಡ್ 21ಕ್ಕೆ 3, ಯಶ್ ದಯಾಳ್ 26ಕ್ಕೆ 2, ಭುವನೇಶ್ವರ್ ಕುಮಾರ್ 17ಕ್ಕೆ 1ವಿಕೆಟ್ ಪಡೆದು ಪಂಜಾಬ್ ಇನ್ನಿಂಗ್ಸ್‌ಗೆ ಅಂತ್ಯವಾಡಿದರು.

ಪ್ಲೇ ಆಫ್ ಕನಿಷ್ಠ ಮೊತ್ತ

ಗುರುವಾರದಂದು ನಡೆದ ಐಪಿಎಲ್ ಪ್ಲೇ ಆಫ್ ಪಂದ್ಯದಲ್ಲಿ ಪಂಜಾಬ್ ಗಳಿಸಿದ 101 ರನ್, ಇನಿಂಗ್ಸ್‌ವೊಂದರಲ್ಲಿ ದಾಖಲಾದ ನಾಲ್ಕನೇ ಕನಿಷ್ಠ ಮೊತ್ತವಾಗಿದೆ. ಪ್ಲೇ ಆಫ್ ಹಂತದಲ್ಲಿ ತಂಡವೊಂದು ಗಳಿಸಿದ ಐದು ಕನಿಷ್ಠ ಮೊತ್ತಗಳಿವು:

- ಡೆಕ್ಕನ್ ಚಾರ್ಜಸ್-82 ರನ್, ಆರ್‌ಸಿಬಿ ವಿರುದ್ಧ (2010)
- ಡೆಲ್ಲಿ ಡೇಡೆವಿಲ್ಸ್-87 ರನ್ , ರಾಜಸ್ಥಾನ ವಿರುದ್ಧ (2008)
- ಲಖನೌ ಸೂಪರ್‌ಜೈಂಟ್ಸ್-101 ರನ್, ಮುಂಬೈ ವಿರುದ್ಧ (2023)
- ಪಂಜಾಬ್ ಕಿಂಗ್ಸ್-101 ರನ್, ಆರ್‌ಸಿಬಿ ವಿರುದ್ಧ (2025)
- ಡೆಕ್ಕನ್ ಚಾರ್ಜಸ್-104 ರನ್, ಚೆನ್ನೈ ವಿರುದ್ಧ (2010)

ಗುಜರಾತ್-ಮುಂಬೈ ಕಾದಾಟ | ಸೋಲುವ ತಂಡ ಹೊರಕ್ಕೆ

ಇಂದು ಎಲಿಮಿನೇಟರ್ ಪಂದ್ಯ

ಚಂಡೀಗಢ: ಸತತ 2 ಪಂದ್ಯಗಳ ಸೋಲಿನ ಮೂಲಕ ಮೊದಲನೇ ಕ್ವಾಲಿ ಫೈಯರ್‌ಗೆ ಅರ್ಹತೆಯನ್ನು ಕಳೆದುಕೊಂಡಿ ರುವ ಗುಜರಾತ್ ಟೈಟನ್ಸ್ ಹಾಗೂ ಐದು ಬಾರಿ ಚಾಂಪಿಯನ್ ಆಗಿರುವ ಮುಂಬೈ ಇಂಡಿಯನ್ಸ್ ತಂಡಗಳು ಶುಕ್ರವಾರ ನಡೆ ಯುವ ಐಪಿಎಲ್ ಟೂರ್ನಿಯ ಎಲಿಮಿ ನೇಟರ್ ಪಂದ್ಯದಲ್ಲಿ ಕಾದಾಟ ನಡೆಸಲು ಸಜ್ಜಾಗುತ್ತಿವೆ. ಉಭಯ ತಂಡಗಳ ನಡುವಿನ ಹೈವೋಲ್ಟೇಜ್ ಪಂದ್ಯಕ್ಕೆ ಮುಲ್ಲನ್‌ಪುರದ ಮಹಾರಾಜ ಯದವೀಂದ್ರ ಸಿಂಗ್ ಇಂಟರ್‌ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣ ಸಿದ್ಧವಾಗಿದೆ.

ಶುಭಮನ್ ಗಿಲ್ ನಾಯಕತ್ವದ ಗುಜರಾತ್ ಟೈಟನ್ಸ್ ತಂಡ ಲೀಗ್ ಹಂತದ ಆರಂಭಿಕ 6 ಪಂದ್ಯಗಳನ್ನು ಗೆದ್ದುಕೊಂಡಿತ್ತು. ಟೂರ್ನಿಯ ಬಹುತೇಕ ಪಂದ್ಯಗಳು ಅಂತ್ಯವಾಗುವ ವರೆಗೂ ಅಗ್ರ ಸ್ಥಾನವನ್ನು ಅಲಂಕರಿಸಿತ್ತು. ಲೀಗ್ ಹಂತವನ್ನು ಅಗ್ರ ಎರಡರಲ್ಲಿ ಮುಗಿಸುವ ನೆಚ್ಚಿನ ತಂಡವಾಗಿದ್ದ ಗಿಲ್ ಬಳಗವು, ಮೊದಲನೇ ಕ್ವಾಲಿಫೈಯರ್‌ಗೆ ಅರ್ಹತೆ ಪಡೆಯಲು ಎದುರು ನೋಡುತ್ತಿತ್ತು. ಆದರೆ ಲೀಗ್ ಹಂತದ ಕೊನೆಯ ಎರಡು ಪಂದ್ಯಗಳಲ್ಲಿ ಅದಕ್ಕೆ ಎದುರಾದ ಸೋಲು ಭಾರಿ ಹಿನ್ನಡೆಯನ್ನು ತಂದೊಡ್ಡಿದೆ. ಈ ಕಾರಣದಿಂದಾಗಿ ಮೂರನೇ ಸ್ಥಾನಕ್ಕೆ ಕುಸಿದು ಎಲಿಮಿನೇಟರ್ ಪಂದ್ಯವನ್ನು ಆಡಬೇಕಾದ ಪರಿಸ್ಥಿತಿಗೆ ಸಿಲುಕಿತು.

ಮತ್ತೊಂದು ಕಡೆ ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ಇಂಡಿಯನ್ಸ್ ತಂಡ ಟೂರ್ನಿಯ ತನ್ನ ಆರಂಭಿಕ ಐದು ಪಂದ್ಯಗಳ ಪೈಕಿ ನಾಲ್ಕರಲ್ಲಿ ಪಂದ್ಯಗಳನ್ನು ಸೋತಿತ್ತು. ಆದರೆ ಟೂರ್ನಿಯ ಎರಡನೇ ಹಂತದಲ್ಲಿ ಮುಂಬೈ ಬಲವಾಗಿ ಯಶಸ್ಸಿನ ಹಳಿ ತಲುಪಿದೆ. ಸತತ ಆರು ಪಂದ್ಯಗಳಲ್ಲಿ ಗೆಲುವು ಪಡೆಯುವ ಮೂಲಕ ಐದು ಬಾರಿ ಚಾಂಪಿಯನ್ಸ್ ಆಗಿದ್ದ ಹಾರ್ದಿಕ್ ಪಾಂಡ್ಯ ಪಡೆಯು ಪ್ಲೇಆಫ್ಸ್‌ಗೆ ಅರ್ಹತೆ ಪಡೆಯಿತು.

ಮುಖಾಮುಖಿ

ಒಟ್ಟು ಆಡಿರುವ ಪಂದ್ಯಗಳು	07
ಗುಜರಾತ್ ಟೈಟನ್ಸ್ ಗೆಲುವು	05
ಮುಂಬೈ ಇಂಡಿಯನ್ಸ್	02

ನಸರ್ ಕ್ಲಬ್ ತೊರೆಯಲು ಮುಂದಾದ ರೊನಾಲ್ಡೋ

ರಿಯಾದ್: ಪೋರ್ಚುಗಲ್ ದಿಗ್ಗಜ ಫುಟ್ಬಾಲ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೋ ಸೌದಿ ಅರೇಬಿಯಾದ ಅಲ್ ನಸರ್ ಕ್ಲಬ್‌ಗೆ ವಿದಾಯ ನೀಡುವ ಸೂಚನೆ ನೀಡಿದ್ದಾರೆ. ಸೌದಿ ಪ್ರೊ ಲೀಗ್ ಮುಕ್ತಾಯವಾದ ಕೆಲವೇ ಗಂಟೆಗಳ ನಂತರ, 'ಈ ಅಧ್ಯಾಯ ಮುಗಿದಿದೆ, ಕಥೆ ಇನ್ನೂ ಬರೆಯಲಾಗುತ್ತಿದೆ, ಎಲ್ಲರಿಗೂ ಕೃತಜ್ಞತೆ' ಎಂಬ ಶೀರ್ಷಿಕೆಯೊಂದಿಗಿನ ಫೋಟೋವನ್ನು ರೊನಾಲ್ಡೋ ಸಾಮಾಜಿಕ ಜಾಲತಾಣದಲ್ಲಿ ಆ ವಿವರವನ್ನು ಹಂಚಿಕೊಂಡಿದ್ದಾರೆ. ಹೀಗಾಗಿ ಅವರು ಅಲ್ ನಸರ್ ತಂಡ ತೊರೆಯುವುದು ಖಚಿತ ಎನ್ನಲಾಗಿದೆ.

ರೊನಾಲ್ಡೊ, ಕ್ಲಬ್ ಮಟ್ಟದ ವೃತ್ತಿ ಜೀವನದಲ್ಲಿ ದಾಖಲೆಯ 800ನೇ ಗೋಲು ಗಳಿಸಿದರಾದರೂ, ತಾವು ಪ್ರತಿನಿಧಿಸಿದ ಅಲ್-ನಸರ್ ತಂಡವು 2-3 ಗೋಲುಗಳ ಅಂತರದಿಂದ ಪರಾಭವಗೊಳ್ಳುವುದನ್ನು ತಡೆಯಲು ಐದು ಬಾರಿಯ ಬ್ಯಾಲನ್ ಡಿ'ಓರ್ ಪ್ರಶಸ್ತಿ ವಿಜೇತರಾದ ರೊನಾಲ್ಡೋರಿಂದ ಸಾಧ್ಯವಾಗಲಿಲ್ಲ. ಹೀಗಾಗಿ ಏಷ್ಯನ್ ಚಾಂಪಿಯನ್ಸ್ ಲೀಗ್‌ನ ಎಲೈಟ್ ಹಂತಕ್ಕೆ ಅರ್ಹತೆ ಗಿಟ್ಟಿಸುವ ಅಲ್-ನಸರ್ ತಂಡದ ಕನಸು ಕಮರಿ ಹೋಯಿತು.

ತಾಯವ್ವನಾದ ಗೀತಾಪ್ರಿಯಾ

ಹಿಂದೆಲ್ಲಾ ಹಳ್ಳಿಯಲ್ಲಿ ಹೆರಿಗೆ ಮಾಡಿಸಲು ಸೂಲಗಿತ್ತಿಯರು ಇರುತ್ತಿದ್ದರು. ಸಂಕಷ್ಟದಲ್ಲಿದ್ದ ಗರ್ಭಿಣಿಯರ ನೆರವಿಗೆ ಧಾವಿಸುವ ಸೂಲಗಿತ್ತಿಯರು ದೇವರ ರೂಪದಂತಿದ್ದರು. ಈಗ ಅದೇ ಸೂಲಗಿತ್ತಿಯರ ಕಥೆಯನ್ನು ಆಧರಿಸಿ ತಾಯವ್ವ ಚಿತ್ರ ಸಿದ್ಧವಾಗಿದೆ. ಗೀತಾಪ್ರಿಯಾ ತಾಯವ್ವನಾಗಿ ನಟಿಸಿದ್ದಾರೆ.

ತಾಯವ್ವ ಚಿತ್ರದ ಹೆಸರೇ ಹೇಳುವಂತೆ, ಇದು ಅಪ್ಪಟ ಗ್ರಾಮೀಣ ಸೊಗಡಿನ, ಮಹಿಳಾ ಪ್ರಧಾನ ಕಥಾಹಂದರ ಹೊಂದಿರುವ ಸಾಮಾಜಿಕ ಕಳಕಳಿಯ ಚಿತ್ರ. ಗ್ರಾಮೀಣ ಪ್ರದೇಶದ ಸೂಲಗಿತ್ತಿ ಮಹಿಳೆಯೊಬ್ಬಳು ಹೇಗೆ ಹೆಣ್ಣುಮಕ್ಕಳ ರಕ್ಷಣೆ ಮಾಡಿ, ಸಮಾಜಕ್ಕೆ ಮಾದರಿಯಾಗು ತ್ತಾಳೆ ಎಂಬ ವಿಷಯದ ಸುತ್ತ ತಾಯವ್ವ ಚಿತ್ರದ ಕಥಾಹಂದರ ಸಾಗು ತ್ತದೆ. ಚಿತ್ರದಲ್ಲಿ ತಾಯವ್ವನಾಗಿ ಗೀತಾ ಪ್ರಿಯಾ ಗಮನಸೆಳೆಯುತ್ತಾರೆ. ಅಮರ ಫಿಲಂಸ್ ಬ್ಯಾನರಿನಲ್ಲಿ ನಿರ್ಮಾಣವಾಗಿರುವ ತಾಯವ್ವ ಚಿತ್ರವನ್ನು ಸಾತ್ವಿಕ ಪವನ್ ಕುಮಾರ್ ನಿರ್ದೇಶನ ಮಾಡಿದ್ದಾರೆ.

ಸೂಲಗಿತ್ತಿಯ ಕಾರ್ಯ, ಹೆಣ್ಣಿನ ಮಹತ್ವ ಎರಡನ್ನೂ ಈ ಸಿನಿಮಾ ಹೇಳುತ್ತದೆ. ಈ ಸಿನಿಮಾದಲ್ಲಿ ಒಂದು ಸಂದೇಶವಿದೆ. ತಾಯವ್ವ ಎಂಬ ಹೆಸರಿನಲ್ಲೇ ಒಂದು ಭಾವನಾತ್ಮಕ ಸೆಳೆತವಿದೆ. ಎಲ್ಲರೂ ನೋಡಬೇಕಾದ ಸಿನಿಮಾ ಇದಾಗಿದೆ. ಇದೊಂದು ಸೂಲಗಿತ್ತಿಯ ಕುರಿತಾದ ಸಿನಿಮಾ ಎಂಬುದು ವಿಶೇಷ. ಒಂದು ಕಾಲದಲ್ಲಿ ಸೂಲಗಿತ್ತಿಯರು ಗ್ರಾಮೀಣ ಭಾಗದಲ್ಲಿ ಮಹಿಳೆಯರಿಗೆ ದೇವರ ರೂಪದಲ್ಲಿದ್ದವರು. ಯಾವುದೇ ಲಾಭದ ನಿರೀಕ್ಷೆ ಇಲ್ಲದೆ ನಿಸ್ವಾರ್ಥವಾಗಿ ಸೇವೆ ಸಲ್ಲಿಸುತ್ತಿದ್ದರು. ಅದೊಂದು ಸಮಾಜ ಸೇವೆ, ದೇವರ ಕೆಲಸ ಎಂದು ತಿಳಿದಿದ್ದರು. ಅದೆಷ್ಟೋ ಜೀವಗಳನ್ನು ಭೂಮಿಗೆ ತಂದ ಸೂಲಗಿತ್ತಿಯರ ಕುರಿತ ಈ ಸಿನಿಮಾ ತೆರೆಗೆ ಬರುತ್ತಿರುವುದು ಸಂತಸ ತಂದಿದೆ ಎಂದು ಖ್ಯಾತ ವೈದ್ಯೆ ಕಾಮಿನಿ ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

ಗ್ರಾಮೀಣ ಸೊಗಡಿನ ಗಾನ

ಚಿತ್ರದ ಹಾಡುಗಳೂ ಕೂಡ ಗ್ರಾಮೀಣ ಸೊಗಡಿನಲ್ಲಿಯೆ ಮೂಡಿಬಂದಿವೆ. ಅನಂತ ಆರ್ಯನ್ ಸಂಗೀತ ಸಂಯೋಜನೆಯಲ್ಲಿ ಮೂಡಿ ಬಂದಿರುವ ಚಿತ್ರದ ಗೀತೆಗಳಿಗೆ ಸ್ವತಃ ಗೀತಾ ಪ್ರಿಯಾ ಅವರೇ ದನಿಯಾಗಿದ್ದಾರೆ. ಅಪ್ಪಟ ಕನ್ನಡದ ಗ್ರಾಮೀಣ ಸೊಗಡಿನ ಜನಪದ ಗೀತೆಗಳ ಗುಚ್ಚವನ್ನು ತಾಯವ್ವ ಚಿತ್ರದಲ್ಲಿ ಹೊಸ ರೂಪದಲ್ಲಿ ತೆರೆಯ ಮೇಲೆ ತರಲಾಗುತ್ತಿದೆ.

ಇದೊಂದು ಅಪ್ಪಟ ಗ್ರಾಮೀಣ ಸೊಗಡಿನ ಸಿನಿಮಾಗಿದ್ದು, ಸೂಲಗಿತ್ತಿ ನರಸಮ್ಮ ಅವರಂಥ ನೂರಾರು ಸೂಲಗಿತ್ತಿಯರು ಈ ಸಿನಿಮಾ ಮಾಡಲು ನಮಗೆ ಪ್ರೇರಣೆ. ಹೆಣ್ಣುಮಕ್ಕಳನ್ನು ಉಳಿಸಿ, ಬೆಳೆಸಿ ಎಂಬ ಸಂದೇಶವನ್ನು ಇಟ್ಟುಕೊಂಡು ಈ ಸಿನಿಮಾ ಮಾಡಿದ್ದೇವೆ. ಶೀರ್ಷಿಕೆಯಲ್ಲಿ ಮತಾಯವ್ವ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಸಿನಿಮಾದಲ್ಲಿ ಒಂದು ಸಂದೇಶವಿದೆ. ಎಲ್ಲರಿಗೂ ತಲುಪುವಂಥ ವಿಷಯ ಈ ಸಿನಿಮಾದಲ್ಲಿದೆ.

-**ಗೀತಾಪ್ರಿಯಾ** ನಟಿ

ವಿಟಾಕೀಸ್

ಜುಲೈನಲ್ಲಿ ಎಕ್ಕ ತೆರೆಗೆ

ದೊಡ್ಮನೆ ಮೊಮ್ಮಗ ಯುವ ರಾಜ್‌ಕುಮಾರ್ ಯುವ ಸಿನಿಮಾ ಬಳಿಕ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಟೀಸರ್ ಹಾಗೂ ಹಾಡಿನಲ್ಲಿಯೇ ಕ್ರೇಜ್ ಹೆಚ್ಚಿಸಿರುವ ಎಕ್ಕ, ಜುಲೈ 18ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ. ಪಿಆರ್‌ಕೆ ಪ್ರೊಡಕ್ಷನ್ಸ್, ಕೆಆರ್‌ಜಿ ಸ್ಟುಡಿಯೋಸ್ ಹಾಗೂ ಜಯಣ್ಣ ಫಿಲಂಸ್ ಒಟ್ಟಾಗಿ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದು, ರೋಹಿತ್ ಪದಕಿ ನಿರ್ದೇಶನ ಮಾಡುತ್ತಿದ್ದಾರೆ. ಯುವರಾಜ್ ಕುಮಾರ್‌ಗೆ ಜತೆಯಾಗಿ ಸಂಜನಾ ಆನಂದ್ ಹಾಗೂ ಸಂಪದಾ ನಾಯಕಿಯ ರಾಗಿ ಸಾಥ್ ಕೊಟ್ಟಿದ್ದಾರೆ. ಅತುಲ್ ಕುಲಕರ್ಣಿ, ಡೆಡ್ಲಿ ಆದಿತ್ಯಾ ಸೇರಿದಂತೆ ದೊಡ್ಡ ತಾರಬಳಗವೇ ಚಿತ್ರದಲ್ಲಿದೆ. ಯುವ ರಾಜ್‌ಕುಮಾರ್ ಹುಟ್ಟುಹಬ್ಬದ ಸಂಭ್ರಮದಲ್ಲಿ ಚಿತ್ರದ ಸಣ್ಣ ಟೀಸರ್ ರಿಲೀಸ್ ಆಗಿ ಧೂಳೆಬ್ಬಿಸಿತ್ತು. ಹಾಗಾಗಿ ಸಿನಿಮಾದ ಬಗ್ಗೆ ನಿರೀಕ್ಷೆ ದುಪ್ಪಟ್ಟಾಗಿದೆ. ಎಕ್ಕ ಬೆಂಗಳೂರಿನ ಅಂಡರ್‌ವರ್ಲ್ಡ್ ಕಥೆಯನ್ನು ಒಳಗೊಂಡಿದ್ದು, ಯುವ ರಾಜ್‌ಕುಮಾರ್ ರಗಡ್ ಲುಕ್‌ನಲ್ಲಿ ಮಿಂಚಿದ್ದಾರೆ. ಜಾಕಿ ಚಿತ್ರದಲ್ಲಿ ಎಕ್ಕ ರಾಜ ರಾಣಿ... ಎಂಬ ಸಾಂಗ್ ಹಿಟ್ ಆಗಿತ್ತು. ಜತೆಗೆ ಚಿತ್ರದ ದೃಶ್ಯವೊಂದರಲ್ಲಿ ಅಪ್ಪು ವಿಭಿನ್ನ ಅವತಾರದಲ್ಲಿ ದರ್ಶನ ಕೊಟ್ಟಿದ್ದರು. ಎಕ್ಕ ಟೀಸರ್‌ನಲ್ಲಿ ಯುವ ಕೂಡ ಅಂಥದ್ದೇ ಲುಕ್‌ನಲ್ಲಿ ಮಿಂಚಿದ್ದಾರೆ. ರೋಹಿತ್ ಪದಕಿ, ವಿಕ್ರಂ ಹತ್ವಾರ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದಿದ್ದಾರೆ. ಚರಣ್ ರಾಜ್ ಸಂಗೀತ, ಸತ್ಯ ಹೆಗಡೆ ಛಾಯಾಗ್ರಹಣ ಮತ್ತು ದೀಪು. ಎಸ್.ಕುಮಾರ್ ಸಂಕಲನ ಎಕ್ಕ ಚಿತ್ರಕ್ಕಿದೆ.

ಭೂಗತ ಲೋಕದ ಕಥೆ

ಎಕ್ಕ ಭೂಗತ ಲೋಕದ ಕಥೆಯನ್ನು ಒಳಗೊಂಡಿದೆ. ಈ ಹಿಂದೆ ಯುವ ಚಿತ್ರದಲ್ಲಿ ಸಿಂಪಲ್ ಲುಕ್‌ನಲ್ಲಿ ಮಿಂಚಿದ್ದ ಯುವ, ಎಕ್ಕ ಚಿತ್ರದಲ್ಲಿ ರಗಡ್ ಅವತಾರ ತಾಳಿದ್ದಾರೆ. ಎಕ್ಕ ರಾ ಸ್ಟೈಲ್‌ನಲ್ಲಿ ಮೂಡಿಬರಲಿದೆ. ರೋಹಿತ್ ಪದಕಿಯ ಈ ಹಿಂದಿನ ಸಿನಿಮಾಕ್ಕಿಂತ ಎಕ್ಕ ಸ್ಪೆಷಲ್ ಆಗಿ ಮೂಡಿಬರುತ್ತಿದೆ.

ಇಂದಿನಿಂದ ರಾಜ್ಯಾದ್ಯಂತ ಅದ್ದೂರಿ ಬಿಡುಗಡೆ

PVR INOX Cinépolis GOPALAN ROCKLINE BOOK YOUR TICKETS ON bookmyshow

ಬೆಂಗಳೂರು :

ಜಿ.ಟಿ.ವರ್ಲ್ಡ್ ಮಾಲ್ G T WORLD MALL — PVR CINEMAS 03 : 30 PM

ಓರಿಯನ್ ಮಾಲ್ ORION MALL — PVR CINEMAS 12 : 15 PM

ಮಂತ್ರಿ ಮಾಲ್ MANTRI MALL — INOX 04 : 45 PM

ಫಿಯೋನಿಕ್ಸ್ ಮಾರ್ಕೆಟ್ ಸಿಟಿ PHOENIX MARKETCITY — PVR CINEMAS 07 : 05 PM

ಭಾರತೀಯ ಮಾಲ್ BHARTIYA MALL — PVR CINEMAS 02 : 20 PM

ಫೋರಮ್ ವ್ಯಾಲ್ಯೂ FORUM VALUE MALL — PVR CINEMAS 02 : 10 PM

ಸೆಂಟ್ರಲ್ ಮಾಲ್ ಜೆ.ಪಿ ನಗರ್ CENTRAL MALL JP NAGAR — PVR CINEMAS 02 : 05 PM

ಲುಲು ಮಾಲ್ LULU MALL — Cinépolis 12 : 00 PM

ಗೋಪಾಲನ್ ಆರ್ಕೇಡ್ GOPALAN ARCADE MALL — GOPALAN CINEMAS 05 : 00 PM

ಗೋಪಾಲನ್ ಲೆಗೆಸಿ GOPALAN LEGACY MALL — GOPALAN CINEMAS 07 : 30 PM

ಮೈಸೂರು :

ಗರುಡ ಮಾಲ್ GARUDA MALL MYSURU — PVR CINEMAS 01 : 35 PM

ಸೆಂಟ್ರೋ ಮಾಲ್ CENTRO MALL — PVR CINEMAS 01 : 55 PM

ತುಮಕೂರು :

ಎಸ್ ಮಾಲ್ S MALL — INOX 04 : 10 PM

ಮಂಗಳೂರು :

ಫೋರಮ್ ಫಿಝಾ FORUM FIZA MALL — PVR CINEMAS 03 : 45 PM

ಧಾರವಾಡ :

ಸ್ಮಾರ್ಟ್ ಸಿಟಿ SMARTCITY MALL — PVR CINEMAS 01 : 10 PM

ರಾಯಚೂರು :

ಮಿರಾಜ್ ಸಿನಿಮಾಸ್ MIRAJ CINEMAS — 04 : 45 PM

ಚಿಕ್ಕಮಂಗಳೂರು
ಉಡುಪಿ
ಭದ್ರಾವತಿ
ಬಿಜಾಪುರ
ಬೆಳಗಾಮ್
ರಾಮನಗರ
ಮದ್ದೂರು
ಚೆನ್ನಪಟ್ಟಣ
ಬಿಡದಿ
ಕೆಂಗೇರಿ
ನೆಲಮಂಗಲ
ಚಿತ್ರದುರ್ಗ
ದಾವಣಗೆರೆ
ಬೀದರ್
ಕೋಲಾರ
ಬಾಗಲಕೋಟೆ
ಕೊಪ್ಪಳ
ಬಳ್ಳಾರಿ
ಯಾದಗಿರಿ
ಚಿಕ್ಕಬಳ್ಳಾಪುರ
ಕೊಡಗು
ದಕ್ಷಿಣ ಕನ್ನಡ
???